
ಗಂಗಾವತರಣ ಭೀಷ್ಮೋದಯ



ಪ್ರೊ. ಕೆ. ಕುಶಾಲಪ್ಪ ಗೌಡ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ದಶವರ್ಷ ಸಂಭ್ರಮದ ಪುಸ್ತಕಮಾಲಿಕೆ 2021

ಗಂಗಾವತರಣ
ಭೀಷ್ಮೋದಯ

ಪ್ರೊ. ಕೆ. ಕುಶಾಲಪ್ಪ ಗೌಡ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಮಡಿಕೇರಿ

Decennial Year Publication Series 2021

ಗಂಗಾವತರಣ ಭೀಷ್ಮೋದಯ
Gangavatharana - Bheeshmodaya
A prose poem in Arebaase Language from Mahabharatha Epic

Written by
Prof. K. Kushalappa Gowda
Rtd. Professor of Kannada, University of Madras

ಸಲಹಾ ಸಮಿತಿ :
ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ
ಶ್ರೀಮತಿ ಸ್ಮಿತಾ ಅಮೃತರಾಜ್
ಡಾ. ವಿಶ್ವನಾಥ ಬದಿಕಾನ
ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ
ಶ್ರೀ ಭರತೇಶ ಅಲಸಂಡೆಮಜಲು

ಪ್ರಕಟಣೆ :
ರಿಜಿಸ್ಟ್ರಾರ್
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಪುಸ್ತಕ ದೊರೆಯುವ ಸ್ಥಳ :
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಕಾಫಿಕೃಪ ಬಿಲ್ಡಿಂಗ್, ರಾಜಸೀಟ್ ರಸ್ತೆ, ಮಡಿಕೇರಿ
ದೂ: 08272–223055, ಮೊ : 6362522677
arebaseacademy@gmail.com, www.arebasheacademy.gov.in

ಪ್ರಕಟಣೆಯ ವರ್ಷ : 2021

ಪುಟಗಳು : 96
ಬೆಲೆ : ರೂ. 100
ಪ್ರತಿಗಳು : 500

ಆಕಾರ : ಡೆಮಿ 1/8
ಕಾಗದ : 80 ಜಿಎಸ್ಎಂ ಮ್ಯಾಪ್ಲಿತೋ
ಮುಖಪುಟ ವಿನ್ಯಾಸ : **ದಿನೇಶ್ ಹೊಳ್ಳ**

ಪುಟವಿನ್ಯಾಸ ಮತ್ತು ಮುದ್ರಣ
ಆಕೃತಿ ಪ್ರಿಂಟ್ಸ್
ಲೈಟ್‌ಹೌಸ್ ಹಿಲ್ ರಸ್ತೆ, ಮಂಗಳೂರು – 575 001
ದೂ: 0824 2972002

ಮುನ್ನುಡಿ

ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಕೋಡಿ ಕೃಷ್ಣಪ್ಪ ಮತ್ತು ಗೌರಮ್ಮ ದಂಪತಿಯ ಮೂರನೆಯ ಮಗನಾದ ನನ್ನ ಆತ್ಮೀಯರಾದ ಪ್ರೊಫೆಸರ್ ಕುಶಾಲಪ್ಪ ಗೌಡರು ಏಳು ವರ್ಷಗಳ ಹಿಂದೆ 'ಮಾನಸ ಮಹಾಭಾರತ'ವೆಂಬ ಪುರಾಣ ಗದ್ಯಕಾವ್ಯವನ್ನು ಅರೆಭಾಸೆಯಲ್ಲಿ ಪ್ರಕಟಿಸಿದರು. ಆಗಲೇ ಅವರಿಗೆ ಎಂಬತ್ತಮೂರು ವರ್ಷಗಳು. ಆಗ ಅದು ನಮ್ಮಂಥವರಿಗೆಲ್ಲ ಅದೊಂದು ಸಾಹಸಕಾರ್ಯವೆಂಬಂತೆ ಕಂಡಿತ್ತು. ವಿಸ್ತಾರವಾದ ಮಹಾಭಾರತದ ಕಥೆಯನ್ನು ಅಂದಗೆಡದಂತೆ, ಸೊಗಸಾದ ಶೈಲಿಯಲ್ಲಿ, ತಮ್ಮ ಮಾತೃಭಾಷೆಯಾದ ಈಗ ನಾವೆಲ್ಲ ಕರೆಯುವ ಅರೆಬಾಸೆಯಲ್ಲಿ ನಿರೂಪಿಸಿದ್ದಾರೆ. ಅವರು ಈ ಭಾಷೆಯನ್ನು ಕುರಿತು ಬರೆದುದು ಭಾಷಾ ವೈಜ್ಞಾನಿಕ ರೀತಿಯಿಂದ ವಿಶ್ಲೇಷಿಸಿದ ಇಂಗ್ಲೀಷಿನಲ್ಲಿರುವ ಗೌಡ ಕನ್ನಡ (Gowda Kannada) ಎಂಬ ಹೆಸರಿನ ಪ್ರೌಢಗ್ರಂಥ. ಇದು 1970ರಲ್ಲಿ ಅಣ್ಣಾಮಲೈ ಯೂನಿವರ್ಸಿಟಿಯಿಂದ ಪ್ರಕಟಿತವಾಗಿದೆ. ಇದು ಈ ಭಾಷೆ (=ಉಪಭಾಷೆ)ಯ ಬಗೆಗಿನ ಮೊತ್ತ ಮೊದಲಿನ ಒಂದೇ ಒಂದು ಉಪಲಬ್ಧವಾದ ಪ್ರೌಢಗ್ರಂಥ.

'ಮಾನಸ ಮಹಾಭಾರತವನ್ನು'.... ಇಷ್ಟು ಶ್ರಮಪಟ್ಟು ಬರೆಯಲು ಪ್ರೇರಣೆ ಹೇಗೆ ಬಂತು? ಎಂದು ಕೇಳಿದಾಗ .... ವ್ಯಾಕರಣ ಕ್ಷೇತ್ರದಲ್ಲಿ ನನ್ನದು ಮೊದಲ ಕೊಡುಗೆಯಾದಂತೆ ಸಾಹಿತ್ಯ ಕ್ಷೇತ್ರಕ್ಕೂ ಇದು ಮೊದಲ ಕೊಡುಗೆಯಾಗಿರಲೆಂಬ ಹಂಬಲದಿಂದ ಇದನ್ನು ಬರೆದೆ' ಎಂದರು (ನೋಡಿ:– ಮಾ. ಮ.ದ ಮುನ್ನುಡಿ).

ಈ ಎರಡೂ ಕ್ಷೇತ್ರಗಳಲ್ಲಿಯೂ ಇವರು ಅದ್ವಿತೀಯರೇ ಆಗಿದ್ದಾರೆನ್ನಲು ನನಗೆ ಸಂತೋಷವಾಗುತ್ತದೆ. ಈಗ 90ರ

ಹರೆಯದ ತರುಣರಾದ ನನ್ನ ಗೆಳೆಯರು ಮಹಾಭಾರತ ಪುರಾಣ ಸಂಬಂಧಿ ಕಥೆಯನ್ನೆತ್ತಿಕೊಂಡು 'ಗಂಗಾವತರಣ'– 'ಭೀಷ್ಮೋದಯ'ವೆಂಬ ಅರೆಬಾಸೆಯ ದ್ವಿತೀಯ ಗದ್ಯಕಾವ್ಯ ವಾಗಿ, ತಮ್ಮ ಸರಸವಾದ ಲವಲವಿಕೆಯ ಶೈಲಿಯಲ್ಲಿ ನಿರೂಪಿಸಿದ್ದಾರೆ. ಮಾನಸ ಮಹಾಭಾರತದಲ್ಲಿ ವರ್ಣನೆಗೆ ವಿಸ್ತಾರವಾದ ಅವಕಾಶವಿದ್ದರೆ ಇಲ್ಲಿ ಅಷ್ಟಿಲ್ಲ. ಚುಟುಕಾಗಿ ಚುರುಕಾಗಿ ಸಾಗುತ್ತವೆ. ಶಬ್ದ ಪ್ರಯೋಗದ ಜಾಣ್ಮೆ, ಅಲ್ಲಲ್ಲಿ ಮಿಂಚುವುದುಂಟು ಒಂದೆರಡು ಉದಾಹರಣೆಗಳನ್ನು ಎತ್ತಿ ಕೊಡುತ್ತೇನೆ. ಆನೆಗಳ ಬೆನ್ನಿನ ಮೇಲೆ ಕಟ್ಟಿದ ದೊಡ್ಡದಾದ ಡೋಲುಗಳನ್ನು ದೊಡ್ಡ ಕೊದಂಟಿಗಳಿಂದ ಬೇರಿ ಬೇರಿ (ಅಂದರೆ ಎತ್ತಿ ಎತ್ತಿ) ಹೊಡೆಯುತ್ತಿದ್ದುದರಿಂದ ಇದಕ್ಕೆ 'ಭೇರಿ' ಎಂಬ ಹೆಸರು ಬಂತೋ ಎಂದು ಕೆಲವು ಪಂಡಿತ ಸೈನಿಕರು ಯೋಚಿಸುತ್ತಿದ್ದರಂತೆ! ಇವುಗಳಿಂದ ಹೊರಟ ಶಬ್ದ ದಿಗ್ಗಜಗಳ ಕಿವಿಗೆ ಗೂಟ ಹೊಡೆದಂತೆ ಮುಟ್ಟಿತಂತೆ. ಮತ್ತೆ ಬೆಟ್ಟದ ಗುಹೆ ಬಾಂಜಾರಗಳನ್ನು ಆಕ್ರಮಿಸಿ ಅವುಗಳ ಬಾಯಿಗಳನ್ನು ಮುಚ್ಚಿ ಬಿಟ್ಟುದರಿಂದ ಶತ್ರುಗಳಿಗೆ ಹೆದರಿ ತಪ್ಪಿಸಿಕೊಂಡು ಅಡಗಿಕೊಳ್ಳಲು ಅಸಾಧ್ಯವಾಯ್ತಂತೆ! (ದೇವವ್ರತನ ದಿಗ್ವಿಜಯ).

ಮೂಡುದಿಕ್ಕಿಗೆ ದಿಗ್ವಿಜಯಕ್ಕೆ ಹೊರಟ ದೇವವ್ರತ ಎತ್ತರದ ಮದ್ದಾನೆಯ ಬೆನ್ನಿನ ಮೇಲೆ ಚಿನ್ನದಂಬಾರಿಯ ಮಧ್ಯೆ ಆಯುಧಗಳನ್ನಿಟ್ಟುಕೊಂಡು ಕುಳಿತವನು ಮೂಡಣ ಸೂರ್ಯನಿಗೆ ಪ್ರತಿಸೂರ್ಯನೋ ಎಂಬಂತೆ ಕಂಡನಂತೆ. ಮೂಡುಬೆಟ್ಟವನ್ನೇರಿನಿಂತ ಸೂರ್ಯನಂತೆ, ಎತ್ತರವಾದ ಆನೆಯ ಬೆನ್ನಿನ ಮೇಲೆ ಕುಳಿತ ದೇವವ್ರತ ಅವನಿಗೆದುರಾಗಿ ಶೋಭಿಸಿದನಂತೆ.

ಗಂಗೆಯನ್ನು ಭೂಲೋಕಕ್ಕೆ ಕಳುಹಿಸಲು ಬಿಡಬಾರದೆಂಬ ಚರ್ಚೆ ದೇವತೆಗಳಿಗೂ ವಸುಗಳಿಗೂ ನಡೆಯುವುದು ತತ್ಕಾಲ ದಲ್ಲಿ ನಮ್ಮಲ್ಲಿಯ ನದಿನೀರಿಗಾಗುವ ಜಗಳವನ್ನೇ ನೆನಪಿಸುತ್ತದೆ. ಎಷ್ಟೇ ದೊಡ್ಡ ಮನುಷ್ಯರಾದರೂ ಅವರ ಚಿತಾಭಸ್ಮವನ್ನು ನದಿ ನೀರಿನಲ್ಲಿ ಕಲಕುವುದು ತಪ್ಪು. ಪ್ರಕೃತಿಯನ್ನು ಪರಿಶುದ್ಧವಾಗಿ ಇಟ್ಟುಕೊಳ್ಳಬೇಕು. ಪ್ರಕೃತಿಯೇ ದೇವರು ಎಂಬ ಅಭಿಪ್ರಾಯವನ್ನು ಲೇಖಕರು ವ್ಯಕ್ತಪಡಿಸುವುದನ್ನು ಮೆಚ್ಚಬೇಕು.

ಗಂಗೆ ಹರಿಯುವ ರಭಸದಲ್ಲಿ ಜಹ್ನುರುಷಿಯ ಆಶ್ರಮ

ವನ್ನು ಅಡಿಮೇಲೆ ಮಾಡಿ ಹಾಳುಮಾಡುವ ಪ್ರಸಂಗ ವಿನೋದ ಮಯವಾಗಿ ಕಾಣುತ್ತದೆ. ಸದಾ ಉರಿಯುತ್ತಿರುವ ಪವಿತ್ರ ನಿತ್ಯಾಗ್ನಿಯನ್ನು ಮುಟ್ಟಿ ಅದು ಚುಂಯ್ಯೆಂದು ನರಕುವಂತೆ ಮಾಡಿ, ಮತ್ತೆ ಅದರ ಮೋರೆಗೆ ಕರಿಪೂಜಿತು (ಪೂಸಿತು). ಬೆಂಕಿ ನೀರು ಮುಟ್ಟಿ ನಂದುವಾಗ ಚುಂಯ್ಯೆಂದು ಕೇಳುವುದು, ಮತ್ತೆ ಬೆಂಕಿ ನಂದಿದ ಮೇಲೆ ಕೆಂಡ ಕಪ್ಪಾಗಿ ಇದ್ದಿಲಾಗುವುದನ್ನು ನಗು ಬರುವಂತೆ ಚಿತ್ರಿಸಿದ್ದಾರೆ. ಇದಕ್ಕೆಲ್ಲ ಪರಿಹಾರವಾಗಿ ಮತ್ತೆ ಜಹ್ನುವಿಗೆ ಸುಂದರವಾದ ಆಶ್ರಮ ಕಟ್ಟಿಸಿಕೊಟ್ಟು ಬೇಕಾದ ಅನುಕೂಲಮಾಡಿ ಕೊಡುತ್ತಾನೆ ಭಗೀರಥ.

ಒಂದೆರಡು ಹೃದಯಸ್ಪರ್ಷಿಯಾದ ವರ್ಣನೆಗಳನ್ನು ನಿಮ್ಮ ಮುಂದೆ ಇಡಲು ಬಯಸುತ್ತೇನೆ. ಅರಮನೆಯಲ್ಲಿ ಹಿಂದಿನ ರಾಜಕುಮಾರರು ಚಿಕ್ಕವರಾಗಿದ್ದಾಗ ಮಲಗುತ್ತಿದ್ದ ಚಿನ್ನದ ತೊಟ್ಟಿಲು ಅಟ್ಟದಲ್ಲಿಟ್ಟುದನ್ನು ಕೆಳಗಿಳಿಸುವ ಅವಕಾಶವೇ ಬಂದಿರಲಿಲ್ಲ. ಗಂಗೆ ಏಳು ಸಲ ಮಗುವನ್ನು ಹೆತ್ತರೂ, ಒಂದು ಮಗುವಾದರೂ ಉಳಿದಿದ್ದರೆ ಅದನ್ನು ತೊಟ್ಟಿಲಲ್ಲಿ ಮಲಗಿಸಿ ಲಾಲಿ ಹಾಡುತ್ತಾ ತೊಟ್ಟಿಲನ್ನು 'ಜಿರಿಜಿರಿ' ಎಂದು ತೂಗುತ್ತಿರುವಾಗ ಆ ಮಗು ಜೊಲ್ಲು ಸುರಿಸುತ್ತ "ಆ, ಊ" ಎಂದು ಶಬ್ದ ಮಾಡುತ್ತಿದ್ದು, ಕೊನೆಗೆ ತನ್ನ ಎಸಳು ಕಣ್ಣುಗಳನ್ನು ಮುಚ್ಚಿ ನಿದ್ದೆ ಹೋಗುವುದನ್ನು ನೋಡಿ, ತಾನೂ ತೊಟ್ಟಿಲ ಬಳಿಯೇ ಸ್ವಲ್ಪ ಹೊತ್ತು ಬರಿ ನೆಲದ ಮೇಲೆ ಮಲಗಿ ಎದ್ದು ಸುಖಪಡಬಹುದಿತ್ತು. ಅದಕ್ಕೆ ಅವಕಾಶವೇ ಇಲ್ಲದಾಯ್ತಲ್ಲ ಎಂಬ ದುಃಖದಿಂದ ಆ ಅರಮನೆಯಲ್ಲಿ ಗಂಗೆಯನ್ನು ಹೊರತುಪಡಿಸಿ ಎಲ್ಲರಿಗೂ ಗಂಟಲು ಕಟ್ಟಿ, ಕಣ್ಣಲ್ಲಿ ನೀರು ತುಂಬುತ್ತಿತ್ತು ಎಂದು ಬರೆದಿದ್ದಾರೆ.

ಅಂಬೆಯ ಪ್ರಸಂಗದಲ್ಲಿ ಗುರು–ಶಿಷ್ಯರಾದ ಪರಶುರಾಮ ಮತ್ತು ಭೀಷ್ಮನಿಗೆ ವಾಗ್ವಾದವಾಗಿ ಭೀಷ್ಮ – ಗುರುವಿನ ಮಾತನ್ನು ತಿರಸ್ಕರಿಸಿ ಭೀಷ್ಮ ಗುರುವಿನೊಡನೆ ಯುದ್ಧ ಮಾಡಬೇಕೆಂದು ತೀರ್ಮಾನಿಸುತ್ತಾರೆ. ಇದನ್ನು ಕೇಳಿ ಸತ್ಯವತಿ ಭಯಭೀತ ಳಾಗುತ್ತಾಳೆ. ಕಾರಣ ಪರಶುರಾಮ ಕ್ಷತ್ರಿಯ ವಿರೋಧಿ. ಹಾಗೆ ಭೀಷ್ಮನಿಗೆಲ್ಲಾದರೂ ಪ್ರಾಣಾಪಾಯ ಮಾಡಿಬಿಟ್ಟರೆ!

ಎಂದು ಅವಳಿಗೆ ಹೆದರಿಕೆ ಹಾಗೆ ಭೀಷ್ಮನೊಡನೆ, ಅವನೊಡನೆ ಯುದ್ಧಬೇಡ ಮಗ. ಅವನ ಮಾತಿನಂತೆ ನೀನು

ಪ್ರತಿಜ್ಞಾ ಭಂಗ ಮಾಡಿದರೆ ಅದರಿಂದ ದೋಷ ಬರುವುದಾದರೆ ಅದು ಅವನ ತಲೆಮೇಲೆ ಬರುತ್ತದೆ ಹೊರತು ನಿನಗಲ್ಲ. ನೀನು ಪ್ರತಿಜ್ಞೆ ನನ್ನ ಕಾರಣದಿಂದ ಮಾಡಿದ್ದರಿಂದ ಅದು ನನ್ನ ಮೇಲಿರಲಿ. ನನಗೆ ನೀನು ಸುರಕ್ಷಿತವಾಗಿರುವುದು ಮುಖ್ಯ. ನಿನ್ನ ಜೀವನದಲ್ಲಿ ಹುಣ್ಣಿಮೆಯ ಬೆಳ್ದಿಂಗಳು ತುಂಬಿ ಹರಿಯಲಿ ಮಗನೇ ಎಂದು ಹೇಳಿ ಕಣ್ಣೀರು ಹಾಕಿದಳು.

ಹುಣ್ಣಿಮೆಯ ಬೆಳ್ದಿಂಗಳು ಲೋಕಕ್ಕೆಲ್ಲಾ ಹಾಲಿನ ಹೊಳೆ ಹರಿದಂತೆ ನೋಡಲು ಆಹ್ಲಾದಕರವಾಗಿರುತ್ತದೆ. ತಾಯಂದಿರ ಬಯಕೆಯೆಂದರೆ ತಮ್ಮ ಮಕ್ಕಳು ಮದುವೆಯಾಗಿ ಗಂಡ ಹೆಂಡತಿಯರ ಸಹ ಜೀವನದ ಆನಂದ ಆಹ್ಲಾದಗಳು, ಅವರು ಸರಸ ವಿನೋದಗಳಿಂದ ಸುಖಿಸುತ್ತಿರುವುದನ್ನು ನೋಡಿ ತಾವು ಆನಂದಿಸಬೇಕು. ಮತ್ತೆ ಅವರಿಗೆ ಮಕ್ಕಳು ಮರಿಗಳಾದ ಮೇಲೆ ಆ ಮೊಮ್ಮಕ್ಕಳ ಲಾಲನೆ ಪಾಲನೆ ಮಾಡಿ ತಾವು ಸುಖಿಸಬೇಕೆಂಬ ತಾಯಂದಿರ ಮನಸ್ಸಿನ ಹಿಂಗದ ದಾಹ। ಹಾಗೆ ಅವಳು ಈ ಮಾತಾಡಿದಾಗ ಅವಳ ಮನಸ್ಸು ಎಷ್ಟು ಮೃದು, ಎಷ್ಟು ಕೋಮಲ ಎಂದು ನಾವು ಬೆರಗಾಗುತ್ತೇವೆಂದು ಒಂದು ಸುಂದರ ಚಿತ್ರಣ ಕೊಡುತ್ತಾರೆ.

ಸತ್ಯವತಿ ಬಾಲೆಯಿದ್ದಾಗ ಅವಳ ದೇಹಾಂಗದ ಸೌಂದರ್ಯ ವರ್ಣನೆಯ ಸಂದರ್ಭದಲ್ಲಿ, ಅವಳ ಕಿವಿಯನ್ನು ಕನ್ನಡದ ಶ್ರೀಕಾರವನ್ನು ಹೋಲುವ ಕಿವಿಯೆನ್ನುತ್ತಾರೆ. ಇದು ಅವರ ನವೀನ ದೃಷ್ಟಿಗೆ ಸಾಕ್ಷಿ, ಗಾಂಧಾರಿಗೆ ನೂರು ಮಕ್ಕಳಾಗುವಂತೆ ವರಕೊಟ್ಟ ವೇದವ್ಯಾಸರ ಕುಬ್ಜದೃಷ್ಟಿಯನ್ನು ಪ್ರಶ್ನಿಸುತ್ತಾರೆ. ಹಾಗೆಯೇ ಕೌರವ ಸಭೆಯಲ್ಲಿ ದ್ರೌಪದಿಗಾದ ಅವಮಾನ ಪರಮಾವಧಿ ಮೀರಿ ನಮ್ಮನ್ನು ದುಃಖದ ಮಡುವಿಗೆ ತಳ್ಳುತ್ತದೆ.

ವಸುಗಳಿಗೆ ಮಾತು ಕೊಟ್ಟುದರಿಂದ ಗಂಗೆ ಶಿಶು ಹಂತಕಿ ಯಾದರೂ ಶಂತನು ಉಳಿಸಿಕೊಂಡ ಕೊನೆಯ ಮಗುವನ್ನು ಸಾಕುವಲ್ಲಿ ಅವಳು ಪ್ರೇಮಮಯಿಯಾದ ಮಾತೆಯಾಗಿ ಕಂಡು ಬರುತ್ತಾಳೆಂಬುದು ಭೀಷ್ಮನ ಮಾತಿನಿಂದಲೇ ತಿಳಿದು ಬರುತ್ತದೆ. ಶಂತನುಗೆ ಮಾತುಕೊಟ್ಟಂತೆ ಮಗುವನ್ನು ಬೆಳೆಸಿ ದೊಡ್ಡದಾಗಿಸಿ ಎಲ್ಲ ವಿದ್ಯಾಬುದ್ಧಿಗಳನ್ನು ಕಲಿಸಿ ಶಂತನುನ ಕೈಗೊಪ್ಪಿಸುತ್ತಾಳೆ. ಗಂಗೆಯ ಸತ್ಯಸಂಧತೆ ಮೆಚ್ಚುವಂಥದು. ತಾಯಿಂದ ಅಗಲಿದ ದುಃಖವನ್ನು ತಂದೆಯ ಸಂತೋಷದ ಹೆದ್ದೆರೆ ಮುಳುಗಿಸು

ತ್ತದೆ. ದೇವವ್ರತನ ದಿಗ್ವಿಜಯ ಸಂಭ್ರಮ ಭರಿತವಾಗಿ ಜಯಪ್ರದ ವಾಗುತ್ತದೆ. ಪುನರವಲೋಕನದಲ್ಲಿ ಭೀಷ್ಮನ ಸಂಕ್ಷಿಪ್ತ ಜೀವನ, ಸಮಸ್ಯೆಗಳು ನಮ್ಮೆದುರು ತೆರೆಯುತ್ತವೆ.

ಒಂದು ಭಾಷೆ ಗಟ್ಟಿಯಾಗಿ ಕಾಲೂರುವುದಕ್ಕೆ ತಳಹದಿ ಯಾಗುವುದು ಮೊದಲು ಅದರ ವ್ಯಾಕರಣ. ಮತ್ತೆ ಅದರ ಕಾವ್ಯರೂಪದ ಪುರಾಣರೂಪದ ರಚನೆ. ನಮಗೆ ಪರಿಚಿತವಾದ ಪ್ರಧಾನ ಸಾಹಿತ್ಯ ಭಾಷೆಗಳನ್ನೆಲ್ಲ ವಿಚಾರಿಸಿ ನೋಡಿದರೆ ಈ ಮಾತು ನಿಜವೆಂದು ಕಂಡುಬಂದೀತು. ಅರೆಬಾಸೆಗೆ ಈ ಎರಡೂ ಅಂಶಗಳೂ ಒಬ್ಬನೇ ವ್ಯಕ್ತಿಯಿಂದ ಒದಗಿ ಬಂದುದು ತಮ್ಮ ಸೌಭಾಗ್ಯವೆಂದು ಅರೆಭಾಷಿಕರು ಹೆಮ್ಮೆಯಿಂದ ನೆನೆಯಬೇಕು. ಗ್ರಂಥಗಳು ಪ್ರಕಟವಾದರೆ ಸಾಲದು. ಆಯಾ ಭಾಷಿಕರು ಅವನ್ನು ಗೌರವಿಸಿ ಓದಬೇಕು. ತಮ್ಮ ಸಮೀಪದವರಿಗೆ ಅದನ್ನು ವಿವರವಾಗಿ ಹೇಳಬೇಕು. ಅದನ್ನು ಅವರೂ ಓದುವಂತೆ ಪ್ರೋತ್ಸಾಹಿಸಬೇಕು. ಪ್ರಚಾರ ಮಾಡಬೇಕು, ಕಾಲಕ್ರಮದಲ್ಲಿ ಕತೆ, ಕಾದಂಬರಿ, ನಾಟಕಾದಿಗಳನ್ನು ಬರೆಯಲು ತಾವೂ ಪ್ರಯತ್ನ ಪಡಬೇಕು. ಹಾಗೆ ಅರೆಬಾಸೆಯೂ ಸಮೃದ್ಧ ಭಾಷೆಯಾಗಿ ಬೆಳೆಯುವಲ್ಲಿ ಎಲ್ಲರೂ ಪ್ರಯತ್ನಿಸಬೇಕು.

ಅರೆಬಾಸೆಯೆಂದು ತಾತ್ಸಾರ ಮಾಡಬಾರದು. ಅದೂ ಸರ್ವಭಾಷಾ ಸರಸ್ವತಿಗಳಲ್ಲಿ ಒಂದು. ಸರ್ವಜ್ಞನಾದ ಭಗವಂತನ ಬಾಯಿಂದ ಬಂದು ಪುನೀತವಾಗಿ ಪರಂಜ್ಯೋತಿಯಾಗಿದ್ದು, ಕತ್ತಲನ್ನು ಇಲ್ಲದಾಗಿಸುವಂಥದು. ಅದಕ್ಕೆ ವಂದನೆಗಳು.

ವೈಯಾಕರಣಿ ನಾಗವರ್ಮನ ಮಾತು:

ಸರ್ವಜ್ಞಂ ತದಹಂ ವಂದೇ ಪರಂಜ್ಯೋತಿಸ್ತಮೋಪಸಹಾಂ।
ಪ್ರವೃತ್ತಾಯನ್ನು ಖಾದ್ದೇವೀ ಸರ್ವ ಭಾಷಾ ಸರಸ್ವತೀ॥

ನಾಡಿನ ಪುಣ್ಯದಿಂದ ಕವಿಯೊಬ್ಬನುದಿಸುತ್ತಾನೆ. ಕುಶಾಲಪ್ಪ ಗೌಡರಂಥ ಕವಿಯನ್ನು ಪಡೆದುದಕ್ಕೆ ಅರೆಬಾಸೆಯವರು ಹೆಮ್ಮೆ ಪಡಬೇಕು. ನಾನು ನಿಮ್ಮನೆಲ್ಲ ಸಂತೋಷದಿಂದ ಅಭಿನಂದಿಸುತ್ತೇನೆ.

22–01–2021 **'ವೈನತೇಯ'**

ಅಧ್ಯಕ್ಷರ ಮಾತು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿಯ ಪುಸ್ತಕ ಪ್ರಕಟಣಾ ಯೋಜನೆ ಅಡಿಲಿ ಪ್ರೊ. ಕೆ. ಕುಶಾಲಪ್ಪ ಗೌಡರ 'ಗಂಗಾವತರಣ ಭೀಷ್ಮೋದಯ' ಕೃತಿ ಪ್ರಕಟ ಆಗುತ್ತುಟ್ಟು ಹೇಳುವಂತದ್ದು ನಮಿಗೆಲ್ಲ ಹೆಮ್ಮೆ ಮತ್ತೆ ಕುಸಿಯ ಸಂಗತಿ. ಇದ್ ಅವರ ಎರಡನೇ ಗದ್ಯ ಕಾವ್ಯ. ಈ ಹಿಂದೆ 'ಮಾನಸ ಮಹಾಭಾರತ'ತೇಳುವ ಪುರಾಣ ಗದ್ಯ ಕಾವ್ಯನ ಅರೆಬಾಸೆಗೆ ತಂದೊಳೊ. ಹಂಗೇನೆ ಅರೆಬಾಸೆಗೆ ವ್ಯಾಕರಣ ರಚಿಸಿ ನಮ್ಮ ಭಾಷೆಗೊಂದು ಭದ್ರ ಬುನಾದಿ ಹಾಕಿ ಕೊಟ್ಟೊಳೊ. ಪುರಾಣದ ಮಹಾಕಾವ್ಯನ ಅರೆಬಾಸೆಗೆ ತಂದ್ ಅದರ್‌ನ ನಮ್ಮ ಪರಿಸರಕ್ಕೆ, ನಮ್ಮ ಭಾಷೆ, ಸಂಸ್ಕೃತಿಗೆ ಒಗ್ಗುವ ರೀತಿಲಿಸ ಬರ್ದ ರೀತಿ ನಿಜಕ್ಕೂ ಮೆಚ್ಚುವಂತದ್ದು. ಹಂಗಾಗಿ ಇಲ್ಲಿಯ ಕಾವ್ಯ ಓದ್‌ಕನ ಅದ್ ನಮ್ಮ ಪರಿಸರಲಿ ನಡ್ದ್ ಹೋದ ಕತೆಯೇನೋ ಅನ್ನುವಷ್ಟರ ಮಟ್ಟಿಗೆ ಸಹಜತೆ ಪಡ್‌ಕಂಡ್‌ಟು. ನಮ್ಮ ಭಾಷೆ ಸಂಸ್ಕೃತಿ ಸಂಪತ್‌ಭರಿತ ಆಕುತಾದರೆ ಈ ತರದ ಮೇರು ಕೃತಿಗ ನಮ್ಮ ಬಾಸೆಗೆ ಬರೋಕು. ಈ ಕೃತಿನ ಓದಿ ಮತ್ತಷ್ಟ್ ಕೃತಿಗ ನಮ್ಮ ನೆಲದ ಸೊಗಡ್‌ನ ಹೀರಿಕಂಡ್ ಬಂದರೆ ಈ ಪ್ರಯತ್ನ ಸಾರ್ಥಕ. ಪುರಾಣ ಕಾವ್ಯಗ ಮರುಸೃಷ್ಟಿ ಪಡಕಂಡ್ ಬರ್ತನೇ ಇರ್‍ಲಿ. ಅದಿಕ್ಕೊಂದು ದಾರಿ ನಿರ್ಮಿಸಿಕೊಟ್ಟ ಭಾಷಾವಿಜ್ಞಾನಿಗಳಾದ ಪ್ರೊ. ಕೋಡಿ ಕುಶಾಲಪ್ಪ ಗೌಡರಿಗೆ ನಮ್ಮ ಕಡೆಂದ ಪ್ರೀತಿಯ ಅಭಿನಂದನೆಗ.

ಲಕ್ಷ್ಮೀನಾರಾಯಣ ಕಜೆಗದ್ದೆ

ಕೃತಜ್ಞತೆಗಳು

1. ನನ್ನ ಈ ಕೃತಿಯನ್ನು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಮೂಲಕ ಪ್ರಕಟಿಸಲು ಒಪ್ಪಿಕೊಂಡ ಮಾನ್ಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ ಹಾಗೂ ರಿಜಿಸ್ಟ್ರಾರ್ ಚಿನ್ನಸ್ವಾಮಿ ಅವರಿಗೂ ಅಕಾಡೆಮಿಯ ಸದಸ್ಯ ವರ್ಗಕ್ಕೂ,
2. ಪುಸ್ತಕದ ಡಿ.ಟಿ.ಪಿ.ಯನ್ನು ಅಂದವಾಗಿ, ಕ್ಲಪ್ತ ಸಮಯದಲ್ಲಿ ಮಾಡಿಕೊಟ್ಟ ಸುಳ್ಯದ 'ವಿನೂ ಎಂಟರ್‌ಪ್ರೈಸಸ್' ಅವರಿಗೂ,
3. ಪುಸ್ತಕವನ್ನು ಅಂದವಾಗಿ ಅಚ್ಚು ಮಾಡಿದ ಆಕೃತಿ ಪ್ರಿಂಟ್ಸ್‌ನ ಶ್ರೀ ಕಲ್ಲೂರು ನಾಗೇಶ ಮತ್ತು ಅವರ ಸಿಬ್ಬಂದಿ ವರ್ಗಕ್ಕೂ,
4. ಗ್ರಂಥ ರಚನೆಯ ಕಾಲದಲ್ಲಿ ಉತ್ತಮ ಶಾಂತ ವಾತಾವರಣವನ್ನು ಕಲ್ಪಿಸಿಕೊಟ್ಟ ನನ್ನ ಅಳಿಯ, ಮಗಳು, ಮೊಮ್ಮಕ್ಕಳ ಬಳಗಕ್ಕೂ
5. ಪುಸ್ತಕಕ್ಕೆ ಸುಂದರ ಮುನ್ನುಡಿ ಬರೆದ ಮಿತ್ರ 'ವೈನತೇಯ'ರಿಗೂ,
6. ಬರಹ ಎಲ್ಲಿಯವರೆಗೆ ಬಂತೆಂದು ಆಗಾಗ ವಿಚಾರಿಸಿ, ಉತ್ಸಾಹ ತುಂಬುತ್ತಿದ್ದ ಅಳಿಯ (ತಂಗಿಯ ಮಗ) ಡಾ. ಎನ್.ವಿ. ಕರುಣಾಕರನಿಗೂ ನನ್ನ ಮನಃಪೂರ್ವಕ ಕೃತಜ್ಞತೆಗಳು.

ವಿ.ಸೂ.:

ಕೊಡವ ಮಾತಿನಲ್ಲಿ ಕೇಳ್, ತೇಡ್ ಇತ್ಯಾದಿ ಮೂರ್ಧನ್ಯ ಅಕ್ಷರಗಳು ಎದುರಿಗೆ ಬರುವ /ಏ/ ಸ್ವರ ವ್ಯತ್ಯಾಸವಾಗುತ್ತದೆ. ಇದಕ್ಕೆ ಕನ್ನಡ ಲಿಪಿಯಲ್ಲಿ ಬೇರೆ ಸಂಜ್ಞೆ ಇಲ್ಲವಾದುದರಿಂದ /∴/ ಎಂದು ಕೊಟ್ಟಿದ್ದೇನೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಅಧ್ಯಕ್ಷರು
ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ

ಸದಸ್ಯರು
ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ
ಶ್ರೀಮತಿ ಸ್ಮಿತಾ ಅಮೃತರಾಜ್
ಶ್ರೀಮತಿ ಚೊಕ್ಕಾಡಿ ಪ್ರೇಮ ರಾಘವಯ್ಯ
ಶ್ರೀ ಧನಂಜಯ ಅಗೋಳಿಕಜೆ
ಶ್ರೀ ದಂಬೆಕೋಡಿ ಎಸ್. ಆನಂದ
ಡಾ. ಕೂಡಕಂಡಿ ದಯಾನಂದ
ಶ್ರೀ ಕುಸುಮಾಧರ ಎ.ಟಿ.
ಡಾ. ವಿಶ್ವನಾಥ ಬದಿಕಾನ
ಶ್ರೀ ಜಯಪ್ರಕಾಶ್ ಮೋಂಟಡ್ಕ ಬಿಳಿನೆಲೆ
ಶ್ರೀ ಪುರುಷೋತ್ತಮ ಕಿರ್ಲಾಯ
ಡಾ. ಪುರುಷೋತ್ತಮ ಕೆ.ವಿ. ಕರಂಗಲ್ಲು
ಶ್ರೀ ಕಿರಣ್ ಕುಂಬಳಚೇರಿ
ಶ್ರೀ ಭರತೇಶ ಅಲಸಂಡೆಮಜಲು

ರಿಜಿಸ್ಟ್ರಾರ್
ಶ್ರೀ ಚಿನ್ನಸ್ವಾಮಿ

ಗಂಗಾವತರಣ – ಭೀಷ್ಮೋದಯ

ನನ್ನ ನಿಜ ಹೆಸರ್ ದೇವವ್ರತಂತ. ಇದ್ ಹೆಚ್ಚಿಗೆ ಬಳಕೆಗೆ ಬಾರದೆ ಭೀಷ್ಮಂತೇಳ್ವ ಹೆಸ್‌ರೇ ಬಳಕೆಲಿ ಒಳ್ತ್. ದ್ರೋಣ, ಕೃಪರಂತ ಮಿತ್ರರ್, ನನ್ನ ಅವ್ವನ ಹೆಸರ್‌ನ ಸೇರ್ಸಿ ಪ್ರೀತಿಂದ 'ಗಂಗಾಪುತ್ರ'ಂತ ಕರೆಯುತ್ತಿದ್ದೊ. ಇದ್ ನಂಗೆ ತುಂಬ ಪ್ರಿಯವಾದ ಹೆಸ್‌ರಾಗಿತ್ತ್.

ಹಿಂದೆ ನಾ ದೇವಪಂಕ್ತಿಗೆ ಸೇರ್ದಂವಾಗಿದ್ದೆ ಗಡ. ದೇವಲೋಕ∴ಲಿ ಎಂಟ್ ಜೆನ 'ವಸು'ಗಂತೇಳ್ವ ತರುಣ ಪಂಗಡ ಒಂದು ಇತ್ತ್ ಗಡ. ಅವರ ಹೆಸ್‌ರ್ ಹೀಂಗೆ:– 1) ಆಪ 2) ಧ್ರುವ 3) ಸೋಮ 4) ಭವ 5) ಅನಿಲ 6) ಅನಲ 7) ಪ್ರತ್ಯೂಷ 8) ಪ್ರಭಾವ. ಈ ಗುಂಪುಗೆ ದಕ್ಷ ಪ್ರಜಾಪತಿ ಅಪ್ಪ. ದಕ್ಷ ಪುತ್ರಿ ವಸು ಅವ್ವ. ಇವು ಒಂದು ಮಾನವ ಕುಟುಂಬದಾಂಗೆ ಇದ್ದೊ. ಮಾನವ ಕುಟುಂಬಕ್ಕೆ ಹೋಲಿಕೆ ಕೊಟ್ಟ∴ದಿಕೆ ಸ∴ರಿಯಾಗಿ, ಅಹಂಕಾರ, ದರ್ಪ ಇತ್ಯಾದಿ ಉದ್ಧಟ ಗುಣ∴ಗಳೂ ಈ ಯುವಕರಲ್ಲಿತ್ತ್. ಇವರ ನೆರೆಕರೆಲಿ ಪರಮ ಸಾತ್ವಿಕ ರುಸಿ ವಸಿಷ್ಠ. ಅವನ ತಪಸ್ಸ್, ಹೋಮ, ಹವನಗಳ ಮಾಡಿಕ∴ಂಡ್ ಇರ್‌ತಿತ್ತ್. ಅವನ ಹಕ್ಕಲೆ ಪೊರ್ಲುನ ನಂದಿನಿಂತೇಳ್ವ ಹಸ್ ಇತ್ತ್. ಸಹಜವಾಗಿ ಈ ರುಸಿಗೆ ಈ ಉಡಾಳರ ಮೇಲೆ ಏನೇನೂ ಗೌರವ ಇತ್ತ್‌ಲೆ. ಅವನ ಮೋರೆಲಿ ವಸುಗ∴ಳಿಗೆ ಸಸಾರವೇ ಅವರ ಮೇಲೆ ಇರುವಾಂಗೆ ಕಾಂಬತಿತ್ತ್. ಅದರ್‌ಂದಾಗಿ ಇವ್ಕೆ ಆ ರುಸಿನ ಮೇಲೆ ಒಳೆಗೆಂದೊಳೆಗೇ ಏನೋ ಅಸಮಾಧಾನ ಹೊಗೆಯಾಡಿಕ∴ಂಡೇ ಇರ್‌ತಿತ್ತ್. ಒಂದ್ ದಿನ ಈ ದುಷ್ಟಾಧಮರ್ ಇವನ ಹಸ್‌ನ ಕ∴ದ್ದ್‌ಬುಟ್ಟೊಗಡ.

ವಸಿಷ್ಠ ಯಾಗಾರ್ ಹೊರೆಗೆ ಹೋಗಿಬಾಕನ ನಂದಿನಿ ಎಲ್ಲಿದ್ದರೂ ಓಡಿಬಂದ್ ಬಾಗ್‌ಲ್‌ಲಿ ನಿತ್ತ್‌ಕ∴ಂಡ್ ವಸಿಷ್ಠನ ಮೈನೆಲ್ಲ ಮೂಸಿ ಮೂಸಿ ನೋಡಿ, ಅವಂಗೆ ಸ್ವಾಗತ ಬಯ್ಸುದು. ಅಂವ ಒಳಗೆ ಹೋಕನ ಇದೂ ಒಟ್ಟಿಗೇ

ಹೋದು. ಮಗಳಾಂಗೆ ಹಿಂದೆ ಮುಂದೆ ಹೋದು. ಹಿಂದೆ ವಸಿಷ್ಠನ ಮಜ್ಜಂದರ ವಿಶ್ವಾಮಿತ್ರ ರುಸಿ ಕೋಪೊಲಿ ಸಾಪ ಕೊಟ್ಟ್ ಕೊಂದಿತ್ತ್. ಇದರ್‌ಂದಾಗಿ ವಸಿಷ್ಠನ ಎದೆ ಯಾಗೋಳು ಸಂಕಟಂದ ಬೇಯತ್ತಿತ್ತ್. ನಂದಿನಿ ಮಗಳಾಂಗೆ ಒಟ್ಟಿಗಿದ್ದ್ ಅವನ ಎದೆಗೆ ತೊಂಪು ಉಂಟು ಮಾಡ್‌ತ್ತಿತ್ತ್. ವಿಶ್ವಾಮಿತ್ರ ಮಾಡ್ದ ಅನ್ಯಾಯನ ಹೇಂಗೋ ಸೈಸಿಕ.ಂಡ.ತ್. ಆದರೆ ಈಗ ನಂದಿನಿ ಕಣ್ಮರೆಯಾಕನ ಅವಂಗೆ ವೇದನೆನ ತಡಿಯಾಕಾಗದಷ್ಟ್ ದು:ಖ ಆತ್.

ತುಂಬಯೋಚನೆ ಮಾಡಿಕ.ಂಡ್, ತುಂಬ ಹೊತ್ತು ಕ.ಣ್ಣೀರ್ ಹಾಕಿತ್. ಅವನ ಹೃದಯ 'ನಂದಿನಿ' 'ನಂದಿನಿ' ಎಂದೇ ತುಡಿಯತ್ತಿತ್ತ್. ಅಂವ ದಿವ್ಯಜ್ಞಾನಿ ಅಲ್ಲೊ? ಹಾಂಗೆ ಧ್ಯಾನ ಮಾಡಿ ನೋಡ್‌ಕನ ನಂದಿನಿನ ಅಪಹರಿಸಿದ ದುಷ್ಟ.ರ್ ಈ ವಸುಗ.ಳೇಂತ ಗೊತ್ತಾತ್. ಇವು ಈಗ.ಳೇ ಇಸ್ಟ್ ಉರಿಯುತ್ತಾ ಒಳೊ. ಇನ್ನ್ ಇವು ಒಳ್ದ್ ಬಂದರೆ ಏನೇನ್ ಆದವೆನೋ? ವಿಶ್ವಾಮಿತ್ರನ ದುಷ್ಟತನನ ನಾ ಹೇಂಗೋ ಕ.ಣ್ಣೀರ್‌ಲಿ ಕೈತೊಳ್ದ್ ತಾಳಿಕಂಡೆ. ಆದರೆ ಈಗ ನಂಗೆ ಅಷ್ಟ್ ತಾಳ್ಮೆನೂ ಇಲ್ಲೆ. ಎದೆಗಾರಿಕೆನೂ ಇಲ್ಲೆ. ಇವ್ಕೆ ಬುದ್ಧಿ ಕ.ಲ್ಸಿಕೆ, ಸಣ್ಣ ಮಟ್ಟ್‌ನ ಸಾಪ ಆದರೂ ಕೊಡೊಕು. ಈ ಎಂಟ್ ಜೆನಂಗ.ಳೂ ನರಮೊಂಯಿಸರಾಗಿ ಹುಟ್ಟ.ಲಿಂತ ಹೇಳಿ ತನ್ನ ಕಮಂಡಲುನ ನೀರ್ ತೆಗ್ದ್ ಕೊಡ್ಕಿತ್.

ಒಂದೆರ್ಡ್ ದಿನ ಕ.ಳಿಯಕನ ವಸುಗ.ಳಿಗೆ ವಸಿಸ್ಠ ಸಾಪ ಕೊಟ್ಟುಟುಂತ ಗೊತ್ತಾತ್. ಹಿಂದೆನ ಕಾಲ.ಲಿ ಜನಿಗೆ ಸಾಪಕೆ ಭಾರಿ ಹೆದ್‌ರಿಕೆ ಇತ್ತ್. ರುಸಿಗ.ಳಿಗೆ ಯಾಗೋಳು ಮೂಕುನ ಕೊಡಿಲೇ ಕೋಪ. ಅವೆಲ್ಲ ಆಚಾರ ವಿಚಾರಗಳ ಪೊರ್ಲುನ ನಡ್ಸಿದ.ವು. ಅವು ಹೇಳ್ದ್ ಹೇಳ್ದಾಂಗೇ ಆತಿತ್ತ್. ಯಾಂವನಾದರೂ ತೊಪ್ಪು ಮಾಡಿ ಯಾದಾರ್ ರುಸಿನ ಸಾಪಕ್ಕೊಳಗಾದ ಕೂಡ್ಲೆ ಅಂವ ಭಯಭಕ್ತಿಂದ ರುಸಿಗೆ ಅಡ್ಡ ಬಿದ್ದ್ ಕ್ಷಮಾಪಣೆ ಕೇಳಿ ಈ ಸಾಪನ ಹಿಂದೆತಕ.ಂಡ್ ನಂಗೆ ಕ್ಷಮೆ ಕೊಡೊಕುಂತ ಪ್ರಾರ್ಥನೆ ಮಾಡುದು. ಆಗ ಒಮ್ಮೊಮ್ಮೆ ಅದರ ತೀವ್ರತೆನ ಕ.ಮ್ಮಿ ಮಾಡುವ ಬೇರೇನಾರ್ ಸಾಮೋಪಾಯ ಹೇಳುದು, ಇಲ್ಲರೆ ಸುಮ್ಮನೆ ಬುಡುದು. ಇಲ್ಲಿ ವಸುಗ ಜಂಭಂದ, 'ವಸಿಸ್ಠ ಮುದಿಯನಕ್ಕಲೆ ನಾವು ಹೋಕಿಲ್ಲೆ. ನಾವೇ ಇದ್ಕೆ ಪೊರಿಹಾರ ಕಂಡ್ ಹಿಡ್ಕಂಬೆ, ನೋಡೊನೊಂತ' ಹೇಳಿಕ.ಂಡ್ ಸುಮ್ಮನೆ ಕುದ್ದೊ.

ಈಗ ಸೂರ್ಯವಂಶದ ರಾಜ ಭಗೀರಥ ಸ್ವರ್ಗಲೋಕದ ಗಂಗೆನ ಭೂಲೋಕಕೆ ತಕಂಡ್ ಹೋವ ಪ್ರಯತ್ನಲಿ ಉಟ್ಟ್‌ಂತೇಳ್ವ ಸುದ್ದಿ ಹಬ್ಬಿತ್. ಇದರ ಕೇಳ್ದ ವಸುಗ ಚುರುಕಾದೊ. ಹಞ್ಞಾ ಸಮಿಯಲೇ ದೇವಲೋಕ.ಲೆಲ್ಲ ಕೋಲಾಹಲ ಎದ್ದ.ತ್. ದೇವತೆಗ ಒಬ್ಬಂದೊಬ್ಬ ಮಾತಾಡಿಕಂಬ ಸುದ್ದಿ ಒಂದೇ. 'ಗಂಗೆನ ಭೂಲೋಕಕೆ ತಕಂಡ್ ಹೋಕೆ ಭಗೀರಥ ಹೊರ್ಟುಟು ಗಡ. ಅದರ ನಾವು ತಡಿಯೊಕು, ಬುಡಿಕಾಗ.ದ್. ನಾವ್ಗೆ ಸೇರ್ದದರ, ಮಾನವರಿಗೆ ಬುಟ್ಟ್

ಕೊಡಿಕೆ ಆಗ.:.ದ್. ಇದ್ ನಾವ್ಗೇ ಸ್ವಂತದ್'ಂತ ಒಬ್ಬ ಹೇಳ್‍ಕನ ಮತ್ತೊಬ್ಬ ವಾದ ಮಾಡ್ತ್. ಪಂಚಭೂತಗ.:.ಳಿಗೆ ಸೇರುದರ್ಲಿ ಎಲ್ಲೊವ್ಕೂ ಸಮಪಾಲ್ ಉಟ್ಟು. ಅದ್ ದೇವಲೋಕಕ್ಕೆ ಮಾತ್ರ ಸೇರಿಕೆ ಸಾಧ್ಯವೇ ಇಲ್ಲೆ". "ಅವ್ಕೆ ಅಲ್ಲಿಯೇ ಬೇರೆ ನದಿಗ ಇರ್‍ಕನ ಮತ್ತೇಕೆ ಇದ್. ಈ ಮೊಯಿಂಸ.:.ರ್ ಎಂತದನ್ನೂ ಶುದ್ಧವಾಗಿ ಇರಿಕೆ ಬುಡಿಕಿಲೆ. ಅವರ ಎಲ್ಲ ಹಳ್ಳಂಗಳ್ನೂ ಹೊಲ್ಸ್ ಮಾಡಿ ಆತ್. ಈಗ ಗಂಗೆನೂ ಹೋದರೆ, ಅದೂ ಕೂಡ ಹೊಲ್ಸ್‍ಕೆಟ್ಟ್ ಹೋದು ಕಂಡಿತ.

ಬುದ್ಧಿವಂತ.:.ರ್ ಕೆಲೊವು 'ಮಾನವ ಜನ್ಮ ದೊಡ್ಡದು, ಇದ ಹಾಳು ಮಾಡದಿರಿ ಹುಚ್ಚಪ್ಪಗಳಿರಾ'ಂತ ಬುದ್ದಿ ಹೇಳಿದ್ದರೂ, ವಸುಗ.:.ಳಿಗೆ ಅದ್ ಒಪ್ಪಿಗೆಯಾತ್‍ಲೆ. ದೇವಲೋಕದ ಆರಾಮ ಜೀವನವೇ ಅವ್ಕೆ ಬೇಕಾಗಿತ್ತ್. ನೆನ್ಸಿದೆಲ್ಲ ತಿಂಬಕೆ ಸಿಕ್ಕಿದೆಂತಾದರೆ ಬೇರೆ ಸುಖ ಸಂಪತ್ತೂ ಬೇಕಷ್ಟು ಉಟ್ಟುಂತಾದರೆ ಬೇರೇನ್ ಬೇಕು? ಭೂಲೋಕ.:.ಲಿ ಎಂತ.:.ದುಟ್ಟು – ಮೊಣ್ಣ್? ಕೊಳೆ ಕೊಳ್‍ಕ್ ತುಂಬಿಕ.:.ಂಡಿರ್ದು'. ಇದರೆಲ್ಲ ನೆನ್ಸ್‍ಕನ ವಸುಗ.:.ಳಿಗೆ ಖಿನ್ನತೆ ತುಂಬಿತ್. ಆದರೂ ವಸಿಸ್ಠ ಮುದಿಯನಲ್ಲಿಗೆ ಹೋಗಿ ಬೇಡಿಕಿಲ್ಲೆ. ನಾವು ನಾವೇ ಪೊರಿಹಾರ ಕಂಡ್ ಹಿಡ್ಕಂಬೊ. ಈ ಸಮಿಯಲೇ ಗಂಗೆ ಭೂಲೋಕಕೆ ಹೋವ ಸುದ್ದಿ ಗುಸು ಗುಸುಂತ ಸುರಾದ್ದ್ ಹಳ್ಳಾ ಬಿರುಸಾಗಿತ್ತ್. ಈ ಪ್ರಸಂಗ ವಸುಗ.:.ಳಿಗೆ ಒಳ್ಳ ಆಕರ್ಷಕವಾಗಿ ಕಂಡ.:.ತ್. ಈ ಘಟನೆನ ತಾವುಗೆ ಸಾಧಕವಾಗಿ ಬಳ್ಸಿಕಂಬಕೆ ವಸುಗ ನೆನ್ಸಿದೊ. ಗಂಗೆನ ಭೂಗಮನಕ್ಕೆ ಅಗತ್ಯವಾದ ಹಿನ್ನೆಲೆ ರಚನೆ ಆವಂಥ ಚರ್ಚೆ ನಡಿಯಕ್ಕೆ ಇವು ಕಾರಣೀಭೂತಗ ಆದೊ. "ನೆಲ, ನೀರ್ ಮುಂತಾದ ಪ್ರಕೃತಿ ವಸ್ತುಗ ಕೆಲವೇ ಕೆಲೊವು ಜೆನಿಗೆ ಮಾತ್ರ ಇರಕಾದ್'ಂತ ಹಿಡ್ದ್ ಇಸಿಕೆ ಯಾರ್‍ಂದಲೂ ಆಕಿಲ್ಲೆ. ನೀರ್‍ನಂತ ವಸ್ತ್ ಎಲ್ಲ ಜೀವಿಗ.:.ಳಿಗೂ ಸಿಕ್ಕೊಕು, ದೇವತೆಗ, ಮೊಂಯಿಸ.:.ರ್‍ಂತ ಭೇದ ಮಾಡಿಕೆ ಸಾಧ್ಯ ಇಲ್ಲೆ. ಗಂಗಮ್ಮ ಭೂಮಿಗೆ ಹೋದು ನ್ಯಾಯ ಆಗಿಯೇ ಉಟ್ಟುಂತ ವಸುಗ ವಾದಿಸಿದೊ. ಅದಿಕೆ ದೇವತೆಗಳ ಕಡೆಂದ, ಈ ಕೊಳ್ಕ್ ಮೊಂಯಿಸ.:.ರ್ ಪರಿಶುದ್ಧವಾದ ಗಂಗೆನ ಉಪಯೋಗಿಸಿರೆ ಅದ್ ಶುದ್ಧ ಆಗಿರುದು ಹೋಗಿ, ಇನ್ನಿಲ್ಲದ ಹೊಲ್ಸ್‍ತನ ಅದಿಕೆ ಬಾದು. ಭಗೀರಥನ ಸುರುನ ಉದ್ದೇಶವೇ, ಸತ್ತವರ ಹೆಣದ ಬೂದಿಮೇಲೆ ಗಂಗೆನ ಪವಿತ್ರ ನೀರ್ ಹರಿಯುವಾಂಗೆ ಮಾಡ್ದುಂತೇಳ್ದರ್‍ಂದಲೇ ಗೊತ್ತಾದೆ. ಗಂಗೆನ ಮುಂದೆನೆ ಅವಸ್ಥೆ ಏನಾದೆಂತ. ಒಂದು ಕಾಲ.:.ಲಿ, ಭೂಲೋಕವಾಗ.:.ಲೀ, ದೇವಲೋಕವಾಗ.:.ಲೀ, ಎಲ್ಲ ನದಿಗಳೂ, ನಮ್ಮ ಈಗನ ಗಂಗೆನ ಪರಿಶುದ್ಧ ರೂಪಲೇ ಇದ್ದೊವು. ಈಗ ಏನಾಗಳೊ? ಅದರ್‍ಂದಳೇ ನಮ್ಮ ಈ ಗಂಗೆನ ಭವಿಷ್ಯ.:.ಲಿ, ಬಾಯಾರಿಕೆಗೆ ಒಂದು ಮುಕುಳಿ ಕುಡಿಯೊನೊಂತೇಳಿ ಕುಡ್ದ್ ಬುಟ್ಟರೆ ಅದ್ ವಿಷದಾಂಗೆ ಆಕಿಲೆನೊ?"

"ಇದ್ ಗಂಗೆನ ವಿಶೇಷ ಗುಣ ಗೊತ್ತಿಲ್ಲದ.:.ವು ಹೇಳುವ ಮಾತ್.

ಬೇರೆ ಹಳ್ಳಂಗಳ ಗುಣ ಒಂದು ತರವಾದರೆ ಗಂಗೆದೇ ಪ್ರತ್ಯೇಕ ಗುಣ. ಅಂದರೆ ಗಂಗೆನ ನೀರ್‌ನ ಬೇಕರೆ ತುಂಬಕಾಲ ಜೋಕೆ ಇಸ.ಃ.ಕ್. ಆದರೆ ಆ ನೀರ್ ಒಳ್ದ ಹಳ್ಳಂಗಳ ನೀರ್‌ನಾಂಗೆ ಹಾಳಾದುಲೆ. ತಾನೇ ಸ್ವಯಂ ಶುದ್ಧಿಸಿಕಂಬ ಗುಣ ಅದಿಕೆ ಉಟ್ಟುಂತಾದೆ. ಹೀಂಗೆ ಗಂಗೆನ ನೀರ್ ಹಾಳಾದುಂತ ಹೇಳುವ ಮಾತ್ ಮಾತ್ರ ಕೇವಲ ಭ್ರಮೆ".

"ಈ ನದೀ ತೀರವಾಸಿಗೆಲ್ಲ ತಮ್ಮವರ ಅರ್ಧ ಸುಟ್ಟ ಹೆಣಗಳ ಸೌದೆ ಖ.ಃ.ರ್ಚೆ ಒಳ್ಸುವ ಕಾರಣಂದ ಹೆರ್ಕಿ ನದಿಗೆ ಬಿಸಾಡುದು, ಸತ್ತವರ ಬೂದಿನ ಹಳ್ಳಕೆ ಹಾಕುದು, ಹೀಂಗೆಲ್ಲ ನದೀ ನೀರ್‌ನ ಕಲುಷಿತ ಮಾಡಿರೆ, ಜೀವಿಗ ಹೇಂಗೆ ಬೊದುಕುದುಂತ ಯೋಚಿಸೊಕೊ ಬೇಡೋ?" "ಇದ್ ಗಂಗೆನ ತೊಪ್ಪು ಅಲ್ಲ. ಜನಂಗಳಿಗೆ ತಿಳಿವಳಿಕೆ ಕೊಡೊಕು. ಪ್ರಾಕೃತಿಕ ವಸ್ತುಗಳ ಯಾವುದೇ ರೀತಿಂದಲೂ ಹಾಳ್ ಮಾಡಿಕೆ ಬುಡಿಕೆ ಆಗ.ಃ.ದ್‌ಂತ ಅವರ ಮೇಲೆ ಕಡ್ಡಾಯ ಕಾನೂನು ಮಾಡೊಕು". ಹೀಂಗೆ ವಸುಗ ಎಲ್ಲ ಕಡೆ ಗಂಗೆ ಭೂಲೋಕಕೆ ಹೋದ್ಯೆಕೆ ಬಲವಾದ ಪ್ರಚಾರ ಮಾಡಿಕ.ಃ.ಂಡ್ ಇದ್ದ.ಃ.ದಲ್ಲದೆ, ಇದರ ಒಪ್ಪದವರ ವಿರುದ್ಧ ದೊಡ್ಡ ಚಳವಳಿ ಮಾಡುದಾಗಿಯೂ ಹೆದ್‌ರಿಸಿದೊ. ಒಂದು ದಿನ ಇವು ಎಂಟ್ ಜೆನಗ.ಃ.ಳೂ ಗಂಗಮ್ಮನ ನೋಡಿ ಅದಿಕೆ ಫಲ ತಾಂಬೂಲ ಕೊಟ್ಟ್ ಅದರ ಕಾಲಿಗೆ ಅಡ್ಡಬಿದ್ದ್ ಬೇಡಿಕಂಡೊ. "ನೀ ನಮ್ಮ ಕಾಪಾಡೊಕು ಅವ್ವ. ನಾವ್ಗೆ ಆ ಮುದಿಯ ರುಸಿ ವಸಿಷ್ಠ 'ನೀವು ಭೂಲೋಕಲಿ ಮೊಂಯಿಸ ಜೆನ್ಮತಾಳಿ ಹುಟ್ಟೀಂತ' ಸಾಪ ಕೊಟ್ಟುಟು. ನಾವು ಬೇಡಿಕಂಬುದು ಇಷ್ಟ್. "ನಾವು ನಿನ್ನ ಪುಣ್ಯಗರ್ಭದಲ್ಲಿ ಹುಟ್ಟುವಾಂಗೆ ಆಕು. ನೀ ಭೂಲೋಕಕೆ ಹೋದ ಮೇಲೆ ಅಲ್ಲಿನ ಪ್ರಖ್ಯಾತ ರಾಜರ ಮೊದುವೆ ಆಗಿ ಸಂಸಾರಿಯಾದ ಮೇಲೆ ನೀ ನಮ್ಮ ಬೊಸ್‌ರಾಗಿ, ನಾವು ಗರ್ಭಂದ ಉದಿಸಿದ ಕೂಡ್ಲೇ ನೀ ನಮ್ಮ ಹಳ್ಳಕೆ ತಕ.ಃ.ಂಡ್ ಹೋಗಿ ನೀರ್‌ಲಿ ಕ.ಃ.ಂತ್‌ಸಿ ಕೊಲ್ಲೊಕು. ಹಾಂಗೆ ನಾವ್ಗೆ ಬೇಗ ಸಾಪ ಇಲ್ಲದಾಗಿ ನಾವು ಬೇಗನೆ ಮುಂದೆನ ಜನ್ಮಕೆ ಬಾವೊ. ನೀ ಇಷ್ಟೊಂದು ಉಪಕಾರ ಮಾಡೊಕು ಅವ್ವ. ನಾವ್ಗೆ ನೀನೇ ಗೆತಿ. ಬೇರೆ ಇಲ್ಲೆ, ನೀ ಕಾಪಾಡೊಕು ಅವ್ವಾ"ಂತ ವಿನಯಂದ ಕೇಳಿಕಂಡೊ. ಗಂಗೆ ಒಪ್ಪಿತ್.

ಗಂಗೆ ಭೂಲೋಕಕೆ ಹೊರ್ಡಿಕೆ ತಯಾರ್ ಮಾಡಿಕ.ಃ.ಂಡ್ ಇತ್ತ್. ವಸುಗ.ಃ.ಳಿಗೆ ಆತುರ. ಇಷ್ಟೊಂದು ಮಹತ್ವದ ಘಟನೆ ನಡಿಯಕೊರೆ ಎಲ್ಲ ಪೂರ್ವಾಪರ ಯೋಚನೆಗ ಆಕು. ಯಾರ್ ಏನ್ ಹೇಳಿರೂ ಗಂಗೆ ಭೂಲೋಕಕೆ ಹೋದರ್ಲಿ ಏನೂ ಅನುಮಾನ ಇಲ್ಲೆಂದೇ ಗಂಗೆ ಕೇಳ್ದವುಕೆಲ್ಲ ಹೇಳ್‌ತಿತ್ತ್. ಒಂದು ದಿನ ತನ್ನ ಭಕ್ತ ಭಗೀರಥನ ಬಾಕೆ ಮಾಡಿ ಅವನೊಟ್ಟಿಗೆ ಕೆಲೊವು ವಿಷಯಗಳ ಚರ್ಚಿಸಿತ್. ಗಂಗೆ ಭಗೀರಥಂಗೆ ಹೇಳ್ತ್ –"ನೋಡು, ನಾ ಇಷ್ಟ್ ಎತ್ತರಂದ ಭೂಮಿಗೆ ಇಳಿಯಕನ ನನ್ನ ವೇಗ ಭಯಂಕರವಾಗಿರುದು. ಹಾಂಗಿರ್ಕನ ಭೂಮಿ

ಭೂಕಂಪಕ್ಕೊಳಗಾಗಿ ಏನಾರ್ ಅನಾಹುತಂಗ ಆಕೆ ಸಾಕ್. ನೀರ್‌ಲಿ ನೆಲವೇ ಕೊಚ್ಚಿ ಹೋಕೆ ಸಾಕ್. ಹಾಂಗೆ ಇದೆಲ್ಲ ಅನಾಹುತಂಗ ಆಗದಿರೋಕರೆ ನನ್ನ ಆರಂಭದ ವೇಗನ ತಡಿಯಕಾದ್ದ್ ಅಗತ್ಯ. ಆ ನನ್ನ ವೇಗನ ತಡಿವ ಸಾಮರ್ಥ್ಯ ಯಾರಿಗುಟ್ಟುಂತ ನೋಡೋಕು. ನಾ ತಿಳ್ದ ಮಟ್ಟಿಗೆ ಆ ಪರಮೇಶ್ವರನೇ ಸರ್ವಶಕ್ತ. ಹಾಂಗಾಗಿ ನೀ ಈಗ ಅವನ ತಪಸ್ಸ್‌ಲಿ ಒಲ್ಸಿಕಂಬೋದು ಅವಶ್ಯ. ಹಾಂಗೆ ಒಂದು ಒಳ್ಳೆ ದಿನ ನೋಡಿ ನೀ ಅವನ ಕುರಿತು ತಪಸ್ಸು ಮಾಡಿಕೆ ಸುರುಮಾಡ್. ನಿನ್ನ ಏಕಾಗ್ರ ತಪಸ್ಸಿಗೆ ಮೆಚ್ಚಿ ಅಂವ ನಿಂಗೆ ಬೇಗ ಒಲಿದು, ನೀ ಅವನ ವರ ಪಡ್ಕ. ಅಂವ ನಿಂಗೆ ಬೇಗ ಒಲಿದು ಮತ್ತೆ ನಾ ಹೇಳ್ದ ದಿನ ಅಂವ ತಯಾರಾದರೆ ಮತ್ತೆ ನನ್ನ ಪ್ರಯಾಣ ಸುರಾದು," ಹೀಂಗೆ ಭಗೀರಥಂಗೆ ಉಪದೇಶ ಮಾಡ್ತ್.

ಅದಿಕೆ ಸ.ඃರಿಯಾಗಿ ಭಗೀರಥ ಶಿವನ ಕುರಿತು ತಪಸ್ಸಿಗೆ ಕುದ್ದ.ಃತ್. ಅನ್ನಾಹಾರ ಬುಟ್ಟ್, ಏಕಾಗ್ರತೆಂದ ಶಿವನ್ನೇ ಧ್ಯಾನಿಸಿಕ.ಃಂಡ್, 'ಓಂ ನಮಃ ಶಿವಾಯ"ಂತ ಉಚ್ಚರಿಸಿಕ.ಃಂಡೇ ಇತ್ತ್. ಏನೇನೋ ಅಡಚಣೆಗ ಬಂದೊ. ತಪಸ್ಸಿಗೆ ವಿಘ್ನ ಬಾದು ಮುಖ್ಯವಾಗಿ ದೇವೇಂದ್ರಂದ. ಸ.ಃರಿಯಾದ ಅರ್ಹತೆಯಿಲ್ಲದಂವ ದೊಡ್ಡ ಪದವಿಗೇರಿರೆ ಅಂಥಂವಂಗೆ ಎದೆಯಳುಕು ಜೋರು. ತನ್ನ ಎದ್‌ರಾಳಿ ಯಾಗೋಳು ನನ್ನ ವಿರುದ್ಧ ಸಂಚ್ ಮಾಡಿಕ.ಃಂಡೇ ಉಟ್ಟು ಇವನ ಹೇಂಗಾರ್ ಮಟ್ಟ ಹಾಕೋಕುಂತ ಯಾಗೋಳು ಯೋಚಿಸುದು. ತಪಸ್ಸ್ ಮಾಡಿಕೆ ಬಾವೆಲ್ಲೋವೂ ತನ್ನ ಪದವಿನ ಎಳ್ಕಂಬಕೇ ಹುನ್ನಾರ ಮಾಡೋವು. ಇವರ ಬೆಳಿಯಕೆ ಬುಡಿಕೆ ಆಗ.ಃದ್‌ಂತ ಪ್ಲಾನ್ ಮಾಡುದು. ಹಾಂಗೆ ಇಂದ್ರ ಮುಂದೆ ಕ.ಃಳ್ಸುದು ತನ್ನ ಆಸ್ಥಾನದ ಅಪ್ಸರ ಸ್ತ್ರೀಯರ. ಅವು ಆಸ್ಥಾನ ವೇಶ್ಯೆಯ.ಃರಾದ್ದರ್‌ಂದ ಅವ್ಕೆ ಅಲ್ಲಿ ಏನೂ ಸ್ವಾರಸ್ಯ ಕಾಂಬೊದಿಲ್ಲೆ. ಹಾಂಗೆ ಈ ಪರಕೀಯ ವ್ಯಕ್ತಿಗಳ ನೋಡ್‌ಕನ ಅವ್ಕೆ ಕಾವೇರ್‌ದೆ. ಹಾಂಗೆ ನಾನಾ ವಿಕಾರಗಳ ಮಾತಾಡಿಕ.ಃಂಡ್ ಏನೆಲ್ಲ ಹುಚ್ಚಾಟ ಮಾಡುವೆ. ಇದರ್ಲಿ ಒಮ್ಮೊಮ್ಮೆ ವಿಶ್ವಾಮಿತ್ರನಂತೊವು ಸಿಕ್ಕಿ ಬೀಳುದೂ ಉಟ್ಟು. ಬಹುಮಟ್ಟಿಗೆ ಗ.ಃಟ್ಟಿ ಮನ್ಸ್‌ನ ತಪಸ್ವಿಗ ಯಾರೂ ಸೋಲುದುಲೆ. ಭಗೀರಥನ ಹಕ್ಕಲೆ ಇಂಥ ಗಯ್ಯಾಳಿಗಳ ಆಟ ಸಾಗಿತ್‌ಲೆ. ಅವೆಲ್ಲ ಮೂಜಿಕ.ಃಟ್ಟಿಕ.ಃಂಡ್ ನಡ್ದೊ. ಸುಮಾರ್ ಸಮಿಯ ಕ.ಃಳ್ತ್. ಇವನ ತಪಸ್ಸ್ ಶಿವನ ಮನ್ಸಿಗೆ ಗೊತ್ತಾತ್. ಈ ಹೊಸಭಕ್ತನ ನೋಡೊನೋಂತ ಈಶ್ವರ ತಪೋಭೂಮಿಗೆ ಬಾತ್. 'ಭಕ್ತ ನಿನ್ನ ಈ ತಪಸ್ಸ್‌ನ ಉದ್ದೇಶ ಏನ್? ಹೇಳ್'ಂತ ಕೇಳ್ತ್. ಭಗೀರಥ "ಜಯ! ಜಯ ಭಕ್ತವತ್ಸಲ! ಪಾರ್ವತೀ ಪತಿ! ನನ್ನ ಪಿತೃಗ ಪಾತಾಳಲಿ, ಋಷಿ ಶಾಪಂದ ಬೂದಿಯಾಗಿ ಬಿದ್ದೊಳೊ. ಎಷ್ಟೋ ಸಾವಿರ ವರ್ಸಗ ಕ.ಃಳ್ದರೂ ಇನ್ನೂ ಮೋಕ್ಷ ಇಲ್ಲದೆ ಒಳೊ. ಅದ್ಕೆ ಅವರ ಬೂದಿನ ಮೇಲೆ ದೇವಗಂಗೆನ ತಕ.ಃಂಡ್ ಹೋಗಿ ಹರ್‍ಸೊಕುಂತ ಸಂಕಲ್ಪ ಮಾಡಿ ಗಂಗವ್ವನ ತಪಸ್ಸ್‌ಲಿ ಒಲ್ಸಿ ಒಪ್ಪುಸಿಯೊಳೆ. ನನ್ನ ಆಸೆ ಈಡೇರಕೊರೆ,

ನಿನ್ನ ದಯೆ ನನ್ನ ಮೇಲೆ ಬೀಳೊಕು. ಅದರ ಬೇಡಿಕಂಬಕೆ ನಿಂಗೆ ಶರಣಾದೆ. ನೀ ನನ್ನ ಕಾಪಾಡೊಕು."

"ನನ್ನಂದ ಏನಾಕು? ಹೇಳ್."

"ಮಹಾದೇವ! ಗಂಗಮ್ಮ ಬಾನಂದ ಭೂಮಿಗೆ ಇಳಿಯಕನ ಅದರ ವೇಗ ತುಂಬ ತೀವ್ರವಾಗಿದ್ದ್, ಆಗ ಭೂಮಿಗೆ ಏನಾರ್ ಸಂಕಟ ಪ್ರಾಪ್ತಿಯಾಕೂ ಸಾಕಡ. ಆದ್ದರ್‌ಂದ ಆ ವೇಗಕ್ಕೆ ಆರಂಭ.˙.ಲಿ ತಡೆಹಾಕುದು ಅಗತ್ಯ ಆದೆ ಗಡ. ಮತ್ತೆ ಅದ್ ಬೇರೆ ಯಾರ್‌ಂದಳೂ ಸಾಧ್ಯ ಆಕಿಲ್ಲೆ. ಮಹಾದೇವಂಗೆ ಒಬ್ಬಂಗೇ ಸಾಧ್ಯ ಆದು. ಹಾಂಗೆ ನೀ ಅವಂನ ಪ್ರಾರ್ಥನೆ ಮಾಡಿ ಅವಂನ ದಯಾ ಭಿಕ್ಷೆ ಬೇಡಿ ಅವನ ಒಪ್ಪುಸಿಕಂತ ಗಂಗವ್ವ ಹೇಳ್ತ್. ಹಾಂಗೆ ನಿನ್ನ ಹಕ್ಕಲೆ ನನ್ನ ದೀನ ಪ್ರಾರ್ಥನೆ. ದಯಮಾಡಿ ನೀ ನನ್ನ ಆಶೀರ್ವದಿಸಿ ಈ ಕಾರ್ಯನ ನಡ್ಸಿಕೊಡೊಕುಂತ ಬೇಡಿಕಣೆ".

ಭಗೀರಥನ ಮಾತ್‌ನ ಈಶ್ವರ ಮೆಚ್ಚಿಕಣ್ತ್. ಆದರೆ ಗಂಗೆಗೆ ಅಗಾಧ ಶಕ್ತಿಯಿರುದುಂತ ಅದೇ ಹೇಳಿಕಂಬೊದರ ಕೇಳಿ, "ಒಂದು ಹೆಂಗ್‌ಸಿಗೆ ಅಷ್ಟ್ ಬಲ ಉಟ್ಟೋ, ನೋಡಿಬುಡೊನೊ"ಂತ ಹಙ್ಙ ಕಿನಿಸ್‌ಲಿ ನೆನ್ಸಿಕ.˙.ಂಡ್, "ಸರಿ, ಗಂಗೆಗೆ ಹೇಳ್, ನಾಳ್ದ್ ತುಲಾ ಸಂಕ್ರಮಣದಂದ್ ಅದ್ ಭೂಲೋಕಕೆ ಹೊರ್ಡ್‌ಲಿ".

ಇದರ ಕೇಳಿ ಭಗೀರಥಂಗೆ ತುಂಬ ಸಂತೋಷ ಆತ್. ಈಶ್ವರಂಗೆ ಅಡ್ಡಬಿದ್ದ್ ಎದ್ದ್, ಓಟ ಅಲ್ಲ; ನಡಿಗೆಯೂ ಅಲ್ಲಂತೇಳುವ ರೀತಿಂದ ಗಂಗಮ್ಮನಲ್ಲಿಗೆ ಬಂದ್ ನಡ್ದ ಸಂಗತಿನೆಲ್ಲ ಹೇಳ್ತ್. ಗಂಗೆಗೂ ಲವಲವಿಕೆ ಉಂಟಾತ್.

ತುಲಾಸಂಕ್ರಮಣದಂದ್ ಗಂಗೆ ಭೂಲೋಕದ ಕಡೆ ಪ್ರಯಾಣ ಮಾಡ್‌ದೆಂತ ಎಲ್ಲೊವುಕು ಏನೋ ಒಂದು ಸಂಭ್ರಮ. ದೇವತೆಗಳ್ಲಿ ಹೆಚ್ಚಿನ.˙.ವು ಇದ್ ಗಂಗೆನ ಅಧಃಪತನಂತ ಹೇಳಿಕ.˙.ಂಡ್ ನೆಗಾಡ್‌ತಿದ್ದೊ. ವಸುಗ ಯಾರಾರ್ ಅದರ ಕೇಳಿರೆ ಹಾಂಗೆ ಹೇಳ್ದವರ ಮೇಲೆ ಕೋಪ.˙.ಲಿ ಕಿಡಿಕಾರ್‌ತಿದ್ದೊ. ಆಗ ಅವು, "ನೀವು ಸುಮ್ಮನೆ ಅಪಾರ್ಥ ಮಾಡಿಕಣ್ಬಡಿ. ಭೂಲೋಕ ದೇವಲೋಕಂದ ಕೆಳೆಗೆ ಇರುದಲ್ಲೋ? ಕೆಳಗೆಂತ ಹೇಳುದ್ಯೆಕೆ ಸಂಸ್ಕೃತ.˙.ಲಿ ಅಧಂತ ಹೇಳುವೆ. ಗಂಗೆ ಬಿದ್ದ್ ತಾನೆ ಹರಿದು? ಅದಿಕೆ ಪತನಂತ ಹೇಳುದು –ಇದರ್ಲಿ ತಪ್ಪೇನುಟ್ಟುಂತ ಬಾಯೆ ಮೇಲ್ ಮಾಡುವೊ. ವಸುಗ "ಗಂಗಮ್ಮನ ಮೇಲೆ ಏನಾರ್ ಕೆಟ್ಟ ಮಾತ್ ಮಾತಾಡಿರೆ ನಿಮ್ಮ ಉಟ್ಟು ಇಲ್ಲೇಂತ ಮಾಡುವೆ"ಂತ ಹೆದರ್‍ಸಿದೊ. ತುಲಾ ಸಂಕ್ರಾಂತಿನಂದ್ ಗಂಗಾದೇವಿ ಭೂಲೋಕದ ಕಡೆ ಹೊರ್ಡುವ ಸ್ವರ್ಗದ ಧ್ವಾರಕ್ಕೆ ತಳಿರು ತೋರಣಗಳ ಕ.˙.ಟ್ಟಿ ಶೃಂಗಾರ ಮಾಡ್ದೊ. 'ಗಂಗಾ ಮಾತೆಗೆ ಜಯವಾಗಲಿ', 'ಸ್ವರ್ಗ, ಮರ್ತ್ಯ, ಪಾತಾಳಂಗಳ್‌ಲಿ ಅವಳ ಕೀರ್ತಿ ಮೆರೆಯಲಿ'ಂತೆಲ್ಲ ದೊಡ್ಡ ದೊಡ್ಡ ಪತಾಕೆಗಳ್ಲಿ ಬಣ್ಣಬಣ್ಣದ ಅಕ್ಷರಗಳ್ಲಿ ದೊಡ್ಡ.˙.ದಾಗಿ ಬರ್ದದರ ಆಯಕ.˙.ಟ್ಟ್‌ನ ಜಾಗೆಗಳ್ಲಿ ಕ.˙.ಟ್ಟಿದೊ. ಬಣ್ಣ ಬಣ್ಣದ

ಹೂಗಳ ಉದ್ದದ ಮಾಲೆ ಮಾಡಿ ಹಳ್ಳದ ಎರ್ಡ್ ದಂಡೆಗಳ ಮೇಲೆ ಉದ್ದಕೆ ಕ.ಃಟ್ಟಿದೊ. ವಸುಗಳ ಉತ್ಸಾಹಕ್ಕೆ ಮಿತಿಯೇ ಇಲ್ಲೆ. ಆಗಾಗ ಘೋಷಣೆಗಳ ಕೂಗ್‌ತ್ತಿದ್ದೊ. ಗಂಗೆ ಹರ್ದ್ ಬಾವ ಮುಹೂರ್ತ ಹಕ್ಕಲೆ ಬಾತ್‌ಂತಾಕನ ಎಲ್ಲೋವು ಗಂಟ್ಲ್‌ನ ಉದ್ದ ಮಾಡಿಕ.ಃಂಡ್ ಆ ಕಡೆಗೇ ನೋಡಿಕ.ಃಂಡ್, "ಜೈ ಗಂಗಾಮಾತೇ"ಂತ ಘೋಷಣೆ ಕೂಗಿಕ.ಃಂಡ್ ಇದ್ದೊ.

ಭಗೀರಥ ಒಮ್ಮೆ ಈಶ್ವರನ ಕಡೆಗೆ, ಮತ್ತೊಮ್ಮೆ ಗಂಗೆನ ಕಡೆಗೆ ಆತುರಲಿ ನೋಡುತ್ತಿತ್ತ್. ಈಶ್ವರ ತಲೆ ಬಿಚ್ಚಿ ಹಂರ್ಡಿ, ಸೊಂಟದ ಮೇಲೆ ಎರ್ಡ್ ಕೈಗಳ ಇಸಿ ಧೀರ ಗತ್ತ್‌ಲಿ ನಿತ್ತಿರ್ದರ ಕಂಡ್ ತೃಪ್ತಿ ಆತ್. ಹಷ್ಣ ಹೊತ್ತ್‌ಲಿ ಒಂದು ಸ್ಫೋಟದ ಸದ್ದಾತ್. ಶಂಕ, ಜಾಗಟೆಗಳ ಸದ್ದ್, ಕೊಂಬು ವಾಲಗದ ಸದ್ದ್, ವೇಣುವಾದನದ ಮಂಗಳಸದ್ದ್ ಕೇಳಿಬಾತ್. "ಧೋ" ಎಂಬ ಸದ್ದ್‌ನೊಟ್ಟಿಗೆ ಬುಸ್ಸಂತ ಅಷ್ಟಗಲಲಿ ಇಬ್ಬನಿನಾಂಗೆ ಬೆಳ್ಳಂಗೆ ಒಂದು ಪರದೆ ಹಾಸಿದಾಂಗೆ ಕಂಡ್ ಬಾತ್. ಅದರ್‌ಂದ ಹಷ್ಣ ದೂರ.ಃಲಿ ಜಲರೂಪ ತಾಳ್ದ ಗಂಗೆ ಚಿನ್ನದ ನೀರ್‌ನಾಂಗೆ ಹೊಳೆಯುತ್ತಿರುದು ಕಂಡ.ಃತ್.

"ಈಗ ಬೀತ್; ಈಗ ಬೀತ್"ಂತ ಎಲ್ಲೋವು ಭೂಮಿಕಡೆ ನೋಡಿಕೆ ಸುರುಮಾಡ್ದೊ. ಬಾನಂದ ಜಲಪಾತಂದ ಬೀಳುವಾಂಗೆ ಕಾಂಬತ್ತಿತ್ತ್. ಆದರೆ ನೆಲಕೆ ಒಂದು ಹನಿನೂ ಮುಟ್ಟಿತ್‌ಲೆ. ಕಾರಣ, ಈಶ್ವರ ಗಂಗೆನ ವೇಗ ಬಾರಿ ಬಿರುಸಾಗಿರ್ದು, ಅದರ ತಡಿಯಕೆ ಈಶ್ವರನೊಬ್ಬನೇ ಸಮರ್ಥಂತ ಕೇಳಿ, ಈಶ್ವರ 'ಹಾಂಗಾರೆ ಈ ಹೆಂಗ್‌ಸ್‌ನ ಬಲ ಎಷ್ಟುಟ್ಟುಂತ ಒಮ್ಮೆ ನೋಡೇ ಬುಡೋನೊ' ಅಂತ ಹೇಳಿ ಗಂಗೆನ ಎಲ್ಲ ನೀರ್‌ನೂ ತನ್ನ ಕೂದೊಲುಲಿಯೇ ಅಡ್‌ಂಗಿಸಿ ಬುಟ್ಟ.ಃತ್! ಒಂದ್ ಹನಿನೂ ನೆಲಕೆ ಮುಟ್ಟಿತ್‌ಲೆ.

ಭಗೀರಥ ಕಂಗಾಲಾತ್. ಕ.ಃಣ್ಣೀರ್ ಬಳಬಳಂತ ಹರ್ತ್. ಓಡಿ ಬಂದ್ ಈಶ್ವರನ ಪಾದಗಳ ಮೇಲೆ ತಲೆ ಇಸಿ ಒಳ್ಳ ಅತ್ತ.ಃತ್. ಮಹಾದೇವಾ. . ಅನಾಥ ರಕ್ಷಕಾ . . ನಂಗೆ ನೀನೇ ಗೆತಿ. ನನ್ನ ವಂಶದೊವು ಮೋಕ್ಷ ಇಲ್ಲದೆ ಬೂದಿರೂಪಲಿ ಸಾವಿರಾರ್ ವರ್ಷಂದ ಬಿದ್ದ್‌ಕ.ಃಂಡ್ ಒಳೊ. ಹಿರಿಯರ ಮೋಕ್ಷ ಸಂಪಾದನೆಗೆ ವಂಶದ ಕಿರಿಯೊವು ಪ್ರಯತ್ನಿಸಕಾದ್ದ್ ಅವರ ಕರ್ತವ್ಯ. ಇದ್ ನಿಂಗೆ ಗೊತ್ತಿಲ್ಲದ್ದೇನಲ್ಲ. ದಯಮಾಡಿ ನೀ ನನ್ನ ಮೇಲೆ ಕರುಣೆ ತೋರಿ ಗಂಗವ್ವನ ಹರಿಯಕೆ ಬುಡುಂತ ಬೇಡಿಕಣೆ. ನಂಗೆ ನೀನೇ ಶರಣು.... .ನೀನೇ ಶರಣು ಹರ ಹರ ಮಹಾದೇವ! ಜಯ ಜಯ ಪರಮೇಶ್ವರ!

ಈಶ್ವರಂಗೆ ಭಗೀರಥನ ಮೇಲೆ ಕರುಣೆ ಬಾತ್. ಗಂಗೆನ ಎಲ್ಲ ನೀರ್‌ನ ಬುಟ್ಟರೆ ಭೂಮಿಗೆ ಇನ್ನೂ ಅಪಾಯ ಉಂಟಾದುಂತೇಳ್ವ ಕಾರಣಂದ ಹೆಚ್ಚಿನ ನೀರ್ ಅವನ ತಲೆನ ಕೆಳಭಾಗದ ಕೂದೊಲುಗಳ್‌ಲೇ ಸಿಕ್ಕಿರುವಾಂಗೆ ಮಾಡಿ, ಮೇಲ್ಭಾಗದ ಹಷ್ಣ ನೀರ್‌ನ ಮಾತ್ರ ಕೂದೊಲ್‌ನ ಒಂದು ಸುರುಳಿಸೂಡಿ

ಸುತ್ತಿ, ಅದರ ಮೂಲಕ ಹರಿಯಕೆ ಬುಟ್ಟ್.ತ್. ಆ ಮೂಲಕ ಗಂಗೆ ಭೂಮಿಗೆ ಬೀತ್. ಆ ನೀರ್ಲಿ ಎಳೆ ಬಿಸ್‌ಲ್ ಬೀಳ್‌ಕನ ಯಾಗೋಳ್ ಕಾಮನಬಿಲ್ಲ್ ಮಿಂಚಿ ಪೊರ್ಲು ಕಾಂಬತಿತ್ತ್. ಭಗೀರಥಂಗೂ ಕುಶಿ ಆಗಿ ಈಶ್ವರನ ಅಪ್ಪಣೆ ಪಡ್ದ್ ಅಂವ ಮುಂದೆ ಹೊರ್ಟ್.ತ್.

ಗಂಗೆ ಎತ್ತರಂದ ಭೂಮಿಗೆ ಬಿದ್ದದರ್‌ಂದ.ಳೂ, ಅಲ್ಲಿ ಭೂಭಾಗ ಹಣ್ಣ ಇಳಿಜಾರಾಗಿ ಇದ್ದದರ್‌ಂದಳೂ, ಅದೂ ಅಲ್ಲದೆ ಗಂಗೆಗೆ ಹೊಸ ಹೊಸ ಪ್ರದೇಶಗಳ ನೋಡುವ ಲವಲವಿಕೆ ಇದ್ದದರ್‌ಂದಳೂ, ಅದ್ ಕಲಕಲರವ ಮಾಡಿಕ.ಂಡ್ ಹಣ್ಣ ವೇಗವಾಗಿಯೇ ಹರಿಯತ್ತಿತ್ತ್. ಹೀಂಗೆ ವೇಗಂದ ಹೋದರೆ ಬೇಗನೇ ನನ್ನ ಪೂರ್ವಜರಿಗೆ ಮೋಕ್ಷಕ್ಕೆ ದಾರಿಯಾದೆಂತ ಭಗೀರಥಂಗೂ ಸಂತೋಷಾತ್. ಆದರೆ ಅವನ ಆ ಉತ್ಸಾಹ ಇದ್ದ.ದ್ ಹಣ್ಣ ಕಾಲ ಮಾತ್ರ. ಅವನ ಆಶಾಭಂಗವಾಗುವ ಕಾರ್ಯವೊಂದು ಕ್ಷಿಪ್ರವಾಗಿ ನಡ್ದ್‌ಹೋತ್. ದುರದೃಷ್ಟಂದ ಗಂಗೆ ಹರಿವ ದಾರಿಲಿ ಜಹ್ನುಂತ ಹೇಳುವ ರುಸಿನ ಆಶ್ರಮ ಇತ್ತ್. ಹುಲ್ಲುನ ಮಾಡ್‌ನ, ಬೆದ್‌ರ್‌ನ ಚೆದಲೆನ ಗೋಡೆಗ, ಕೆಲೊವು ಮಡಿಕೆ ಕುಡಿಕೆಗ, ಯಜ್ಞಶಾಲೆ, ಅಲ್ಲಿ ಯಾಗೋಳು ಹೊತ್ತಿಕ.ಂಡಿರುವ ಪವಿತ್ರವಾದ ನಿತ್ಯಾಗ್ನಿ, ದರ್ಭೆ ಹುಲ್ಲುನ ಕ.ಟ್ಟ್, ಒಂದು ಸಣ್ಣ ಸೊವ್ದೆ ಕಣ್ಣಿ; ಊಟಕ್ಕೆ ಬೇಕಾದ ದವಸಧಾನ್ಯಗಳ ಒಂದೆರ್ಡ್ ಚೀಲಗ, ನೇಕೆಲಿ ಹಾಕಿರುವ ಕೆಲೊವು ವಲ್ಕಲಗ ಇಷ್ಟೆಲ್ಲಾ ಇದ್ದೊ. ಒಣ್ಗಿಲ್ ಹುಲ್ಲುನ ಮದೆ ಎಲ್ಲ್ಯಾರ್ ಎದ್‌ರಾದರೆ ಕಿಚ್ಚಿ ಭುಗಿಲಿಕ.ಂಡ್ ಹೊತ್ತಿ ಅದರ ಕ್ಷಣಮಾತ್ರ.ಲಿ ಬೂದಿ ಮಾಡ್ದೆ. ಕಾಡಿಗೆಲ್ಲ್ಯಾರ್ ಕಿಚ್ಚಿ ಬಿದ್ದರೆ ಒಡನೆ ಗಾಳಿ ಬಲವಾಗಿ ಬೀಸಿ ಅದರ ಎಲ್ಲ ಕಡೆಗೂ ಹಬ್ಬ್‌ಸಿದೆ. ಮುಂಗಾರ್ ಮಳೆ ಸುರಿವ ಕಾಲ.ಲಿ ಬಾನ ತುಂಬ ಮಿಂಚ್‌ನ ಬೊಳ್ಳಿಗ ಹಾವುಗಳಾಂಗೆ ಅತ್ತಿತ್ತ ಹರ್ದ್ ಚಟ ಚಟಂತ ಸಿಡ್ಲ್ ಸಿಡ್ದ್ ಗುಡುಗು ಕೆಬಿಗಳ ತಮ್ಟೆ ಒಡ್ದ್ ಹೋವಾಂಗೆ ಮಾಡ್ದೆ. ಹೀಂಗೆ ಗಂಗೆನೂ ಯಾರ ಅಡೆತಡೆನೂ ಇಲ್ಲದೆ ದೊಡ್ಡ ದೊಡ್ಡ ಅಲೆಗಳ್‌ಂದ ಹೊಡ್ದ್ ರಭಸ.ಲಿ ಬಿಡಾರನ ಮಾಡ್‌ನ, ನೆರಿಕೆನ ಗೋಡೆನ ಎಲ್ಲ ತಲೆಕೆಳಗೆ ಮಾಡ್ತ್. ಉರಿಯುತ್ತಿದ್ದ ಪವಿತ್ರವಾದ ನಿತ್ಯಾಗ್ನಿನ ಚುಂಯ್ಯಂತ ಅದ್ ನರ್ಕುವಾಂಗೆ ಮಾಡಿ ಅದರ ಮೋರೆಗೆ ಕ.ರಿ ಪೂಜಿತ್. ಮತ್ತೆ ಅಲ್ಲಿ ಒಳ್ದಿದ್ದ ಪಡಿಪದಾರ್ಥಗಳಎಲ್ಲ ಎತ್ತೆತ್ತಲೋ ಚೆಲ್ಲಾಪಿಲ್ಲಿಯಾಗುವಾಂಗೆ ಮಾಡ್ತ್. ಮೊಣ್ಣ್ ದಿನ್ನೆನ ನೋಡ್ದ ಗೂಳಿಹೋರಿ ಮಾಡುವಾಂಗೆ ಇದ್ ಕಾಂಬತ್ತಿತ್ತ್. ಭಗೀರಥ ನಿಸ್ಸಹಾಯಕತೆಂದ ಇದರೆಲ್ಲ ನೋಡಿಕ.ಂಡ್ ನಿತ್ತ್‌ಕ.ಂಡ್ ಇದ್ದಂವ "ಇನ್ನ್ ಈ ರುಸಿ ಏನ್ ಸಾಪ ಕೊಟ್ಟದೆನೋ ಎನೋ ದೇವ್ರೇ"ಂತ ನೆನ್ಸಿಕ.ಂಡ್ ಎತೆಪಟ್ಟ್‌ಕ.ಂಡ್ ನಿತ್ತ್‌ಕ.ಂಡ್ ಇತ್ತ್.

ಹಣ್ಣ ದೂರಲಿದ್ದ ಜಹ್ನು ತನ್ನ ಕಣ್ಣ್‌ಮುಂದೆ ತನ್ನ ಆಶ್ರಮಕ್ಕಾದ ಗೆತಿನ ನೋಡಿ ಕೋಪಲಿ ಕೊದ್ದ್‌ಕಂಡ್ ನಿತ್ತಂವ "ನಿಂಗೆ ಇಷ್ಟ್ ಸೊಕ್ಕುಂಟ್ಟುಂತಾದರೆ

ಅದರ ಖಂಡಿತ ಇಳ್ಸಿನೆ. ಈ ಭೂಮಿಲಿ ನಿನ್ನ ಒಂದು ಹನಿ ನೀರಿಲ್ಲದಾಂಗೆ ಮಾಡ್ನೆ", ಹೀಂಗೆ ಹೇಳಿ ಏನೋ ಮಂತ್ರನ 'ಪಿಸಿಪಿಸಿ'ಂತೇಳಿ ಆಪೋಷನ ತಕಂಬಾಂಗೆ ಮಾಡಿ ಗಂಗೆನ ಎಲ್ಲ ನೀರ್‌ನೂ ಒಂದೇ ಒಂದು ಹನಿ ಒಳಿಯದಾಂಗೆ ಎಲ್ಲ ಕುಡ್ದ್ ಬುಟ್ಟತ್.

ಭಗೀರಥ ಕಂಗಾಲಾತ್. ತುಂಬ ಅತ್ತತ್. ರುಸಿನ ಕಾಲಿಗೆ ಅಡ್ಡ ಬಿದ್ದ್, ಅವನ ಉದ್ದೇಸ, ಇದ್‌ವರೆಗೆ ಅಂವ ಮಾಡ್ದ ಪ್ರಯತ್ನಗಳ ಎಲ್ಲ ರುಸಿಗೆ ಬಿನ್ನಹ ಮಾಡ್ತ್. "ಗಂಗಾದೇವಿ ಹಾಳ್ ಮಾಡ್ದ ನಿಮ್ಮ ಈ ಆಶ್ರಮಕ್ಕೆ ಪ್ರತಿಯಾಗಿ ಇನ್ನೊಂದ್ ಸುಂದರವಾದ ಆಶ್ರಮನ ಕಟ್ಟಿಸಿಕೊಟ್ಟನೆ. ಒಂದ್ ಸಾವಿರ ಕರ್ ಬುಡುವ ಹಸ್‌ಕರುಗಳ ಕೊಟ್ನೆ. ಇನ್ನೂರು ಜೆನ ಆಳ್‌ಗಳ ಎಲ್ಲ ಕೊಟ್ಟನೆ. ದಯಮಾಡಿ ಗಂಗೆನ ಮುಕ್ತಿಗೊಳ್ಸಿ ನನ್ನ ಉದ್ಧರ್‍ಸೊಕು ಮುನಿದೇವಾ"ಂತ ಕೈ ಮುಗ್ದ್ ಬೇಡಿಕಂಡತ್.

ಈಗ ರುಸಿಗೆ ಭಗೀರಥನ ಮೇಲೆ ತುಂಬ ಕರುಣೆ ಬಾತ್. ದೊಡ್ಡ ವಂಶಲಿ ಹುಟ್ಟಿದ ಬಲಶಾಲಿ ರಾಜನಾದರೂ ಒಂದಿಷ್ಟೂ ಹಮ್ಮು ಇಲ್ಲೆ. ತುಂಬ ಸರಳ ವ್ಯಕ್ತಿ. ಇವಂಗೆ ಅನುಕೂಲ ಮಾಡೊಕು. "ಭಗೀರಥ! ನಿಂಗೆ ನಾ ಮೆಚ್ಚಿದೆ. ಗಂಗೆ ನನ್ನ ಶರೀರದೊಳಗೆ ಸೇರಿ ಹೋದರೂ ಅದಿಕ್ಕೆ ನನ್ನ ಶರೀರದ ಮಾಲಿನ್ಯವೇನೂ ಅಂಟದೆ ಅದ್ ಪವಿತ್ರಳಾಗಿಯೇ ಇರುದು. ಎಲ್ಲರ ಪಾಪ ಪೊರಿಹಾರ ಮಾಡಿರೂ ಅದಿಕೆ ಎಂದಿಗೂ ಪಾಪ ಅಂಟಿಕಿಲೆ. ಎಷ್ಟೋ ಜೆನ ಕೊಳೆ, ಕೇಡ್‌ಗಳ ಅದಿಕೆ ಹಾಕಿರೂ ಅದ್ ಎಂದಿಗೂ ಶುದ್ಧವಾಗಿಯೇ ಇರುದು. ನಾ ಈಗ ಅದರ ನನ್ನ ಕೆಬಿನ ಮೂಲಕ ಹರಿಯಕೆ ಬುಟ್ಟನೆ. ನೀ ಅದರ ಭೂಲೋಕಕೆ ತಂದಂವ ಆದ್ದರಂದ ಅದಿಕ್ಕೆ ಭಾಗೀರಥೀಂತನೂ, ನನ್ನ ಸಂಪರ್ಕದ ಕಾರಣಂದ ಜಾಹ್ನವೀಂತನೂ ಎರ್ಡ್ ಹೊಸ ಹೆಸ್‌ರ್‌ಗಳೂ ಪ್ರಸಿದ್ಧಿಗೆ ಬಾವೊ. ನೀ ಅದರ್‌ಂದ ಮುಂದೆ ಯಾರಿಗೂ ತೊಂದರೆಯಾಗದ ಜಾಗೆಲಿ ನಡ್ಕಂಡ್ ಹೋಗಿ ಅದ್ಕೆ ಹರಿಯಕೆ ದಾರಿ ತೋರ್‍ಸು. ಮತ್ತೆ ಬೂದಿರೂಪಲಿರುವ ನಿನ್ನ ಪೂರ್ವಜರಿಗೆ ಮೋಕ್ಷ ಸಿಕ್ಕುವಾಂಗೆ ಅವರ ಬೂದಿ ಎಲ್ಲ ಅದರ್‌ಂದ ತೊಳ್ದ್ ಹೋಗಲಿ. ನಿನ್ನ ಕಾರ್ಯ ಸಫಲ ಆಗಲಿ. ನೀ ಮುಂದೆ ಹೋಗು"ಂತ ರುಸಿ ಹೇಳ್ತ್. ಅಂವ ಕೈ ಮುಗ್ದ್ ಮುಂದೆ ಹೋತು. ಗಂಗೆ ಹಿಂದೆಂದ ಸಳ ಸಳಾಂತ ಸದ್ದ್ ಮಾಡಿಕಂಡ್ ಹೋತು. ಹೀಂಗೆ ಹೋಗಿ ಭಗೀರಥನ ಪೂರ್ವಜರ್ ಬೂದಿಯಾಗಿ ಬಿದ್ದೆಡೆಗೆ ಬಂದೆತ್ತಿ, ಆ ಬೂದಿಯೆಲ್ಲ ತೊಳ್ದ್ ಹೋಗಿ ಅವ್ಕೆಲ್ಲ ಮೋಕ್ಷ ಸಿಕ್ಕುವಾಂಗೆ ಆತ್. ಈಗ ಭಗೀರಥ ಸಂಪೂರ್ಣ ಮನೋರಥ ಆತ್. ಗಂಗಾದೇವಿನೂ ಸ್ವರ್ಗ, ಮರ್ತ್ಯ, ಪಾತಾಳದ ಮೂರು ಲೋಕದ ಜೀವಿಗಳ ಅಭಿಲಾಶೆಗಳ್ನೂ ತೀರಿಸಿಕಂಡ್ ಸಂತೋಸುಲೇ ಇತ್ತ್. ಭಗೀರಥ ಗಂಗೆಗೆ ಅಡ್ಡ ಬಿದ್ದ್ ಅದರ ಅಪ್ಪಣೆ ಕೇಳಿ ಅವನ ರಾಜ್ಯಕೆ ಹೊರ್ಟತ್.

ಹಿಂದೆ ಬಂದ ತಮ್ಮ ರಾಜನ ನೋಡಿ ಪ್ರಜೆಗಳಿಗೆ ತುಂಬ ಸಂತೋಸಾತ್. ಅವೆಲ್ಲ ಅವಂಗೆ ಭವ್ಯ ಸ್ವಾಗತ ಕೊಟ್ಟೊ. ತುಂಬ ದಿನ ರಾಜಧಾನಿಲಿ ನಾನಾ ರೀತಿನ ವೈಭವದ ಉತ್ಸವಗ ನಡ್ದೊ. ಇದಾಗಿ ಹಳ್ಣ ದಿನಲಿ ಭಗೀರಥ ಕಟ್ಟಡ ಕಟ್ಟುವ ಕೆಲ್ಸಗಾರ್‌ರ ಕರ್ಕಂಡ್ ಜಹ್ನೂ ರುಸಿನ ಆಶ್ರಮಕ್ಕೆ ಬಂದ್ ಅಂವ ರುಸಿಗೆ ಮಾತ್ ಕೊಟ್ಟಾಂಗೆ ಒಂದು ಸುಂದರ ಆಶ್ರಮನ ಕಟ್ಟಿಸಿ ಕೊಟ್ಟತ್. ರುಸಿನ ಪೂಜೆಗೆ ಬೇಕಾದ ಹೂಗಳಿಗಾಗಿ ಒಂದು ಪೊರ್ಲುನ ಉದ್ಯಾನ ನಿರ್ಮಾಣ ಮಾಡ್ತ್. ಅದರ ಎದ್‌ರ್‌ಲಿ ಗಂಗಮ್ಮನ ಆಳೆತ್ತರದ ಚಿನ್ನದ ವಿಗ್ರಹ ಸ್ಥಾಪನೆ ಮಾಡಿ ಅದಕ್ಕೊಂದು ಮಂದಿರ ನಿರ್ಮಾಣ ಮಾಡ್ಸಿತ್. ಒಂದು ಸಾವಿರ ಕರ್ ಬುಡುವ ಹಸ್‌ಕರ್‌ಗಳ, ಇನ್ನೂರು ಕೆಲ್ಸದ ಆಳ್‌ಗಳ್ನೂ ಕೊಟ್ಟತ್. ಅದಿಕೆ ನಿತ್ಯ ಪೂಜೆಗೆ ಏರ್ಪಾಡ್ ಮಾಡಿ, ಜಹ್ನು ರುಸಿಗೆ ಅದರ ಅಧಿಕಾರ ವಹಿಸಿ, ಅದಿಕೆ ಅಗತ್ಯವಾದ ಜಹಗೀರ್ ಹಾಕಿ ಕೊಟ್ಟತ್. ಜಹ್ನು ತುಂಬ ಸಂತೋಸುಪಟ್ಟತ್. ಭಗೀರಥಂಗೆ ತುಂಬು ಹೃದಯಂದ ಆಶೀರ್ವಾದ ಮಾಡ್ತ್. 'ಮಹಾರಾಜ! ನೀ ಇನ್ನ್ ನಿನ್ನ ರಾಜ್ಯಕ್ಕೆ ಹೋಗಿ ನಿನ್ನ ಪ್ರಜೆಗಳ ಮಕ್ಕಳಾಂಗೆ ಪರಿಪಾಲ್ಸ್, ನಿನ್ನ ರಾಜ್ಯಲಿ ಯಾಗೊಳು ಸುಭಿಕ್ಷೆ ನೆಲ್ಸಲಿ. ಯಾರಿಗೂ ಯಾವ ತರದ ಆಧಿ–ವ್ಯಾಧಿಗಳೂ ಇಲ್ಲದೆ ಸುಖ ಸಂತೋಷ ಹೆಚ್ಚಲಿ. ನೀ ಸಂತೋಸುಲಿ ಹೋಗಿಬಾ ಅಂತ ಅವನ ಕಳ್ಸಿತ್. ಸಂತೃಪ್ತನಾದ ಭಗೀರಥ ಸಂತೋಸುಲೇ ಬಂದ್ ತುಂಬ ಕಾಲ ರಾಜ್ಯವಾಳಿಕಂಡಿದ್ದ್ ಕೊನೆಗೆ ಸ್ವರ್ಗಕ್ಕೆ ಸೇರ್ತ್. ಗಂಗೆ ಮೂರು ಲೋಕಗಳ್ಲಿಯೂ ಅವನ ಕೀರ್ತಿನ ಹಾಡಿಕಂಡ್ ಹರಿಯುತ್ತಾ ಇತ್ತ್.

****

ಹೀಂಗೆ ಶಾಂತ ರೀತಿಲಿ ಎಷ್ಟೋ ಕಾಲ ಕಳ್ದ್ ಹೋತು. ಗಂಗೆ ಇನ್ನೂ ಮಾನವ ರೂಪು ತಾಳಿ ಯಾವ ಮಾನವ ರಾಜನ್ನೂ ಮೊದುವೆಯಾಗಿತ್ತ್‌ಲೆ. ಇದರ್‌ಂದ ವಸುಗಳ ಮನ್ಸಿಗೆ ಮಾತ್ರ 'ಕಿರಿಕಿರಿ' ಆತಿತ್ತ್. ತಮ್ಮ ಸಾಪನ ಬೇಗ ಪೊರಿಹಾರ ಮಾಡಿಕಂಬಕೆ ಆದ್‌ಲೆಲೆಂತ ಪೇಚಾಡಿಕಂಡ್ ಇದ್ದೊ.

ಈಗ ಕಾಲಮಾನಲಿ ಎಷ್ಟೋ ಬದಲಾವಣೆ ಆಗಿತ್ತ್. ಮುಂದೆ ಪ್ರಸಿದ್ಧವಾಗಿದ್ದ ಸೂರ್ಯವಂಶಕ್ಕೆ ರಾಜ್ಯಭಾರ ತೊಪ್ಪಿತ್ತ್. ಈಗ ಚಂದ್ರವಂಶಕ್ಕೆ ಸೇರ್ದವರ ರಾಜ್ಯಭಾರ ಹಸ್ತಿನಾವತಿಂದ ನಡಿಯತ್ತಿತ್ತ್. ಈ ವಂಶಲಿ ತುಂಬ ಜೆನ ರಾಜೆರ್ಗ ಆಳಿಹೋದೊ. ಅವರ್ಲಿ ಕುರುಂತೇಳ್ವ ಒಬ್ಬ ರಾಜ ತುಂಬ ಪ್ರಭಾವಶಾಲಿಯಾಗಿತ್ತ್. ಹಾಂಗೆ ಅವನ ಮುಂದೆನ ವಂಶಸ್ಥರಿಗೆ ಕೌರವರ್‌ಂತ ಹೆಸ್‌ರಾತ್. ದುಷ್ಯಂತನಂಥ ರಾಜನೂ ಈ ವಂಶಕ್ಕೇ ಸೇರ್ದಂವ. ಅಂವ ತುಂಬ ಅಶ್ವಮೇಧ ಯಾಗಗಳ ಮಾಡಿ ಹೆಸ್‌ರ್‌ವಾಸಿಯಾಗಿತ್ತ್. ಇಂವನ ಮಜ್ಜ ಭರತನೂ ದೊಡ್ಡ ಪರಾಕ್ರಮಿಯಾಗಿತ್ತ್. ಬಹುಶಃ ಇಂವ ಇಡೀ ಭರತಖಂಡನ

ಏಕಾಡಳಿತಕ್ಕೊಳಪಡಿಸಿದಂವಾಗಿದ್ದ ಕಾರಣಕ್ಕೆ ಆರ್ಯಾವರ್ತನ ಭಾರತಂತ ಇವನ ಹೆಸ್ರ್‌ಂದ ಕರಿಯಕೆ ಸುರಾಗಿರ್ದು. ಪ್ರಾಚೀನ ಕಾಲಲಿ ಅಧಿರಾಜೆರ್ಗ ಎಲ್ಲ ಭೂಭಾಗನ್ನೂ ಅಖಂಡವಾಗಿ ತಮ್ಮ ಸ್ವಾಧೀನ ಇಸಿಕಂಡ್ ಆಳಿಕಂಡ್ ಇತ್ತ್‌ಲೆಂತ ಕಂಡದೆ. ಈಗ ರಾಜ್ಯಗಳಾಂಗೆ ಬೇರೆ ಬೇರೆ ರಾಜವಂಶದೊವು ಆಳಿಕಂಡ್, ಅಧಿರಾಜೆರ್ಗಳಿಗೆ ಕಪ್ಪ ಕೊಟ್ಟ್‌ಕಂಡ್ ಇದ್ದಿರುವೊ. ಅಪ್ರೂಪಲಿ ಭರತನಂತ ಪರಾಕ್ರಮಿ ಅಖಂಡ ಸಾಮ್ರಾಟ ಆಗಿರ್ದು. ಚಾರಿತ್ರಿಕ ಕಾಲಲಿ ಅಶೋಕ ಮಾತ್ರ ಅವನ ರಾಜ್ಯದ ಗಡಿನ ಮೈಸೂರು ರಾಜ್ಯದ ವರೇಗೆ ವಿಸ್ತರಿಸಿತ್ತ್‌ಂತ ಕಂಡದೆ.

ಕುರುವಂಶಲಿ ಅನೇಕ ಪ್ರಸಿದ್ಧ ರಾಜೆರ್ ಆಗಿ ಹೋದೊ. ಅವರ್‌ಲ್ಲಿ ಪ್ರತಿಮಾಂತೇಳ್ವ ರಾಜ ತುಂಬ ಪ್ರಸಿದ್ಧವಾಗಿತ್ತ್. ಅವಂಗೆ ಶಂತನು ಮತ್ತೆ ದೇವಾಪೀಂತೇಳೊವು ಇಬ್ಬೊರು ಗಂಡ್ ಮಕ್ಕ. ಇವರ್‌ಲ್ಲಿ ದೇವಾಪಿಗೆ ಎಳೆ ವಯಸ್ಸ್‌ಲೇ ಸಂಸಾರಲಿ ವೈರಾಗ್ಯ ಹುಟ್ಟಿ ಅಂವ ಎಲ್ಲಾ ಬುಟ್ಟ್ ತಪಸ್ಸ್‌ಗೆ ಹೋತು. ಶಂತನು ಯುವರಾಜ ಆಗಿದ್ದ್, ಅಪ್ಪನ ರಾಜಕಾರ್ಯಲಿ ಸಾಯ ಮಾಡಿಕಂಡ್ ಇತ್ತ್. ಅಂವ ಯೌವನಸ್ಥನೂ, ಬಲವಂತನಾಗುವಷ್ಟು ಕಾಲ ಅವನ ಅಪ್ಪ ಒಳ್ತ್‌ಲೆ. ಹೀಂಗಾಗಿ ಶಂತನುಗೆ ತಕ್ಕ ಕಾಲಲಿ ಮೊದುವೆ ಮಾಡಿ ಅವನ ಗ್ರಹಸ್ಥ ಸ್ಥಾನಲಿ ನಿಲ್ಸುವಂತೊವು ಯಾರೂ ಇತ್ತ್‌ಲೆ. ಹೀಂಗಾಗಿ, ಅಪ್ಪ ಸತ್ತ ಮೇಲೆ ಅಂವ ರಾಜಪದವಿಗೇರಿರೂ ಕಟ್ಟಾ ಬ್ರಹ್ಮಚಾರಿಯೇ ಆಗಿ ಇರುವಾಂಗೆ ಆತ್.

ಶಂತನುನ ಹವ್ಯಾಸಗಳ್ಲಿ ಒಂದು ವಾರಲಿ 2, 3 ದಿನ ಗಂಗಾ ನದಿ ಕರೆಲಿ ತಿರ್‌ಗಾಡುದು, ಮತ್ತೆ ಹಳ್ಳದ ಕರೆಲಿದ್ದ ಒಂದು ದೊಡ್ಡ ಬಂಡೆಕಲ್ಲ್‌ನ ಮೇಲೆ ಕುದ್ದ್‌ಕಂಡ್ ಹಳ್ಳದ ಕಡೆಗೆ ಸುಮ್ಮನೆ ನೋಡಿಕಂಡ್ ಕುದ್ದುರುದು. ಆ ಕಲ್ಲ್‌ನ ಒಂದು ಭಾಗ ನೀರ್‌ನೊಳಗೆ ಚಾಚಿತ್ತ್. ಅದರ ಮೇಲ್ಭಾಗ ತುಂಬ ನುಣುಪಾಗಿತ್ತ್. ಮಳೆಗಾಲದ ನೆರೆ ಸಮಿಯಲಿ ಮಾತ್ರ ಅದ್ ಕಂತಿರ್‌ತ್ತಿತ್ತ್. ಅದರ ಹಿಂದೆನ ಪುಡೆನ ನೆಲಲಿ ಒಂದು ದೊಡ್ಡ ಸಿರಿಪೊನ್ನೆ ಮರ ಇತ್ತ್. ಅದರ ನೆಳಲ್ ಬೊಳ್ಪಿಂದ ಹಿಂಬೊತ್ ಮುಟ್ಟ ಈ ಕಲ್ಲ್‌ನ ಮೇಲೆ ಬಿದ್ದಿರುದು. ಹೀಂಗೆ ಶಂತನುಗೆ ಅಲ್ಲಿ ಕುದ್ದ್‌ಕಂಡ್ ವಿಹರಿಸಿಕೆ ತುಂಬ ಅನುಕೂಲ ಆಗಿತ್ತ್. ವಸಂತ ಕಾಲಲಿ ಆ ಮರ ತುಂಬ ಹೂ ಬುಟ್ಟ್ ಬಾರಿ ಪೊರ್ಲು ಕಾಂಬತ್ತಿತ್ತ್. ಶಂತನು ಬಾಕನೆಲ್ಲ ಚೀಲಗಳ್ಲಿ ಹೊರಿಯೆಕ್ಕಿ, ಕಡ್ಯೆಕ್ಕಿ ಹೀಂಗೆ ಏನಾರ್ ಮೀನ್‌ಗಳಿಗೆ ತಿಂಬಕೆ ಹಾಕಿಕೆ ತಾದು. ಆಗಾಗ ಒಂದೊಂದು ಹಿಡಿನಷ್ಟ್ ನೀರಿಗೆ ಹಾಕುದು. ಆಗ ಮೀನ್‌ಗ ತಳಕ್, ಪಳಕ್‌ಂತ ಒಂದರ ಮೇಲೆ ಒಂದು ಹುರುಡುಂದ ಬಿದ್ದ್ ಆ ತಿನಸ್‌ನ ತಿಂಬೊ. ಶಂತನುಗೆ ಕುಶಿ ಆದು. ಶಂತನು ರಾಜನ ಈ ನಡವಳಿಕೆಗಳ ಎಲ್ಲ ಗಂಗಾದೇವಿ ಅವ್ಯಕ್ತ ರೂಪಲಿ ಗಮನಿಸಿಕಂಡ್ ಇತ್ತ್. ಅವನ ಧೀರ ಗಂಭೀರ ರೂಪು, ಅದರ ಕಣ್ಣ್‌ಗಳ ಮೂಲಕ ಅದರ ಹೃದಯದೊಳೆಗೆ ಇಳ್ದಿತ್ತ್. ಅದರ ಮನ್‌ಸ್ಸ್ ಈ ಕಾರಣಂದ ಮೃದುವಾಗಿಯೂ ಇತ್ತ್. ಅವನ ಮತ್ತೆ ಮತ್ತೆ ನೋಡೊಕುಂತ

ಆತಿತ್. ಒಟ್ಟುಲಿ ಶಂತನು ಒಬ್ಬ ಚೆಲುವಂತೇಳುವ ಆಕರ್ಷಣೆಗೆ ಒಳಗಾಗಿತ್. ವಸುಗಳ ಕೋರಿಕೆನೂ ಕೂಡಿ ಬಾವ ಕಾಲವೂ ಕೂಡಿ ಬಂದಾಂಗೆ ಕಂಡ.:.ತ್.

ಒಂದು ದಿನ ಶಂತನು ಕ.:.ಲ್ಲ್‌ನ ಮೇಲೆ ಕುದ್ದ್‌ಕ.:.ಂಡ್ ಹಳ್ಳದ ಕಡೆಗೆ ನೋಡಿಕ.:.ಂಡ್ ಇರ್‌ಕನ ಗಂಗಾದೇವಿ ಆ ಸ್ಫಟಿಕದಾಂಗಿದ್ದ ಜಲರಾಶಿಂದ ಫಳಕ್ಕನೆ ಎದ್ದ್ ಬಾತ್. ಕಣ್ಣ್‌ಮುಚ್ಚಿ ಬುಡಿಕೆ ಮುಂದೆ ಒಂದು ಲೋಕೋತ್ತರ ಸುಂದರಿ ಅಂವಂಗೆ ಮುಖಾಮುಖಿಯಾತ್. ಇದ್ ನಿಜವೋ ಕನ್‌ಸೋಂತೇಳ್ವ ಭ್ರಮೆ ಅವಂಗೆ ಉಂಟಾತ್. ಕೇದಗೆ ಬಣ್ಣದ ಮೈಕಾಂತಿ ದಿಕ್ಕ್ ದಿಕ್ಕಿಗೂ ತುಂಬಿತ್. ಹುಣ್ಣಿಮೆ ಚಂದ್ರನ ಮೀರ್ಸುವ ಅದರ ಮುಖಮಂಡಲ ಎಲ್ಲರ್‍ನೂ ಮೋಹದ ಬಲೆಲಿ ಬೀಳ್ಸುವಾಂಗೆ ಇತ್. ನೀಳವಾದ ಕ.:.ಪ್ಪಾದ ಅದರ ತಲೆಕೂದೊಲು ಅದರ ಮುಖಮಂಡಲಂತೇಳ್ವ ಚಂದ್ರನ ನುಂಗಿಕೆ ಬಂದ ಗ್ರಹಣ ಕಾಲದ ರಾಹುನಾಂಗೆ ಕಾಂಬತ್ತಿತ್. ತೊಂಡೆ ಹಣ್ಣ್‌ನ ಬಣ್ಣದ ತುಟಿಗಳ್‌ಂದ ಪ್ರೀತಿಂತೇಳ್ವ ಜೇನ್ ಹೊರಸೂಸಿದೆನೋಂತ ಕಾಂಬತಿತ್. ತುಟಿಗಳ ಹಿಂದೆ ಸಾಲ್ಗೊಂಡಿದ್ದ ಹಲ್ಲ್‌ಗಳ ಸಾಲ್ ಮುತ್ತುಗಳ ಕೋದಾಂಗಿತ್. ಸಂಪಿಗೆನಾಂಗೆ ನೀಳವಾಗಿದ್ದ ಅದರ ಮೂಕುಂದ ಬಾವ ಗಾಳಿಗೆ ತುಂಬಿಗ ಮುಸುರುತ್ತಿದ್ದೊ. ಶಂತನು ಗಂಗೆನ ಮೋರೆನ ಕಡೆಗೆ ಗೌರವಂದ ನೋಡಿಕಂಡ್ ಇದ್ದಂವ ಮೋಹಪರವಶನಾಗಿ ಮೂರ್ಛೆ ತೊಪ್ಪಿ ಬಿದ್ದದೆನೋಂತ ಹೇಳುವಷ್ಟರ ಮಟ್ಟಿಗಾತ್. ಗಂಗೆನ ಸೌಂದರ್ಯರಾಶಿ ಈ ಬ್ರಹ್ಮಚಾರಿನ ದೃಢತೇಂತೇಳುವ ಮರನ ಬೇರ್ ಸಮೇತ ಹಿಡ್ದ್ ಅಲ್ಗ್‌ಸಿತ್. ಈ ಸೌಂದರ್ಯದ ಗನಿ ತನಿಗೆ ಸಿಕ್ಕುದೋಂತೇಳ್ವ ಆಸೆ, ಸಿಕ್ಕದೆ ಹೋಗಿಬುಡುದೋಂತೇಳ್ವ ಸೊಂಸಯ ಎಡ್ಡೂ ಒಟ್ಟಿಗೇ ಆತ್.

ಮತ್ತೆ ಧೈರ್ಯ ಮಾಡಿ "ನೀ ನನ್ನ ಮೊದುವೆ ಆದಿಯನೋ"ಂತ ಕೇಳಿಯೇ ಬುಟ್ಟ.:.ತ್. ಅದಿಕೆ ಗಂಗೆ "ನನ್ನ ಕೆಲೊವು ಶರ್ತಗ ಒಳೊ. ಅವ್ಕೆ ನೀ ಒಪ್ಪಿಕಂಡರೆ ನಿನ್ನ ಮೊದುವೆ ಆಕೆ ನಾ ಒಪ್ಪಿನೆ"ಂತ ಹೇಳ್ತ್. ಅಂತ ಹೆಣ್ಣ್ ಸಿಕ್ಕಿದೇಂತಾದರೆ ಯಾವ ಶರ್ತಕ್ಕೂ ಒಪ್ಪಿಗೆ ಕೊಡಿಕೆ ಶಂತನು ತಯಾರಿತ್. ಹಾಂಗೆ "ಖಂಡಿತ ಒಪ್ಪಿನೇಂತ" ತಟಕ್ಕನೆ ಹೇಳ್ತ್.

ಈಗ ಗಂಗೆ ವಿವರ್ಸಿತ್. "ನಾ ದೇವಕುಲಕ್ಕೆ ಸೇರ್ದಂವ. ನೀ ಮಾನವ ಕುಲದಂವ. ಈ ಸಹಜ ವ್ಯತ್ಯಾಸಂದಾಗಿ ನಮ್ಮ ಸಂಬಂಧಲಿ ಹೊಂದಾಣಿಕೆ ಇರುದು ಕಷ್ಟ. ಈ ಹಿಂದೆನೂ ದೇವವರ್ಗದ ಸ್ತ್ರೀಯರ್ ಮಾನವ ವರ್ಗದ ಗಂಡಂದರ ಹೊಂದಿದ್ದೊ. ಆದರೆ ಅವರ ಸಂಸಾರ ತುಂಬಕಾಲ ಸಾಗದೆ ಮಧ್ಯಲೆ ವಿಚ್ಛೇದನ ಆತಿತ್. ನಮ್ಮೊದ್ ಹಾಂಗೆ ಆಕೆ ಆಗದ್‌ಂತಾದರೆ ನಾವು ಕೆಲೊವು ನಿಯಮಗಳ ಪಾಲುಸೊಕು.

"ರಾಜೆರ್ಗಳಿಗೆ ತುಂಬ ಜೆನ ಹೆಣ್ಣ್‌ಗ ಇದ್ದವೆ ಗಡ! ನೀ ಹಾಂಗೆ ಬೇರೆವರ್‍ನೂ ಮೊದುವೆ ಆಕೆ ಆಗದ್. ಮಾತ್ರವಲ್ಲ ನನ್ನೆದ್‌ರ್ ಬೇರೆ ಹೆಂಗ್‌ಸ್‌ನ ಕಡೆ

ಕಣ್ಣೆತ್ತಿಯೂ ನೋಡಿಕೆ ಆಗ.:.ದ್. ಸಮಾಗಮಕ್ಕೆ ಬಲತ್ಕಾರ ಯಾವ ರೀತಿಂದಳೂ ಇರಿಕೆ ಬೊತ್ತ್. ನನ್ನ ಇಚ್ಚೆ ಬಂದಾಂಗೆ ನಾ ಮಾಡುವ ಕೆಲ್ಸಕ್ಕೆ ಅಡ್ಡಿ ಮಾಡಿಕೆ ಆಗ.:.ದ್. ಹಾಂಗೆ ಅಡ್ಡಿ ಮಾಡ್ದ ಕೂಡ್ಲೇ ನಾ ನಿನ್ನ ಬುಟ್ಟ್ ಹೋವೆ. ಹೇಂಗೆ ನಿಂಗೆ ಒಪ್ಪಿಗೆ"ನೋಂತ ಗಂಗೆ ಕೇಳ್ತ್. ನಾ ಮುಂದೇನೇ ಒಪ್ಪಿಗೇಂತ ಹೇಳಿಯೊಳೇಂತ ಶಂತನು ಹೇಳ್ತ್. ಮತ್ತೆ ಅವಿಬ್ರೊರು ಗಾಂಧರ್ವ ವಿವಾಹ ಅಂದರೆ ಒಂದು ಗ.:.ಂಡ್ ಒಂದು ಹೆಣ್ಣ್ ಪರಸ್ಪರ ಒಪ್ಪಿಗೆಂದ ಒಂದಾಗುವ ಹಾಂಗೆ ಒಂದಾದೊ.

ಶಂತನು ಗಂಗೆನ ರಥಲಿ ಕುದ್ರಿಸಿಕ.:.ಂಡ್ ಹಸ್ತಿನಾವತಿಗೆ ಬಾತ್. ಅವನ ಪ್ರಜೆಗೆಲ್ಲ ಅವ್ಕೆ ಆರೆತಿ ಬೆಳ್ಗಿ ಭವ್ಯವಾದ ಸ್ವಾಗತ ಕೊಟ್ಟ್ ಅರಮನೆಗೆ ಪ್ರವೇಶ ಮಾಡ್ಸಿದೊ. ಮತ್ತೆ ರಾಜದಂಪತಿಗ ಮಜ್ಜನ ಬೋಜನಾದಿಗಳ ಮಾಡ್ದೊ. ಕರ್ಪೂರ ವೀಳ್ಯನ ಹಾಕ.:.ಂಡ್ ಸರಸ ಸಲ್ಲಾಪನ ತುಂಬ ಹೊತ್ತು ನಡ್ಸಿದ ಮೇಲೆ ಶಯನ ಗೃಹಪ್ರವೇಶ ಮಾಡ್ದೊ. ಇಬ್ರೊರೂ ಅಪ್ರತಿಮ ರೂಪವಂತರೂ, ನವಯೌವನಸ್ಥರೂ ಆಗಿದ್ದ್ ಕ್ಷಣಕ್ಷಣಕ್ಕೆ ಪರಸ್ಪರ ಆಕರ್ಷಿತರಾಗಿ ಕ್ರೀಡಾಸಕ್ತರಾಗಿ ತುಂಬ ಹೊತ್ತು ಆನಂದಲಿದ್ದ್ ದಣ್ದ್ ಒಬ್ಬನೊಬ್ಬ ಬಿಗಿಯಾಗಿ ತೊಬ್ಬಿಕ.:.ಂಡ್ ಸುಖನಿದ್ದೆಗೆ ಸರಿದೊ.

ಹೀಂಗೆ ಶಂತನು ಮತ್ತೆ ಗಂಗೆನ ರಸಪೂರ್ಣ ದಾಂಪತ್ಯಜೀವನ ಸಾಗ್‌ತ್ತಿತ್ತ್. ಇಬ್ರೊರೂ ಭೂಲೋಕಲೇ ಸ್ವರ್ಗ ಸುಖನ ಅನುಭವಿಸಿಕಂಡ್ ಇದ್ದೊ. ಹೀಂಗಿರ್ಕನ ಹಿಂದೆ ಗಂಗೆ ವಸುಗಳಿಗೆ ಕೊಟ್ಟಿದ್ದ ಮಾತ್‌ನ ಪೂರೈಸುವ ಸಂದರ್ಭನೂ ಒದಗಿ ಬಾವಾಂಗೆ ಆತ್. ಗಂಗೆ ಬೊಸ್‌ರಾತ್. ಈಗ ನರಲೋಕದ.:.ವು ಆಚರ್ಸುವ ಸೀಮಂತ, ಪುಂಸವನ ಮುಂತಾದ ಯಾವ ಸಂಭ್ರಮಾಚರಣೆಗಳೂ ಇಲ್ಲದೆ, ಬೊಸ್‌ರಿಗೆ ಒಂಬೊತ್ತ್ ತಿಂಗ ತುಂಬಿ ಒಂದು ದಿನ ಗಂಗೆ ಒಂದು ಗಂಡ್ ಕೂಸುನ ಹೆತ್ತತ್. ಆದರೆ ಕೂಸುನ ಅದ್ ಯಾರಿಗೂ ತೋರ್ಸದೆ ಒಂದು ಅರುವೆಲಿ ಸುತ್ತಿಕ.:.ಂಡ್ ಹಳ್ಳದ ಕರೆಗೆ ಹೋಗಿ ನೀರ್‌ಲಿ ಕ.:.ಂತಿಸಿ ಸಾಯಕೆ ಬುಟ್ಟ್ ಏನೂ ಆಗದವರ ಹಾಂಗೆ ಹಿಂದಕೆ ಬಾತ್. ಅದರ ಮೋರೆಲಿ ಯಾಗೋಳು ಒಂದು ಸಂತೃಪ್ತಿನ ಭಾವನೆನೇ ಕಾಂಬತ್ತಿತ್ತ್ ವಿನಾ ಖಿನ್ನತೆ, ವ್ಯಥೆ, ವ್ಯಸನದ ಯಾವ ಚಿಹ್ನೆಯೂ ಇತ್ತ್‌ಲೆ. ಸ್ವಂತ ಕೂಸುನ ಸಾಯುವಾಂಗೆ ಮಾಡ್ದ ಬಗ್ಗೆ ಯಾವ ಚಿಂತೆನೂ ಇತ್ತ್‌ಲೆ.

ಈ ವಿಷಯ ಶಂತನುಗೆ ಗೊತ್ತಾದರೂ ಅಂವ ಏನೂ ಹೇಳುವಾಂಗೆ ಇತ್ತ್‌ಲೆ. ಶರ್ತಗಳ್‌ಂದ ಅಂವ ಬಂಧಿತನಾಗಿತ್ತ್. ಹೀಂಗಿರ್‌ತ್ತಾ ಇವರ ವಿಲಾಸ ಜೀವನಕ್ಕೇನೂ ಕೊರತೆಯಿಲ್ಲದೆ ಸಾಗ್‌ತ್ತಿತ್ತ್. ನಿತ್ಯವೂ ಒಬ್ಬಂದೊಬ್ಬಂಗೆ ಹೊಸ್ಬರಾಗಿಯೇ ಕಾಂಬತಿದ್ದೊ. ಅಂದರೆ ಪರಸ್ಪರ ನೋಡಿ ತಣಿಯದ್, ಮಾತಾಡಿ ತಣಿಯದ್; ಕೂಡಿ ತಣಿಯದ್–ಅವರ ಮನ್ಸ್. ಹೀಂಗೆ ಅವರ

ರಸಮಯ ಜೀವನ ಸಾಗ್ತಿತ್ತ್. ಇದರೆಡೆಲಿ ಸುರುದು ಸೇರಿ ಏಳ್ ಸರ್ತಿ ಗಂಗೆ ಬೊಸ್‌ರಾಗಿಯೂ ಒಂದು ಕೂಸಾದರೂ, ಕ∴ಣ್ಣ್, ಮನ್ಸ್ ತೊಂಪಾವಂಗೆ ಮನೆ ಒಳೆಗೆ ಹೊರೆಗೆ ಆಡಿಕಂಡಿರದಂಗಾತ್.

ಹಿಂದೆನ ರಾಜಕುಮಾರರ್ ಮಲ್ಗಿದ್ದ ಚಿನ್ನದ ತೊಟಿಗಿಲ್‌ಗಳ ಅಟ್ಟಲಿ ಇಸಿದರ ಒಮ್ಮೆ ಕೂಡ ಕೆಳಗೆ ಇಳ್ಸಿತ್ತ್‌ಲೆ. ಅದರ್ಲಿ ಈಗ ಮಕ್ಕಳ ಮಲ್ಗ್‌ಸಿ ಕೊಂಡಾಟಲಿ ಜೋಗುಳ ಹಾಡಿ ಜಿರಿಜಿರಿ ಸದ್ದ್‌ಲಿ ತೊಟಗಿಲ್‌ನ ಒಚ್ಚ್‌ಕನ ಆ ಕೂಸ್ ಜೆಳ್ಳ್ ಅರಿಸಿಕಂಡ್ "ಆ" "ಊ"ಂತ ಹೇಳಿಕಂಡ್ ಎಸಳ್ ಕಣ್ಣ್‌ಗಳ ಮುಚ್ಚಿ ನಿದ್ದೆ ಮಾಡುವ ಪೊರ್ಲುನ ನೋಡಿ ಸುಕಪಡುವ ಪುಣ್ಯ ಇಲ್ಲದಾತಲೇಂತ ಗಂಗೆನ ಬುಟ್ಟ್ ಬಾಕಿದ್ದವ್ಕೆಲ್ಲ ತುಂಬ ದುಃಖ ಆಗಿ ಕಣ್ಣ್ ಹನಿ ತುಂಬುದು.

ಲೋಕಲಿ ಕೆಲೊವು ಜೆನಕೆ ಇಂತ ವ್ಯಥೆ ಅಪರೂಪಲಿ ಬಾದು. ಅದ್ ಪೂರ್ವ ಜೆನ್ಮದ ಪಾಪದ ಫಲಂದಾಗಿರ್ದು. ಆದರೆ ಇಲ್ಲಿ ಒಮ್ಮೆ ಅಲ್ಲ, ಇಂದಿಗೆ ಏಳ್ ಸರ್ತಿ ಆತ್. ಇನ್ನ್ ಹೀಂಗೇ ಬುಟ್ಟರೆ ಎಂಟ್‌ನೆದೂ ನಡಿದರ್ಲಿ ಸೊಂಸಯ ಇಲ್ಲೆ. ಏನಾದರಾಗಲಿ, ಇದರ ಹಾಂಗಾಕೆ ನಾ ಬುಡಿಕಿಲೆ. ಈ ಕೂಸು ನಂಗೆ ಬೇಕುಂತ ನಾ ತಡ್ದನೇಂತೇಳಿ ಶಂತನು ನಿಶ್ಚಯ ಮಾಡ್ತ್.

ಹೀಂಗೆ ಯಥಾಪ್ರಕಾರ ಗಂಗೆ ಬೊಸ್‌ರಾತ್. ಮತ್ತೆ ಹೆತ್ತ್, ಕೂಸುನ ಹಳ್ಳಕೆ ಹಾಕಿಕೆ ತಕ∴ಂಡ್ ಹೋಕನ ಶಂತನು ಒಟ್ಟಿಗೇ ಗಂಗೆನ ಹಿಂದೆಕ∴ಂಡ್ ಹೋತು. ಕೂಸುನ ಹಳ್ಳಕೆ ಹಾಕುದರ ತಡ್ದ್ ಗಂಗೆಗೆ ಹೇಳ್ತ್. "ಇದ್ ಒಂದು ಕೂಸುನಾರ್ ನಂಗೆ ದಯಮಾಡಿ ಬುಟ್ಟ್ ಕೊಡು. ಇದರ ಹಳ್ಳಕೆ ಹಾಕಿಕೆ ನಾ ಬುಡಿಕಿಲೆ"ಂತ ಹೇಳ್ತ್. ಗಂಗೆ ಕೋಪಲಿ ತಿರ್ಗಿ ನಿತ್ತ್, "ಮಹಾರಾಜ! ಹಿಂದೆ ನೀ ಮಾತ್ ಕೊಟ್ಟದರ ಮರ್ತ್ ಬುಟ್ಟನೋ? ಇಂದ್‌ಂದ ಈಗಿಂದೀಗಳೇ ನಾ ನಿನ್ನ ಬುಟ್ಟ್ ಹೋವೆ!" "ನಿಂಗೆ ಮನ್ಸ್ ಇದ್ದಾಂಗೆ ಮಾಡ್"ಂತ ಶಂತನು ಹೇಳ್ತ್. ಆಗ ಗಂಗೆ "ಮಹಾರಾಜ! ಗ∴ಂಡ್‌ಸಾದ ನಿನ್ನಂದ ಇಷ್ಟ್ ಸಣ್ಣ ಕೂಸುನ ನೋಡಿಕಂಬಕೆ ಆಕಿಲೆ. ಹೆಣ್ಮಕ್ಕಳ ನಯ ನಾಜೂಕು ಗ∴ಣ್ಮಕ್ಕಳ ಒರ್ಟ್ ಕೈಗ∴ಳಿಗಿಲ್ಲೆ. ಆದ್ದರ್‌ಂದ ಈ ಕೂಸುನ ಈಗ ನಾನೇ ತಕ∴ಂಡ್ ಹೋನೆ. ಪೊರ್ಲು ಸಾಂಕಿ ದೊಡ್ಡವನಾಗಿ ಮಾಡಿ, ಎಲ್ಲ ವಿದ್ಯೆ ಬುದ್ಧಿಗಳ ಕ∴ಲ್ಸಿ, ಮತ್ತೆ ನಿನ್ನ ಕೈಗೆ ಒಪ್ಪುಸಿನೆ. ನೀ ಹೆದ್‌ರ್‌ಬಡ"ಂತ ಗಂಗೆ ಹೇಳಿ ಆ ಕೂಸುನ ಹಿಡ್ಕ∴ಂಡ್ ಮಾಯ ಆಗಿ ಹೋತು.

ಇಷ್ಟರವರೆಗೆ ತನ್ನ ಹೃದಯ ಮನ್ಸ್‌ಗ∴ಳಿಗೆ ಅಮೃತನ ಉಣ್ಸಿಕ∴ಂಡ್ ಇದ್ದ, ತನ್ನ ಸರ್ವಸ್ವವಾಗಿ ತನ್ನ ಜೀವನದ ಒಂದು ಭಾಗವಾಗಿದ್ದ ಗಂಗೆ, ನನ್ನ ಹೆಣ್ಣ್ ಒಮ್ಮೆಂದೊಮ್ಮೆ ಮರೆಯಾಗಿ ತನ್ನ ಬಾಳೆಲ್ಲ ಕಗ್ಗತ್ತಲೆಲಿ ತುಂಬುವಂಥ ಕಾಲ ಬಾದುಂತ ಶಂತನು ಕನ್ಸ್‌ಲಿಯೂ ನೆನ್ಸಿತ್ತ್‌ಲೆ. "ಅದ್ ನನ್ನ ಪ್ರಾಣಸಖಿಯಾಗಿ, ಒಡ್‌ಲೆರ್ಡ್, ಜೀವವೊಂದುಂತಿರ್ಕನ, ನನ್ನ ಹೀಂಗೆ ವಿರಹದ ದುಃಖಸಾಗರಕೆ

ನೂಕಿ ಹೋದೂಂತ ನಾ ನೆನ್ಸಿತ್‌ಲೆ. ಅದರ ಮೇಲೆ ನಂಗಿದ್ದ ಪ್ರೀತಿ ಅದಿಕೂ ನನ್ನ ಮೇಲೆ ಇರುದುಂತ ನಾ ನಂಬಿರ್‌ಕನ ಹಾಂಗೆ ನಿಬಂಧನೆಗೇ ಪ್ರಾಧಾನ್ಯ ಕೊಟ್ಟ್, ಹೀಂಗೆ ನನ್ನ ಕೈಬುಟ್ಟ್ ಹೋಗಿ ಬುಟ್ಟಲೇ ಗಂಗೇ ಗಂಗೇ, ಗಂಗೇ"ಂತೇಳಿಕಂಡ್ ಮೂರ್ಛೆ ತೊಪ್ಪಿ ಬೀತ್.

ರಾಜನೊಟ್ಟಿಗಿದ್ದ ಮಂತ್ರಿಗ ಓಡಿ ಹೋಗಿ, ಸೊಪ್ಪುನ ದೊನ್ನೆ ಮಾಡಿ ಗಂಗೆಂದ ನೀರ್‌ತಂದ್ ರಾಜನ ಮೋರೆಗೆ ಹನ್ಸಿಸಿ, ಅಂಗಾಲಿಗೆ ಹಾಕಿ ಉದ್ದಿದೊ. ರಾಜ ಮೆಲ್ಲ ಕಣ್ಣ್ ಬುಟ್ಟತ್. "ಮಹಾರಾಜರೇ, ಎದ್ದ್‌ರಿ, ಅರಮನೆಗೆ ಪೋಯಿ"ಂತ ಮಂತ್ರಿಗ ಹೇಳ್ದೊ. "ನಂಗೆ ಇನ್ನ್ ಅರಮನೆ ಎಲ್ಯುಟ್ಟು? ಸಕಲ ಭೋಗ ಭಾಗ್ಯಗ ಇದ್ದರೂ ತನ್ನ ಹೆಣ್ಣ್ ಇಲ್ಲದ ಮೇಲೆ ಅದೆಲ್ಲ ಒಂದು ಕತ್ತಲೆ ತುಂಬಿದ ಕಾರಾಗೃಹ. ಅಂತ ಭಾಗ್ಯಹೀನಂಗೆ ಕಾಡೂ ಒಂದೆ, ನಾಡೂ ಒಂದೆ. ನಾ ಆ ಅರಮನೆಗೆ ಬಾದುಲೆ ಚಿನ್ನದ ಸುಂದರ ಪಂಜರದೊಳಗಿದ್ದ ಅರಗಿಳಿ ಹಾರಿಹೋತು. ಆ ಬೋಳಾದ ಅರಮನೆಲಿ ಇನ್ನ್ ಏನುಟ್ಟು? ಮುಂದೆ ಆದರೆ ನಿತ್ತಲ್ಲಿ ಗಂಗೆ, ಕುದ್ದಲ್ಲಿ ಗಂಗೆ; ಗಂಗೆ, ಗಂಗೆ ಎಲ್ಲೆಲ್ಲಿ ಗಂಗೆ. ಈಗ ಅದಿಲ್ಲದೆ ಎಲ್ಲ ಸೊನ್ನೆ. ಎಲ್ಲೆಲ್ಲ ಸೊನ್ನೆ, ಸೊನ್ನೆ, ಜೀವನಕೆ ಸೊನ್ನೆ, ಸೊನ್ನೆ. ಈಗ ನನ್ನ ಬಾಳ ಸಂಗಾತಿ ಗಂಗೆ ಇಲ್ಲದೆ, ನನ್ನ ಸರ್ವಸ್ವವಾಗಿದ್ದ ಗಂಗೆ ಇಲ್ಲದೆ ನಂಗೆ ಅರಮನೆನೂ ಒಂದೇ ಕಾಡೂ ಒಂದೆ. ಹಾಂಗೆ ನಾ ಅರಮನೆಗೆ ಬಾದುಲೆ. ನೀವು ಹೋಗಿ. ನಾ ಇಲ್ಲೇ ಇದ್ದನೆಂತ ಶಂತನು ಹೇಳ್ತ್. ಮತ್ತೆ ಮಂತ್ರಿಗ ಹೇಂಗೆಲ್ಲ ಅವಂಗೆ ಸಮಾಧಾನ ಹೇಳಿ, ಒತ್ತಾಯ ಮಾಡಿ ಒಪ್ಪುಸಿ ಅವನ ಅರಮನೆಗೆ ಕರ್ಕಂಡ್ ಬಂದೊ. ರಾಜ ಸೀದಾ ಅರಮನೆನ ಅಂತಃಪುರನ ಹುಕ್ಕಂವ ಯಾರ್‍ನೂ ನೋಡದೆ ಮಾತಾಡದೆ ಇತ್ತ್. ಆಳೆತ್ತರದ ಗಂಗೆನ ಚಿತ್ರ ಬರ್ಸಿ ಅದರ್‍ನೇ ಮೂರು ಹೊತ್ತೂ ನೋಡಿಕಂಡೇ ಕಾಲಕಳಿಯುತ್ತಿತ್ತ್. ರಾಜ್ಯಾಡಳಿತನ ಎಲ್ಲ ಮಂತ್ರಿಗಳೇ ನೋಡಿಕಂಬತಿದ್ದೊ.

ಹೀಂಗೇ ಕೆಲೊವು ವೊರ್ಸಗ ಕಳ್ದೊ. ರಾಜನ ವಿರಹವೇದನೆ ಹಳ್ಳೆಳ್ಳೇ ಕ∴ಮ್ಮಿ ಆಕಂಡ್ ಬಾತ್. ಇದ್ ಕಾಲದ ಗುಣ ಎಂತ ದುಃಖವೇ ಆದರೂ ಕ∴ಮ್ಮಿ, ಕ∴ಮ್ಮಿ ಆಗಿ, ಕಾಲಕ್ರಮಲಿ ಇಲ್ಲದಾದೆ. ಕ್ಷಣ ಮಾತ್ರಕೂ ಅಗಲದಿದ್ದ ಪ್ರಿಯತಮೆನೇ ಆಗಿದ್ದರೂ, ಅದರ ಮಾಸಲ್ ನೆಂಪು ಮಾತ್ರ ಒಳ್ದ್ ಮತ್ತೆ ಅದೂ ಇಲ್ಲದಾದೆ. ಅದಿದ್ದ ಜಾಗೆಲಿ ಇನ್ನೊಂದರ ಸ್ಥಾಪನೆ ಮಾಡುವಷ್ಟರವರೆಗೆ ಮನ್ಸ್‌ಲಿ ಬದಲಾವಣೆ ಆದೆ. ಶಂತನುಗೆ ಆದ್ದೂ ಹಾಂಗೇನೆ. ರಾಜ ಒಮ್ಮೊಮ್ಮೆ ಬೇಟೆಗೆ ಹೋಕೆ ಸುರುಮಾಡ್ತ್, ಒಮ್ಮೊಮ್ಮೆ ಹಿಂದೆನ ಸಮಾಚಾರಗಳನ್ನೆಲ್ಲ ನೆನ್ಸಿಕಂಡ್ ಗಂಗಾತೀರಲಿ ನಡ್ಕಂಡ್ ಹೋತಿತ್ತ್. ಒಮ್ಮೆ ಹೀಂಗೆ ಹೋಕನ ಹಳ್ಳದ ಕರೇಲಿ ಒಬ್ಬ ತೇಜಸ್ವಿಯಾದ ಪೋರ್ಲಕಂಡೆ ಹೈದನ ನೋಡ್ತ್. ಆ ಹೈದ ವಿಚಿತ್ರವಾದ ಅವಂದೇ ಆದ ಒಂದು ಆಟನ ಆಡ್‌ತಿತ್ತ್. ಅಂದರೆ ಒಮ್ಮೆ ಒಂದು ಬಾಣ ಬುಟ್ಟ್

ಹರಿಯುವ ನೀರ್‌ನ ಕ.ಃಟ್ಟಿ ಎರ್ಕ್ಸುದು; ಮತ್ತೆ ಎರ್ಕಿದ ನೀರ್‌ನ ಇನ್ನೊಂದು ಬಾಣ ಬುಟ್ಟ್ ಬಸಲ್ಲನೆ ಹರಿಯಕೆ ಬುಡುದು. ಇದ್ ನೋಡೊವ್ಕೆ ಆಶ್ಚರ್ಯನೂ ಸಂತೋಷನೂ ಒಟ್ಟಿಗೇ ಉಂಟ್ ಮಾಡ್‌ತಿತ್ತ್. ರಾಜಂಗೆ ಅವನ ಹಕ್ಕಲೆ ಒಮ್ಮೆ ಹೋಕು. ಅವನ ಗಟ್ಟಿ ತೊಬ್ಬಿಕಣೊಕುಂತ ಆಸೆ ಉಕ್ಕಿ ಬಾತ್. ಅಷ್ಟರ್ಲಿ ಅಲ್ಲಿ ಗಂಗೆ ಮುಂದೆನಾಂಗೆ ಸೌಂದರ್ಯ ರಾಸಿಯಾಗಿ ಪಳಕ್ಕನೆ ಪ್ರತ್ಯಕ್ಷ ಆತ್. ಶಂತನು ಆಶ್ಚರ್ಯಲಿ ಕ.ಃಣ್ಣ್ ಬಾಯೆ ಬುಟ್ಟ್‌ಕ.ಃಡ್ ಇರಿಕನ ಗಂಗೆ ನೆಗಾಡಿಕ.ಃಡ್ ಹೇಳ್ತ್. "ಮಹಾರಾಜ! ಸುಮಾರ್ ಹದ್‌ನೆಂಟ್ ವೊರ್ಸದ ಹಿಂದೆ, 'ಈ ಕೂಸು ಒಂದಾರ್ ನಂಗ ಬೇಕುಂತೇಳಿ' ನನ್ನ ತಡ್ದ್, ನಾ ನಿನ್ನ ಬುಟ್ಟ್ ಹೋವ ಸಂದರ್ಭಲಿ 'ಇಷ್ಟ್ ಸಣ್ಣ ಕೂಸುನ ಸಾಂಕಿಕೆ ಗ.ಃಡ್‌ಸಾದ ನಿನ್ನಂದ ಆಕಿಲ್ಲೆ, ನಾನೇ ಇದರ ದೊಡ್ಡದ್ ಮಾಡಿ ನಿಂಗೆ ಒಪ್ಪ್‌ಸಿನೆಂತ ಹೇಳಿದ್ದೆ. ಅದೇ ಕೂಸು ಈಗ ಇಷ್ಟ್ ಬೆಳ್ದುಟು. ವೇದ ವೇದಾಂಗಶಾಸ್ತ್ರ ಮತ್ತು ಸಕಲ ಶಸ್ತ್ರಾಸ್ತ್ರ ವಿದ್ಯಾ ಪರಿಣತಿ ಪಡ್ದುಟು. ಕ್ಷತ್ರಿಯ ವೈರಿಯಾದ ಪರಶುರಾಮಂಗೆ ಇಂವ ಅಚ್ಚುಮೆಚ್ಚುನ ಶಿಷ್ಯ, ಅವಂಗೆ ಗೊತ್ತಿರುವ ಸರ್ವ ವಿದ್ಯೆನೂ ಇವಂಗೆ ಅಂವ ಧಾರೆಯೆರ್ದ್ ಕೊಟ್ಟುಟು. ನಿಮ್ಮ ಭೂಲೋಕ.ಃಲಿ ಇಂವಂಗೆ ಸರಿಸಾಟಿಯಾದೊವು ಯಾರು ಇಲ್ಲೆ. ಇನ್ನ್ ನೀ ಇಂವನ ಕರ್ಕ.ಃಡ್ ಹೋಗಿ ನಿನ್ನ ರಾಜಕಾರ್ಯಲಿ ನಿಲ್ಸಿಕ, ನಿಂಗೆ ಜಯವಾಗಲಿಂತೇಳಿ ಆ ಹೈದನ ಅವನ ಕೈಗೆ ಒಪ್ಪುಸಿಕೊಟ್ಟತ್.

ಶಂತನುಗೆ ಒಂದು ನಿಧಿಯೇ ಸಿಕ್ಕಿದಷ್ಟ್ ಸಂತೋಸು ಆತ್. ಉಕ್ಕಿ ಬಾವ ಸಂತೋಸುಲಿ ಮಜ್ಜನ ಒಮ್ಮೆ ಗಟ್ಟಿ ತೊಬ್ಬಿಕಣ್ತ್. ಮತ್ತೆ ಗಂಗೆಗೆ ಧನ್ಯವಾದ ಹೇಳಿ ಅದರ ತೊಬ್ಬಿಕಂಬಕೆ ಕೈ ನೀಂಡ್ತ್. ಅಷ್ಟರ್ಲಿ ಅದ್ ಮಿಂಚ್‌ನ ವೇಗಲಿ ಮಾಯ ಆತ್. ನಿರಾಸೆ ಮನ್ಸ್‌ಲಿ ತುಂಬಿರೂ ಜಗಜಟ್ಟಿಯಾದ ಮಜ್ಜ ಸಿಕ್ಕಿದ ಸಂತೋಸುಲಿ ಅವನ ರಥಕೆ ಹತ್ತ್‌ಸಿಕ.ಃಡ್ ಹಸ್ತಿನಾವತಿಗೆ ಬಾತ್. ಯುವರಾಜನ ಹಸ್ತಿನಾವತಿಗೆ ಕರ್ಕ.ಃಡ್ ಬಾವ ಸುದ್ದಿನ ಸೇವಕರ ಮೂಲಕ ಮುಂದೇ ಹೇಳಿ ಕ.ಃಳ್ಸಿದ್ದರ್‌ಂದ ನಗರನ ಸಿಂಗರ್ಸಿ ಪ್ರಜೆಗ ಅವ್ಕೆ ಒಳ್ಳ ಸ್ವಾಗತ ಕೊಟ್ರೊ.

ಮತ್ತೆ ರಾಜ ಯುವರಾಜನ ಹುಟ್ಟು ಹಬ್ಬನ ಸಂಭ್ರಮಂದ ಆಚರ್ಸಿತ್. ಅವಂಗೆ ದೇವವ್ರತಂತ ಹೆಸ್‌ರ್ ಕೊಟ್ಟ.ಃತ್. ಮತ್ತೆ ಅವಂಗೆ ಕುರುರಾಜ್ಯದ ಯುವರಾಜ ಪದವಿನೂ ಕೊಟ್ಟ.ಃತ್, ಈ ಸಂದರ್ಭಲಿ ವೇದಾಧ್ಯಯನ ನಿಪುಣರಾದ ಬ್ರಾಹ್ಮಣೋತ್ತಮರಿಗೆ ಕವಿಗಳಿಗೆ, ನರ್ತಕರಿಗೆ, ಗಾಯಕರಿಗೆಂತೇಳಿ ಹಲೊವು ಕಲಾವಿದರಿಗೆ ಅವರ ಕೈ ತುಂಬುವಷ್ಟ್ ಮಾತ್ರವಲ್ಲ ಅವರ ಮನಸ್ಸೊ ತುಂಬುವಸ್ಟ್ ರತ್ನಾಭರಣಾಧಿಗಳ ಪಾರಿತೋಷಕಗಳ ಕೊಟ್ಟ.ಃತ್. ಗೋದಾನ, ಭೂದಾನಗಳನ್ನೂ ಕೊಟ್ಟ.ಃತ್, ಎಂಟ್ಟತ್ ದಿನಗಳ ವರೆಗೆ ಹಸ್ತಿನಾವತಿನ ಪ್ರಜಾವರ್ಗಕ್ಕೆಲ್ಲ ವಿಶೇಷ ಔತಣ ಏರ್ಪಡಿಸಿತ್. ಸಾಯಂಕಾಲ ಹೊತ್ತು ಯಾಗೋಳು ಸಂಗೀತ, ನೃತ್ಯ, ನಾಟಕಂತೇಳುವ ವಿನೋದಾವಳಿಗ

ನಡಿಯತಿದ್ದೊ. ಹೀಂಗೆ ಹಙ್ಞ ದಿನ ಹಸ್ತಿನಾವತಿನ ಪ್ರಜೆಗೆಲ್ಲ ಸಂತೋಸುನ ಸೊವುಂದ್ರಲಿ, ತೇಲಿಕಂಡ್ ಮುಳುಗ್ಯಂಡ್, ಮೀಸಿಕಂಡ್ ಇದ್ದಾಂಗೆ ಇದ್ದೊ.

ದೇವವ್ರತನ ದಿಗ್ವಿಜಯ ಪ್ರಾರಂಭ

ದೇವವ್ರತಂಗೆ ಯುವ ರಾಜ್ಯಾಭಿಷೇಕ ನಡಿಯಕನ ಹಸ್ತಿನಾವತಿಗೆ ಸಾಮಂತ.:.ರಾಗಿದ್ದ ಹಲೊವು ರಾಜೆರ್ಗ ಬಂದ್ ಅಧಿರಾಜೆರ್ಗೆ ಕಪ್ಪ ಕಾಣಿಕೆ ಕೊಟ್ಟ್ ಗೌರವ ತೋರ್ಸಿ ಹೋಗಿದ್ದೊ. ಹೀಂಗೆ ಮಾಡದ ಗ.:.ರ್ವಿಷ್ಠ ರಾಜೆರ್ಗ.:.ಳೂ ತುಂಬ ಜೆನ ಇದ್ದೊ. ದೇವವ್ರತ ಇವರ ಸುಮ್ಮನೆ ಬುಟ್ಟರೆ ಅವ್ಕೆ ಸಸಾರ ಆದೆ. ಆದ್ದರ್ಂದ ಅವರ ಮೇಲೆ ದಂಡ ಪ್ರಯೋಗ ಮಾಡಿಯೇ ತೀರೋಕಂತ ಅಪ್ಪನೊಟ್ಟಿಗೂ, ಮಂತ್ರಿ ಮುಖ್ಯರೊಟ್ಟಿಗೂ ವಿಚಾರ ವಿನಿಮಯ ಮಾಡ್ತ್. ಅವೆಲ್ಲವೂ ಅವನೊಟ್ಟಿಗೆ ಸಹಮತ ಸೂಚಿಸಿದೊ.

ರಾಜಧಾನಿಲಿ ನವರಾತ್ರಿ ಉತ್ಸವ ತುಂಬ ವಿಜೃಂಭಣೆಂದ ನಡ್ತ್. ಅದ್ ಮುಗ್ದ್ ವಿಜಯ ದಶಮಿನಂದ್ ತಕ್ಕ ಹೋಮ ಹವನಂಗಳ ಪುರೋಹಿತ ವರ್ಗಂದ ಮಾಡ್ಸಿ ಸೇನಾ ಸಮೇತನಾಗಿ ದೇವವ್ರತ ದಿಗ್ವಿಜಯಕ್ಕೆ ಮಂಗಳ ಮುಹೂರ್ತ ನೋಡಿ ಹೊರ್ಟ.:.ತ್.

ರಣಭೇರಿಗಳ ಆನೆಗಳ ಬೆನ್ನ್‌ಮೇಲೆ ಕ.:.ಟ್ಟಿಕ.:.ಂಡ್. ಇದ್ದೊವ್ಕೆ ಸೈನಿಕ.:.ರ್ ಬಾರಿ ಹುರುಪುಂದ ಕುದ.:.ಂಟಿಗಳ ಹಿಡ್ಕ.:.ಂಡ್ ಅವ್ಕೆ ಬೇರಿ ಬೇರಿ ಹೊಡಿಯತಿದ್ದೊ. ಹೀಂಗೆ ಬೇರಿ ಹೊಡ್ಸಿಕಂಬ ಕಾರಣಂದಳೇ ಈ ವಾದ್ಯಕೆ 'ಭೇರಿ'ಂತ ಹೆಸ್‌ರ್ ಬಾತೋಂತ ಕೆಲೊವು ಪಂಡಿತ ಸೈನಿಕ.:.ರ್ ಯೋಚನೆ ಮಾಡ್‌ತಿದ್ದೊ. ಅದರ್ಂದ ಉಂಟಾದ ಸಬ್ದ ದಿಗ್ಗಜಗಳ ಕೆಬಿಗೆ ಗೂಟ ಹೊಡ್ಡಾಂಗೆ ಮುಚ್ಚಿತ್. ಗಿರಿ ಕಂದರಗಳ, ಬಾಂಜಾರಗಳ, ಗುಹೆನ ಬಾಯಿನ ಕ.:.ಟ್ಟಿ ವೈರಿ ರಾಜೆರ್‌ಗ ಹೆದ್‌ರಿ ಬಂದ್ ಅಡ್‌ಂಗ್ಯಂಬಕೆ ದಾರಿ ಇಲ್ಲದಾಂಗೆ ಅತ್. ಆನೆಗಳ ಕೆಬಿಂದ, ಹಿಂಭಾಗಂದ ಮದಜಲದ ಧಾರೆ ಇಳಿಯತಿದ್ದ.:.ದ್ ಪರ್ವತದ ಮೇಲೆಂದ ಒಳ್ಕುವ ನೀರ್‌ನ ಒರ್ತೆನಾಂಗೆ ಕಾಂಬತ್ತಿತ್ತ್. ಗ.:.ಂಡಾನೆಗ ಆಗಾಗ ತಮ್ಮ ಎಡ್ಡ ದಂತದ ಮೇಲೆ ಒಮ್ಮೊಮ್ಮೆ ತುಂಬಿ ಕೈಗಳ ಹಾಕಿ ಅತ್ತ ಇತ್ತ ನೋಡುದು ಪೌರುಷವಂತ ಗ.:.ಂಡ್‌ಸ್ ತನ್ನ ಹುರಿಮೀಸೆನ ಮೇಲೆ ಕೈ ಹಾಕಿ ಜಂಬ ತೋರ್ಸುವಾಂಗೆ ಕಾಂಬತ್ತಿತ್ತ್. ಹೀಂಗೆ ಹುರುಪುಂದ ಆನೆಗ ಧಪ ಧಪ ಹೆಜ್ಜೆ ಹಾಕ್‌ಕನ ಆಗಾಗ ಸೊಂಡಿಲ್‌ಗಳ ಎತ್ತಿ ಘೀಂಕಾರ ಮಾಡಿಕ.:.ಂಡ್ ತಮ್ಮ ಪೌರುಷ ಪ್ರದರ್ಶನ ಮಾಡ್‌ತಿದ್ದೊ.

ಈ ಗಜ ಸೇನೆನ ಹಿಂದೆಂದ ರಥಸೇನೆ ಸಾಲ್ ಸಾಲಾಗಿ ಬಾತಿತ್ತ್. ಕ.:.ಲ್ಲ್ ದಾರಿಲಿ ಲಾಳ ಹಾಕಿದ ಕಾಲ್‌ಲಿ ತೇರಿಗೆ ಕ.:.ಟ್ಟಿದ ಕುದುರೆಗ ತಲೆ ಮುಕ್ಕುಡು ಹಾಕ.:.ಂಡ್ ಉತ್ಸಾಹ.:.ಲಿ ನಡಿಯಕನ 'ಟ್ಲಾಟ್ ಟ್ಲಾಟ್, ಟ್ಲಾಟ್'ಂತ

ಶಬ್ದ ಕೇಳ್ತಿತ್ತ್. ತೇರ್‌ಗಳೂ ಕ∴ಲ್ಲ್ ದಾರಿಲಿ ಅಲ್ಗ್‌ಕನ ಕುದುರೆಗಳ ಕಾಲ್‌ಸದ್ದ್‌ನೊಟ್ಟಿಗೆ ಗಡಗಡ ತಾಳ ಹೊಡಿಯತಿದ್ದೊ. ಅದರ ಹಿಂದೆಂದ ಯುದ್ಧ ಪೋಷಾಕ್ ಧರಿಸಿದ, ಕುದುರೆ ಮೇಲೆ ಕುದ್ದ ಯೋಧರಿರುವ ಕ∴ಣ್ಣೆತ್ತದಷ್ಟ್ ದೊಡ್ಡ ಕುದುರೆ ಪಡೆ ಬಾತಿತ್ತ್.

ಇವೆಲ್ಲದರ ಹಿಂದೆಂದ ಕಾಲಾಳ್ ಪಡೆಬಾತಿತ್ತ್. ಬಿಲ್ಲ್ ಬಾಣಗಳ ಹಿಡ್ದವರ ಪಂಗಡ, ಕ∴ತ್ತಿ ಗುರಾಣಿಗಳ ಹಿಡ್ದವರ ಪಂಗಡ, ಈಟಿ, ಭರ್ಜಿಗಳ ಹಿಡ್ದವರ ಪಂಗಡ, ಗದೆ, ಮುಸಲಾಯುಧಗಳ ಹಿಡ್ದ ಪಂಗಡ, ಇವೆಲ್ಲ ತುಂಬ ಹುಮ್ಮಸ್ಸ್‌ಂದ ದಡ ದಡಂತ ನಡ್ಕ∴ಂಡ್ ಬಾತಿದ್ದೊ. ಹೀಂಗೆ ಚತುರಂಗ ಸೇನಾ ಸಮೇತನಾದ ದೇವವ್ರತ, ಗಜಸೇನೆನ ಮುಂದೆ ಶೃಂಗರಿಸಿದ ಒಂದು ದೊಡ್ಡ ಮದ್ದಾನೆನ ಬೆನ್ನಿಗೆ ಕ∴ಟ್ಟಿದ ಚಿನ್ನದ ಅಂಬಾರಿಲಿ ಸಕಲಾಯುಧಗಳ ಮಧ್ಯಲಿ ಕುದ್ದ್‌ಕ∴ಂಡ್ ದಿಗ್ವಿಜಯಕ್ಕೆ ಹೊರ್ಟ್‌ಂವ ಸುರುಗೆ ಮೂಡ ದಿಕ್ಕ್‌ನ ನೋಡಿ ಪ್ರಯಾಣ ಬೆಳ್ಸಿತ್. ನಾನಾ ತರದ ಆಭರಣಂಗಳ್‌ಂದ ಅಲಂಕೃತನಾದ ಅಂವ ಪೂರ್ವಂದ ಮೂಡಿ ಬಾವ ಸೂರ್ಯಂಗೆ ಪ್ರತಿ ಸೂರ್ಯನೋಂತ ಹೇಳುವ ಹಾಂಗೆ ಕಾಂತಿ ಮಿಂಚ್‌ತಿತ್ತ್. ಬಾನ∴ಲಿ ಏರಿಬಾವ ಸೂರ್ಯ ಎತ್ತರದ ಗಿರಿನ ಮೇಲೆ ಇರುವ ಹಾಂಗೆ ಇಂವ ಏರ್ದ ಆನೆನೂ ಅದರ ಹೋಲಿಕೆಗೆ ಸ∴ರಿಯಾತ್.

ದೇವವ್ರತನ ಸೇನೆ ಹಸ್ತಿನಾವತಿನ ಬೀದಿಗಲ್ಲಿ ಹೋಕನ ಬೀದಿಗಳ ಮನೆಗಳ ಉಪ್ಪರಿಗೆಲಿದ್ದ ಸುಮಂಗಲೆಯರ ತಂಡ ರಾಜಕುಮಾರನ ತಲೆಗೆ ಅಕ್ಷತೆಗಳ ಹಾಕಿ ಶುಭ ಕೋರ್ದೋ, ಬೀದಿಕರೆಲಿ ನಿತ್ತ್‌ಕ∴ಂಡ್ ನೋಡಿಕ∴ಂಡ್ ಇದ್ದ ಜೆನಂಗೆಲ್ಲ ರಾಜಕುಮಾರಂಗೆ ಜಯವಾಗ∴ಲಿಂತ ಜಯಘೋಷ ಮಾಡ್ದೊ.

ಹೀಂಗೆ ಹೊರ್ಟ ಸೇನೆ ಅಂಗ, ವಂಗ, ಕಳಿಂಗ, ಕಾಂಭೋಜಾದಿ ರಾಜ್ಯಗಳ ಮೇಲೇರಿ ಹೋಕನ ಅಲ್ಲಿನ ರಾಜರ್‌ಗ್ ಈ ವಿಸ್ತಾರವಾದ ಸೇನೆನ ನೋಡಿಯೇ ದೇವವ್ರತಂಗೆ ಶರಣು ಬಂದ್ ತಮ್ಮೊಲ್ಲಿರುವ ಅಮೂಲ್ಯ ವಸ್ತುಗಳ ಕಾಣಿಕೆ ಕೊಟ್ಟ್ ಗೌರವಿಸಿದೊ. ಹೀಂಗೆ ಮೂಡು ದಿಕ್ಕ್‌ನ ದಿಗ್ವಿಜಯ ಮುಗ್ಸಿದ ದೇವವ್ರತ ತನ್ನ ಸೇನೆನ ದಕ್ಷಿಣ ದಿಕ್ಕ್‌ಗೆ ತಿರ್ಗ್‌ಸಿತ್.

ದಕ್ಷಿಣ ಭಾರತಲಿ ಚೋಳ, ಪಾಂಡ್ಯ, ಚೇರಂತೇಳುವ ಮೂರು ಪ್ರಮುಖ ರಾಜವಂಶಗ ಆಳಿಕ∴ಂಡ್ ಇದ್ದೊ. ಅವರವರೊಳಗೆ ಮತ್ಸರಂದ ಸೆಣ್‌ಸಿಕ∴ಂಡ್ ಇದ್ದರೂ, ದೇವಸ್ಥಾನಗಳ ಕ∴ಟ್ಟುಸುದು, ಕೆರೆ ಕಾಲುವೆ ತೋಡ್ಸುದು ಮುಂತಾದ ಜನೋಪಯೋಗಿ ಕೆಲ್ಸಗಳ ಮಾಡ್ಸಿಕ∴ಂಡ್ ಯೋಗ್ಯ ರೀತಿನ ರಾಜ್ಯಪಾಲನೆ ಮಾಡಿರೂ ಬೇರೆವರ ನೋಡಿರೆ, ಅವರ ತಾತ್ಸಾರ ಮಾಡಿಕ∴ಂಡ್ ಅಲಕ್ಷ್ಯ ಮಾಡಿಕ∴ಂಡಿದ್ದೊ. ಹೀಂಗಿದ್ದರೂ ಇವನ ದೊಡ್ಡ ಸೇನೆನ ನೋಡಿ, ಹೋರಾಟ ಮಾಡುದು ಒಳ್ಳ∴ದಲ್ಲಂತ ಸ್ನೇಹಂದಳೇ ನಡ್ಕಂಡೊ. ದೇವವ್ರತನೂ ಅವ್ಕೆ ತಕ್ಕ ಮನ್ನಣೆ ಮಾಡ್ತ್.

ಮತ್ತೆ ದೇವವ್ರತ ತನ್ನ ಸೇನೆನ ಉತ್ತರಕ್ಕೆ ಮೋರೆ ಮಾಡಿ ಪಲ್ಲವ, ಕದಂಬ, ರಾಷ್ಟ್ರಕೂಟ, ಚಾಳುಕ್ಯರ ರಾಜ್ಯಗ.್.ಳಿಗಾಗಿ ಹೋತು. ಇಲ್ಲಿನ ರಾಜೆರ್ಗ್ಳೂ ಇವನ ಎದ್‌ರ್ಸಿಕೆ ಹೋಗದೆ ಸ್ನೇಹಿತರಾಗಿಯೇ ನಡ್ಕಂಡೊ. ಅಲ್ಲಿಂದಳೂ ಉತ್ತರದ ಸಿಂಧು, ಗಾಂಧಾರ, ಮ್ಲೇಚ್ಛಂತೇಳುವ ರಾಜ್ಯದ ಅರ್ಸುಗ ಇವನ ಎದರ್ಸಿ ಹೋರಾಡಿದೊ. ಅಲ್ಪ ಕಾಲಲಿ ಸೋತ್ ಶರಣಾದೊ. ಹೀಂಗೆ ದರ್ಪ ತೋರ್ಸಿದ ಇವರ್‌ಂದ ಏನೂ ದಾಕ್ಷಿಣ್ಯ ತೋರ್ಸದೆ ಕಪ್ಪ ಕಾಣಿಕೆಗಳ ವಸೂಲು ಮಾಡ್ತ್. ಮುಂದೆ ಯಾಗೋಳು ನಾವು ಸಾಮಂತರಾಗಿಯೇ ಇದ್‌ಕಂಡವೆಂತ ಶಪಥ ಮಾಡ್ದೊ. ಹೀಂಗೆ ದೇವವ್ರತನ ದಿಗ್ವಿಜಯ ಯಶಸ್ವಿಯಾಗಿ ರಾಶಿ ರಾಶಿ ಕಪ್ಪ ಕಾಣಿಕೆಗಳ ಹೇರ್‌ಗಳೊಡನೆ ಹಸ್ತಿನಾವತಿಗೆ ಬಂದ್ ಸೇರ್ತ್. ಎಲ್ಲ ಕಡೆನ ಜೆನಕ್ಕೂ ದೇವವ್ರತ ಒಬ್ಬ ಆಕರ್ಷಣೀಯ ವ್ಯಕ್ತಿಯಾಗಿ ಕಂಡ.್.ತ್. ವೈಯಕ್ತಿಕವಾಗಿ ಎಲ್ಲ ರಾಜರೂ ಅವನೊಟ್ಟಿಗೆ ಸ್ನೇಹಿತರಾಗಿಯೇ ಇದ್ದೊ.

ಶಂತನುನ ಮೊದುವೆ ಯೋಚನೆ:

ದೇವವ್ರತ ಈಗ ಯುವಕ. ಯುವಕರಿಗೆ ಸ.್.ರಿಯಾದ ಚೆಲ್ಲಾಟ, ಉಲ್ಲಾಸದ ಮಾತ್‌ಕತೆ ಅವನಕ್ಕಲೆ ಇತ್ತ್‌ಲೆ. ಗಂಭೀರ ಮತ್ತೆ ಮೌನವೇ ಹೆಚ್ಚಾಗಿರುದು. ಯಾಗೋಳೂ ಏನಾರ್ ಯೋಚನೆ ಮಾಡಿಕ.್.ಂಡಿರ್ದು. ಒಟ್ಟುಲಿ ಇದೆಲ್ಲ ಯುವಕ ಸಹಜ ನಡವಳಿಕೆಯಾಗಿ ಕಂಡ.್.ತ್‌ಲೆ. ಯೌವನಕೆ ಸ.್.ರಿಯಾಗಿ ಎಲ್ಯಾರ್ ಅಂವ ಹೆಣ್ಣ್‌ಗಳ ಬಗ್ಗೆ ಯೋಚಿಸಿಕ.್.ಂಡ್ ಇರ್ದೊ? ಶಂತನು ಮಹಾರಾಜಂಗೆ ತನ್ನ ಮಜ್ಜನ ನಡ್ತೆ ಒಡ್ಸಲಾಗದ ಒಗಟ್‌ನಾಂಗಾತ್. ಅಂವಂಗೆ ಇರುವ ಒಬ್ಬನೇ ಮಜ್ಜನೊಟ್ಟಿಗೆ ಸಂತೋಸುಲಿ ಮಾತ್‌ಕತೆಯಾಡಿಕ.್.ಂಡಿರೊಕುಂತ ಆಸೆ. ಆದರೆ ಅಂವ ಮಾತಿಗೆ ಸಿಕ್ಕುದುಲೆ, ಹೀಂಗೆ ಇಷ್ಟ್ ದೊಡ್ಡ ವೈಭವದ ಅರಮನೆಲಿ ಮೌನದ್ದೇ ಸಾಮ್ರಾಜ್ಯ. ದೇವವ್ರತನ ಮೌನಕ್ಕೆ ಅಂವಂಗೆ ಅಪ್ಪನ ಮೇಲೆ ಇರುವ ಅಗೌರವ ಖಂಡಿತ ಕಾರಣ ಅಲ್ಲ. ಇದಿಕೆ ನನ್ನದೇ ಏನೋ ಕೊರತೆ ಇರಿಕೆ ಸಾಕ್. ಯಾಕೂ ಒಮ್ಮೆ ಹಿರಿಯ ಮಂತ್ರಿನೊಟ್ಟಿಗೆ ಏಕಾಂತಲಿ ಒಮ್ಮೆ ವಿಚಾರ್ಸುದು ಒಳ್ಳೆದ್‌ಂತ ನೆನ್ಸಿತ್.

ಹಾಂಗೆ ಶಂತನು ಹಿರಿಯ ಮಂತ್ರಿನ ಬಾಕೆ ಮಾಡ್ತ್. "ನಿಮ್ಮೊಟ್ಟಿಗೆ ನನ್ನ ವೈಯಕ್ತಿಕ ವಿಚಾರನ ಮಾತಾಟ್ ಪೊರಿಹಾರ ಕಾಣೊಕುಂತ ಕರ್ಸಿದೆ." "ಹೇಳಿ ಮಹಾರಾಜರೆ! ಏನ್ ನಿಮ್ಮ ಸಮಸ್ಯೆ?" "ನನ್ನ ದೊಡ್ಡ ಸಮಸ್ಯೆಂತ ಹೇಳಿರೆ ನನ್ನ ಸಹಿಸಕಾಗದ ಏಕಾಂಗಿತನ. ಇದರ್‌ಂದ ಯಾಗೋಳು ನನ್ನ ಬೇಜಾರಂತೇಳ್ದು ಕಿತ್ತ್ ತಿಂದ್‌ಕ.್.ಂಡ್ ಉಟ್ಟು. ಯಾಗೋಳು ಒಂದು ಜೀವಕೆ ಇನ್ನೊಂದು ಜೀವ ಒತ್ತಾಸೆಯಾಗಿದ್ದ್ ಎಲ್ಲ ಸಮಸ್ಯೆಗೂ ಬೆಂಬಲಕೊಟ್ಟ್ ಪೊರಿಹಾರ ಕೊಡೊಕು. ಹಾಂಗಿರೊವು ನಂಗೆ ಯಾರೊಳೊ ಹೇಳಿ. ಮಜ್ಜ ಒಬ್ಬ ದೂರದೂರನೇ ಉಟ್ಟು.

ಅಂವ ಎಷ್ಟೇ ಹಕ್ಕಲೆ ಬಂದರೂ ನನ್ನ ಅಂತರಂಗದ ವಿಚಾರನ ಹೇಳಿಕಂಬಕೆ ಆದೋ?" "ನಂಗೆ ಅರ್ಥ ಆದೆ ಮಹಾರಾಜರೆ, ಅಂತರಂಗದ ಸಖ್ಯ ಇರುದು ಒಂದು ಗ.:.ಂಡ್ ಮತ್ತೊಂದು ಹೆಣ್ಣ್‌ನ ಮಧ್ಯೆ ಮಾತ್ರ ಸಾಧ್ಯ. ಗ.:.ಂಡ್‌ಸ.:.ರ್ ಎಷ್ಟೇ ಆತ್ಮೀಯರಾದರೂ ಅಂತರಂಗದ ವಿಚಾರ ವಿನಿಮಯ ಅವರಿಬ್ಬರ ಮಧ್ಯೆ ಆಕಿಲೆ. ಒಂದು ಹೆಂಗ್‌ಸಾದರೂ ಏಕಾಂಗಿತನದ ಕಷ್ಟಗಳ ಹೆಂಗಾರ್ ತಡ್ಕಂಬೊದು. ಉದಾಹರಣೆಗೆ ಒಂದು ಹೆಣ್ಣ್ ತಾನ್ ಭಾರಿ ಪ್ರೀತಿಸುವ ಗಂಡ ತೀರಿ ಹೋದರೆ ಆ ದುಃಖನ ತಾಳಿಕ.:.ಂಡ್ ಎಷ್ಟೋ ಕಾಲ ಬೊದ್ಕಿರುದು. ಒಂದು ವೇಳೆ ಹೆಣ್ಣ್ ಸತ್ತ್‌ಹೋದರೆ ಆ ಗಂಡ ಕೆಲೊವೇ ಸಮಯಲಿ ಬೇರೊಂದ್ ಹೆಣ್ಣ್‌ನ ಮೊದುವೆ ಆಗಿ ಹಿಂದೆದರ ಮರ್ತ್‌ಬುಡುದು. ಇದೊಂದು ತೊಪ್ಪಲ್ಲ. ಶಾಸ್ತ್ರ ಪ್ರಕಾರ ಅಂವ ಹಲವು ಯಜ್ಞ ಕಾರ್ಯಗಳ ಸಪತ್ನೀಕನಾಗಿ ಮಾಡುವ ಸಂದರ್ಭಗ ಇರುದರ್‌ಂದ ಅಂವ ಮರುಮೊದುವೆ ಆದು ಅವಶ್ಯ ಉಟ್ಟು. "ಮಂತ್ರಿಗಳೇ ಈ ಕಾರಣಂದಳೇ ನಾನೂ ಹಾಂಗೆ ಇನ್ನೊಂದು ಮೊದುವೆ ಆದು ನ್ಯಾಯ ಸಮ್ಮತನೋ, ಶಾಸ್ತ್ರ ಸಮ್ಮತನೋಂತ ನೀವು ಹೇಳಿರೆನೊ"? "ನಾ ಮಾತ್ರ ಹೇಳುದಂದರೇನ್? ಇಡೀ ಪ್ರಪಂಚನೇ ಹೇಳ್ದು, ಇಲ್ಲಿ ಇನ್ನೂ ಒಂದು ವಿಚಾರ ನಂಗೆ ಹೊಳಿದರ ಹೇಳಿರೆ ನೀವು ಬೇಸರ ಮಾಡಿಕ ಆಗ.:.ದ್." "ಇಲ್ಲೆ ಹೇಳಿ".

"ಅದೇ ನಮ್ಮ ಯುವರಾಜ ಈಗ ಒಬ್ಬನೇ ಉಟ್ಟು. ಅಂವ ಎಷ್ಟೇ ವೀರನಾಗಿದ್ದರೂ, ವಿಧಿನ ಹೀಂಗೇಂತ ಹೇಳಿಕೆ ಯಾರಿಗೂ ಸಾಧ್ಯ ಇಲ್ಲೆ. ಪಕ್ಕ ಬಲವಿಲ್ಲದ ಅವಂಗೆ ಯಾರ್‌ಂದಾರ್ ಏನಾರ್ ಅಪಾಯ ಆಗಿ ಬುಟ್ಟರೆ, [ದೇವ್ರ ದಯಂದ ಹಾಂಗೆ ಆಗದಿರ್ಲಿಂತ ನನ್ನ ಪ್ರಾರ್ಥನೆ]. ಆಗ ಈ ದೊಡ್ಡ ಸಾಮ್ರಾಜ್ಯಕ್ಕೆ, ಮತ್ತೆ ನಾವ್ಗೆ ಯಾರ್ ಗೆತಿ? ಹಾಂಗೆ ಅವಂಗೆ ಸೋದರ.:.ರ್ ಇರುವಾಂಗೆ, ನೀವಿನ್ನೊಂದು ಮೊದುವೆ ಆದು ಅಗತ್ಯ ಆದೆ. ಆ ಮೇಲೆ ಬೇಗನೆ ಯುವರಾಜಂಗೆ ವೈಭವಂದ ಮೊದುವೆ ಮಾಡ್ಸ.:.ಕ್."

ಮಂತ್ರಿನ ಮಾತ್ ಶಂತನುಗೆ ಸಮಾಧಾನ ತಾತ್. ಒಟ್ಟಿಗೆ ಇನ್ನೊಂದು ಮೊದುವೆ ಆವ ವಿಚಾರ ಲವಲವಿಕೆ ತಾತ್. ಆದರೆ ಇದರ ಯುವರಾಜಂಗೆ ಹೇಳಿ ಅವನ ಮನ್‌ಸಿಗೆ ಏನೂ ಕಿರಿಕಿರಿ ಆಗದಾಂಗೆ ಮಾಡುದು ಯಾರ್? ಹೇಂಗೆಂತ ಯೋಚನೆ ಆತ್. ತಾನೇ ಅವನೊಟ್ಟಿಗೆ ಈ ವಿಚಾರ ಎತ್ತಿ ಮಾತಾಡುದು ತೀರ ಮುಜುಗರದ ವಿಷಯ. ಆದ್ದರ್‌ಂದ ಈ ಹಿರಿಯ ಮಂತ್ರಿನೇ ಇದಕ್ಕೆ ಸ.:.ರಿಯಾದ ಜೆನಂತ ರಾಜ ಮತ್ತೆ ಮಂತ್ರಿನೊಟ್ಟಿಗೆ ಹೇಳ್ತ್. "ಮಂತ್ರಿಗಳೇ ಈ ವಿಚಾರನ ಯುವರಾಜನ ಗಮನಕ್ಕೆ ನೀವೇ ತಂದ್ ಅಂವನ ಮನ್‌ಸಿಗೇನೂ ಬೇಜಾರ ಆಗದಾಂಗೆ ಮಾಡೊಕು. ನಂಗೆ ಇದರ ಅವನೊಟ್ಟಿಗೆ ಹೇಳಿಕೆ ಮುಜುಗರ ಉಂಟಾದೆ"

ಮಂತ್ರಿ ಹೇಳ್ತ್ "ಅದ್ ನಿಜ. ಮಹಾರಾಜರೇ ನಾನೇ ಯುವರಾಜನೊಟ್ಟಿಗೆ

ಇದರೆಲ್ಲ ವಿವರ್ಸಿ ಹೇಳಿ ನೋಡಿ ನೀವ್ಗೆ ತಿಳಿಸಿನೆ. ನೀವು ಈಗ ನೆಮ್ಮದಿಲಿರಿ".

ಹೀಂಗೆ ಮಹಾರಾಜಂಗೆ ಹೇಳಿ, ನಾಲ್ಕೈದ್ ದಿನಂಗ ಆದ ಮೇಲೆ ಹಿರಿಯ ಮಂತ್ರಿ ದೇವವ್ರತನ ನೋಡಿ ಮಾತಾಡ್ತ್ "ನಿಮ್ಮೊಟ್ಟಿಗೆ ಒಂದು ಮುಖ್ಯ ವಿಷಯನ ಮಾತಾಡಿಕೆ ಉಟ್ಟು ಯುವರಾಜರೇ"ಂತ ಮಾತಿಗೆ ಸುರುಮಾಡ್ತ್. "ಮಂತ್ರಿವರ್ಯ ನಿಮ್ಮ ಕ.ಃಣ್ಣೆದ್ರ್ ಬೆಳ್ದ ಕೂಸು ನಾ. ಹಾಂಗಿರ್ಕನ ನೀವು ನನ್ನ ಬಹುವಚನ ಪ್ರಯೋಗ ಮಾಡಿ ಗೌರವಂದ ಕರಿಯೋಕುಂತಿಲ್ಲೆ. ನನ್ನ ಅಪ್ಪ ಹೇಂಗೆ ಕರ್ದವೆ ಹಾಂಗೆ ನನ್ನ ಹೆಸ್ರ್ ಹೇಳಿ, 'ದೇವವ್ರತಂತ' ಮಾತ್ರ ಕರ್ದರೆ ಸಾಕ್." ಮಂತ್ರಿಗೆ ದೇವವ್ರತನ ಮೇಲೆ ತುಂಬ ಮೆಚ್ಚುಗೆ ಆತ್. "ಯುವರಾಜ, ಅದ್ ಪದವಿಗೆ ಕೊಡುವ ಗೌರವ. ಎಲ್ಲೊವು ಅದರ ಪಾಲ್ಸೊಕು. ನಮ್ಮ ನಡವಳಿಕೆನ ಬೇರೆವು ಪಾಲ್ಸೊಕುಂತೇಳ್ವ ಕಾರಣಂದ ನಾ ಹಾಂಗೆ ಕರಿಯಕಾದ್ದ್ ನಿಯಮ. ನಿಂಗೆ ಅದರ್ಂದ ಮುಜುಗರ ಆದೆಂತಾದರೆ, ನಾವು ನಾವೇ ಇರ್ಕನ ನಿನ್ನ ಇಚ್ಚೆನಾಂಗೆ ನೀ ಹೋಗು ಬಾಂತ ಏಕವಚನಲೆ ಕರ್ದನೆ. ಒಟ್ಟುಲಿ ನಿನ್ನ ವಿನಯಗುಣ ನಂಗೆ ತುಂಬ ಮೆಚ್ಚಿಕೆಯಾತ್. ನೀ ಯಾಗೋಳು ಸುಖಿಯಾಗಿ ಚಿರಂಜೀವಿಯಾಗಿಯೇ ಇರ್". ದೇವವ್ರತ ಮಂತ್ರಿನ ಕಾಲಿಗೆ ನಮಸ್ಕಾರ ಮಾಡಿ ಅವನ ಆಶೀರ್ವಾದ ಪಡ್ಕಂಡ.ಃತ್.

"ಮುಖ್ಯ ವಿಷಯ ಮಾತಾಡೊಕುಂತ ಹೇಳ್ದ.ಃರಿ, ಏನದ್? ಹೇಳಿ." "ಇಲ್ಲಿ ತೆರೆದ ಜಾಗೆಲಿ ಅದರ ಮಾತಾಡುದು ಸ.ಃರಿ ಅಲ್ಲ. ನಾವು ಏಕಾಂತದ ಕೋಣೆಗೆ ಪೋಯಿ. ಅಲ್ಲಿ ಮಾತಾಡೊನೊ, ಬಾ." ಹಾಂಗೆ ಇಬ್ಬೊರೂ ಏಕಾಂತದ ಕೋಣೆಗೆ ಪ್ರವೇಶ ಮಾಡ್ದೊ. "ಕೆಲವು ವಿಚಾರಗಳ ಗುಟ್ಟಾಗಿ ವ್ಯವಹರ್ಸೊಕಾದೆ. ಸಾಧಾರಣ ಮೊಂಯಿಸರ ಕೆಬಿಗೆ ಬಿದ್ದರೆ ಅವು ಅಲ್ಲೇ ನಿಲ್ಲದೆ ಅವರ ನಾಲಿಗೆ ಚಪಲಂದ ಊರೆಲ್ಲ ಹಬ್ಬಿದೆ."

"ಸ.ಃರಿ ಇನ್ನ್ ಹೇಳಿ. ಏನ್ ಸಂಗ್ತಿ?"

"ಅದ್ ಒಳ್ಳೆ ಸಂಗ್ತಿಯೇ. ಮೊದುವೆ ಆವ ಸಂಗ್ತಿ. ಮೊದುವೆಂತೇಳ್ದು ಮೊಂಯಿಸನ ಜೀವನ.ಃಲಿ ನಡಿಯೊಕಾದ ಒಂದು ಅಗತ್ಯದ ಸಂಸ್ಕಾರ. ಒಂದು ಗ.ಃಂಡ್ ಮತ್ತೆ ಒಂದು ಹೆಣ್ಣ್, ಎರ್ಡ್ ದೇಹ ಒಂದು ಜೀವಂತ ಬೊದ್ಕಿ, ಧರ್ಮ ಕಾರ್ಯಗಲ್ಲಿ ಸಹಭಾಗಿಯಾಗಿ ನಡಿಯುವ ಯೋಗ. ಹೀಂಗೆ ಧರ್ಮ ಕಾರ್ಯಗಳಲ್ಲಿ ಕೈ ಜೋಡ್ಸುದರ್ಂದಾಗಿಯೇ ಹೆಣ್ಣಾದ್ಯೆಕೆ 'ಧರ್ಮಪತ್ನಿ'ಂತ ಹೇಳುವೆ."

"ಹೌದು! ಇಲ್ಲಿ ಯಾರಿಗೆ ಅಂತ ಅವಶ್ಯಕತೆ ಏರ್ಪಟ್ಟುಟ್ಟು? ನಾ ಏನೂ ಈಗ ಯಜ್ಞ ಯಾಗಾದಿಗಳ ನಡ್ಸುದುಲೆ ಅಲ್ಲ?

ಅದ್ ಹೋಗ.ಃಲಿ, ನಾವಿನ್ನ್ ನಮ್ಮ ಮುಖ್ಯ ವಿಷಯನ ಮಾತಾಡೊನೊ. ಮೊದುವೆನ ಪ್ರಸ್ತಾಪ ನಿಂಗಲ್ಲ. ಹಣ್ಣು ಸಮಯ ಕ.ಃಳ್ದ್ ಆಮೇಲೆ ಅದರ

ಯೋಚಿಸ.:.ಕ್. ಈಗ ನೀ ಒಬ್ಬನೇ ರಾಜಕುಮಾರ. ನಿಂಗೆ ಪಕ್ಕ ಬಲ ಆಗಿದ್ದ್ ಬೆಂಬಲ ಕೊಡಿಕೆ ನಿಂಗೆ ಸಹೋದರರ್ ಬೇಕಾಯ್ತ್. ನೀ ಭಾರೀ ಪರಾಕ್ರಮಿಂತ ಆದರೂ, ಕಾಲಸ್ಥಿತಿ ಹೀಂಗೇಂತ ಹೇಳಿಕೆ ಆದುಲೆ. (ದೇವ್ರ ದಯಂದ ಹಾಂಗೇನೂ ಆಗದಿರ್ಲಿ) ಎಲ್ಲಿಯಾರ್ ನಿಂಗೇನಾರ್ ಆಪತ್ತ್ ಬಂದ್ ಬುಟ್ಟರೆ ಇಷ್ಟ್ ದೊಡ್ಡ ಸಾಮ್ರಾಜ್ಯಕ್ಕೆ ಮತ್ತೆ ನಾವ್ಗೆ ರಕ್ಷಕ.:.ರ್ ಯಾರ್? ಅದಿಕೆ ಈ ವಂಶ.:.ಲಿ ನಿಂಗೆ ಸಹೋದರರ್ ಅಗತ್ಯವಾಗಿ ಇರೊಕು. ಹಾಂಗೆ ಆಕೊರೆ ನಿನ್ನ ಅಪ್ಪಂಗೆ ಈಗ ಹೆಣ್ಣ್ ಇಲ್ಲದ ಕಾರಣ, ಇನ್ನೊಂದ್ ಹೆಣ್ಣ್‌ನ ತಂದ್ ಇನ್ನೊಂದು ಮೊದುವೆ ಆಕು. ಇವರ ನಾ ಮಹಾರಾಜರ್ಗೆ ಸೂಚಿಸಿಕನ ಅವ್ಕೆ ಮುಜುಗರ ಆತ್. 'ಆಳ್ ಸ.:.ರಿಯಾದ ಮಜ್ಜ ಇರ್‌ಕನ ನಾ ಹೇಂಗೆ ಮೊದುವೆ ಆದುಂತ ಹೇಳಿಕಂಡೊ. ಅದಕ್ಕಾಗಿ ಈಗ ನಾ ಈ ಸಂಗ್ತಿನ ನಿನ್ನ ಮುಂದೆ ಹೇಳ್ದೆ. ನೀ ನಿನ್ನ ಅಭಿಪ್ರಾಯನ ಹೇಳೊಕು,"

"ನಿಮ್ಮಂತ ಹಿರಿಯೊವು ಹೇಳ್ದ ಮಾತಿಗೆ ನಾ ಎದರ್‌ವಾದ ಮಾಡುವೆನೊ. ಮಕ್ಕ ಆದೊವ್ಕೆ ಅಯ್ಯಪ್ಪನ ಸುಖ ಸಂತೋಸು ಮುಖ್ಯ. ಹಾಂಗೆ ಅಪ್ಪಂಗೆ ಖಂಡಿತ ಇನ್ನೊಂದು ಮೊದುವೆ ಮಾಡಿ, ನಂಗೂ ತುಂಬ ಜನ ಸೋದರರ್ ಹುಟ್ಟಿ ಬರ್ಲಿ. ಈ ಅರಮನೆ ತುಂಬ ಅವರ ಮಾತ್‌ನ ಮಳೆ ಸುರಿಯ.:.ಲಿ. ನೀವು ಅಪ್ಪನ ಮೊದುವೆ ಕಾರ್ಯನ ಬೇಗ ಮಾಡಿ ಅಜ್ಜ."

ದೇವವ್ರತನ ಒಪ್ಪಿಗೆನ ಹಿರಿಯ ಮಂತ್ರಿ ಹೇಳ್ದರ ಕೇಳಿ ಶಂತನುಗೆ ಸಂತೋಸಾತ್. ತನಿಗೆ ಮೊದುವೆ ಆಕುಂತೇಳ್ವ ಭಾವನೆಗೆ ಬೆಂಬಲ ಸಿಗ್ತ್ಂತ ಅವಂಗೆ ಲವಲವಿಕೆ ಉಂಟಾತ್. ತನಿಗೆ ಸ.:.ರಿಬಾವ ಹೆಣ್ಣ್ ಎಲ್ಲ್ಯುಟ್ಟೂಂತ ಹುಡ್ಕೊಕಲೆ. ಅದಿಕ್ಕೂ ಹಿರಿಯ ಮಂತ್ರಿನೇ ಏರ್ಪಡ್ಸೊಕುಂತ ನೆನ್ಸಿಕಂಡ.:.ತ್.

ಸತ್ಯವತಿ (ಮತ್ಸ್ಯಗಂಧಿ)ನ ಜನ್ಮವೃತ್ತಾಂತ

ವಿಧಿವ್ಯೂಹಂತೇಳ್ದು ವಿಚಿತ್ರ. ಶಂತನುನ ಸಂಸಾರ ವಿಸ್ತಾರಕ್ಕೆ ಅನುವಾಗುವ ಹಾಂಗೆ ಸತ್ಯವತಿನ ಜನ್ಮ ವಿಚಿತ್ರ ರೀತಿಲಿ ಆಗುವಾಂಗೆ ಆತ್. ಗಂಗಾದೇಸಲಿ ಉಪರಿಚರವಸುಂತೇಳ್ವ ಒಬ್ಬ ರಾಜ ಇತ್ತ್. ಅಂವ ಕೋಲಾಹಲಂತೇಳ್ವ ಪರ್ವತನ ಮಗಳ ಗಿರಿಜೆಂತೇಳ್ವ ಕನ್ಯೆನ ಮುಕ್ತಾವತಿಂತೇಳ್ವ ಹಳ್ಳದ ಕರೆಲಿ ನೋಡಿ ಅದರ ಮೇಲೆ ಪ್ರೀತಿಯಾಗಿ ಅದರ ಮೊದುವೆ ಆತ್. ಒಂದು ದಿನ ಏನೋ ಕೆಲ್ಸದ ಮೇಲೆ ಅಂವ ಇಂದ್ರನ ಲೋಕಕ್ಕೆ ಹೋಗಿತ್ತ್. ಅಂವಂಗೆ ಅಂದ್ ತನ್ನ ಮನೆಗೆ ಹಿಂದೆ ಬಾಕೆ ಬೊತ್ತಾತ್. ಅಂದ್ ಅವನ ಹೆಣ್ಣ್ ತಿಂಗಳ ಸೂತಕದ ನಾಲ್ಕನೇ ದಿನದ ಸುದ್ದ ನೀರ್ ಮಿಾಯುವ ದಿನ. ಅಂದ್ ಗಂಡ ಹೆಣ್ಣ್ ಮಿಲನ ಆದರೆ ಒಳ್ಳ ಮಕ್ಕ ಹುಟ್ಟುವೊಂತ ಜೆನ ನಂಬಿದ್ದೊ. ಹೀಂಗೆ ತನಿಗೆ ಹೆಣ್ಣಿಗೆ ಗರ್ಭಾಧಾನ ಮಾಡಿಕೆ ಆಗದಾಂಗೆ ಆತಲೇಂತ ಅಂವ ಬೇಜಾರ.:.ಲಿ ಯೋಚನೆ ಮಾಡಿಕ.:.ಂಡ್

ಇರ್‌ಕನ ಅವಂಗೆ ವೀರ್ಯಸ್ಖಲನ ಆಗಿ ಬುಟ್ಟಿ.:.ತ್. ಪ್ರಜೋತ್ಪತ್ತಿಯಾವಂತ ವೀರ್ಯನ ಒಂದಿಷ್ಟೂ ಹಾಳ್ ಮಾಡಿಕೆ ಆಗ.:.ದ್‌ಂತ ಹಿಂದೆನೊವು ಬಲವಾಗಿ ನಂಬಿದ್ದೊ. ಹಾಂಗೆ ಅಂವ ಅದರ ಒಂದು ಚಿರಿಬಾಳೆಲೆಲಿ ಹಾಕಿ ಮುದ್ದೆ ಮಾಡಿ, ತಾನ್ ಸಾಂಕಿದ್ದ ಗೀಣನ ಕೊಕ್ಕುಲಿ ಸೆಕ್ಕ್‌ಸಿ 'ಇದರ ನನ್ನ ಹೆಣ್ಣಿಗೆ ಕೊಡು'ಂತ ಹೇಳಿ ಅದರ ಹಾರ್‍ಸಿ ಬುಟ್ಟಿ.:.ತ್.

ಆ ಗೀಣ ಹಾರಿಕ.:.ಂಡ್ ಯಮುನಾ ನದಿನ ಹಕ್ಕಲೆ ಬಾಕನ ಒಂದು ಗಿಡ್‌ಜ, ಅದರ ಬೆರ್‍ಸಿಕ.:.ಂಡ್ ಬಂದ್ ಅದ್ಕೆ ಮೆಟ್ಟಿ ಕೊಡ್ಪಿ ಗಾಸಿ ಮಾಡ್‌ಕನ ಚಿರಿ ಬಾಳ್‌ಲೆಲಿದ್ದ ವೀರ್ಯ ಹಳ್ಳಕೆ ಬಿದ್ದ್ ಬುಟ್ಟ.:.ತ್. ಅದರ ಒಂದು ಬಾಳೆಮೀನ್ ನುಂಗಿಬುಟ್ಟ.:.ತ್. ಅದರ್‌ಂದ ಆ ಮೀನ್ ಬೊಸ್‌ರಾತ್.

ಕಾಲಕ್ರಮ.:.ಲಿ ಒಬ್ಬ ಮುಗ್ಯ ಆ ಹಳ್ಳ.:.ಲಿ ಬಲೆಬೀಸಿಕ.:.ಂಡ್ ಬಾಕನ ಆ ಮೀನ್ ಅವನ ಬಲೆಗೆ ಸಿಕ್ಕಿ ಬೀತ್. ಮೀನ್ ದೊಡ್ಡ.:.ದಾಗಿತ್ತ್. ಹಾಂಗೆ ಆ ಮುಗ್ಯ ಅದರ ಅವ್ಕೆಲ್ಲ ರಾಜ ಆಗಿದ್ದ ದಾಶರಾಜನಲ್ಲಿಗೆ ತಕ.:.ಂಡ್ ಹೋಗಿ ಅವಂಗೆ ಒಪ್ಪುಸಿತ್. ಕುತೂಹಲಂದ ಅವು ಆ ಮೀನ್‌ನ ಸೀಳಿ ನೋಡ್‌ಕನ ಅದರ ಹೊಟ್ಟೆಲಿ ಒಂದು ಹೆಣ್ಣ್ ಮತ್ತೆ ಒಂದು ಗ.:.ಂಡ್ ಕೂಸು ಇರ್ದರ ಕಂಡ್ ಸಂತೋಸುಲಿ ಆ ಅವುಳಿ ಮಕ್ಕಳ ಹೊರೆಗೆ ತೆಗ್ದ್. ಮೀನ್‌ನ ಹೊಟ್ಟೆಲಿದ್ದವರ್‌ಂದ ಮೀನ್‌ನ ವಾಸನೆಂದ ಕೂಡಿದ್ದದರ್‌ಂದ, ಮತ್ಸ್ಯಗಂಧಿ, ಮತ್ಸ್ಯಗಂಧಂತ ಹೆಸರ್ ಹಾಕಿ ಪ್ರೀತಿಂದ ಸಾಂಕ್ಯಂಡ್ ಇದ್ದೊ. ಹೆಣ್ಣ್ ಕೂಸು ಪೊರ್ಲು ಇರುದರ್‌ಂದಾಗಿ, ಅದ್ಕೆ ಸತ್ಯವತಿಂತ ಇನ್ನೊಂದು ಹೆಸ್‌ರುನೂ ಇಸಿದೊ. ಮಕ್ಕಳ ಕೊಂಡಾಟ.:.ಲಿ ಬೆಳ್ಸಿದೊ.

ಸಣ್ಣ ಕೂಸುಗಾಗಿದ್ದೊವು ಶುಕ್ಲಪಕ್ಷದ ಚೆಂದ್ರನಾಂಗೆ ದಿನಾಂದಿನಕೆ ಬೆಳ್ದ್, ಹೈದ, ಗೂಡೆಂತ ಹೇಳುವಷ್ಟರ ಮಟ್ಟಿಗಾದೊ. ಗೂಡೆ ಮೈ ಕೈ ತುಂಬಿಕ.:.ಂಡ್ ಪೊರ್ಲುನ ಗ.:.ನಿನಾಂಗೆ ಕಾಂಬತಿತ್ತ್. ಕೇದೆಗೆ ಬಣ್ಣದ ಮೈಕಾಂತಿ, ಚಂದ್ರನ ಮೀರ್‍ಸುವ ದುಂಡಗಾದ ಮೋರೆ, ಅದರ್ಲಿ ಸಂಪೆಗೆ ಹೂವುನೆಸ.:.ಳ್‌ನಾಂಗಿರುವ ಮೂಕು, ಕನ್ನಡದ ಶ್ರೀಕಾರ ಬರ್‍ದಾಂಗಿರುವ ಕೆಬಿ, ತೊಂಡೆ ಹಣ್ಣ್‌ನಾಂಗೆ ಕೆಂಪಾದ ತುಟಿ, ನೋಡೊವ್ಕೆ ಹುಚ್ಚ್ ಹಿಡ್ಸಿಕೆ ಇಷ್ಟೇ ಸಾಕ್, ಇನ್ನ್ ದೃಷ್ಟಿ ಕೆಳೆಗೆ ಇಳ್ದರೆ, ಸಂಕದಾಂಗೆ ನುಣುಪಾದ ಗಂಟ್ಲ್, ರಸಬಾಳೆ ದ.:.ಂಡ್‌ನಾಂಗೆ ಮಿರಮಿರ ಮಿರುಗುವ ತೋಳುಗ, ನೋಡ್ದೊವು ಅವೊಮ್ಮೆ ನಮ್ಮ ಬಿಗಿಯಾಗಿ ಸುತ್ತಿ ಹಿಡ್ಕಂಡಿದ್ದರೆ ಹೇಂಗಿರ್ದುಂತ ಮೈ ಮರ್‍ತ್ ಸೊಯ ತೊಪ್ಪಿದಾಂಗೆ ನಿಲ್ಲುವೋ. ಬಾಳೆಂದ ಹೊರ್‍ಟ್ ಬಾವ ಪೂಂಬೆನಾಂಗೆ ಎದ್ದ್ ಕಾಂಬ ಮಿಡಿಮೊಲೆಗಳ ಮೇಲೆ ಬಿದ್ದ ದೃಷ್ಟಿನ ಹಿಂದೆ ಎಳಿಯಕಾಗದೆ ಚಡಪಡ್ಸುವ ದಾರಿಹೋಕ ಜವ್ವನರ್, ಹೀಂಗೆ ಸರ್ವಾಂಗ ಸುಂದರಿಯಾದ ಮತ್ಸ್ಯಗಂಧಿಗೆ ವಾಸನೆಯೊಂದು ದೊಡ್ಡ ಕೊರತೆಯಾಗಿದ್ದರೂ, ಅದರ ನೋಡೊವ್ಕೆ ಅದ್ ಗೋಚರಕ್ಕೆ ಬಾತಿತ್ಲೆ. ಗೂಡೆಗಳ

ಪೊರ್ಲುಗೆ ಹುಚ್ಚು ಕ.ಟ್ಟದ ಗ.ಣ್ಮಕ ಲೋಕ.ಲಿ ಯಾರಾರ್ ಸಿಕ್ಕುವೆನೋ? ಇನ್ನ್ ಮತ್ಸ್ಯಗಂಧಿನ ಒಡಹುಟ್ಟು ಮತ್ಸ್ಯಗಂಧನೂ ಎಳೆಜವ್ವನದ ಕುರುಹಾಗಿ, ಚಿಗ್‌ರ್ ಮೀಸೆ, ಗಡ್ಡಗ ಮೂಡಿಬಂದ್‌ಕ.ಂಡ್ ಇದ್ದಂವಾಗಿ ಪೊರ್ಲುಟ ಕಾಂಬತಿತ್ತ್.

ಸತ್ಯವತಿ ಪರಾಶರ ಸಮಾಗಮ ವೇದ ವ್ಯಾಸ ಜನನ

ಸತ್ಯವತಿ ಸುಮ್ಮನೆ ಕುದ್ದ್‌ಕ.ಂಡ್ ಕಾಲಹರಣ ಮಾಡುವ ಬದ್‌ಲ್ ಜನಕ್ಕೆ ಏನಾರ್ ಉಪಯೋಗದ ಕೆಲ್ಸ ಮಾಡೊನೋಂತ ಹೇಳಿಕ.ಂಡ್ ಹಳ್ಳದ ಕರೆಲಿ ದೋಣಿ ದಾಟುವ ಪೊರಿಲಿ ಕುದ್ದ್‌ಕ.ಂಡ್ ಆಚೀಚೆ ಹೋವರ ದೋಣಿಲಿ ಹಳ್ಳ ದಾಟ್ಸಿಕ.ಂಡ್ ಇರ್‌ತ್ತಿತ್ತ್. ಇದ್‌ಕ್ಕೇನೂ ಶುಲ್ಕ ತಕಣದೆ ಧರ್ಮಾರ್ಥ ಸೇವಾ ರೂಪ.ಲಿ ಮಾಡ್‌ತಿತ್ತ್.

ಹೀಂಗಿರ್ಕನ ಒಂದು ದಿನ ಆ ದಾರಿಯಾಗಿ ಪರಾಶರಂತ ಹೆಸ್‌ರಿರುವ ಒಬ್ಬ ಅಜ್ಜ ರುಸಿ ಬಾತ್. ಅವಂಗೆ ಎರ್ಡ್ ಮೊಳ ಉದ್ದದ ಗಡ್ಡ ಬೆಳ್ದಿತ್. ಅದರ ಎಲ್ಲ ರೋಮಂಗಳೂ ಬೆಳ್ಳಂಗೆ ನರ್ತ್ ಹೋಗಿತ್ತ್. ಕೊಡಿಲಿ ಅದ್ ಕೆಂಚಿಬಣ್ಣಕ್ಕೆ ತಿರ್ಗಿ ಹಣ್ಣಾಮುರ್‌ಂಟಿಕ.ಂಡ್ ಇತ್ತ್. ರುಸಿ ಆಗಾಗ ಅವನ ಎಡ್ಡ ಕ.ಯಿಂದ ಗಡ್ಡನ ನೇವರಿಸಿಕ.ಂಡ್ ಇರ್‌ತ್ತಿತ್ತ್. ದೋಣಿನ ಒಂದು ಕೊಡಿಲಿ ಚುಕ್ಕಾಣಿ ಹಿಡ್ಕಂಡಿದ್ದ ಗೂಡೆನ ಪಿಳಿಪಿಳಿ ಕ.ಣ್ಣ್ ಬುಟ್ಟ್‌ಕಂಡ್ ನೋಡಿ ನಮ್ಮ ಆಚೆ ಕರೆಗೆ ದಾಟ್ಸ್‌ಂತ ಹೇಳ್ತ್. ಅದಿಕೆ ಸತ್ಯವತಿ ದೋಣಿ ತುಂಬ ಜೆನ ಇದ್ದರೆ ಮಾತ್ರ ದೋಣಿ ಹೊರ್ಡುದು. ಒಬ್ಬೊಬ್ಬರಿಗಾಗಿ ಹೊರ್ಡ್‌ಕಿಲೆಂತ ಹೇಳ್ತ್. ಅದಿಕೆ ರುಸಿ "ನಾ ಒಬ್ಬಾದರೂ ಹತ್ತ್ ಜನಕೆ ಸಮತೂಗುವೆಂತ" ಹೇಳ್ತ್. "ಸ.ರಿ ಹಂಗರೆ ಹತ್ತಿ ದೋಣಿಗೆ"ಂತ ಸತ್ಯವತಿ ಹೇಳ್ತ್. ರುಸಿ ದೋಣಿಗೆ ಹತ್ತಿ ಕುದ್ದ.ತ್ ಸತ್ಯವತಿ ಚುಕ್ಕಾಣಿ ಒಚ್ಚಿಕೆ ಸುರುಮಾಡ್ತ್. ದೋಣಿ ಆಚೀಚೆ ಮಾಲಿಕ.ಂಡ್, ಹಣ್ಣಿಣ್ಣೇ ಮುಂದೆ ಹೋಕೆ ಸುರಾತ್. ಈಗ ರುಸಿನ ಮನ್‌ಸೂ ಅಸ್ಥಿರ ಆಕೆ ಸುರಾತ್. ಬುಟ್ಟ ಕ.ಣ್ಣ್‌ನ ರೆಪ್ಪೆ ಹೊಡಿಯದೆ ಅಂವ ಗೂಡೆನ ಪೊರ್ಲುನ ಆಸ್ವಾದ ಮಾಡುದರ್ಲೇ ತಲ್ಲೀನ ಆತ್. ಅದರ ಅಂಗಾಂಗಳ ನೋಡಿ ನೋಡಿ ಅಂವ ಹುಚ್ಚಾತ್, ತನ್ನಂತ ಜ್ಞಾನಿಗೆ ಈ ಅವಸ್ಥೆ ಉಂಟಾಕೆ ಆಗ.ದ್, ಆದರೆ ಹೀಂಗೆ ಆದರ್ಲಿ ಏನೋ ಒಂದು ಮಹತ್ವದ ಘಟನೆಗೆ ಕಾರಣ ಆಡ್‌ಂಗಿರ್ದು. ಈ ಲೋಕೋತ್ತರ ಸುಂದರಿನೊಟ್ಟಿಗೆ ನನ್ನ ಮಿಲನ ಆಗಿಯೇ ತೀರೊಕು. ಆದರೆ ನೊಡು ಹಳ್ಳಲಿ, ಎಲ್ಲ ತೆರ್ದಿರುವ ಜಾಗೆಲಿ ಆದ್ ಹೇಂಗೆ ಸಾಧ್ಯ? ಇಷ್ಟ್ ಒಳ್ಳೆ ದೇಹ ಸೌಂದರ್ಯ ಇರುವ ಗೂಡೆನ ಮೈನ ವಾಸನೆ ತಡಿಯಕೆ ಆದುಲೆ. ಅದರ ನನ್ನ ಮಂತ್ರ ಬಲಂದ ನಾ ಇಲ್ಲದೆ ಮಾಡಿ, ಅದರ ಮೈನ ಮಧುರ ವಾಸನೆ ಯೋಜನದಷ್ಟ್ ದೂರಕೆ ಬಾವಾಂಗೆ ಅದಿಕೆ ವರ ಕೊಟ್ಟನೆ. ಈಗ ಮತ್ಸ್ಯಗಂಧಿ

ಆದ್ದ್ ಅದ್ ಮುಂದೆ ‘ಯೋಜನ ಗಂಧಿ’ ಆಗ.:.ಲಿ.

ಈಗ ರುಸಿ ಗೂಡೆನೊಟ್ಟಿಗೆ ಮಾತಾಡಿಕೆ ಸುರು ಮಾಡ್ತ್. “ಹೇ ಕನ್ಯಾಮಣಿ, ನಿನ್ನ ಲೋಕೋತ್ತರ ಸೌಂದರ್ಯಕೆ ನಾ ಸೋತೆ. ನಿನ್ನೊಟ್ಟಿಗೆ ಮಿಲನ ಹೊಂದಿ ನನ್ನ ಬಯಕೆನ ಪೂರ್ತಿ ಮಾಡಿಕಣೊಕು. ನೀ ಪೂರ್ಣ ಮನ್ಸ್‌ಂದ ನನ್ನ ಆಸೆನ ನಡ್ಸಿಕೊಡಿಕೆ ಒಪ್ಪೊಕು. ಏನೇಳಿಯ?”

“ಪೂಜ್ಯರೇ ನನ್ನ ಅಪ್ಪಂಗೆ ಅಪ್ಪ ಆವ ವಯಸ್ಸ್‌ನೊವು ನೀವು. ನೀವ್ಗೆ ನನ್ನ ವಿಷಯ.:.ಲಿ. ಇಂತ ಭಾವನೆ ಬರ.:.ಕ? ನಾ ಇದ್‌ಕೆ ಹೇಂಗೆ ಒಪ್ಪುದು. ಒಂದು ಹೆಣ್ಣ್‌ನ ಹಿರಿಯೊವು ಅದರ ಯೋಗ್ಯವಯಸ್ಸ್‌ಲಿ ಸ.:.ರಿಯಾದ ಗ.:.ಂಡ್‌ನ ಹುಡ್‌ಕಿ, ಶಾಸ್ತ್ರ ರೀತಿಂದ ಧಾರೆಯೆರ್ದ್ ಕೊಟ್ಟ ಮೇಲೆ ಅವರಿಬ್ಬರೊಳಗೆ ಮಿಲನ ಕಾರ್ಯ ನಡೆವಂತ.:.ದ್ ಲೋಕರೂಢಿ. ಅದಲ್ಲದೆ ಯಾರೋ ಅಪರಿಚಿತ ಗ.:.ಂಡ್ ಮತ್ತು ಹೆಣ್ಣ್ ಹೀಂಗೆ ಸೇರೊಕುಂತ ನಿಮ್ಮಂತೊವು ಹೇಳುದು ಎಷ್ಟ್ ಸ.:.ರಿ?”

“ನಾ ಈಗ ಹೇಳುವ ವಿಚಾರ ಏನೂ ತಿಳಿಯದೆ ಹೇಳುದು ಅಲ್ಲ. ಇನ್ನ್ ಮುಂದೆನ ಯುಗ.:.ಲಿ ಮಹಾಜ್ಞಾನಿಯೊಬ್ಬ ಬಹಳ ದೊಡ್ಡ ಕಾರ್ಯನ ಮಾಡೊಂವ, ಪ್ರಪಂಚಕೆ ಆದರ್ಶನ ಬೋಧಿಸುವ ಗ್ರಂಥ ರಚನೆ ಮಾಡುವ ಸಾಮರ್ಥ್ಯ ಇರುವ ಮಹಾಪುರುಷ ನನ್ನ ಮತ್ತು ನಿನ್ನ ಸಂಯೋಗಂದ ಹುಟ್ಟಿ ಬಾವ ಕಾಲ ಈಗ ಸನ್ನಿಹಿತ ಆಗುಟುಂತ ನನ್ನ ಜ್ಞಾನ ದೃಷ್ಟಿಗೆ ಗೋಚರ ಆದೆ. ಇದರ ತಡಿಯಕೆ ಆಗ.:.ದ್. ಇದೊಂದು ಪುಣ್ಯ ಕಾರ್ಯ ಇದರ್ಲಿ ನೀ ಸಮಭಾಗಿಯಾಕು. ಇದ್ ದೈವಪ್ರೇರಣೆಂದ ಆವ ಕಾರ್ಯ. ಅದೋ ನೋಡು ಹಳ್ಳದ ನೋಡುಲಿ ಒಂದು ಉಳಿಯ ಕಂಡದೆಲೆ. ಪಡದ ದೈಗೆಲ್ಲ ಬೆಳ್ದ್ ಹಸ್‌ರ್ ಹಸ್‌ರಾಗಿ ಕ.:.ಣ್ಣಿಗೆ ತೊಂಪು ಕೊಡುತ್ತಾ ಒಳೊ. ಅವುಗಳ ನೆಳ.:.ಲ್‌ಲಿ, ಪೊಯ್ಯೆ ಮೇಲೆ ಬಿದ್ದ್, ಹಾಯಾಗಿ ವಿಶ್ರಮಿಸಿಕೆ ಪ್ರಶಸ್ತವಾಗಿ ಉಟ್ಟು. ನೀ ದೋಣಿನ ಅಲ್ಲಿಗೆ ತಕಂಡ್ ಹೋಗಿ ಕರೆಲಿ ಕ.:.ಟ್ಟಿ ಹಾಕ್. ಬೇಗ ಅಲ್ಲಿಗೆ ಪೋಯಿ ಶುಭ ಮುಹೂರ್ತ ಕಾಲ ತೊಪ್ಪಿ ಹೋಕೆ ಆಗ.:.ದ್.

ರುಸಿ ಹೇಳ್ದಾಂಗೆ ಸತ್ಯವತಿ ದೋಣಿನ ಉಳಿಯದ ಕರೆಗೆ ತಕ.:.ಂಡ್ ಹೋಗಿ ಕರೆಲಿದ್ದ ಒಂದು ಗ.:.ಟ್ಟಿಯಾಗಿದ್ದ ದೈಗೆ ಕ.:.ಟ್ಟಿ ಹಾಕಿತ್. ರುಸಿ ಕೆಳಗಿಳ್ದ್ ಅದರ ಕೈ ಹಿಡ್ಕಂಡ್ ಸುತ್ತೋಳು ದೈಗ ಮರೆ ಕ.:.ಟ್ಟಿದಾಂಗಿದ್ದ್ ಒಳಗೆ ಬುಡ್‌ಜಾಗೆನಾಂಗೆ ಇದ್ದಲ್ಲಿಗೆ ಸತ್ಯವತಿನ ಕರ್ಕ.:.ಂಡ್ ಹೋಗಿ ಅದರ ಕುದ್ದ್‌ರ್ಸಿತ್. ಅದರ ಅಂಗಾಂಗಳ ಮುಟ್ಟಿ ಮುಟ್ಟಿ ಮೃದು ಸ್ಪರ್ಶದ ಸುಖನ ಅನುಭವ್ಸಿ, ಅದರ ಅಂಗಾತ ಮಲ್ಗ್‌ಸಿ, ಸಂಭೋಗ ಕಾರ್ಯನ ಸುರು ಮಾಡ್ತ್. ಸತ್ಯವತಿ ಊಂ.....ತ ನರ್ಕಿತ್. ಹಣ್ಣ್ ಹೊತ್ತು ಕ.:.ಳ್ದ್ ರುಸಿ ಆನಂದದ ಹೂಂಕಾರ ಮಾಡಿ, ಸತ್ಯವತಿನ ಬುಟ್ಟ್ ಆಚೆ ಹೊರಳಿ ಮಲ್ಗಿತ್. ಹಣ್ಣ್ ಹೊತ್ತು ಇಬ್ಬೊರೂ ಮೂರ್ಛೆಲಿದ್ದಾಂಗೆ ಇದ್ದ್

ಮತ್ತೆ ಎದ್ದೊ. ಅಷ್ಟರ್ಲಿ ಸತ್ಯವತಿ ಒಂದು ಗ∴ಂಡ್ ಕೂಸುನ ಹೆತ್ತ್∴ತ್. ದೈವಿಕ ಮಹಿಮೆ ಅಲ್ಲೋ. ಆ ಕೂಸು ಆಗ∴ಳೇ ಬೆಳ್ದ್ ಗಡ್ಡ ಮೀಸೆ ಬಂದ ಹೈದನಷ್ಟಕಾತ್. ಅವನ ಮೈ ಬಣ್ಣ ಕ∴ಪ್ಪಿದ್ದರ್‌ಂದ ಪರಾಶರ ಅವಂಗೆ ಕೃಷ್ಣಂತ ಹೆಸ್‌ರ್ ಕೊಟ್ಟ∴ತ್, ದ್ವೀಪ∴ಲಿ (ಉಳಿಯ) ಹುಟ್ಟಿದ ಕಾರಣ ಈ ಹೆಸರ್‌ನೊಟ್ಟಿಗೆ ದ್ವೈಪಾಯನಂತೇಳ್ವ ಉಪನಾಮವೂ ಇದ್‌ಕೆ ಸೇರುದು. ಇಂವನ ನಾ ನನ್ನ ಆಶ್ರಮಕೆ ಕರ್ಕ∴ಂಡ್ ಹೋನೆ. ನಿನ್ನ ಕನ್ಯಾಭಾವಕ್ಕೇನೂ ಕುಂದುಂಟಾಕಿಲೆ. ನಿಂಗೆ ಮುಂದೆ ಮಹಾರಾಣಿಯಾಗುವ ಯೋಗ ಉಟ್ಟು. ನಿಂಗೇನಾರ್ ಸಂಕಟ ಒದ್‌ಗಿರೆ ನೀ ಇವನ ನೆನ್ಸಿಕ. ಅಂವ ಬಂದ್ ಅದರ ಪೊರಿಹರ್ಸಿ ಕೊಡುದು, ಇನ್ನ್ ನಾ ಹೋನೆ. ನೀ ನಿನ್ನ ನಿತ್ಯ ಕಾರ್ಯಗಳ ಮಾಡಿಕ∴ಂಡ್ ಇರ್, ನಿಂಗೆ ಮಂಗಳವಾಗ∴ಲಿಂತೇಳಿ ರುಸಿ ಅವನ ಮಜ್ಜನ ಕರ್ಕ∴ಂಡ್ ಹೋತು. ರುಸಿ ಅದರ ಬುಟ್ಟ ಮೇಲೆ ಸತ್ಯವತಿ ಸೀದಾ ಮನೆಗೆ ಬಾತ್. ಅದರ ಅಪ್ಪನೊಟ್ಟಿಗೆ ಎಲ್ಲ ಸಂಗ್ತಿನ ಹೇಳ್ತ್. "ಅಪ್ಪ ನಾ ದೋಣಿ ದಾಟ್ಸುವ ಕೆಲ್ಸಲಿರ್‌ಕನ ಒಬ್ಬ ಜೋಲು ಗಡ್ಡದ ನರ್ಪೆಲ ರುಸಿ ಬಂದ್ ನನ್ನ ಆಚೆ ಕರೆಗೆ ದಾಡ್ಸ್‌ಂತ ಹೇಳ್ತ್. ಇನ್ನು ಹಳ್ಳಾ ಜೆನ ಇಲ್ಲದೆ ದೋಣಿ ನಡಿಯಕಿಲೆಂತ ಹೇಳ್ದೆ. ನಾ ಅಷ್ಟು ಜೆನದ ಭಾರಕೆ ಸ∴ರಿ ಆವೆ. ನೀ ದೋಣಿನ ಹೊರ್ಡ್ಸ್‌ಂತ ಹೇಳ್ತ್. ನಾ ಒಬ್ಬನೇ ಆಗಿ ಸಿಕ್ಕೊಕುಂತ ಅವನ ಉಪಾಯನೋ ಏನ್‌ಂತ ಸೊಂಸೆಯ ಬಂದರೂ, ಹಾಂಗೇನೂ ಇರಿಕಿಲೆ. ರುಸಿ ಅಲ್ಲೋಂತ ಅಂವನ ದೋಣಿಗೆ ಹತ್ತಿಕೆ ಹೇಳಿ ದೋಣಿ ನಡ್ಸಿಕೆ ಸುರು ಮಾಡ್ದೆ. ಹಳ್ಳದ ನೊಡುಗೆ ಎತ್ತ್‌ಕನ ಅವನ ರಾಮಾಯಣ ಸುರು ಮಾಡ್ತ್. 'ಮುಂದೆನ ಯುಗ∴ಲಿ ಒಬ್ಬ ಮಹಾಪುರುಷ ಉಂಟಾದ್ಯಕೆ ಈಗ ಕಾಲ ಸನ್ನಿಹಿತ ಆಗುಟು ಅಂವ ಉದ್ಭವ ಆಕೆ ನೀನು ನಾನೂ ಭಾಗಿಗ ಆದವೆ. ಇಂತ ಪುಣ್ಯಕಾರ್ಯ∴ಲಿ ನೀ ಏನೂ ಅಡ್ಡಿಮಾಡದೆ ಸಮಭಾಗಿ ಆಕುಂತ ಹೇಳಿ ನನ್ನ ಬಾಯೆ ಮುಚ್ಚ್‌ಸಿತ್. ಮತ್ತೆ ಹಳ್ಳದ ನೋಡುಲಿ ಪಡದ ದೈಗ ತುಂಬಿ ನೊಡುಲಿ ಬೊಳ್ಳಡೆಯಾಗಿದ್ದ ಜಾಗೆಗೆ ನನ್ನ ಕರ್ಕಂಡ್ ಹೋಗಿ ನನ್ನೊಟ್ಟಿಗೆ ಸಂಭೋಗ ಕ್ರಿಯೆ ನಡ್ಸಿತ್. ಅದಾಗಿ ಹಳ್ಳಾ ಹೊತ್ತುಲಿ ನಂಗೊಂದು ಗ∴ಂಡ್ ಕೂಸು ಹುಟ್ಟಿತ್. ಹುಟ್ಟಿದ ಕೂಡ್ಲೇ ಅಂವ ಹತ್ತ್ ಹನ್ನೆರ್ಡ್ ವೊರ್ಸದ ಮಕ್ಕಳಷ್ಟು ದೊಡ್ಡಂವಾಗಿ ಬೆಳ್ತ್. ರುಸಿ 'ಇಂವ ಮುಂದೆನ ಯುಗ∴ಲಿ ಭಾರಿ ದೊಡ್ಡ ವ್ಯಕ್ತಿಯಾಗಿ ಬೆಳಿದು. ವೇದಗಳ ಕ್ರಮವಾಗಿ ನಾಲ್ಕ್ ವಿಭಾಗ ಮಾಡಿ ಇಸುದರ್‌ಂದಾಗಿ ವೇದವ್ಯಾಸಂತ ಹೆಸರ್‌ಪಡಿದು. ಕುರು ಪಾಂಡವ ಕುಲಕೆ ಮೂಲ ಪುರುಷ ಆಗಿರ್ದು. ಆ ಎರ್ಡ್ ಕುಟುಂಬಗಳ ನೊಡುವೆ ರಾಜ್ಯಕ್ಕಾಗಿ ಘನಘೋರ ಯುದ್ಧ ನಡಿದು, ಅದಿಕೆ ಸಂಬಂಧಪಟ್ಟ ಚರಿತ್ರೆನ ಎಲ್ಲಾ ಮಹಾಭಾರತಂತೇಳ್ವ ಕಾವ್ಯ ರಚನೆ ಮಾಡ್ದು.ಇವನ ಬಣ್ಣ ಕ∴ಪ್ಪಿರುದರ್‌ಂದ ಇವಂಗೆ 'ಕೃಷ್ಣ'ತ ನಾ ಹೆಸರ್ ಕೊಟ್ಟನೆ.ದ್ವೀಪಲಿ ಹುಟ್ಟಿದರ್‌ಂದ ದ್ವೈಪಾಯನಂತೇಳ್ವ ಉಪನಾಮವೂ ಅದ್ಕೆ ಸೇರುದು. ನಿನ್ನ ಕನ್ಯತ್ವಕ್ಕೇನೂ

ತೊಂದರೆ ಇಲ್ಲದೆ ನೀ ಮುಂದೆನಾಂಗೆ ಇರುವ, ನಿಂಗೆ ಏನಾರ್ ತೊಂದರೆ ಬಾಕನ ಇವನ ನೆನ್ಸಿಕಂಡರೆ ಕೂಡ್ಲೇ ಬಂದ್ ಅದರ ಪೊರಿಹರ್ಸಿ ಕೊಡುದು. ಈಗ ನಾ ಅವನ ಕರ್ಕ∴ಂಡ್ ಹೋನೆ. ನಿಂಗೆ ಮುಂದೆ ಸಾಮ್ರಾಜ್ಞಿಯಾಗುವ ಯೋಗ ಉಟ್ಟು. ನಿಂಗೆ ಎಲ್ಲ ಒಳ್ಳ∴ದಾಗ∴ಲಿ, ನೀ ಹೋಗಿ ಬಾ. ನಿಂಗೆ ಮಂಗಳವಾಗಲಿ, ನಾ ಇನ್ನ್ ಹೋನೆಂತ ಹೇಳಿ ಅಂವ ಹೊರ್ಟ್ ಹೋತು.

ಶಂತನು – ಸತ್ಯವತಿ ಭೇಟಿ

"ಇನ್ನ್ ನಾ ದೋಣಿ ದಾಡ್ಸುವ ಕೆಲ್ಸಕೆ ಹೊದುಲೆ. ನನ್ನಂತ∴ವು ದಾರಿಕರೆಲಿ ಕುದ್ದ್ಕ∴ಂಡ್ ಇದ್ದರೆ ಹೋವು ಬಾವು ಎಲ್ಲ ಒಂದೊಂದು ಕ∴ಣ್ಣ್ ಹಾಕದೆ ಬುಡಿಕಿಲೆ. ಈ ಜೋಲು ಗಡ್ಡದ ನರ್ಪಲ ಮುನಿಗೆ ಮನ್ಸ್ ಅಷ್ಟ್ ಚಂಚಲ ಆಗಿ ಅಂವ ಅಂಥ ಕೆಲ್ಸಕ್ಕಿಳಿಯೊಕುಂತಾದರೆ ಇನ್ನ್ ಜವ್ವಣ∴ರ್ ಸುಮ್ಮನಿರುವೊನೋ? ಅದಿಕೆ ಬೇಕಾಗಿ ನಾ ಇನ್ನ್ ಮನೆಲೆ ಇದ್ದ್ಕ∴ಂಡ್ ಏನಾರ್ ಮನೆಕೆಲ್ಸಗಳ ಮಾಡಿಕ∴ಂಡ್ ಇದ್ದನೆ, ಆಗ∴ದೋ ಅಪ್ಪಾ?ಂತ ಸತ್ಯವತಿ ಅದರ ಅಪ್ಪನ ಕೇಳ್ತ್. ಅಪ್ಪನೂ ಒಪ್ಪಿತ್. ಈಗ ಆದ್ದೆಲ್ಲಾ ಒಂದು ರೀತಿಂದ ಒಳ್ಳ∴ದೇ ಆತ್. ಎಲ್ಲ್ಯಾರ್ ಅಂವ ಕೂಸುನ ಬುಟ್ಟ್ ಹೋಗಿದ್ದರೆ ಎಲ್ಲೊವು ಇಂವ ಯಾರ ಕೂಸುಂತ ಕೇಳಿಕ∴ಂಡೇ ಇದ್ದಿರುವೊ. ನಿನ್ನ ಬಗ್ಗೆ ಅವರ ಮನ್ಸ್‌ಲಿ ದೊಡ್ಡ ಸೊಂಸಯ ಒಳ್ದಿರುದು. ಹಾಂಗಿರ್ಕನ ನಿನ್ನ ಮೊದುವೆ ಆಕೆ ಯಾರೂ ಮುಂದೆ ಬಾಕಿತ್ತ್‌ಲೆ. ಹೀಂಗೆ ಆ ರುಸಿ ಒಂದು ಉಪಕಾರನೇ ಮಾಡ್ತ್. ಸತ್ಯವತಿ ಕೇಳ್ತ್. "ಹಂಗರೆ ಮೊದುವೆ ಆಗದೊಕ್ಕೆ ಮಕ್ಕ ಹುಟ್ಟಿರೆ ಅವರ ಯಾರೂ ಮೊದುವೆ ಆಕಿಲೆನೊ?". ದಾಶರಾಜ ಹೇಳ್ತ್ "ಅದರ್ಲಿ ಸೊಂಸಯನೇ ಇಲ್ಲೆ. ಒಂದು ವೇಳೆ ಹಾಂಗೆ ಆದರೆ ಅ ವಿಷಯನ ಎಂತಾ ಆಪ್ತರೊಟ್ಟಿಗು ಹೇಳದೆ ಗುಟ್ಟುಲೇ ಇಸಿಕ∴ಣೊಕು." ಸತ್ಯವತಿ ಈ ಗುಟ್ಟು ಮಾತ್‌ನ ಮನ್ಸಲೇ ಗ∴ಟ್ಟಿ ಮಾಡಿಕಣ್ತ್.

ಶಂತನು ಅಂತಃಪುರಲೇ ದೀರ್ಘಕಾಲ ಗಂಗೆನ ವಿರಹಾವಸ್ಥೆಲೇ ಕೊರ್‌ಗಿಕ∴ಂಡ್ ಇದ್ದ್ಂವ ಹಳ್ಳಿಳ್ಳಿ ಅದರ್‌ಂದ ದೂರ ಆಕೆ ಸುರಾತ್. ಮನೆಲೇ ಕುದ್ದ್ಕ∴ಂಡ್ ಇರ್ದು ಸಾಕಾಗಿ ಇನ್ನ್ ಕಾಡಿಗೆ ಬೇಟೆಗಾರ್ ಪೋಯಿಂತ ಹೊರ್ಟಿ∴ತ್. ಕಾಡ್‌ಲಿ ನಾಲ್ಕ್ ಹಜ್ಜೆ ನಡಿದೇ ಸೈ, ಅವನ ಮೂಕಿಗೆ ಗಮ್ಮಾಂತ ಒಂದು ಒಳ್ಳೆ ಪೊರಿಮಳ ಬಂದ್ ಆಶ್ಚರ್ಯ ಆತ್. ಮುಂದೆ ಮುಂದೆ ಹೋದಾಂಗೆ ಅದು ಒಳ್ಳ ದಟ್ಟ ಆದಾಂಗೆ ಅವನ ಮನ್‌ಸಿಗಾತಿತ್ತ್.

ಅಂದ್ ಬೊಳ್ಪಿಗೆ ಎಂದ್‌ನಾಂಗೆ ಮನೆ ಕೆಲ್ಸನೆಲ್ಲ ಮುಗ್‌ಸಿ, ಇನ್ನ್ ಕಾಡಿಗೆ ಹೋಗಿ ಹೂ ಹಣ್ಣ್‌ಗಳ ಎಲ್ಲ ಕೊಯ್ಕ∴ಂಡ್ ಬಾವೊನೊಂತ ಅದರ ಮನೆ ಹಿಂದೆ ಕಾಡ್ ಇತ್ತ್. ಅದ್ ಅಡಿ ಬುಟ್ಟ ಕಾಡ್ ಹೂ ಬೊಳ್ಳಿಗ, ಹಣ್ಣ್ ಬುಡುವ ದೈಗ ತುಂಬ ಇದ್ದೊ. ಮಕ್ಕ∴ಳಿಗೆ ಆಟಕೆ ಪ್ರಶಸ್ತವಾದ ಜಾಗೆ ಆಗಿತ್ತ್.

ಪೊರಿಮಳದ ಬೆನ್ನ್ ಹತ್ತಿ ದಾಪುಕಾಲ್ ಇಸಿಕ.:.ಂಡ್ ಬಾತಿದ್ದ ಶಂತನು ಮಹಾರಾಜ ಪೊರಿಮಳದ ಕೇಂದ್ರ ಜಾಗೆಗೆ ಬಂದೆತ್ತಿತ್. ಅಂವ ಆಶ್ಚರ್ಯಲಿ ಅಗಲ ಕ.:.ಣ್ಣ್ ಬುಟ್ಟ್‌ಕ.:.ಂಡ್ ಮುಂದೆ ಹೋತು. ಅಲ್ಲಿ ಅವಂಗೆ ಒಂದು ಪೊರ್ಲುನ ಗೂಡೆ ಕಂಡ.:.ತ್. ಪೊರ್ಲುಲಿ ಇದ್ ಗಂಗೆಗೆ ಸಮ ಸಮಂತ ನೆನ್ಸಿತ್. ತಾನ್ ಏನ್ ಮಾಡಿನೆಂತ ಅಂವಂಗೆ ಗೊತ್ತಾತ್‌ಲೆ. ಸೀದಾ ಹೋಗಿ ಅದರ ಮುಂಗೈನ್ ಹಿಡ್ಕಂಡತ್. “ನೀ ಬಾ ಪೋಯಿ'ಂತ ಹೇಳ್ತ್, ಇಂವ ಹೀಂಗೆ ಏಕೆ ಕರಿದುಂತ ಅದಿಕೆ ಗೊತ್ತಾತ್. “ಬೇಕರೆ ನೀವು ನನ್ನ ಅಪ್ಪನ ಕೇಳಿ'ಂತ ಹೇಳಿ ಬುಟ್ಟ.:.ತ್.

ಇದರ ಕೇಳಿ ಆಕನ ಶಂತನುಗೆ ವಿದ್ಯುತ್ತುನ ತಂತಿನ ಮುಟ್ಟಿದೊಕ್ಕೆ ಝಳಕು ಹೊಡ್ದಂಗಾತ್. ಬೇಗ ಕೈನ ಬುಟ್ಟ.:.ತ್. ಅವನ ಮನ್ಸ್‌ಲಿದ್ದ.:.ದ್, ಗಂಗೆನಾಂಗೆ ಇದ್ ಕರ್ದ ಕೂಡ.:.ಲೇ ಒಪ್ಪಿ ಬಾದು. ಕರ್ದ ಉದ್ದೇಸ ಅದ್ಕೆ ಗೊತ್ತಾಗಿರ್ದು. ಈ ಪ್ರಾಯ.:.ಲಿ ಗ.:.ಂಡ್‌ನ ಬಯ್ಸದ ಹೆಣ್ಣ್ ಯಾರಾರ್ ಇರ್‍ವೊನಂತ ಅವನ ಯೋಚನೆ. ಇಲ್ಲಿ ಒಂಟಿಯಾಗಿ ಕಂಡರೂ ಅದ್ ಬೇರೊಬ್ಬರ ರಕ್ಷಣೆಗೊಳಪಟ್ಟ್, ಅಸ್ವತಂತ್ರಳಾಗುಟ್ಟುಂತ ಈಗ ಗೊತ್ತಾತ್. ಹಾಂಗೆ ಅದರ ಅಪ್ಪನ ನಾನೇ ಹೋಗಿ ನೋಡಿ ಹೆಣ್ಣು ಕೇಳುದು ಮರ್ಯಾದಿ ಅಲ್ಲ. ರಾಜ ಸೇವಕರ್ ಹೋಗಿ ಕೇಳ್ಸುದೇ ಸರಿಯಾದ ದಾರಿ. ಹಾಂಗೆ ಹಸ್ತಿನಾವತಿಗೆ ಹೋಗಿ ಹಿರಿಯ ಮಂತ್ರಿಗಳ ಕ.:.ಳ್ಸಿನೆಂತ ನೆನ್ಸಿಕ.:.ಂಡ್ ಹಿಂದೆ ಹೋತ್.

ಮಾರ್ನೆ ದಿನನೇ ಹಿರಿಯ ಮಂತ್ರಿಗಳೊಟ್ಟಿಗೆ ಎಲ್ಲಾ ವಿವರಿಸಿ ಹೇಳಿ ಗೂಡೆನ ಅಪ್ಪಂಗೆ ಗೌರವ ತೋರ್‍ಸಿಕೆ ಒಂದೆರ್ಡ್ ಕಾಣಿಕೆನ ವಸ್ತುಗಳ ಕೊಟ್ಟ್ ಕ.:.ಳ್‌ಸಿತ್. ಮಂತ್ರಿಗ ದಾಶರಾಜನಲ್ಲಿಗೆ ಬಂದೊ. ಓ! ರಾಜಪುರುಷ.:.ರ್ ಬಂದೊಳೊ. ಎನ್ ಕಾರ್ಯನೋಂತ ದಾಶರಾಜ ಹಣ್ಣ್ನ ತಲ್ಲಣಲಿ ಇತ್ತ್. ಮಂತ್ರಿಗ ರಾಜಕೊಟ್ಟ ಕಾಣಿಕೆನ ಅವಂಗೆ ಕೊಟ್ಟ್ ಮಾತಿಗೆ ಸುರು ಮಾಡ್ದೊ.

“ಅಜ್ಜಾ! ನಿಂಗೆ ಮೊದುವೆ ವಯಸ್ಸಿಗೆ ಬಂದ ಒಂದು ಪೊರ್ಲುನ ಮಗ ಉಟ್ಟು ಅಲ್ಲಾ? ಅದರ ನಮ್ಮ ಮಹಾರಾಜರ್ ನೋಡಿ ಮೆಚ್ಚಿ ಕಂಡೊಳೊ. ಈಗ ನಾವು ಹೆಣ್ಣ್ ಮಾತಿಗೆ ಬಂದೊಳೆ. ಕುರುಸಾಮ್ರಾಜ್ಯಾಧಿಪತಿನ ನಿನ್ನ ಮಗ ಮೊದುವೆ ಆದರೆ ನೀ ಸಾಮ್ರಾಟರ ಮಾವ ಆದಿಯ. ನಿನ್ನ ಮಗ ಮಹಾರಾಣಿ ಆದೆ. ಇಂಥ ಯೋಗ ಸಾಮಾನ್ಯಲಿ ಯಾರಿಗೂ ಸಿಕ್ಕಿಕಿಲ್ಲೆ. ಈ ಸಂಬಂಧನ ನೀ ಒಪ್ಪಿಕಂಡಿಯಿನೊ? ಏನ್ ಹೇಳಿಯಂತ” ಕೇಳ್ದೊ. ದಾಶರಾಜ ಹಣ್ಣ್ನ ಹೊತ್ತು ಆಲ್ಸಿಕ.:.ಂಡ್ ಕುದ್ದ.:.ತ್. ಮತ್ತೆ “ನಿಮ್ಮ ಮಹಾರಾಜರಿಗೆ, ಆಳ್ ಸ.:.ರಿಯಾದ ಪೊರ್ಲನೂ, ಬಲಶಾಲಿಯಾದ ಜವ್ವನನೂ ಆದ ಒಬ್ಬ ಮಜ್ಜ ಉಟ್ಟಲ್ಲಾ”ಂತ ಕೇಳ್ತ್. ಹೌದು ಉಟ್ಟು, ಅಂವ ಪರಾಕ್ರಮಿಯೂ ಹೌದು, ಆಗಳೇ ಅಂವ ದಿಗ್ವಿಜಯ ಮಾಡಿ ಬಂದುಟು”.

ನನ್ನ ಮಗಳ ನಿಮ್ಮ ಮಹಾರಾಜರ್ ಮೊದುವೆ ಆಗಿ ಅದಿಕೆ ಗ.ಃಂಡ್ ಮಕ್ಕ ಹುಟ್ಟಿರೆ ಅದರ ಮಕ್ಕ.ಃಳಿಗೆ ರಾಜಪಟ್ಟನ ಕೊಡುವ ವ್ಯವಸ್ಥೆನ ನಿಮ್ಮ ಮಹಾರಾಜ.ಃರ್ ಮಾಡುವೊನೊ?" ದಾಶರಾಜ ರಾಗ ಎಳ್ತ್.

"ಅದ್ ಹೆಂಗಾದು? ತಲೆಗೆ ಪಟ್ಟ ಅಲ್ಲದೆ ಕಾಲಿಗೆ ಪಟ್ಟ ಉಟ್ಟೋ? ಈ ದೇವವ್ರತನೇ ಪಟ್ಟಕ್ಕೆ ಪೂರ್ಣ ಹಕ್ಕ್‌ದಾರ." ಮಂತ್ರಿಗ ನಿಜ ಸಂಗತಿನ ಹೇಳ್ದೊ.

"ನನ್ನ ಮಗಳ ನಿಮ್ಮ ಮಹಾರಾಜರ್ ಮೊದುವೆ ಆಕುಂತಾದರೆ, ಅವಿಕೆ ಹುಟ್ಟುವ ಗ.ಃಂಡ್ ಮಕ್ಕ.ಃಳಿಗೆ ರಾಜಪಟ್ಟ ಸಿಕ್ಕುವಾಂಗೆ ನಿಮ್ಮ ಮಹಾರಾಜರ್ ವ್ಯವಸ್ಥೆ ಮಾಡಿರೆ ಮಾತ್ರ ನನ್ನ ಮಗಳ ಮೊದುವೆ ಆಕ್. ಇಲ್ಲದಿದ್ದರೆ ಸಾಧ್ಯ ಇಲ್ಲೆ." ದಾಶರಾಜ ಕ.ಃಡ್ಡಿ ಮುರ್ದಾಂಗೆ ಹೇಳ್ತ್. ಮಂತ್ರಿಗ ನಿರುತ್ತರರಾಗಿ, ಮತ್ತೇನೂ ಮಾತಾಡದೆ ಹಿಂದೆ ಬಂದ್ ಅಂವ ಹೇಳ್ದರ ಹಾಂಗೇ ಮಹಾರಾಜಂಗೆ ಹೇಳ್ದೊ. ಮಹಾರಾಜ ಏನೂ ಹೇಳ್ತ್‌ಲೆ. ಮೌನವಾಗಿ ಅಂತಃಪುರದೊಳಗೆ ಹೋತು.

ಸತ್ಯವತಿನ ಪೊರ್ಲುನ ನೆನ್ಸ್‌ಕನ ಅದರ ಅಪ್ಪ ಹೇಳ್ದಾಂಗೆ ಮಾಡಿ ಬುಡುದೋಂತ ಒಮ್ಮೊಮ್ಮೆ ಆಲೋಚನೆ ಬಾತಿತ್ತ್. ಆದರೆ ಹಾಂಗೆ ಮಾಡಿರೆ ಪ್ರಜೆಗ ನನ್ನ ಮೇಲೆ ಅಪವಾದ ಹೊರ್ಸುವೋಂತ ಅದರ ಯೋಚನೆ ಬುಟ್ಟ.ಃತ್. ತನ್ನಂದ ಕೆಳಗೆನ ಸ್ಥಾನಲಿರುವ ದಾಶರಾಜ ಅವನ ಮಗಳ ಕೊಡಿಕೆ ಒಪ್ಪಿತ್‌ಲರೆ ಬಲಾತ್ಕಾರಂದ ಅದರ ತಂದ್ ಮೊದುವೆ ಆಕ್‌ಂತನೂ ಒಮ್ಮೆ ಯೋಚನೆ ಬಾದು. ಆದರೆ ಕುರುಕುಲದ ಪ್ರಖ್ಯಾತ ರಾಜವಂಶದೊವು ಇಂತ ಕೀಳ್ ನಡ್ತೆನ ತೋರ್ಸುದು ಯೋಗ್ಯ ಅಲ್ಲಂತ ಅದರ ಆಗಳೇ ದೂರ ಮಾಡ್ತ್. ಅಂತೂ ಮೊದುವೆ ಆಕುಂತ ಮುಂದೇ ತೀರ್ಮಾನಿಸಿದ್ದರ್‌ಂದ ಒಂದು ಕಡೆಂದ ಆ ಮಾನಸಿಕ ಒತ್ತಡ, ಮತ್ತೆ ಈ ಪ್ರತಿಬಂಧಕ ಸ್ಥಿತಿ ಹೀಂಗೆ ಕತ್ತ್‌ರಿಲಿ ಸಿಕ್ಕಿದಾಂಗೆ ಆಗಿ ರಾಜ ಯಾಗೋಳೂ ಎತೆ ಮಾಡಿಕ.ಃಂಡೇ ಮೌನವ್ರತಧಾರಿನಾಂಗಿತ್ತ್. ಒಳೆಗೊಳೆಗೆ ಉರಿವ ಕಿಚ್ಚಿಂದ ಬೇಯುತ್ತಿತ್ತ್.

ಹೀಂಗೇ ಕೆಲೊವು ಸಮಯ ಕ.ಃಳ್ತ್. ರಾಜನ ಶರೀರ ತುಂಬ ಕ್ಷೀಣ ಆಕ.ಃಂಡ್ ಬಾತ್. ನೋಡೊವ್ಕೆ ಗಾಬ್ರಿ ಹುಟ್ಟುಸುವಾಂಗಿತ್ತ್. ಹೀಂಗೇ ಮುಂದುವರ್ದರೆ ಜಾಜ ಹೆಚ್ಚಿಕಾಲ ಬದ್ಕಿಕಿಲ್ಲೆಂತ ಗ್ರೈಸಿಕ.ಃಂಡ್ ಬೇಜಾರ ಪಟ್ಟಿಕಂಡೊ. ದೇವವ್ರತಂಗೆ ಅಪ್ಪನ ಸ್ಥಿತಿ ನೋಡಿ ತುಂಬಾ ಬೇಜಾರಾತ್. ಇದ್ ಶಾರೀರಿಕವಾದ ಇಲ್ಲರೆ ಮಾನಸಿಕವಾದ ಎಂತದೋ ಕಾಯಿಲೆ. ಇದ್ ಏನ್‌ಂತ ಕಂಡ್ ಹಿಡಿಯೊಕು. ಅದರ ಪೊರಿಹಾರ ಮಾಡೊಕುಂತ ಯೋಚನೆ ಮಾಡ್ತ್. ಮಂತ್ರಿಗಳ ಕರ್ಸಿ ಈಗ ನಾವ್ಗೆ ಒದ್ಗಿದ ಸಂಕಟಕೆ ಏನಾದರೂ ಪೊರಿಹಾರ ಕಾಣೊಕು. ಹಾಂಗೆ ನಾಳೆ ಬೊಳ್ಪಿಗೆ ನೀವೆಲ್ಲ ಒಬ್ಬೊಬ್ಬನೇ ಬಂದ್ ನಂಗೆ ಸಲಹೆ ಸೂಚನೆಗಳ ಕೊಡೊಕು ಹಾಂಗೆ ನಾಳೆ ಬೊಳ್ಪಿಗೆ ನಾವು ಮತ್ತೆ ಸೇರೋನೊಂತ ಅವರೆಲ್ಲ ಅಂದ್ ಕ.ಃಳ್ಸಿತ್.

ದೇವವ್ರತನ ಶಪಥ – ಶಂತನು ಸತ್ಯವತಿನ ವಿವಾಹ

ಮಾರ್ನೇ ದಿನ ಬೊಳ್ಪಿಗೆ ದೇವವ್ರತ ಏಕಾಂತದ ಕೋಣೆಲಿ ಕುದ್ದ್.ತ್. ಮಂತ್ರಿಗ ಒಬ್ಬೊಬ್ಬನೇ ಬಂದ್ ಅದ್ಕೆ ಪ್ರವೇಶಿಸಿ, ಮಗಳ ಶಂತನು ರಾಜಂಗೆ ಮೊದುವೆ ಮಾಡಿ ಕೊಡೊಕುಂತ ಹೆಣ್ಣ್ ಮಾತಿಗೆ ಹೋದ ಹೆಗ್ಗಡೆಗಳೊಟ್ಟಿಗೆ ದಾಶರಾಜ ಏನ್ ಹೇಳ್ತ್‌ಂತ ಎಲ್ಲ ವಿವರವಾಗಿ ರಾಜ ಕುಮಾರಂಗೆ ತಿಳ್ಸಿದೊ. ಮಹಾರಾಜರ್ ತನ್ನ ಮೊದುವೆ ಬಗ್ಗೆ ತುಂಬ ತೀವ್ರವಾಗಿಯೇ ಯೋಚಿಸಿಕ.ಂಡ್ ಇದ್ದೊ. ಈಗ ಅದಿಕೆ ದಾರಿ ಇಲ್ಲೆಂತಾಕನ ತೀವ್ರ ನಿರಾಸೆಲಿ ಬೆಂದವೆ. ಅವರ ಶಾರೀರ ಕ್ಷೀಣತೆಗೆ ಇದೇ ಕಾರಣ ಆಗಿರೊಕುಂತಳೂ ಅಭಿಪ್ರಾಯ ಪಟ್ಟೊ. ಅಂತೂ ಎಲ್ಲವರ ಅಭಿಪ್ರಾಯ ಗೊತ್ತಾದ ಮೇಲೆ ದೇವವ್ರತ ತಾನೇ ವಿಚಾರ ಮಂಥನ ಮಾಡಿಕ.ಂಡ್ ಹಳ್ಳ ಹೊತ್ತು ಕುದ್ದ್.ತ್.

"ಅಪ್ಪನ ಕಾಯಿಲೆನ ಕಾರಣ ಗೊತ್ತಾತ್. ಇದ್‌ಕೆ ಪೊರಿಹಾರಂತೇಳಿರೆ ಅವು ಮೊದುವೆ ಮಾಡಿಕಂಬೊದು. ಅದಿಕೆ ಪೊರಿಹಾರ ನಾನೇ ಕಂಡ್‌ಕಣೆಂತ" ನೆನ್ಸಿಕಂಡ.ತ್ ಸೀದಾ ದಾಶರಾಜನಲ್ಲಿಗೆ ಹೋತು.

"ಓ! ರಾಜಕುಮಾರ ಬಾತ್‌ಂತ" ದಾಶರಾಜ ಸಂಭ್ರಮ ಪಟ್ಟ್‌ಕಂಡ.ತ್. ಮನ್ಸ್‌ನೊಳಗೆ ಸಣ್ಣ ಹೆದ್‌ರಿಕೆನೂ ಆತ್. "ರಾಜಕುಮಾರರ್ ಇಷ್ಟ್ ದೂರ ಶ್ರಮಪಟ್ಟ್‌ಕ.ಂಡ್ ಬಂದ.ರಿ. ಕೆಲ್ಸ ಇದ್ದಿದ್ದರೆ ಹೇಳಿ ಕ.ಳ್ಸಿದ್ದರೆ ನಾನೇ ಬಂದಿದ್ದೇಂತ" ಹೇಳ್ತ್.

"ಅಜ್ಜಾ! ಕೇಳ್. ಹಿಂದೆ ನಮ್ಮ ಮಂತ್ರಿಗ ನಮ್ಮ ಮಹಾರಾಜರ್ಗೆ ನಿನ್ನ ಮಗಳ ಮೊದುವೆ ಮಾಡಿಕೊಡೊಕುಂತ ಹೆಣ್ಣ್ ಕೇಳ್ವ ಮಾತಿಗೆ ನಿನ್ನ ಹಕ್ಕಲೆ ಬಂದಿದ್ದೊ. ಆಗ ನೀ ಅವ್ಕೆ ಕೆಲೊವು ಪ್ರಶ್ನೆಗಳ ಹಾಕಿದ ಗಡ. ಅವ್ಕೆ ಅದ್ಕೆ ಉತ್ತರಿಸಿಕೆ ಆತ್‌ಲೆ. ಅದಿಕೆ ಇಂದ್ ನಾ ಬಂದ್ ನಿನ್ನ ಸೊಂಸಯ ಪೊರಿಹಾರ ಮಾಡಿನೆ. ಸುರುದ್ – ಹಸ್ತಿನಾವತಿನ ಸಿಂಹಾಸನದ ಅಧಿಕಾರ ನನ್ನ ಅಪ್ಪ ನಿನ್ನ ಮಗಳ ಮೊದುವೆ ಆದರೆ ಹುಟ್ಟುವ ಮಜ್ಜಂಗೆ ಖಂಡಿತ ಸಿಕ್ಕುದುಂತ ನಾ ಮಾತ್ ಕೊಟ್ಟನೆ. ನಂಗೆ ಆ ಪಟ್ಟಾಧಿಕಾರ ಬೇಡ."

"ನೀ ಪಟ್ಟಾಧಿಕಾರ ಬೇಡಂತ ಬುಟ್ಟ್‌ಕೊಡುವಂತ ಒಪ್ಪೊನೊ. ಆದರೆ ಮುಂದೆಗೆ, ನಿನ್ನ ಮಕ್ಕಳೋ, ಮೊರಿಮಕ್ಕಳೋ, ಪಟ್ಟಕ್ಕೆ ನಾವೂ ಹಕ್ಕ್‌ದಾರ್‌ರ್, ಅದ್ ನಾವ್ಗೆ ಬರೋಕುಂತ" ತಕರಾರ್ ಮಾಡಿ ಜೆಗಳಕೆ ಬಂದರೇನ್ ಗೆತಿ?"

"ಅದಿಕೂ ದಾರಿ ಉಟ್ಟಜ್ಜ. ಹೇಳ್ನೆ, ಕೇಳ್, ಸೂರ್ಯ ಚೆಂದ್ರರ ಆಣೆ, ಅಷ್ಟದಿಕ್ಪಾಲಕರ ಆಣೆ, ಬ್ರಹ್ಮ ವಿಷ್ಣು ರುದ್ರರ ಆಣೆ, ಇಂದ್‌ಂದ ಮೇಲೆ ನಾ ಹೆಣ್ಣ್‌ನ ಸಂಸರ್ಗ ಮಾಡದೆ ಅಖಂಡ ಬ್ರಹ್ಮಚರ್ಯ ವ್ರತಪಾಲನೆ ಮಾಡುವೆ. ಯಾಗೋಳು ನಿನ್ನ ಮಗಳ ಮಕ್ಕಳೇ ಹಸ್ತಿನಾವತಿನ ರಾಜ್ಯಭಾರ ಮಾಡಿಕ.ಂಡಿರುವೊ. ನಿಂಗೆ ಸಮಾಧಾನ ಆತೋ? ಇನ್ನಾರ್ ನಿನ್ನ ಮಗಳ

ಕೊಡುವನೋ ಹೇಳ್". "ರಾಜಕುಮಾರಾ, ಸಂತೋಸು, ಮೆಚ್ಚಿದೆ ನಿನ್ನ ವೀರಶಪಥನ, ನಿಂಗೆ ಸ∴ರಿಯಾದೊವು ಈ ಲೋಕ∴ಲಿ ಯಾರೂ ಇರಿಕಿಲೆ."

"ಹಾಂಗಾದರೆ ನನ್ನ ಚಿಕವನ ಅಂದರೆ ನಿನ್ನ ಮಗಳ ಈಗ ಹಸ್ತಿನಾವತಿಗೆ ನಾ ಕರ್ಕ∴ಂಡ್ ಹೋಕೆ ಒಪ್ಪಿಯನೋ?". "ಖಂಡಿತ ಒಪ್ಪಿನೆ, ಮಗಳೇ ಸತ್ಯವತಿ! ನೀ ಹಸ್ತಿನಾವತಿನ ಮಹಾರಾಣಿಯಾಗಿ ಹೊರ್ಡಮ್ಮ. ಆ ಅರಮನೆನ ದೀಪ ನಿನ್ನಂದಾಗಿ ಬೆಳ್ಗ∴ಲಿ! ಈಗ ಈ ಯುವರಾಜ ನಿಂಗೆ ಹಿರಿಯ ಮಜ್ಜನಾಂಗಾತ್. ನೀ ತಡ ಮಾಡದೇ ಹೊರ್ಡ್"

ದೇವವ್ರತ ಸತ್ಯವತಿಗೆ ಹೇಳ್ತ್. "ಅಮ್ಮ, ನೀ ನಂಗೆ ಚಿಕವಂತಾದರೂ, ಇಂದ್‌ಂದ್ ಮೇಲೆ ಗಂಗಮ್ಮನ ಹಾಂಗೆ ನೀ ನಂಗೆ ಅಮ್ಮನೇ. ನಾ ನಿನ್ನ ಹಸ್ತಿನಾವತಿಗೆ ಕರ್ಕ∴ಂಡ್ ಹೋಗಿ, ನಮ್ಮ ಮಹಾರಾಜರಿಗೆ ಪತ್ನಿಯಾಗಿ ನಿನ್ನ ಒಪ್ಪುಸಿಕೆ ಹೋನೆ. ರಥ ತಯಾರಾಗಿ ಉಟ್ಟು. ಜೋಕೆಲಿ ಹತ್ತಿ ಕುದ್ದುಕ."

ಸತ್ಯವತಿ ಅಪ್ಪನ ಕಾಲಿಗೆ ನಮಸ್ಕಾರ ಮಾಡಿ, ಹೊರ್ಟ್ ಬಂದ್ ರಥ∴ಲಿ ಕುದ್ದ∴ತ್, ದೇವವ್ರತ ರಥಕ್ಕೆ ಒಂದು ಪ್ರದಕ್ಷಿಣೆ ಬಂದ್, ನೆಲಮುಟ್ಟ ನಮಸ್ಕಾರ ಮಾಡಿ, ರಥಕ್ಕೆ ಹತ್ತಿ ಕುದ್ದ∴ತ್. ಕುದುರೆಗ∴ಳಿಗೆ ಚಾಟಿ ಮುಟ್ಸ್‌ಸಿ ವೇಗವಾಗಿ ಓಡ್ಸಿ, ಹಸ್ತಿನಾವತಿಗೆ ತಲ್ಪಿದಂವ ಚಿಕವ ಸತ್ಯವತಿನ ರಾಜನ ಅಂತಃಪುರಕ್ಕೆ ಕರ್ಕ∴ಂಡ್ ಹೋತು. ಅದರ ನೋಡ್‌ಕನ ರಾಜನ ಮೋರೆಲಿ ನೆಗೆ ಮಿಂಚಿತ್. "ನೀ ಇದರ ಅಪ್ಪನ ಹೇಂಗೆ ಒಪ್ಪುಸಿದ ಮಜ್ಜ?"ಂತ ಕೇಳ್ತ್. "ಅಪ್ಪ ಇದರ ಅಪ್ಪಂಗಿದ್ದ ಸೊಂಸಯನ ಎಲ್ಲ ನಿವಾರ್ಸಿದೆ. ಈ ಚಿಕವನ ಹೊಟ್ಟೆಲಿ ಹುಟ್ಟುವ ಮಕ್ಕಳಿಗೇ ಹಸ್ತಿನಾವತಿನ ಪಟ್ಟ ನಿಜವಾಗಿ ಸಿಕ್ಕುದು. ನಂಗೆ ರಾಜಪಟ್ಟ ಬೇಡ. ಮುಂದೆ ಒಂದು ವೇಳೆ ನನ್ನ ಸಂತತಿಗೆ ಸೇರ್ದವು ಪಟ್ಟದ ಹಕ್ಕ್ ಕೇಳುವೊಂತಾದರೆ, ನಾ ಎಲ್ಲ ದೇವುರುಗಳ ಸಾಕ್ಷಿಯಾಗಿಸಿ, ಇಂದ್‌ಂದ ಮೇಲೆ ಯಾವ ಹೆಣ್ಣ್‌ನ ಸಂಗನ್ನೂ ಮಾಡದೆ, ಅಖಂಡ ಬ್ರಹ್ಮಚಾರಿಯಾಗಿದ್ದನೆಂತ ಶಪಥ ಮಾಡ್ದೆ. ಆಗ ಇದರ ಅಪ್ಪಂಗೆ ನಂಬಿಕೆ ಬಾತ್. ಸಂತೋಸಾತ್, ಒಪ್ಪಿ ಕ∴ಂಡತ್. ಮಗಳ ಸಂತೋಸುಲಿ ಕ∴ಳ್ಸಿ ಕೊಟ್ಟ∴ತ್. ನೀವು ಇದರ ನಿಮ್ಮ ಸಂಗಾತಿಯಾಗಿ ಸ್ವೀಕರ್ಸೊಕು."

"ಅಯ್ಯೋ ಮಜ್ಜ! ಎಂತ ತೊಪ್ಪು ಮಾಡಿಬುಟ್ಟ. ನನ್ನ ಸಂತೋಸುಗಾಗಿ ನಿನ್ನ ಜೀವನನೇ ಬೊಲಿಕೊಟ್ಟ್ ಬುಟ್ಟಲೆ? ನಂಗೆ ಈ ಹೆಣ್ಣ್ ಬೇಡ. ನೀ ಇದರ ಹಿಂದಕೆ ಕರ್ಕ್∴ಂಡ್ ಹೋಗಿ ಅದರ ಅಪ್ಪನಕ್ಕಲೆ ಬುಟ್ಟ್ ಬಾ"ಂತ ಶಂತನು ಹೇಳ್ತ್. "ಅದ್ ಆಕಿಲೆ ಅಪ್ಪ, ನಾ ಎಲ್ಲಾ ದೇವುರುಗಳ ಸಾಕ್ಷಿಯಾಗಿ ಮಾಡ್ದ ಶಪಥನ ಹಿಂದೆಗಿಯಕೆ ಆಕಿಲೆ. ಅದಿಕೆ ಅಷ್ಟ್ ಬೆಲೆಯಿರುವ ಭೀಷ್ಮ ಶಪಥ. ನೀ ಈ ನನ್ನ ಚಿಕವನ ವರಿಸಿಯೇ ತೀರೊಕು". ಆತ್ ಮಗನೇ, ನಿನ್ನ ಭೀಷ್ಮ ಶಪಥಂದಾಗಿ ಇನ್ನ್ ಮುಂದೆ ನಿಂಗೆ "ಭೀಷ್ಮ"ಂತೇಲೇ ಹೆಸ್‌ರಾಗಲಿ. ಮತ್ತೆ ನೀ

ಇಚ್ಛಾಮರಣಿಯಾಗಿರ್, ನೀ ಬಯಸದೆ, ಮೃತ್ಯು ನಿನ್ನ ಸೋಂಕಿಕಿಲೆ, ಇದ್ ನಾ ನಿಂಗೆ ಕೊಡುವ ವರ. ನೀ ನಂಗೆ ಕೊಟ್ಟ್.ದ್ ಈ ವಧು! ಅದಿಕೆ ಪ್ರತಿಯಾಗಿ ನಾನಿಂಗೆ ಕೊಡುದು ಈ 'ವರ' !

"ನಾ ಸಂತೋಸುಂದ ಸ್ವೀಕರ್ಸಿನೆ ಅಪ್ಪ"ಂತ ಹೇಳಿ, ಸತ್ಯವತಿನ ಅವನ ಸಾಲಿಗೆ ನಿಲ್ಸಿ ಇಬ್ಬರ ಕಾಲಿಗೂ ನಮಸ್ಕಾರ ಮಾಡಿ ಅಲ್ಲಿಂದ ಹೊರ್ಟ್ ಹೋತು.

ಶಂತನುನ ಸಂಸಾರ ಜೀವನ

ಶಂತನುನ ಜೀವನ.ಲಿ ಪ್ರೇಮ ಜೀವನದ ಎರಡನೇ ಅಧ್ಯಾಯ ಆರಂಭ ಆತ್. ಅಂವ ನೋಡಿ ಮೆಚ್ಚಿದ ಹೆಣ್ಣೇ ಅವಂಗೆ ಸಿಕ್ಕಿತ್ತಾದ್ದರ್‌ಂದ ತುಂಬ ಪ್ರೇಮೋಲ್ಲಾಸಂದ ಅವರ ಸಂಸಾರ ಜೀವನ ಸಾಗಿತ್. ರಾಜನ ಆರೋಗ್ಯ ಒಳ್ಳೆ.ದಾತ್. ಹಾಂಗೆ ಕೆಲೊವು ವರ್ಸ಼ಗ ಆನಂದ.ಲಿ ಸಾಗಿದೊ.

ಮುಂದೆ ಅವುಕೆ ಎರ್‌ಡ್ ಗ.ಂಡ್ ಮಕ್ಕ ಹುಟ್ಟಿದೊ. ದೊಡ್ಡಂವನ ಹೆಸ್‌ರ್ ಚಿತ್ರಾಂಗದ, ಎರಡ್ನೆವ ವಿಚಿತ್ರವೀರ್ಯ಼. ಮಕ್ಕ ಪೊರ್ಲು಼ ಬೆಳ್ದ್ ದೊಡ್ಡೊವಾದೊ. ಆಗ ಶಂತನು ತೀರಿ ಹೋತು. ಭೀಷ್ಮ ಅವನ ಅಪರ ಕ್ರಿಯೆಗಳ ಎಲ್ಲ ಪೊರ್ಲು಼ ಮುಗ್ಸಿದ ಮೇಲೆ ಹಿರಿಯಂವಾದ ಚಿತ್ರಾಂಗದಂಗೆ ಹಸ್ತಿನಾವತಿನ ರಾಜಪಟ್ಟ ಕ.ಟ್ಟಿ ಅಂವಂದ ರಾಜ್ಯಭಾರ ಮಾಡ್ಸಿತ್, ಅಂವಂಗೆ ಭೀಷ್ಮನ ಬೆಂಬಲ ಬಲವಾಗಿದ್ದದರ್‌ಂದ ಬೇರೆ ರಾಜೆರ್‌ಗಳಿಗೆ ಏನೂ ತಕರಾರ್ ಮಾಡುವ ಧೈರ್ಯ಼ ಇತ್ತ್‌ಲೆ. ಹೀಂಗೆ ಎಲ್ಲ ಪೊರ್ಲು಼ಲೆ ನಡಿಯತ್ತಿತ್ತ್.

ಆದರೆ ಇಂವನ ಹೆಸ್‌ರ್‌ನವನೇ ಆದ ಚಿತ್ರಾಂಗದಂತೇಳ್ವ ಗಂಧರ್ವ಼ ಒಬ್ಬ ಇತ್ತ್. ಅವಂಗೆ ಇಂವನ ಕಾರ್‌ಬಾರ, ವೈಭವನೆಲ್ಲ ನೋಡಿ ಮತ್ಸರ ಆತ್. ನನ್ನ ಹೆಸರ್‌ನವನೇ ಆದ ಇಂವನ ಹೀಂಗೆ ಬುಡಿಕೆ ಆಗ.ದ್‌ಂತ ನಿಶ್ಚಯ ಮಾಡಿಕಂಡ.ತ್. ಇಂವನ ನೋಡಿ, ನೀ ಅಂತ ಪರಾಕ್ರಮಿಯಾದರೆ ನನ್ನೊಟ್ಟಿಗೆ ದ್ವಂದ್ವ ಯುದ್ಧಕ್ಕೆ ಬಾ. ನಿಂಗೆ ಧೈರ್ಯ಼ ಉಟ್ಟುಂತಾದರೆಂತ ಹೀನೈಸಿ ಕೇಳ್ತ್. ದ್ವಂದ್ವ ಯುದ್ಧಂತೇಳಿರೆ ಪರಾಕ್ರಮಿಗ ಆದ ಇಬ್ಬೊರೇ ಪರಸ್ಪರ ಹೋರಾಡುದು. ಮೂರ್ನೆವ್ಕೆ ಅದರ್‌ಲಿ ಪ್ರವೇಶ ಇಲ್ಲೆ. ಹಾಂಗೆ ಒಬ್ಬ ಮೂದಲ್ಸಿ ಕರಿಯಕನ ಹೋಗದಿದ್ದರೆ ಹೀನಾಯವಾದ ಅವಮಾನ. ಹಾಂಗೆ ರಾಜ ಚಿತ್ರಾಂಗದ ಗಂಧರ್ವ಼ನೊಟ್ಟಿಗೆ ಯುದ್ಧಕ್ಕೆ ಹೋತು. ಈ ವಿಷಯನ ಅಣ್ಣನಾದ ಭೀಷ್ಮಂಗೆ ಹೇಳ್ತ್‌ಲೆ. ಈ ಯುದ್ಧಲಿ ಏನೋ ಕುತಂತ್ರ ಮಾಡಿ, ಗಂಧರ್ವ಼ ಈ ಚಿತ್ರಾಂಗದನ ಕೊಂದ್ ಬುಟ್ಟ್.ತ್. ಸಂಗತಿ ತಿಳ್ದ ಭೀಷ್ಮಾದಿಗ.ಳಿಗೆ ತುಂಬ ದುಃಖ ಆತ್. ಆದರೆ ಏನೂ ಮಾಡುವಾಂಗೆ ಇಲ್ಲೆ. ಕಾರ್ಯ಼ ಮಿಂಚಿ ಹೋಗಿತ್ತ್. ಹಾಂಗೆ ದುಃಖನ ತಡ್ಕಂಡೊ. ಈಗ ಭೀಷ್ಮ ವಿಚಿತ್ರವೀರ್ಯ಼ಂಗೆ ರಾಜಪಟ್ಟ ಕ.ಟ್ಟಿ ರಾಜ್ಯ ಭಾರ ಮಾಡ್‌ಸಿತ್. ಹೀಂಗೇ ದಿನಂಗ ವೊರ್ಸ಼ಂಗ ಮುಂದೆ ಹೋದೊ. ವಿಚಿತ್ರವೀರ್ಯ಼ ಈಗ ತುಂಬು ಜವ್ವನ ಆತ್.

ಇದರ ನೋಡಿ ಒಂದು ದಿನ ಸತ್ಯವತಿ ಭೀಷ್ಮನಕ್ಕಲೆ, "ನಿನ್ನ ತಮ್ಮ ವಿಚಿತ್ರವೀರ್ಯಂಗೆ ಮೊದುವೆ ಮಾಡ್ನೊಕೊಲೆ ಭೀಷ್ಮಾ"ಂತ ಕೇಳ್ತ್. 'ಹೌದಮ್ಮಾ! ನಾನು ಅದರ್ನೆ ಯೋಚಿಸ್ಕಂಡಿದ್ದೆ. ಯಾದಾರ್ ರಾಜೆರ್ ಅವರ ಹೆಣ್ಣ್ ಮಕ್ಕ.:.ಳಿಗೆ ಸ್ವಯಂವರನ ಎನಾರ್ ಏರ್ಪಡುಸುವೆನೋಂತ ಎದ್‌ರ್ ನೋಡಿಕ.:.ಂಡೇ ಒಳೆ"ಂತ ಹೇಳ್ತ್.

ಕಾಶಿ ರಾಜನ ಕನ್ಯೆಯರ ಸ್ವಯಂವರ ಪ್ರಸಂಗ

ಹೀಂಗೆ ಹಳ್ಳ್ ಸಮಯ ಕ.:.ಳಿಯಕನ ಕಾಶೀರಾಜನ ಮೂರು ಕನ್ಯೆಗಳಿಗೆ ಸ್ವಯಂವರ ನಡ್ದದೆಂತೇಳ್ವ ವರ್ತಮಾನ ಬಾತ್. ಆದರೆ ಆಮಂತ್ರಣ ಬಾತ್‌ಲೆ. ಹಸ್ತನಾವತಿನೊವು ಶುದ್ಧ ಕ್ಷತ್ರಿಯರಲ್ಲಂತೇಳ್ವ ಭಾವನೆ ಕೆಲವರಲ್ಲಿತ್ತ್. ನಾವ್ಗೆ ಆಮಂತ್ರಣ ಕೊಡದೆ ಕಾಶಿರಾಜ ಅವಮಾನ ಮಾಡ್ತ್‌ಂತೇಳ್ವ ಭಾವನೆ ಭೀಷ್ಮಂಗೆ ಉಂಟಾತ್. ಅಂವ ಚಿಕವನ ಒಪ್ಪಿಗೆ ಪಡ್ದ್ ಕಾಶಿರಾಜ ನಡ್ಸುವ ಸ್ವಯಂವರ ಕಾರ್ಯಕ್ರಮಕೆ ಹೋತು. ಭೀಷ್ಮನಂತ ಹೊಂತಕಾರಿ ಹುಡುಗ ಬಿಲ್ಲ್‌ಬಾಣಗಳ ಹಿಡ್ಕ.:.ಂಡ್ ಸ್ವಯಂವರ ಮಂಟಪನ ನುಗ್ಗಿಕಾಕನ ಅಲ್ಲಿದ್ದವರ ಪೆರಿಜೀವ ರ.:.ಟ್ಟಿತ್. ಅಂಬೆ, ಅಂಬಿಕೆ, ಅಂಬಾಲಿಕೆಂತೇಳ್ವ ಕಾಶಿರಾಜನ ಮೂರು ಕನ್ಯೆಗ ಹೂಮಾಲೆ ಹಿಡ್ಕಂಡ್ ಒಂದು ಕಡೆ ನಿತ್ತ್‌ಕ.:.ಂಡಿದ್ದೊ, ದೇಶದ ಎಲ್ಲಾ ಕಡೆಂದಲೂ ತುಂಬ ಜೆನ ರಾಜಕುಮಾರರ್ ಕನ್ಯಾರ್ಥಿಗ ಆಗಿ ಬಂದ್ ಸೇರಿದ್ದೊ, ಆ ತುಂಬಿದ ಸಭೆನ ಉದ್ದೇಶಿಸಿ ಭೀಷ್ಮ ಘೋಷಿಸಿತ್: "ನಾ ಈಗ ಈ ಕಾಶಿಕನ್ಯೆಯರ ನನ್ನ ರಥಕ್ಕೇರ್ಸಿ ಹಸ್ತಿನಾವತಿಗೆ ಕರ್ಕ.:.ಂಡ್ ಹೋನೆ. ಸಾಮರ್ಥ್ಯ ಇರೋವು ನನ್ನ ತಡಿಯ.:.ಕ್"ಂತೇಳಿ, ಕನ್ಯೆಯರ ಹಕ್ಕಲೆ ಬಂದ್ ಹತ್ತಿ ನನ್ನ ರಥಕ್ಕೆಂತ ಗ.:.ಟ್ಟಿ ದ.:.ನಿಲಿ ಹೇಳ್ತ್. ಅವು ಮೂರು ಗೂಡೆಗ.:.ಳೂ ಹೆದ್‌ರಿಕ.:.ಂಡ್ ರಥಕೆ ಹತ್ತಿದೊ. ಮತ್ತೆ ಭೀಷ್ಮನೂ ಹತ್ತಿ ಕುದ್ದ್, ಹೊರ್ಡಿಕಾಕನ ಅಂಬೆನ ಪ್ರೀತಿಸಿದ ಸಾಲ್ವಂತೇಳ್ವ ರಾಜ ಕುಮಾರ ತಡಿಯಕೆ ಬಾತ್. ಅವನ ಒಂದೇ ಬಾಣ.:.ಲಿ ಸೋಲ್ಸಿ, ಭೀಷ್ಮ ಮುಂದೆ ರಥನ ಓಡ್ಸಿಕ.:.ಂಡ್ ಹೋಗಿ ಹಸ್ತಿನಾವತಿಗೆ ಸೇರ್ತ್, ಈ ಮೂರ್ ಗೂಡೆಗಳ ಅವನ ಚಿಕವನ ಸ್ವಾಧೀನ ಕೊಟ್ಟ.:.ತ್.

ಅಂಬೆನ ವಿರೋಧ

ಎರ್ಡ್ ಮೂರ್ ದಿನ ಕ.:.ಳ್ದ ಮೇಲೆ ಜೋಯಿಸರ ಬಾಕೆ ಮಾಡಿ, ಇವರ ಅವನ ತಮ್ಮಂಗೆ ಮೊದುವೆ ಮಾಡ್ಸಿಕೆ ದಿನ –ಮುಹೂರ್ತಗಳ ಎಲ್ಲ ವಿಚಾರಿಸಿಕ.:.ಂಡ್ ಇದ್ದೊ. ಅಂಬೆಗೆ, ನಮ್ಮ ಮೂರು ಜೆನನೂ ಭೀಷ್ಮ ಅವನ ತಮ್ಮಂಗೆ ಮೊದುವೆ ಮಾಡಿಕೆ ಹೊರ್ಟುಟುಂತ ಗೊತ್ತಾಗಿ ಅದ್ ಈ ಏರ್ಪಾಡ್‌ನ ವಿರೋಧಿಸಿತ್. "ನಾ ನಿನ್ನ ತಮ್ಮನ ಮೊದುವೆ ಆಕೆ ಒಪ್ಪುದುಲೆ. ಕಾರಣ ಅಂವ

ನಿಜವಾದ ಕ್ಷತ್ರಿಯ ಅಲ್ಲ. ಅಂವ ಮುಗ್ಯೆತಿನ ಮಜ್ಜ ಆದ್ದರ್‌ಂದ ಉಭಯ ಕುಲ ಶುದ್ಧ ಅಲ್ಲ. ಇಲ್ಲಿ ನಿಜವಾದ ಕ್ಷತ್ರಿಯ ಅಂದರೆ ನೀ ಒಬ್ಬನೆ. ಅಲ್ಲದೆ ಕಾಶಿಲಿ ಸೇರಿದ್ದ ಅಷ್ಟ್ ಜೆನ ಕ್ಷತ್ರಿಯರ ಗಣ್ಯ ಮಾಡದೆ ನಮ್ಮ ಕರ್ಕಂಡ್ ಬಂದಂವ ನೀ. ಹಾಂಗಾಗಿ ನಾ ನಿನ್ನ ಹೊರ್ತು ನಿನ್ನ ತಮ್ಮನ ಮೊದುವೆ ಆಕೆ ತಯಾರಿಲ್ಲೆ. ಮೊದುವೆ ಆದರೆ ನಿನ್ನ ಮಾತ್ರ"ಂತ ಕಠೋರವಾಗಿ ಹೇಳ್ತ್.

"ನಾ ಆಜನ್ಮ ಅಖಂಡ ಬ್ರಹ್ಮಚಾರಿಯಾಗಿದ್ದನೇಂತ ತ್ರಿಮೂರ್ತಿಗಳ್ನೂ ಅಷ್ಟ ದಿಕ್ಪಾಲಕರನ್ನೂ ಸಾಕ್ಷಿಯಾಗಿಸಿ ಪ್ರತಿಜ್ಞೆ ಮಾಡ್ಯೊಳೆ. ಆ ಕಠೋರ ಪ್ರತಿಜ್ಞೆನ ಕಾರಣಂದಳೇ ನಂಗೆ "ಭೀಷ್ಮ"ಂತ ಹೇಳ್ವ ಹೆಸ್‌ರೂ ಬಾತ್. ಇದೆಲ್ಲ ಲೋಕಕ್ಕೇ ಗೊತ್ತುಟು. ನಂಗೆ ಪ್ರತಿಜ್ಞಾ ಭಂಗ ಮಾಡಿಕೆ ಸಾಧ್ಯ ಇಲ್ಲೆ. ಲೋಕ.್.ಲಿರುವ ಹೆಣ್ಮಕ ಎಲ್ಲ ನಂಗೆ ನನ್ನ ಗಂಗಾಮಾತೆಗೆ, ಇಲ್ಲರೆ ಚಿಕವ ಸತ್ಯವತಿಗೆ ಸಮ. ಆದ್ದರ್‌ಂದ ನಂಗೆ ಮೊದುವೆ ಸಾಧ್ಯ ಆಕಿಲ್ಲೆ. ನೀ ಒತ್ತಾಯ ಮಾಡ್‌ಬೇಡ. ನಿನ್ನ ತಂಗೆಕ ಹೇಂಗೆ ಒಪ್ಪುವೆನೊ ನೀನೂ ಹಾಂಗೇ ಒಪ್ಪಿಕ."

"ಸ.್.ರಿಯಾಗಿ ವಿಚಾರ್ಸಿಕಣದೆ, ಬಲ ಉಟ್ಟುಂತೇಳ್ವ ಗ.್.ರ್ವಲಿ ಬಲಾತ್ಕಾರಂದ ತಂದ್, ಇಲ್ಲಿ ಆದುಲೇಂತೇಳ್ದು ಯಾವ ನ್ಯಾಯ? ಇದ್ ಅಬಲೆಯಾದ ನಂಗೆ ನೀ ಮಾಡ್ದ ಘೋರ ಅನ್ಯಾಯ. ಇದ್ಕೆ ನೀ ನನ್ನ ಮೊದುವೆ ಆದು ಹೊರ್ತು ಬೇರೆ ಪೊರಿಹಾರನೇ ಇಲ್ಲೆ. ಅಲ್ಲೆ ನಮ್ಮ ಮನ್ಸ್ ಹೇಂಗೆಂತ ವಿಚಾರ್ಸಿ ನೋಡಿ, ಕರ್ಕ.್.ಂಡ್ ಬಾದು, ಇಲ್ಲರೆ ಬುಟ್ಟು ಬಾದರ ನಿಶ್ಚೈಸಕಾಯ್ತ್. ನಾ ಗ.್.ಂಡ್‌ಸ್, ಏನ್ ಬೇಕರೂ ಮಾಡ.್.ಕಂತ ದಬ್ಬಾಳಿಕೆ ಮಾಡಿರೆ –ಅದಿಕೆ ತಕ್ಕ ಶಿಕ್ಷೆನ ಅನುಭವಿಸಿಯೇ ತೀರೋಕು."

"ನೀ ಏನೇ ಹೇಳಿರೂ ನಾ ನಿನ್ನ ಮೊದುವೆ ಆದು ಕನ್‌ಸ್‌ಲಿ ಕೂಡ ನಡಿಯಕಿಲೆ" "ಹಾಂಗಿದ್ದರೆ ನನ್ನ ಅಲ್ಲಿಯೇ ಬುಟ್ಟ್ ಬಂದಿದ್ದರೆ ನಾ ಮೆಚ್ಚಿದವನ ಮೊದುವೆ ಆಗಿ ಸುಖ.್.ಲಿ ಇದ್ದಿದೆ. ಈಗ ಹೀಂಗೆ ಮಾಡಿ ನೊಡುನೀರ್ಲಿ ಕೈ ಬುಟ್ಟರೆ ನಾ ಏನ್ ಮಾಡುವೆ? ನಂಗೆ ಬಾಳುವೆ ಇಲ್ಲದಾತಲೆಂತ" ಅಂಬೆ ದಿರೀಂತ ಅಳಿಕೆ ಸುರು ಮಾಡ್ತ್.

ಸಾಲ್ವನಲ್ಲಿಗೆ ಅಂಬೆನ ಪ್ರಯಾಣ – ಪ್ರಣಯ ಭಂಗ

"ವಿಚಿತ್ರವೀರ್ಯನ ನೀ ಮೊದುವೆ ಆಕೆ ಒಪ್ಪದಿದ್ದರೆ ನಿನ್ನ ತಂಗೆಕಳ ಅವಂಗೆ ಈಗ ಮೊದುವೆ ಮಾಡ್ಸನೆ. ಮತ್ತೆ ನೀ ಪ್ರೀತಿಸಿದ ರಾಜ ಕುಮಾರ ಯಾರ್‌ಂತ ಹೇಳಿರೆ ಅವನಲ್ಲಿಗೆ ನಿನ್ನ ವೈಭವಂದ ಕ.್.ಳ್ಸಿಕೊಟ್ಟನೆ. ನೀ ಅವನ ಮೊದುವೆಯಾಗಿ ಸುಖ.್.ಲಿರ್. ಈಗ ಹೀಂಗೆ ಅಳ್ಬಡ"ಂತ ಭೀಷ್ಮ ಅದರ ಸಮಾಧಾನ ಮಾಡ್ತ್.

ವಿಚಿತ್ರವೀರ್ಯನ ಮೊದುವೆ ಕಾರ್ಯಗ ಎಲ್ಲ ಮುಗ್ದ ಮೇಲೆ ಭೀಷ್ಮ

ಅಂಬೆನೊಟ್ಟಿಗೆ “ನೀ ಮೆಚ್ಚಿದ ರಾಜಕುಮಾರ ಯಾರ್‌ಂತೇಳಿರೆ ನಿನ್ನ ಅವನಲ್ಲಿಗೆ ಕ.ಃಳ್ಸುವ ಏರ್ಪಾಡ್ ಮಾಡಿನೆ”ಂತ ಹೇಳ್ತ್. ಅದ್‌ಕೆ ಅಂಬೆ, “ಅದೇ ಸಾಲ್ವ ರಾಜ, ನೀ ನಮ್ಮ ಕರ್ಕ.ಃಂಡ್ ಹೊರ್ಡ್‌ಕನ ನಿನ್ನ ಎದ್‌ರ್ಸಿ ಸೋತತ.ಃಲೇ ಅವನೆ”ಂತ ಹೇಳ್ತ್. ಸ.ಃರಿ, ನಾಳೆನೆ ನಿನ್ನ ಅವನಲ್ಲಿಗೆ ಕ.ಃಳ್ಸಿಕೊಟ್ಟನೇ”ಂತ ಭೀಷ್ಮ ಉತ್ತರ್ಸಿತ್.

ಒಂದು ಪೆಟಿಗೆ ತುಂಬ ತರತರದ ಜರತಾರಿ ಸೀರೆಗ, ಇನ್ನೊಂದು ಪೆಟಗೆ ತುಂಬ ವಜ್ರ ವೈಢೂರ್ಯಾದಿ ರತ್ನ ಮೊಣಿಗಳಿಂದ ಮಾಡ್ದ ಬೆಲೆಬಾಳುವ ನಾನಾ ತರದ ಒಡವೆಗಳ ತುಂಬುಸಿದ್, ಮತ್ತೆ ಅಂಬೆನ ವೈಭವಲಿ ಕ.ಃಳ್ಸಿಕೆ ಪಲ್ಲಕ್ಕಿ, ಅದರ ಹೊರುವ ಬೋವಿಗ, ರಕ್ಷಣೆ ಕೊಡುವ ಸೈನಿಕರ ದ.ಃಂಡ್, ಬೇರೆ ಕೈ ಕೆಲ್ಸದ ಆಳ್‌ಗ ಮತ್ತೆ ಅಂಬೆನ ನಿತ್ಯ ಚಾಕ್‌ರಿಗೆ ಬೇಕಾದ ಇಪ್ಪತ್ತ್‌ದಾಸಿಯರ ತಂಡ, ಇಷ್ಟೆಲ್ಲ ತಯಾರ್ ಮಾಡಿ ಅಂಬೆನ ಹೊರ್ಡ್‌ಸಿತ್.

ಅಂಬೆನ ದಿಬ್ಬಣ ವೈಭವಂದಳೇ ಹೊರ್ಟ.ಃತ್. ಅದರ ಮನ್ಸ್‌ಲಿ ಒಂದು ಕಡೆ ಸಂತೋಸು, ಇನ್ನೊಂದು ಕಡೆಂದ ಏನೋ ಒಂದು ಅನಿಶ್ಚಿಯತೆನ ಭಾವ.ಃಲಿ, ಆದರೂ ಸಾಲ್ವನ ನೋಡುವ ತವಕಂದ ಕೂಡಿ ಹೋತು. ಅಂತಿಂತೂ ಕಡೆಗೆ ಸಾಲ್ವನ ಅರಮನೆನ ತಲ್ಪಿತ್. ಅದಿಕೆ ಒಳ್ಳೆ ಸ್ವಾಗತ ಸಿಕ್ಕುದುಂತ ಇದ್ದ ಅವರ ಆಸೆ ನಿರಾಸೆ ಆತ್. ಎಲ್ಲ ಸಂಗತಿ ಕೇಳ್ದ ಸಾಲ್ವ ದೃಢವಾಗಿ ಹೇಳ್ತ್. “ ನೀ ಈಗ ನಾಯೆ ಮುಟ್ಟಿದ ಮಡಿಕೆನಾಂಗೆ ಆಗೊಳ. ಎರ್ಡ್ ಮೂರು ದಿನ ನೀ ಹಸ್ತಿನಾವತಿಲಿ ಭೀಷ್ಮನ ಸ್ವಾಧೀನ ಇದ್ದ. ಅಲ್ಲದೆ ಭೀಷ್ಮ ಅಂದ್‌ನ ಯುದ್ಧಲಿ ನನ್ನ ಸೋಲ್ಸಿತ್. ಸೋತ ನಾ ಒಂದು ಹೆಣ್ಣ್‌ನಾಂಗೆ ಆದೆ. ಹಾಂಗೆ ಒಂದು ಹೆಣ್ಣ್ ಇನ್ನೊಂದು ಹೆಣ್ಣ್‌ನೊಟ್ಟಿಗೆ ಬೆರೀದು ಹೇಂಗೆ ಸಾಧ್ಯ? ಹಾಂಗೆ ನಿನ್ನ ನಾ ಸ್ವೀಕರ್ಸಿಕೆ ಆಕಿಲೆ. ನನ್ನ ಬುಟ್ಟುಬುಡು. ನೀ ಬೇರೆ ಎಲ್ಲ್ಯಾರ್ ಹೋಗು. ಏನಾರ್ ಮಾಡ್. ನನ್ನ ಸುದ್ದಿಗೆ ಮಾತ್ರ ಬರ್ಬಡ”ಂತ ಹೇಳ್ತ್.

ಸಾಲ್ವ ಹೇಳ್ದ ಮಾತ್‌ನ ಕೇಳಿ, ಭೀಷ್ಮ ಅದರ ನಿರಾಕರ್ಸಿಕನ ಆದದ್‌ಕ್ಕಿಂತೊಳೂ ಹೆಚ್ಚಿ ಬೇಜಾರ ಅಂಬೆಗಾತ್. ನಾ ಹಸ್ತಿನಾವತಿಗೆ ಹೋದ್ದ್ ನನ್ನ ಸ್ವಂತ ಇಚ್ಛೆಂದ ಅಲ್ಲ. ಭೀಷ್ಮನ ಬಲಾತ್ಕಾರದ ಕಾರಣ ಅಂದ್ ಹೋಕಾತ್. ಹಾಂಗೆ ಪರವಶಕ್ಕೊಳಗಾಗಿ ನಾ ಹೋದರೂ ನಂಗೆ ಹೇಂಗೆ ದೋಸ ಅಂಟುದು? ಈ ಗ.ಃಂಡ್ ಜಾತಿನ ಸಂಕುಚಿತ ವಿಚಾರ ದೃಷ್ಟಿ ಅವ್ಕೆ ಅನುಕೂಲ ಆವಾಂಗೆ ಮಾತ್ರ ನೋಡ್ದೆ. ಒಂದು ಹೆಣ್ಣ್ ಕೂಡ ಒಂದು ಜೀವ. ನಾವ್ಗಿದ್ದಾಂಗೆ ಅವ್ಕೂ ಬೇನೆ ಬೇಜಾರಗ, ಸುಖ ಸಂತೋಸುಗ ಒಳೊಂತ ಅವ್ಕೆ ಗೊತ್ತೇ ಆದುಲೆ. ಮಹಾ ಸ್ವಾರ್ಥಿಗಳೂ ಮೂರ್ಖರೂ ಅಂದರೆ ಗ.ಃಂಡ್‌ಸರೇ. ಇದ್ ಈಗನ ಕಾಲ.ಃಲಿ ಮಾತ್ರ ಅಲ್ಲ. ಹಿಂದೆನ ಯುಗಂದಳೇ ನಡ್ದ್ ಬಂದ ಪದ್ಧತಿ ಇದ್.

ಇನ್ನ್ ಭೀಷ್ಮ. ಲೋಕಂದ ಹೊಗ್‌ಳ್ಸಿಕಂಬಕೆ, ದೇವತೆಗಳ ಮೆಚ್ಚ್‌ಸಿಕೆ ನನ್ನಂತವರ ಬೊಲಿ ತಕಣ್ತ್. ಇದ್ ಕುಸಂಸ್ಕೃತ ಮೊಂಯಿಸ.ಃರ್. ತಾವ್ಗೆ

ಒಳ್ಳ∴ದಾಕುಂತ ತಮ್ಮ ನಂಬಿಕೆನ ದೆವ್ವ ದೇವ್ರುಗ∴ಳಿಗೆ ಕುರಿ, ಕೋಳಿ, ಕೋಣಂಗಳ ಬೊಲಿ ಕೊಟ್ಟಾಂಗೆ. ಇಂತೊವ್ಕೆ ತಮ್ಮ ಸುಖ ಹೊರ್ತು ಅನ್ಯರ ಬೇನೆ, ಬೇಸರ ಗೊತ್ತಾದುಲೆ. ಹೀಂಗೆ ನನ್ನ ಜೀವನ∴ಲಿ ಭೀಷ್ಮ ಆಟ ಆಡ್ತ್. ಇದರ್ಲಿ ನಂಗೆಷ್ಟ್ ವೇದನೆ ಉಟ್ಟುಂತ ಅವಂಗೆ ಗೊತ್ತು ಮಾಡ್ದು ಹೇಂಗೆ?

ಪರಶುರಾಮನ ಮಧ್ಯಸ್ಥಿಕೆ

ಅಂವ ಕ್ಷತ್ರಿಯ ವೈರಿಯಾದ ಪರಶುರಾಮರ್‌ಂದ ಶಸ್ತ್ರಾಭ್ಯಾಸ ಪಡ್ದಂವ ಗಡ. ಹೇಂಗೆ ಇಂವನ ಅಂವ ಶಿಷ್ಯ ಆಗಿ ಸ್ವೀಕರ್ಸಿತೋ? ನಾ ಅವನಲ್ಲಿಗೇ ಹೋಗಿ ಇಂವ ಮಾಡ್ದ ಅನ್ಯಾಯನ ಹೇಳಿ, ತೊಪ್ಪು ಕೆಲ್ಸ ಮಾಡಿ ಇಂವ ನೀವ್ಗೆ ಅವಮಾನ ಆಗುವಾಂಗೆ ಮಾಡಿಟು. ನೀವು ಗುರು ಆದರ್‌ಂದ ಅವನ ತೊಪ್ಪುನ ಅಂವ ತಿದ್ದಿಕಂಬ ಹಾಂಗೆ ಮಾಡಿ ನಂಗೆ ನ್ಯಾಯ ಕೊಡ್ಲೊಕುಂತ ನಿಮ್ಮ ನಾ ಬೇಡಿಕಣೆ. ನನ್ನ ನಿಮ್ಮ ಮಗಳ ಹಾಂಗೆ ತಿಳ್ಕಂಡ್ ಅವಂಗೆ ನನ್ನ ಮೊದುವೆ ಮಾಡ್ಲೊಕು. ಅದ್ ಅದ್‌ಲೆಂತಾದರೆ ನಿಮ್ಮ ಹೋಮಾಗ್ನಿಂದ ಹಞ್ಞ ಕಿಚ್ಚಿ ತೆಗ್ದ್‌ಕೊಡಿ. ನಾ ಆ ಪವಿತ್ರಾಗ್ನಿಲಿ ಬಿದ್ದ್ ಜೀವ ತಕಣೆಂತ ಹೇಳಿ ದಿರೀಂತ ಅಳಿಕೆ ಸುರುಮಾಡ್ತ್. ಅಂಬೆ ಆಳುದರ ನೋಡಿ ಪರಶುರಾಮಂಗೆ ತುಂಬ ಬೇಜಾರ ಆತ್. ನೀ ಆಳ್ಬಡ ಮಗಳೇ, ನಾ ಭೀಷ್ಮಂಗೆ ನಿನ್ನ ಮೊದುವೆ ಆಗ್‌ಂತ ಹೇಳಿನೆ. ನನ್ನ ಮಾತ್‌ನ ಒಪ್ಪದಿದ್ದರೆ ಅಂವ ನನ್ನೊಟ್ಟಿಗೆ ಯುದ್ಧ ಮಾಡೊಕು, ನೋಡೊನೊ. ನಾವು ಈಗಳೇ ಹಸ್ತಿನಾವತಿಗೆ ಹೊರ್ಡೊನೊ. ಬಾ ರಥಲಿ ಕುದ್ದ್‌ಕ. ನಾವು ಬೇಗ ಪೋಯಿಂತ ಹೇಳಿ ಪರಶುರಾಮ ತನ್ನ ರಥನ ತರ್ಸಿ ಅದರ ಕುದ್ದ್‌ರ್ಸಿಕ∴ಂಡ್ ಹೊರ್ಟ∴ತ್.

ಪರಶುರಾಮ ಹಸ್ತಿನಾವತಿಗೆ ಮುಟ್ಟ್‌ಕನ ಭೀಷ್ಮಂಗೆ ಗೊತ್ತಾಗಿ ಎದ್‌ರ್ ಬಂದ್ ಗೌರವಿಸಿತ್. ಚಿನ್ನದ ಗಿಂಡಿಲಿ ಅವ್ಕೆ ಮೋರೆ ತೊಳ್ಕಂಬಕೆ ನೀರ್ ಕೊಟ್ಟ∴ತ್. ಬೆಳ್ಳಿಚೊಂಬುನ ನೀರ್‌ಂದ ತಾನೇ ಅವರ ಪಾದ ತೊಳ್ತ್ "ಗುರುಗಳೇ ನೀವು ಬಂದ∴ದ್ ನಂಗೆ ತುಂಬ ಸಂತೋಸಾತ್. ನಂಗೆ ಏನಪ್ಪಣೆ?" ಭೀಷ್ಮ ವಿನಯ∴ಲಿ ಕೇಳ್ತ್. "ನೀ ಈ ಗೂಡೆನ ಹಸ್‌ರ್ ಚಪ್ಪರ ಹಾಕಿ, ಚೆಂದಳಿರ ತೋರಣ ಎಲ್ಲ ಕ∴ಟ್ಟಿ ಮೊದುವೆ ಆಕು. ಅದ್ ಆಕಿಲೆಂತಾದರೆ ಬಿಲ್ಲ್ ಬಾಣ ಹಿಡ್ದ್, ಇವು ನಂಗೆ ವಿದ್ಯೆ ಕ∴ಲ್ಸಿದ ಗುರುಗಂತೇಳ್ವ ದಾಕ್ಷಿಣ್ಯ ಇಲ್ಲದೆ ನನ್ನೊಟ್ಟಿಗೆ ಯುದ್ಧ ಮಾಡೊಕು. ಈ ಎರ್ಡರ್ಲಿ ಒಂದಲ್ಲದೆ ನೀಂಗೆ ಬೇರಿಲ್ಲೆ ಕೆಲ್ಸ. ಹೇಳ್ ಏನ್‌ಮಾಡಿಯ?" ಪರಶುರಾಮ ಕಡಕ್‌ಂತ ಹೇಳ್ತ್.

ಗುರುವಚನ ನಿರಾಕರಣೆ

ಭೀಷ್ಮಂಗೆ ಏನ್ ಹೇಳುದ್‌ಂತ ಒಂದು ಗ∴ಳಿಗೆ ಗೊತ್ತಾತ್‌ಲೆ. "ಇದೇನ್

ಗುರುಗ.:.ಳೇ? ನಿಮ್ಮ ಶಿಷ್ಯಂಗೆ ಭೀಷ್ಮಂತ ಹೆಸ್‌ರೇಕೆ ಬಾತ್ಂತೇಳಿ ನೀವ್ಗೆ ಗೊತ್ತುಟು. ಅದರ ಕೇಳಿ ಹೆಮ್ಮೆ ಪಟ್ಟೊವೂ ನೀವೇ. ಸರ್ವ ದೇವ್ರ ಸಾಕ್ಷಿಲಿ ನಾ ಮಾಡ್ದ ಪ್ರತಿಜ್ಞೆನ ಮೀರುವ ಪಾಪ ಕಾರ್ಯನ ನಾನೇ ಮಾಡ್ಂತ ನೀವೇ ಹೇಳುದು ನಿಮ್ಮ ಗುರುತನಕ್ಕೆ, ನಿಮ್ಮ ಹಿರಿಮಗೆ ಸ.:.ರಿಯಾದೋ? ನನ್ನ ಪ್ರತಿಜ್ಞೆನ ಕಂಡಿತ ನಾ ಮೀರುವಂವ ಅಲ್ಲ. ನಾ ಭೀಷ್ಮ."

"ಆ ಭಾವನೆ ನಿಂಗೇ ಇದ್ದಿದ್ದರೆ, ಸ್ವಯಂವರ ಮಂಟಪಕ್ಕೆ ಪ್ರವೇಶ ಮಾಡಿ, ಎಲ್ಲವರ್ನೂ ಹೆದ್‌ರ್ಸಿ, ಆ ಕನ್ಯಾಮಣಿಗಳ ಜಬರ್‌ದಸ್ತಿಲಿ ಹಸ್ತಿನಾವತಿಗೆ ಕರ್ಕ.:.ಂಡ್ ಬಾವ ಅಧಿಕ ಪ್ರಸಂಗ ಯಾಕೆ ಮಾಡ್ದ?"

"ಕಾಶಿ ರಾಜ ಸ್ವಯಂವರದ ಆಮಂತ್ರಣ ಕ.:.ಳ್ಸದೆ. ನಮ್ಮ ಮನೆತನಕ್ಕೆ ಅಪಮಾನ ಮಾಡ್ತ್. ಅದಿಕೆ ಪ್ರತೀಕಾರ ಮಾಡುವ ಉದ್ದೇಶಂದ ನಾ ಅಲ್ಲಿಗೆ ಬಲಾತ್ಕಾರ ಪ್ರವೇಶ ಮಾಡಿಕಾಗಿ ಬಾತ್. ಅಲ್ಲದೆ ನಾ ನನ್ನ ತಮ್ಮನ ಪ್ರತಿನಿಧಿಯಾಗಿ ಹೋದ್ದ್. ಅವಂಗೆ ಮೊದುವೆ ಮಾಡಿಕೆ ಹೆಣ್ಣ್‌ಗಳ ಅವಶ್ಯಕತೆ ಇತ್ತ್. ಹಸ್ತಿನಾವತಿನ ರಾಜಮನೆತನದೊವು ಪೂರ್ಣ ಕ್ಷತ್ರಿಯರ್ ಅಲ್ಲಂತ ತಿಳ್ಕಂಡಿದ್ದವರ ಅಹಂಕಾರನ್ನ ಮುರಿದೂ ನನ್ನ ಉದ್ದೇಶವಾಗಿತ್ತ್. ಅದರ ಮಾಡ್ದೆ."

ಈಗ ಅಂಬೆ ಮಧ್ಯ ಮಾತಾಡ್ತ್. "ಮುನೀಂದ್ರ ! ಅವನ ಕ್ಷತ್ರಿಯ ಪೌರುಷನ ಅವನಾಂಗಿದ್ದವರಾಗಿದ್ದ ಪುರುಷರ ಒಟ್ಟಿಗೆ ತೋರ್ಸುದರ ಒಪ್ಪ.:.ಕ್. ನಮ್ಮಂತ ಅಬಲೆ ಹೆಣ್ಣ್‌ಗಳ ಮೇಲೆ ಹೀಂಗೆ ತೋರ್ಸುದ್ ಎಷ್ಟ್ ಸ.:.ರಿ? ನಾವ್ಗೂ ಭಾವನೆಗ ಒಳೊ. ಆಸೆ, ಬಯಕೆಗಳೂ ಒಳೊ. ಅದರ ತಿಳ್ಕಣದೆ ಹೆಣ್ಣ್‌ಂದರೆ ಒಂದು ಸರಕ್, ಅದರ ಹೇಂಗೆ ಬೇಕರೂ ಉಪಯೋಗ ಮಾಡ.:.ಕ್ಂತ ಭೀಷ್ಮ ಹೀಂಗೆ ಮಾಡ್ತ್, ನೀವು ನಂಗೆ ನ್ಯಾಯ ಕೊಡ್ಲೂಕು. ಅವನ ದುರಹಂಕಾರದ ಕಾರ್‌ಬಾರನ ನಿಲ್ಲೊಕು."

"ನಾ ನನ್ನ ರಥನ ಹತ್ತೀಂತ ಹೇಳ್‌ಕ್‌ನ ಏನೊಂದೂ ಹೇಳದೆ ಮೌನಸಮ್ಮತಿಲಿ ಬಂದ್ ರಥವೇರಿ ಕುದ್ದ.:.ತ್. ಅದರ ಮುಂದೇ ಪ್ರೀತಿಸಿದ್ದ ರಾಜಕುಮಾರ ಅಲ್ಲಿಗೆ ಬಂದಿದ್ದರೂ, ಅಂವ ನನ್ನ ಎದ್‌ರ್ಸಿಕನೂ ಒಂದು ಮಾತಾದರೂ ಹೇಳದೆ, ಹಸ್ತಿನಾವತಿಗೆ ಬಾತ್. ಅದ್ ಏನಾದರೂ ಒಂದು ಸುಳಿವು ಕೊಟ್ಟಿದ್ದರೆ ಅಲ್ಲೇ ಬುಟ್ಟ್ ಬಂದಿದ್ದೆ. ಏಕೆ ಆಗ ಏನೂ ಹೇಳ್‌ತಿಲೆ?" – ಭೀಷ್ಮ ವಾದಿಸಿತ್.

ಅಂಬೆ ಮುಂದುವರ್ಸಿತ್. "ಮುನಿವರ್ಯ! ನನ್ನ ಪ್ರೀತಿಸಿದ ಸಾಲ್ವ ರಾಜ ಬಂದ್ ಎದರ್ಸ್‌ಕನ ಅವನ ಇಂವ ಸುಲಭಲಿ ಸೋಲ್ಸಿಬುಟ್ಟ.:.ತ್. ಆ ಕೋಲಾಹ.:.ಲಲಿ, ನಾ ಏನೊಂದೂ ಯೋಚಿಸಿಕೆ ಆಗದಿದ್ದೆ. ಮತ್ತೆ ಇಂವ ಅಲ್ಲಿ ಹೆಚ್ಚು ಹೊತ್ತು ನಿಲ್ಲದೆ ವೇಗ.:.ಲಿ ರಥನ ಓಡ್ಸಿಕ.:.ಂಡ್ ಬಾತ್. ಆಗೆಲ್ಲ ನನ್ನ ಮನ್ಸ್‌ಲಿ ಇಂವನೇ ತುಂಬಿಕ.:.ಂಡ್ ಇತ್ತ್. ಇಂವನೇ ನನ್ನ ಮೊದುವೆ ಆದುಂತ

ನೆನ್ಸಿಕ∴ಂಡ್ ಕುಸಿಪಟ್ಟ್ ಕಂಡೇ ಇದ್ದೆ.”

“ಅದ್ ಅದರಷ್ಟಕ್ಕೆ ನನ್ನ ಮೊದುವೆ ಅಕೆ ಬಯ್ಸಿರೆ ಅದ್‌ಕೆ ನಾ ಹೊಣೆ ಅಲ್ಲ. ನಂಗೆ ನನ್ನದೇ ಕರ್ತವ್ಯಗ ಒಳೊ. ಅದ್ಕೆ ಅಡ್ಡಿ ಮಾಡಿಕೆ ಯಾರಿಗೂ ಅಧಿಕಾರ ಇಲ್ಲೆ. ಇದರ ನನ್ನ ಗುರುಗಳೂ ತಿಳ್ದಿರೊಕು. ಈ ಕಾರಣಕಾಗಿ ನಾ ಅವರೊಟ್ಟಿಗೆ ಯುದ್ಧ ಮಾಡಿಯೇ ತೀರೋಕುಂತ ಹಟ ಮಾಡಿರೆ ಅದಿಕೂ ನಾ ತಯಾರ್. ನಾ ಯಾಗೋಳೂ ಅವರ ಮೇಲೆ ತುಂಬ ಗೌರವ ಇಸಿಕ∴ಂಡ್ ಒಳೆ. ಅವು ನನ್ನ ಮೇಲೆ ಇಸಿದ ಪ್ರೀತಿ ವಾತ್ಸಲ್ಯದ ಕಾರಣ ಈ ಯುದ್ಧ∴ಲಿ ನಾ ಜಯಶೀಲನಾವೆಂತ ನಂಗೆ ಧೈರ್ಯನೂ ಉಟ್ಟು”ಂತ ಭೀಷ್ಮ ಅವನ ಕಡೇ ತೀರ್ಮಾನನ ಹೇಳ್ತ್.

“ಗುರುನ ತಿರಸ್ಕರಿಸಿದ ಈ ಒರಟನೊಟ್ಟಿಗೆ ಬೇರೆ ಮಾತಿಗೆ ಅವಕಾಶ ಇಲ್ಲೆ. ಅಂವ ನನ್ನೊಟ್ಟಿಗೆ ಯುದ್ಧ ಮಾಡಿಯೇ ತೀರೋಕು. ಈ ಶ್ರಾವಣ ಮಾಸದ ಸುರುನ ಶನಿವಾರದಂದ್ ಕುರುಕ್ಷೇತ್ರ∴ಲಿ ಯುದ್ಧ. ಸೂರ್ಯೋದಯಾಗಿ ಐದನೇ ಗ∴ಳಿಗೆಗೆ ಅಂವನೂ ತಯಾರಾಗಿ ಬರೊಕು. ಅಂಬೇ ನಿನ್ನ ಪುಣ್ಯ ಹೇಂಗುಟ್ಟೋ ಹಾಂಗಾಗ∴ಲಿ. ಈಗ ನಾವು ನನ್ನ ಆಶ್ರಮಕ್ಕೆ ಅಂದರೆ ಮಹೇಂದ್ರ ಪರ್ವತಕ್ಕೆ ಪೋಯಿ. ರಥಕ್ಕೆ ಹತ್ತ್” ಹೀಂಗೆ ಹೇಳಿ ಪರಶುರಾಮ ಹಿಂದೆ ಹೋತು.

ಗುರುಶಿಷ್ಯ ಸಮರ ನಿಶ್ಚಯ– ಸತ್ಯವತಿನ ವ್ಯಥೆ

ಭೀಷ್ಮ ಮತ್ತು ಪರಶುರಾಮರ ವಿವಾದ, ಅದರ್ಲಿ ಭೀಷ್ಮ ಗುರುನ ಮಾತ್‌ನ ತಿರಸ್ಕರಿಸಿದ ಪರಿಣಾಮ ಅವರೊಳಗೆ ಯುದ್ಧ ನಡಿವ ನಿರ್ಣಯನೆಲ್ಲ ಕೇಳಿ ಸತ್ಯವತಿಗೆ ಮನ್‌ಸಿಗೆ ತುಂಬಾ ಆತಂಕ ಉಂಟಾತ್. ಪರಶುರಾಮ ಮುಂದೇ ಇಪ್ಪತ್ತೊಂದು ಸ∴ರ್ತಿ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯರೆಲ್ಲ ಕೊಚ್ಚಿ ಹಾಕಿದ ಕೋಪಗಾರ. ಭೀಷ್ಮನೂ ಕ್ಷತ್ರಿಯ ಸಂತಾನದಂವ. ಹೀಂಗಿದ್ದರೂ ಅವನ ಶಿಷ್ಯನಾಗಿ ಸ್ವೀಕರಿಸಿ ತನ್ನ ಶಸ್ತ್ರ, ಶಾಸ್ತ್ರ ಎಲ್ಲ ಅವಂಗೆ ಕ∴ಲ್ಸಿ ಕೊಟ್ಟಂವ. ಹಿಂದೆನ ಜನಾಂಗ ದ್ವೇಷ ಮರುಕಳಿಸಿ, ಭೀಷ್ಮನ ಎಲ್ಲಿಯಾರ್ ಒಳ್ಸಿಕಿಲೆಂತ ಏನಾರ್ ಅಪಾಯ ಮಾಡಿಬುಟ್ಟರೆ ಏನ್ ಗೆತಿಂತ ಅದಿಕೆ ತುಂಬ ದುಃಖ ಆತ್.

ಒಂದು ದಿನ ಸತ್ಯವತಿ ಭೀಷ್ಮನೊಟ್ಟಿಗೆ ಈ ಪ್ರಸ್ತಾಪ ಮಾಡ್ತ್. “ಗುರುನ ಮಾತಿಗೆ ಕ∴ಟ್ಟ್ ಬಿದ್ದ್, ಪ್ರತಿಜ್ಞಾ ಭಂಗ ಮಾಡಬೇಕಾಗಿ ಬಂದರೂ, ಅದರ ದೋಷ ನಿಂಗೆ ಬಾಕಿಲ್ಲೆ. ಅದಿಕೆ ಹೊಣೆ ಗುರುನೇ ಆದೆ. ನೀ ಆ ಪ್ರತಿಜ್ಞೆ ಮಾಡಿಕೆ ಮೂಲ ಕಾರಣ ನನ್ನ ದೆಸೆಂದ, ಆ ಆಸೆಬೊಡ್ಕ, ನನ್ನ ಬುದ್ಧಿ ಇಲ್ಲದ ಮುದಿ ಅಪ್ಪ. ಅದ್ ಎಂತ ಪರಿಣಾಮ ಮಾಡುದುಂತೇಳ್ವ ಯೋಚನೆ ಇಲ್ಲದೆ ನಿನ್ನ ಜೀವನ ಸೊವುಕ್ಯಕ್ಕೆ ಕಂಟಕ ಆತ್. ಅವಂಗಾಗಿ ನಾ ನಿನ್ನ ಕ್ಷಮೆ ಕೇಳಿನೆ. ಈಗ ನೀ ಪ್ರತಿಜ್ಞಾ ಭಂಗ ಮಾಡಿರೆ ಅದರ್‌ಂದ ಪಾಪ ಬಂದದೆಂತಾದರೆ ಅದೆಲ್ಲ ನನ್ನ ತಲೆಮೇಲೆ

ಇರ್ಲಿ. ನಂಗೆ ಬೇಕಾದ್ದ್ ನೀ ಸುರಕ್ಷಿತ ಆಗಿ ಇರೋಕು. ಯಾವ ಅಪಾಯ ಒದ್ಗದೆ ಸುಖ.ಃಲಿ ಇರೊಕುಂತ. ಹೀಂಗಾಗಿ ಈ ಯುದ್ಧನ ತೊಪ್ಪುಸೊಕು. ಅಂಥ ಕಠೋರ ಮನ್ಸ್‌ನ ಅವನ ಜತೆಲಿ ಹೋರಾಡ್ದು ಬೇಡ ಮಜ್ಜ, ಅಂವನ ಮಾತ್‌ನ ಒಪ್ಪಿಕ, ನಿನ್ನ ಜೀವನ.ಃಲಿನೂ ಹುಣ್ಣಿಮೆನ ಬೆಳ್ದಿಂಗ.ಃಳಿನ ತೊಂಪು ಹರಿಯಲಿಂತ ಹೇಳಿಕ.ಃಂಡ್ ಕ.ಃಣ್ಣೀರ್ ಹಾಕಿತ್.

"ಅಮ್ಮ! ನಿಮ್ಮ ಮಾತೃ ಪ್ರೇಮಂತೇಳ್ವ ವಜ್ರ ಕವಚ ನಂಗೆ ರಕ್ಷಣೆಗೆ ಉಟ್ಟುಂತೇಳ್‌ಕನ ಯಾರ ಹೆದ್‌ರಿಕೆನೂ ಇಲ್ಲೆ. ನನ್ನ ಹೆತ್ತಮ್ಮ-ಗಂಗಮ್ಮಂದ ದೂರ ಆಗಿ ಒಂದು ರೀತಿಲಿ ನಾ ಅನಾಥನಾಂಗಿದ್ದವಂಗೆ ನೀವು ಅಮ್ಮ ಆಗಿ ಸಿಕ್ಕಿದ್ ನನ್ನ ಪುಣ್ಯಫಲಂದ. ನೀವು ಯಾದಿಕೂ ಹೆದ್‌ರ್‌ಬೇಡಿ. ನಂಗೆ ಅಪ್ಪ ಕೊಟ್ಟ ವರದ ವಿಚಾರ ನೀವ್ಗೆ ಗೊತ್ತೇ ಇಟ್ಟು. ನನ್ನ ಅಂತ್ಯ ನನ್ನ ಇಚ್ಛೆಂದಳೇ ಆಕು ಹೊರ್ತು ಬೇರೆಯುವರ್‌ಂದ ಆಕೆ ಸಾಧ್ಯ ಇಲ್ಲೆ. ಈ ಕಾರಣಂದ ಎಂಥ ಬಲಶಾಲಿಯಾದ ಗುರುಂದಳೂ ನನ್ನ ಪ್ರಾಣ ಹಾನಿ ಮಾಡಿಕೆ ಆಕಿಲೆ. ಅವನ ಯುದ್ಧ ಕಲೆನ ಗುಟ್ಟುನ ಎಲ್ಲ ನಂಗೆ ಕ.ಃಲ್ಸಿಕೊಟ್ಟದರ್‌ಂದ ಇದರ್ಲಿ ಸೋಲುದು ಆ ಗುರುವೇ ಹೊರ್ತು ನಾ ಅಲ್ಲ. ನೀವು ಯಾವ ಅಂಜಿಕೆನೂ ಮನ್ಸ್‌ಲಿ ಇಸಿಕಣ್ಬೆಡಿ. ನನ್ನ ಕೈಲಿ ಸೋಲಾತ್‌ಂತ ಗುರುಗೆ ಸಿಟ್ಟ್ ಬಾಕಿಲೆ. ಕಾರಣ ನಿಜವಾದ ಒಬ್ಬ ಗುರು ಬಯ್ಸುದು, ತನ್ನ ಶಿಷ್ಯ ತನಗಿಂತ ಮೇಲಾಕುಂತ! ನೀವೇನೂ ಚಿಂತೆ ಮಾಡ್ಬಡಿ. ನಂಗೆ ಏನೂ ಆಕಿಲೆ. ನಿಮ್ಮ ಆಶೀರ್ವಾದಂದ ನಾನೇ ವಿಜಯಿ ಆವೆ."

ಅಂತೂ ಸತ್ಯವತಿನ ಕೋಮಲ ಭಾವನೆಗ ಭೀಷ್ಮನ ಮನ ಪರಿವರ್ತನೆ ಮಾಡಿಕೆ ಆತ್‌ಲೆ. ಅಯ್ಯೆಕಳ ದೃಷ್ಟಿಲಿ ತಮ್ಮ ಮಕ್ಕಳ ಜೀವನ ಪರಿಪೂರ್ಣತೆ ಆಕೊರೆ ಅವ್ಕೆ ಮೊದುವೆ ಆಕು. ಗಂಡ ಹೆಣ್ಣಾಗಿ, ಅವರ ಸಹಜೀವನ, ಸರಸ ಸಲ್ಲಾಪಗಳ ಕೇಳಿಕ.ಃಂಡ್, ಮಕ್ಕ ಮೊರಿಗ ಆದ ಮೇಲೆ, ಆ ಪಿಳ್ಳೆಕಳ ಲಾಲನೆ ಪಾಲನೆ ಮಾಡಿಕ.ಃಂಡ್ ಸುಖಪಡಿಯ.ಃಕ್‌ಂತೇಳುವ ತೀರದ ಹಸಿವು ಅವರ ಮನ್‌ಸಿಗೆ. ಹುಣ್ಣಿಮೆನ ಬೆಳ್ದಿಂಗಳ್ ಭೂಮಿ ತುಂಬ ಹಾಲ್‌ನ ಹಳ್ಳ ಹರ್ದಾಂಗಿರುವ ದೃಶ್ಯನ ನೋಡಿಕೆ ಯಾವ ಸಂತೋಷ, ಆ ತೊಂಪುನ ಅನುಭವಂದ ನಾವ್ಗೆ ಅದೆನೋ ಅದೇ ತರ ಅಯ್ಯೆಕ.ಃಳಿಗೆ ತಮ್ಮ ಮಕ್ಕಳ ಸಂಸಾರ ಸುಖನ ನೋಡಿಕಾಕನ ಅಷ್ಟೇ ಆಹ್ಲಾದ ಉಂಟಾದು. ಅದರ್‌ಂದ.ಃಳೇ ಭೀಷ್ಮನ ಜೀವನ.ಃಲಿ ಅ ಬೆಳ್ದಿಂಗ.ಃಳ್ ಹರಿವಾಂಗೆ ಆಗ.ಃಲಿ ಎಂದ್ ಹಾರೈಸಿಕನ ಅದರ ಹೃದಯದ ಕೋಮಲತೆ ಎಷ್ಟು ಮಧುರ ಎಷ್ಟ್ ಮೃದುಂತ ನಾವು ಬೆರಗಾದವೆ. ಅದರ ಕಣ್ಣೀರ್ ಕಂಡಾಕನ ನಾವು ಕರ್ಗಿಯೇ ಹೋದವೆ. "ಅಂಥ ಕಠೋರ ಮನ್‌ಸನವನೊಟ್ಟಿಗೆ ಹೋರಾಡ್ದು ಬೇಡ ಮಜ್ಜ! ಅಂವ ಹೇಳ್ದರ ಒಪ್ಪಿಕ. ನಿನ್ನ ಜೀವನಲಿನೂ ಹುಣ್ಣಿಮೆನ ಬೆಳ್ದಿಂಗ.ಃಳಿನ ತೊಂಪು ಹರಿಯಲಿ"ಂತ ಹೇಳಿಕಂಡ್ ಕ.ಃಣ್ಣೀರ್ ಹಾಕಿತ್. ಇದರ ಕೇಳ್ದ ಭೀಷ್ಮನ ಅವಸ್ಥೆ

ಏನಾಗಿರ್ದು?.

ನಾನೇ ಬರ್ದವಾಕ್ಯಗಳಿಗೆ, ಭೀಷ್ಮ ಹೇಂಗೆ ಪ್ರತಿಕ್ರಿಯಿಸುದುಂತ ಎರ್ಡ್ದಿನ ನಂಗೆ ಹೊಳ್ತ್‌ಲೆ, ಮತ್ತೆ ಅವನ ಗ.ːಟ್ಟಿ ಮನ್ಸ್‌ನ ಮಾತ್‌ಂದ ಚಿಕವನ ಮನ್ಸಿಗೆ ಬೇನೆ ಆಗದಾಂಗೆ ಅದರ ಪ್ರೀತಿನ ಅಂವ ಗೌರವಿಸಿದೆಂತ ತೋರಿಸಿ ಅದಿಕೆ ಧೈರ್ಯ ಕೊಟ್ಟ್‌ಮಾತಾಡ್ತ್.

ಗುರು ಶಿಷ್ಯರ ಯುದ್ಧ

ಹೀಂಗೇ ದಿನಗ ಹೋಗ್ತಾ ಇದ್ದೊ. ಗುರು– ಶಿಷ್ಯರ ಯುದ್ಧಕೆ ನಿಶ್ಚಯ ಮಾಡ್ದ ದಿನ ಬಂದೇ ಬುಟ್ಟ.ːತ್. ಇಬ್ಬರೂ ಯುದ್ಧಕಳಕ್ಕೆ ಅಂದರೆ ಕುರುಕ್ಷೇತ್ರಕ್ಕೆ ಬಂದೆತ್ತಿದೊ. ಅಂಬೆನೂ ಪರಶುರಾಮನೊಟ್ಟಿಗೆ ಬಂದ.ːದ್ ಒಂದು ಎತ್ತರದ ಜಾಗೆಲಿ ಎಲ್ಲ ಕಡೆಗೆ ನೋಡಿಕಂಡ್ ನಿತ್ತ.ːತ್. ಇಬ್ಬೊರು ಯುದ್ಧಕೆ ತಯಾರ್ ಮಾಡಿಕ.ːಂಡ್ ಇದ್ದೊ. ಸುರುಗೆ ಭೀಷ್ಮ ಮೂರು ಬಾಣಗಳ ಅವು ಮೆತ್ತಂಗೆ ಗುರುನ ಪಾದಕೆ ಮುಟ್ಟುವಾಂಗೆ ಹೊಡ್ತ್. ಇದ್ ಗುರುಗೆ ನಮಸ್ಕಾರ ಮಾಡಿ, ಅವನ ಆಶೀರ್ವಾದ ಬೇಡುದರ ಸಂಕೇತ. ಅದಿಕೆ ಸ.ːರಿಯಾಗಿ ಪರಶುರಾಮನೂ ಮೂರು ಬಾಣಗಳ ಭೀಷ್ಮನ ತಲೆಂದ ಮೇಲೆ ಹಾರಿ ಹೋವಾಂಗೆ ಹೊಡ್ತ್. ಇದ್ ಅವಂಗೆ ಆಶೀರ್ವಾದ ಕೊಡುದರ ಸಂಕೇತ.

ಹಿಂದೆನ ಕಾಲ.ːಲಿ ಗುರು– ಶಿಷ್ಯರೇ ಯುದ್ಧ ಮಾಡುವ ಸಂದರ್ಭಗ ಇದ್ದೋಂತ ಕಂಡದೆ. ಗುರು ದ್ರೋಣರೇ ತಮ್ಮ ಪ್ರಿಯ ಶಿಷ್ಯ ಅರ್ಜುನಂಗೆ ಒಮ್ಮೆ ಹೇಳುವೆ. "ಅರ್ಜುನ! ನಾನೂ, ನೀನೂ ಹೋರಾಡುವ ಸಂದರ್ಭ ಬಾಕೂ ಸಾಕ್. ಆಗ ಇವು ನನ್ನ ಗುರುಂತ ನೆನ್ಸಿ ದಾಕ್ಷಿಣ್ಯಂದ ನನ್ನೊಟ್ಟಿಗೆ ಹಗುರ ಯುದ್ಧ ಮಾಡಿಕಾಗ.ːದ್. ನಿನ್ನ ಶಕ್ತಿ ಮೀರಿ ಕಾದಾಡೊಕು, ಗೊತ್ತಾತಾ?"ಂತ ಕೇಳುವೆ. ಇಂಥ ಹಿನ್ನೆಲೆ ಇದ್ದರೂ, ಆ ಹೋರಾಟ ಸುರಾಕೆ ಮುಂದೆ, ಶಿಷ್ಯನಾದಂವ ಗುರುಗೆ ಗೌರವ ತೋರ್ಸುದು, ಪ್ರತಿಯಾಗಿ ಗುರೂ ಶಿಷ್ಯನ ಮೇಲೆ ಇರುವ ವಾತ್ಸಲ್ಯನ ಪ್ರಕಟ ಮಾಡ್ದು ಹಿಂಗೆ ನಡಿಯುತ್ತಿತ್ತ್. ಇಲ್ಲಿ ನಡ್ದ.ːದೂ ಅದೇ.

ಅಂಬೆನ ನಿರಾಸೆ – ಶಪಥ, ಅಗ್ನಿ ಪ್ರವೇಶ

ಸುರು ಸುರುಗೆ ಸಾಧಾರಣ ಬಾಣಗಳ ಬುಟ್ಕ್‌ಕ.ːಂಡೊ ಅದರೆಲ್ಲ ಚಟಿಲ್ ಪಿಟಿಲ್'ಂತ ಅರ್ಧ.ːಲೇ ತುಂಡುಮಾಡಿ ಹಾಕಿದೊ. ಕಾವೇರ್‌ಕನ ಮಹಾಸ್ತ್ರಗ.ːಳಿಗೆ ಕೈ ಹಾಕಿದೊ. ಎದ್‌ರಾಳಿ ಏನ್ ಮಾಡ್ದೇಂತ ಪರಸ್ಪರರಿಗೆ ಗೊತ್ತುಟು. ಒಬ್ಬ ಕ.ːಲ್ಸಿದರ್ನೆ ಅವಂಗೆ ಇಂವ ಪಾಠ ಒಪ್ಪುಸುವಂಗೆ ಈಚೆಂವ ಪ್ರಯೋಗಿಸಿರೆ ಅದರ ಅರ್ಧ.ːಲೆ ಮುರಿಯಕೆ ಆಚೆವಂಗೆ ಸುಲಭ. ಆಚೆವ ಇಂತದರ್ನೆ ಪ್ರಯೋಗ ಮಾಡ್ದೆಂತೇಳುವ ಗುಟ್ಟು ಬೇಗನೆ ಗೊತ್ತಾದೆ. ಹಾಂಗೆ

ಅದ್ ತಲೆಯೆತ್ತಿಕೆ ಮುಂದೆ ಅದರ ಅದುಮಿ ಇಂವ ಹಲ್ಲ್ ಬುಟ್ಟದೆ. ಹೀಂಗೆ ಇವರ ಯುದ್ಧ ಏಳ್‌ದಿನ ಸೋಲು ಗೆಲುವುಂತಿಲ್ಲದೆ ನಡ್ತ್. ಭೀಷ್ಮ ಇನ್ನೂ ದೇಹದಾರ್ಢ್ಯ ಇರೊಂವ. ಆದರೆ ಪರಶುರಾಮ ಅಜ್ಜ. ಹೀಂಗೆ ಬಲಹೀನ. ಹಾಂಗೆ ಹೆಚ್ಚು ಹೊತ್ತ್ ಶ್ರಮಪಡಿಕೆ ಸಾಧ್ಯ ಇಲ್ಲೆ. ಹಾಂಗೆ ಬಿಲ್ಲ್ ಬಾಣಗಳ ಆದರ್ರಿ ಹಿಡ್ಕಂಬಕೆ ಅವಂಗೆ ಆಗದೆ ಕುಸ್ದ್ ಬೀತ್. ಕೂಡ್ಲೆ ಭೀಷ್ಮ ತನ್ನ ಬಿಲ್ಲ್ ಬಾಣಗಳ ಕರೆಗೆ ಹೆರ್ಕಿ ಇಟ್ಟ್, ಓಡಿಹೋಗಿ ಗುರುನ ಹಿಡ್ದ್ ಎದ್ದ್‌ರ್ಸಿ ತನ್ನ ಎದೆಗೆ ಒರ್ಗಿಸಿ ಕುದ್ದ್‌ರ್ಸಿಕ.ಂಡ್ ಗಾಳಿ ಬೀಸಿಕ.ಂಡ್ ಕುದ್ದ.ತ್. ಸೇವಕರೊಟ್ಟಿಗೆ ತೊಂಪಾದ ನೀರ್ ತರ್ಸಿ, ಗುರುಗೆ ಕುಡ್ಸಿತ್. ಮೋರೆಗೆಲ್ಲ ಹನ್ಕ್‌ಸಿ ಉಪಚರ್ಸಿಕ.ಂಡ್ ಇತ್ತ್. ಮತ್ತೆ ಹಾಲ್ ಹಣ್ಣ್‌ಗಳ ತರ್ಸಿ ಒತ್ತಾಯಲಿ ತಿನ್ಸಿಕ.ಂಡ್, ಕುಡ್ಸಿಕ.ಂಡ್ ಇತ್ತ್. ಇದರೆಲ್ಲ ದೂರಂದ ನೋಡಿಕ.ಂಡ್ ಇದ್ದ ಅಂಬೆಗೆ, ಈ ಅಜ್ಜ ಹಾರಂವಂದ ನನ್ನ ಕಾರ್ಯ ನೆರವೇರುವಾಂಗೆ ಇಲ್ಲೆ. ನಂಗೆ ಬೇರೆ ದಾರಿನೇ ಇಲ್ಲೆ. ಇಷ್ಟ್ ಕಿಚ್ಚಿ ಹೊರ್ತುಂತ ಭೀಷ್ಮನ ನೋಡಿ, "ನನ್ನ ಮುಂದೆನ ಹುಟ್ಟುಲಾರ್ ನಿನ್ನ ಕೊಲ್ಲದೆ ಬುಡಿಕಿಲ್ಲೆ. ನೋಡಿಕ.ಂಡಿರ್. ನಿನ್ನ ಸ.ರ್ರ.ಲಿ, ಅಂಗುಲ ಅಂಗುಲ ಎಲ್ಲ ಎಡೆಬುಡದೆ ಆಯುಧದ ಗಾಯಗ ಆಗಿ, ಆ ಬೇನೆಲಿ ದೀರ್ಘಕಾಲ ನರಳಿ ನರಳಿ ಸಾಯು"ವಂತ ಕೋಪ.ಲಿ ಹೇಳಿ ಒಂದಿಷ್ಟ್ ಕಿಚ್ಚಿ ತಕಂಡ್ ಹೋಗಿ ಒಂದಷ್ಟ್ ಸೌದೆಗಳ ಒಟ್ಟಿ ಅದರ ಹೊತ್ತ್‌ಸಿ ಅದಿಕೆ ಹಾರಿ ಬಿದ್ದ್ ಅದರ್ಲಿ ಬೂದಿಯಾಗಿ ಹೋತು.

ಅಂಬೆನ ಪುನರ್ಜನ್ಮ – ಶಿಖಂಡಿ ನಾಮ

ಹೀಂಗೆ ಆತ್ಮಹತ್ಯೆ ಮಾಡಿಕಂಡ ಅಂಬೆ ದ್ರುಪದರಾಜ ದಂಪತಿಗ.ಳಿಗೆ ಮಗಳಾಗಿ ಪುನರ್ಜನ್ಮ ಪಡ್ತ್. ಅದ್ ಬೆಳ್ದ್, ವಿದ್ಯಾಭ್ಯಾಸ ಮಾಡ್ಸಿಕೆ ಯೋಚನೆ ಮಾಡ್‌ಕನ ಅದ್ ತನಿಗೆ ಯುದ್ಧ ವಿದ್ಯೆಯನ್ನೇ ಕ.ಲ್ಸಿಂತ ಅಯ್ಯೆಪ್ಪನೊಟ್ಟಿಗೆ ಹೇಳ್ತ್. ಆಗ ಅವು ಅದ್ ಗ.ಂಡ್ ಮಕ್ಕ ಕ.ಲಿಯುವಂತದ್, ನೀ ಹೆಣ್ಣ್ ಕೂಸು ನೀ ಅದರ ಕ.ಲಿಯಕೆ ಆಗ.ದ್‌ಂತ ಹೇಳ್ದೊ, ಅದಿಕೆ ಹಂಗರೆ ನಾ ಗ.ಂಡ್ ವೇಸ ಹಾಕಿಕ.ಂಡ್ ಅದರ ಕ.ಲ್ತನೆಂತ ಹೇಳ್ತ್. ಹಾಂಗೆ ಮಾಡಿರೆ ನಿಂಗೆ ಗ.ಂಡೂ ಅಲ್ಲ, ಹೆಣ್ಣೂ ಅಲ್ಲ ಅಂದರೆ ಶಿಖಂಡಿಂತ ಹೆಸ್‌ರ್ ಬಾದುಂತ ಹೇಳ್ದೊ. "ತೊಂದರೆ ಇಲ್ಲೆ. ಅದೇ ಹೆಸ್‌ರ್ ನಂಗೆ ಬಂದರೆ ಬರ್ಲಿ"ಂತ ಹೇಳಿ, ಗ.ಂಡ್ ವೇಸ ಧರ್ಸಿ ವಿದ್ಯಾಭ್ಯಾಸ ಮಾಡಿಕೆ ಹೋತು. ವಿದ್ಯಾಭ್ಯಾಸ ಮಾಡ್ಸುವ ಗುರು ಒಬ್ಬ ದೇವ ವರ್ಗಕ್ಕೆ ಸೇರ್ದಂವಾಗಿತ್ತ್. ಅವನೊಟ್ಟಿಗೆ ಈ ರಾಜಕುಮಾರಿ ತನ್ನ ಸಮಸ್ಯೆನ ಹೇಳಿಕ.ಂಡ್.ತ್. ಆಗ ಅಂವ, ನಿಂಗೆ ಬೇಕರೆ ಈ ವಿದ್ಯಾಭ್ಯಾಸ ಮುಗಿವವರೆಗೆ ನಿಜವಾಗಿ ನೀ ಗ.ಂಡೇ ಆಗಿ ಪರಿವರ್ತನೆ ಆಗ್. ನಿನ್ನ ಸ್ತ್ರೀತ್ವನ ನಾ ತಕಣೆ, ಆ ಮೇಲೆ ನಾವು ಹಿಂದೆನ ಲಿಂಗ ಪರಿವರ್ತನೆ

ಮಾಡಿಕಮೊನೋಂತ ಹೇಳಿಕ∴ಣ್ತ್. ಇದೂ ಈ ಎರ್ಪಾಡಿಗೆ ಒಪ್ಪಿಕ∴ಂಡ∴ತ್. ಕಾಲಾಂತರ∴ಲಿ, ವಿದ್ಯಾಭ್ಯಾಸ ಮುಗ್ದ ಮೇಲೆ, ದೇವವರ್ಗಕ್ಕೆ ಸೇರ್ದ ಗುರುಗೆ ಸ್ತ್ರೀ, ರೂಪ∴ಲಿಯೇ ಮುಂದುವರಿದೇ ಒಳ್ಳ∴ದುಂತ ಕಂಡ್ ನಾವು ಹೀಂಗೆನೇ ಮುಂದುವರಿಯೊನೊಂತ ಹೇಳ್ತ್. ಇದೂ (ಇಂವನೂ) ಒಪ್ಪಿಕಂಡ∴ತ್. ಹಾಂಗೆ ಹಿಂದೆ ಹೆಣ್ಣಾಗಿದ್ದರೂ ಈಗ ಗ∴ಂಡಾಗಿ ಮುಂದುವರಿಯಕೆ ಒಪ್ಪಿಕಂಡ∴ತ್. ಆದರೆ ಏಕೊ ಶಿಖಂಡಿಂತ ಹೆಸರ್ ಖಾಯಮಾಗಿ ಒಳ್ತ್. ಗ∴ಂಡ್ ರೂಪು ತಾಳ್ದ ಮೇಲೆ, ಶಸ್ತ್ರಾಸ್ತ್ರಗಳ ಪ್ರಯೋಗನ ನಿತ್ಯ ಸಾಧನೆ ಬಲವಾಗಿ ಮಾಡಿಕಂಡಿತ್ತ್. ಭೀಷ್ಮನ ಮೇಲೆ ಇದ್ದ ದ್ವೇಷನ ತೀರ್ಸಿಕಣೊಕುಂತ ಹಟ ಕ∴ಟ್ಟಿ ಸಾಧನೆ ಮಾಡಿಕ∴ಂಡಿತ್ತ್.

ಭೀಷ್ಮನ ರಾಜವಂಶದ ಜವಾಬ್ದಾರಿ

ಭೀಷ್ಮಂಗೆ ಇದರ ಪರಿವೇ ಇಲ್ಲದೆ, ಅವನ ಸಂಸಾರದ ಸಂರಕ್ಷಣೆ ಮಾಡುದರ್ಲೇ ಅವನ ಆಯಸ್ಸ್ ಸವೆಯುತ್ತಿತ್ತ್. ಶಂತನು–ಸತ್ಯವತಿಯರಿಗೆ ಇಬ್ಬೊರು ಗ∴ಂಡ್ ಮಕ್ಕ ಹುಟ್ಟಿದೊ. ಅವ್ಕೆ ಚಿತ್ರಾಂಗದ–ವಿಚೀತ್ರವೀರ್ಯಂತ ಹೆಸ್‌ರಾತ್. ಮಕ್ಕ ಸ∴ರಿ ಬೆಳಿಯಕೆ ಮುಂದೆ ಶಂತನು ಪರಲೋಕ ವಾಸಿಯಾತ್. ಭೀಷ್ಮ ಮಕ್ಕ∴ಳಿಗೆ ಬೇಕಾದ ವಿದ್ಯಾಬುದ್ಧಿ ಕ∴ಲ್ಸಿ ಪ್ರಬುದ್ಧರಾಗಿ ಮಾಡ್ತ್. ಹಿರಿಯ ಹೈದ ಚಿತ್ರಾಂಗದಂಗೆ ಪಟ್ಟ ಕ∴ಟ್ಟಿ ತಾನ್ ಬೆಂಬಲವಾಗಿ ನಿತ್ತ್ ರಾಜ್ಯಭಾರ ಮಾಡ್ಸಿತ್. ಅಂವ ಪ್ರಬುದ್ಧನಾಗಿ ಸ್ವತಂತ್ರ ಕಾರ್‌ಬಾರ್ ಮಾಡುವಷ್ಟಾಕನ ಭೀಷ್ಮನ ಮನಸ್ಸಿಗೆ ನೆಮ್ಮದಿ ಮತ್ತೆ ಸಂತೋಸು ಪಟ್ಟ್‌ಕಂಡೂ ಇತ್ತ್. ಆಗ ಅಲ್ಲಿ ಒಬ್ಬ ಗಂಧರ್ವ ಇತ್ತ್. ಅವನ ಹೆಸ್‌ರೂ ಚಿತ್ರಾಂಗದಂತೇ ಆಗಿತ್ತ್. ಅವಂಗೆ ಈ ಚಿತ್ರಾಂಗದನ ನೋಡಿ, ಇವನ ರೂಪ ಸೌಭಾಗ್ಯನ ಕಂಡ್, ಇವನ ರಾಜ ವೈಭವನ ಕಂಡ್ ಸಹಿಸಿಕೆ ಆತ್‌ಲೆ. ಇವನ ಹೀಂಗೆ ಇರಿಕೆ ಬುಡಿಕೆ ಆಗ∴ದ್‌ಂತ ಆಲೋಚಿಸಿತ್. ಒಂದು ದಿನ ಇವನ ಹಕ್ಕಲೆ ಬಂದ್ ನೀ ಅಂಥ ಪೌರುಷವಂತಾದರೆ ನನ್ನೊಟ್ಟಿಗೆ ದ್ವಂದ್ವ ಯುದ್ಧ ಮಾಡಿ ಜೈಸೊಕು. ಇಲ್ಲರೆ ಹೇಡಿಂತ ಒಪ್ಪಿಕಂಡ್ ತೆಪ್ಪಂಗೆ ಇರ್‌ಂತ ಹೀನೈಸಿತ್. ದ್ವಂದ್ವ ಯುದ್ಧಂತೇಳಿರೆ ಇಬ್ಬೊರೇ ಸೆಣ್ಸುದು. ಮೂರ್ನೆವ್ಕೆ ಅದ್ಕೆ ಪ್ರವೇಶ ಇಲ್ಲೆ. ಒಬ್ಬ ಅದಿಕೆ ಹೋಗದಿದ್ದರೆ ತುಂಬ ಅವಮಾನ. ಹಾಂಗೆ ಗಂಧರ್ವನ ಎದ್‌ರ್ಸಿಕೆ ಹೋತು. ಹಾಂಗೆ ಹೋದರ ಭೀಷ್ಮನೊಟ್ಟಿಗೆ ಹೇಳ್ತಿಲೆ. ಆ ಯುದ್ಧಲಿ ಗಂಧರ್ವ ಕುತಂತ್ರ ಮಾಡಿ ಇವನ ಕೊಂದ್ ಬುಟ್ಟ∴ತ್. ವಿಷಯ ತಿಳ್ದ್ ಭೀಷ್ಮನ ಪರಿವಾರಕ್ಕೆ ತುಂಬ ದುಃಖ ಆತ್. ಆದರೆ ಕಾರ್ಯ ಮಿಂಚಿ ಹೋತು. ಹಾಂಗೆ ದುಃಖನ ನುಂಗಿಕ∴ಂಡ್ ಸುಮ್ಮನಾದೊ. ಭೀಷ್ಮ ವಿಚಿತ್ರ ವೀರ್ಯಂಗ ಪಟ್ಟಕ∴ಟ್ಟಿ ರಾಜ್ಯಭಾರ ಮಾಡ್ಸಿತ್. ಇವಂಗೆ ಪ್ರಾಯ ತುಂಬಿ, ಮೊದುವೆ ಆವ ಪ್ರಾಯ ಆತ್‌ಂತ ಭೀಷ್ಮ ಪ್ರಯತ್ನಕ್ಕಿಳ್ದ್, ಕಾಶಿರಾಜ

ಕನ್ಯೆಯರ ಸ್ವಯಂವರ ಮಂಟಪಂದ ಕರ್ಕಂಡ್ ಬಂದ್ ಅಂಬೆನ ಸಮಸ್ಯೆಗೆ ಸಿಕ್ಕಿ, ಅದರ ವೈರ ಕ∴ಟ್ಟಿಕೆ∴ಂಡ್∴ದರ ಅದರ ಶಾಪಕ್ಕೂ ಗುರಿಯಾದರ ಮುಂದೇ ನೋಡಿ ಆಗುಟು.

ವಿಚಿತ್ರವೀರ್ಯ ಎರ್ಡ್ ಹೆಣ್ಣ್‌ಗಳೊಟ್ಟಿಗೆ ಭಾರಿ ಸುಖದ ಸಂಸಾರ ಜೀವನ ನಡ್ಸಿತ್. ರಾಜ್ಯಭಾರ ಮಾಡುವ ಜವಾಬ್ದಾರಿನ ನೋಡಿಕೆ ಭೀಷ್ಮನೂ ಮಂತ್ರಿಗಳೂ ಒಳೋ. ಅಂವ ಪರಿಪೂರ್ಣ ಕಾಮ ಜೀವನ∴ಲೇ ಮಗ್ನ ಆತ್. ಅವನ ದುರದೃಷ್ಟ. ಅಂವ ಕ್ಷಯರೋಗದ ಬಾಧೆಗೆ ಒಳಗಾತ್. ಹಜ್ಞ ಸಮಿಯ ಕ∴ಳಿಯಕನ ಅಂವ ತೀರಿ ಹೋತು. ಅವಂಗೆ ಮಕ್ಕ∴ಳೂ ಆಗಿತ್ತ್‌ಲೆ. ಹಸ್ತಿನಾವತಿ ರಾಜಸಂತತಿಗೆ ಯಾರೊಬ್ಬನೂ ಇಲ್ಲದಾಕನ ರಾಜಮಾತೆ ಸತ್ಯವತಿಗೆ, ಭೀಷ್ಮಂಗೆ ದಿಕ್ಕೇ ಕಾಣದಾತ್. ತುಂಬ ದುಃಖ ಪಟ್ಟೊ. ಈ ಸಂಕಟ ಸಮಯ∴ಲಿ, ಹಳ್ಳ∴ಲಿ ಹೋಂವ ಹುಲ್ಲುಕ∴ಡ್ಡಿನೂ ಆಧಾರವಾಗಿ ಹಿಡಿಯಕೆ ನೋಡುದು. ಅಂದರೆ ಈ ವಂಶಕೆ ಒಳ್ದ ಒಬ್ಬನೇ ಜೆಟ್ಟಿಗಂತೇಳಿರೆ ಭೀಷ್ಮ. ಅಂವ ಸೊಂಸಾರಿಯಾಕೆ ಒಪ್ಪಿಕೆಲೆಂತೇಳ್ದು ಖಾತ್ರಿಯಾದರೂ, ರಾಜಪಟ್ಟನಾರ್ ವಹಿಸಿಕಣ∴ಲಿಂತ ಆಸೆಪಟ್ಟ್ ಅವನೊಟ್ಟಿಗೆ ಕೇಳ್ತ್: "ಮಜ್ಞ! ಭೀಷ್ಮ ಹಿಂದೆ ಕ∴ಳ್ದದ್ ಹೋಗಲಿ. ಇನ್ನೂ ಆ ಹಟ ಬೇಡ. ರಾಜ್ಯಭಾರನ ನೀನೇ ವೈಸಿಕ."

ಅದಿಕೆ ಭೀಷ್ಮ ಹೇಳ್ತ್. "ಅಮ್ಮ ಭೂಮಿಂತೇಳ್ದು ಕೂಡ ಒಂದು ಹೆಣ್ಣೇ. ನಾ ಮಾಡ್ದ ಪ್ರತಿಜ್ಞೆ ಅದಿಕೂ ಅನ್ವಯವಾದೆ. ಸೂರ್ಯ ಚಂದ್ರರೂ ಅವರ ನಿಯಮಗಳ ಮೀರಿರೂ, ಸಮುದ್ರಗ ಅವರ ಮೇರೆ ಮೀರಿರೂ, ಹಿಮಾಲಯವೇ ಅದರ ಸ್ಥಿರತೆನ ಬುಟ್ಟ್ ನಡ್ಡಾಡಿರೂ, ಈ ಭೀಷ್ಮ ಅವನ ಪ್ರತಿಜ್ಞೆನ ಮೀರಿಕಿಲೆ. ದಯಮಾಡಿ ನಾ ಉದ್ಧಟತನ ಮಾಡಿನೆಂತ ತಿಳಿಬಡಿ. ಈ ನಿಮ್ಮ ಮಜ್ಞನ ಕ್ಷಮಿಸಿ. ಅವನ ಜೀವನ ಸಫಲವಾಗ∴ಲಿಂತ ಆಶೀರ್ವದಿಸಿ."

ಆಗನ ಕಾಲ∴ಲಿ, ಮಕ್ಕ ಆಗದೆ ಒಬ್ಬ ತೀರಿಹೋದರೆ ಅವನ ಹಕ್ಕಲೆನ ಸಂಬಂಧಿಕ∴ರ್, ಅಂದರೆ ಅಣ್ಣ–ತಮ್ಮಂದರ್‌ಂದಾಗ∴ಲಿ, ಯೋಗ್ಯ ಬ್ರಾಹ್ಮಣರ್‌ಂದಾಗಲೀ ಸತ್ತವನ ಹೆಣ್ಣ್ ನಿಯೋಗ ಮೂಲಕ ಮಕ್ಕಳ ಪಡಿಯ∴ಕ್. ಮತ್ತೆ ಆ ಸತ್ತ್ ಹೋದವನ ವಾರೀಸ್‌ದಾರ್ರ್‌ಂತ ಮಾನ್ಯತೆ ಪಡಿಯತಿದ್ದೊ. ಹಾಂಗೆ ಹುಟ್ಟಿದ ಮಕ್ಕ, ಅದೇ ಕ್ರಮಂದ ಇಲ್ಲಿಯೂ ವಂಶೋದ್ಧಾರಕರ ಪಡಿದೇ ದಾರಿಂತ ನಿಶ್ಚಯ ಮಾಡ್ದೊ.

ನಿಯೋಗ ಮಾಡುವ ಯೋಗ್ಯ∴ರ್ ಯಾರ್‌ಂತ ಯೋಚನೆ ಮಾಡ್‌ಕನ ಸತ್ಯವತಿ ಮುಚ್ಚುಮರೆಯಿಲ್ಲದೆ ನಡ್ದ ತನ್ನ ಪೂರ್ವ ವೃತ್ತಾಂತನ ಭೀಷ್ಮನೊಟ್ಟಿಗೆ ಹೇಳ್ತ್. ತಾನ್ ಕನ್ಯೆ ಆಗಿರ್ಕನ, ಅಪ್ಪನ ಮನೆಲಿದ್ದ ಕಾಲ∴ಲಿ ಪ್ರಯಾಣಿಕರ ಹಳ್ಳದ ಒಂದು ದಡಂದ ಇನ್ನೊಂದಕೆ ದೋಣಿ ದಾಟ್ಸುವ ಕೆಲ್ಸ ಮಾಡಿಕ∴ಂಡಿದ್ದೆ. ಇದ್ ಬರೇ ಜೆನಸೇವೆನ ರೂಪುಲೇ ಹೊರ್ತು ಅದಿಕೆ ಪ್ರತಿಫಲ ಪಡಿಯತಿತ್ತ್‌ಲೆ.

ಒಂದು ದಿನ ಪರಾಶರ ಮುನಿಂತೇಳವ ಬಂದಂವ ನನ್ನ ಏನೆಲ್ಲ ಉಪದೇಶ ಕೊಟ್ಟ್ ಒಪ್ಸಿ ನನ್ನ ದೇಹ ಸಂಪರ್ಕ ಮಾಡ್ತ್. ಅದರ ಪ್ರತಿಫಲವಾಗಿ ನಂಗೆ ಆಗ∴ಳೇ ಒಂದು ಗ∴ಂಡ್ ಕೂಸು ಹುಟ್ಟಿತ್. ಆ ಕೂಡಲೇ ಅವನೂ ಒಬ್ಬ ದೊಡ್ಡ ಹೈದನಾಗಿ ಬೆಳ್ತ್. ಆಗ ರುಸಿ ಇಂವಂದ ಭಾರಿ ಒಳ್ಳ ಕೆಲ್ಸಗ ಆಕೆ ಒಳೊ. ಇವಂಗೆ ಕೃಷ್ಣ ದೈಪಾಯನಂತ ಹೆಸ್‌ರಿಸಿನೆ. ಇಂವನ ನಾ ನನ್ನೊಟ್ಟಿಗೆ ಕರ್ಕ∴ಂಡ್ ಹೋನೆ. ನಿನ್ನ ಕನ್ಯಾಭಾವಕ್ಕೇನೂ ತೊಂದರೆ ಆಕಿಲೆ. ನೀ ಮುಂದೆ ಒಂದು ಸಾಮ್ರಾಜ್ಯದ ರಾಣಿ ಆಗುವ ಸಂಭವನೂ ಉಟ್ಟು. ನಿಂಗೆ ಏನಾರ್ ತೊಂದರೆ ಬಂದರೆ ಇವನ ಸ್ಮರಿಸಿ ಕರ್ದರೆ ಅಂವ ಯೋಗ್ಯ ಪೊರಿಹಾರ ಕೊಟ್ಟ್ ಹೋದು, ನಾ ಈಗ ಹೋನೆಂತೇಳಿ ಹೊರ್ಟು ಹೋತು. ಆ ನನ್ನ ಮಜ್ಜ ಎಲ್ಲಿಯೋ ತಪಸ್ಸು ಇತ್ಯಾದಿಗಳ ಮಾಡಿಕ∴ಂಡ್ ಇರ್ದು, ನಿಯೋಗ ಕಾರ್ಯಕ್ಕೆ ಅವನ ಬಾಕೆ ಮಾಡಿರೆ ಆದೋ? ನೀ ಏನ್ ಹೇಳಿಯಂತ ಕೇಳ್ತ್. ಅದಿಕೆ ಭೀಷ್ಮ, ಅವನ ಕರ್ಸಿ ಅಮ್ಮ, ಅಂವ ನೀವ್ಗೆ ಮಜ್ಜ ಆದ ಕಾರಣ ಈ ನಿಯೋಗ ಕಾರ್ಯಕ್ಕೆ ಯೋಗ್ಯ ವ್ಯಕ್ತಿಯಾದೆಂತ ಹೇಳ್ತ್. ಸತ್ಯವತಿ ಮತ್ತೆ ಅವನ ಸ್ಮರಣೆ ಮಾಡ್ತ್. ಆ ರುಸಿ ಪ್ರತ್ಯಕ್ಷ ಆತ್, ಎಕೆ ನನ್ನ ಕರ್ಸಿದ∴ರಿ? ನನ್ನಂದೇನಾಕುಂತ ತುಂಬ ಅವಸರಲಿ ಕೇಳ್ತ್. ಒಂದು ನಿಮಿಷನೂ ಹಾಳಾಕೆ ಆಗ∴ದ್ಂತ ಅವನ ಅಭಿಪ್ರಾಯ ಆಗಿರ್ದು.

ಸತ್ಯವತಿ "ನಮ್ಮ ಪ್ರಖ್ಯಾತವಾದ ಭರತ ವಂಶಕೆ, ರಾಜ್ಯನ ಆಳುವ ಸಂತತಿ ಇಲ್ಲದಾತ್. ನಿನ್ನ ತಮ್ಮ ವಿಚಿತ್ರವೀರ್ಯ ಮಕ್ಕ ಆಗದೆ ನಿಧನ ಹೊಂದಿತ್. ಹಾಂಗೆ ನೀ ಅವನ ಹೆಣ್ಮಕ ಪುತ್ರವತಿಗ ಆಗುವ ಹಾಂಗೆ ಅವರ ಕ್ಷೇತ್ರ∴ಲಿ ಗರ್ಭೋತ್ಪತ್ತಿ ಆಗುವಾಂಗೆ ನಿಯೋಗ ಕಾರ್ಯ ನೆರವೇರ್‍ಸೊಕುಂತ ನಿನ್ನ ಕರ್ಸಿದ್"ಂತ ಹೇಳ್ತ್.

"ಮಾತೆನ ಅಪ್ಪಣೆನ ಮೀರಿಕೆ ಬೊತ್ತ್. ನಾ ಇರುವ ಏಕಾಂತ ಸ್ಥಾನಕೆ ಅವನ ಹೆಣ್ಮಕ ಒಬ್ಬೊಬ್ಬರಾಗಿ ಬಂದ್ ನನ್ನ ಅನುಗ್ರಹ ಪಡ್ಕಣಲಿ"ಂತ ಹೇಳಿ ಏಕಾಂತ ಸ್ಥಳಕೆ ಹೋತು.

ಸತ್ಯವತಿ ಅಂಬಿಕೆನ ಪೊರ್ಲು ಶೃಂಗಾರ ಮಾಡಿ, ನಿಂಗೆ ಕೃಷ್ಣದ್ವೈಪಾಯನಂತೇಳ್ವ ಒಬ್ಬ ದೊಡ್ಡ ರುಸಿಯೂ, ತಪಸ್ವಿಯೂ ಆಗಿರೊಂವ ನಿಂಗೆ ಪುತ್ರ ಸಂತಾನ ಆಕೆ ವರಪ್ರಸಾದ ಕೊಟ್ಟದೆ. ನೀ ಹೋಗಿ ಅವಂಗೆ ಸಂತೋಸು ಆವಾಂಗೆ ನಡ್ಕ∴ಂಡ್ ವರಪಡ್ಕಂಡ್ ಬಾ, ಹೋಗುಂತ ಕ∴ಳ್ಸಿತ್. ಅದ್ ರುಸಿಯಿದ್ದಲ್ಲಿಗೆ ಹೋತು. ಅರೆಗತ್ತಲೆಲಿ ಅದ್‌ಕೆ ಒಂದು ಹಳ್ಳು ಹೊತ್ತು ಏನೂ ಗೊತ್ತಾತ್‌ಲೆ. ಮತ್ತೆ ನೋಡಿಕನ ಕ∴ಪ್ಪು ಬಣ್ಣದ, ಅರೆನರ್ತ ಜೋಲುಗಡ್ಡದ ಬೆತ್ತಲೆ ನಿತ್ತ್‌ಕ∴ಂಡಿದ್ದ ರುಸಿಕಂಡ∴ತ್. ಅದಿಕೆ ಜುಮ್ಮಂತ ಹೆದ್‌ರಿಕೆ ಆತ್. ಮತ್ತೆ ಆ ರುಸಿ ಅದರ ಮೈಮೇಲೆ ಕ∴ಯಿ ಹಾಕಿ, ಅದರ್ನೂ ಬೆತ್ತಲೆ ಮಾಡಿಕೆ ನೋಡ್‌ಕನ ತುಂಬ ನಾಚಿಕೆ ಆಗಿ ಗ∴ಟ್ಟಿಕ∴ಣ್ಣ್ ಮುಚ್ಚಿಕಂಡ∴ತ್, ಮತ್ತೆ ಹಳ್ಳು ಹೊತ್ತ್ ಕ∴ಳ್ದ್ ಅದರ ರುಸಿ ಬುಟ್ಟತ್. ಕ∴ಣ್ಣ್ ಮುಚ್ಚಿಕ∴ಂಡ್ ಇದ್ದಾಂಗೆ ಕೈ ಹಾಕಿ, ಸೀರೆನ

ಹೇಂಗೆಲ್ಲ ಸುತ್ತಿಕ∴ಂಡ್ ಹೊರೆಗೆ ಬಂದ ಮೇಲೆ ಸ∴ರಿಯಾಗಿ ಮೈತುಂಬ ಸೀರೆನ ಸುತ್ತಿಕ∴ಂಡ್ ಅಂತಃಪುರಕೆ ಓಡ್ತ್, ತಲೆ ತಿರ್ಗಿದಾಂಗೆ, ವಾಂತಿ ಬಂದಾಂಗೆ ಆದರೂ ಹೇಂಗೊ ತಡ್ಕಂಡ∴ತ್.

ಅಂಬಿಕೆನ ತಂಗೆನ್ನೂ ಅಂಬಾಲಿಕೆಗೆ ಅಕ್ಕಂಗೆ ಹೇಳ್ದ ಉಪದೇಸನೇ ಹೇಳಿ ರುಸಿನಕ್ಕಲೆ ಕ∴ಳ್ಸಿತ್. ಅಂವ ಇದರ ಬೆತ್ತಲೆ ಮಾಡಿ ಅಂವನ ಮೈಗೆ ಒತ್ತಿಕೆ ನೋಡ್‌ಕನ ಇದ್‌ಕೆ ಹೆದ್‌ರಿಕೆ ಆಗಿ ಮೈಲಿದ್ದ ನೆತ್ತ್‌ರ್ ಇಳ್ದ್ ಹೋದಾಂಗೆ ಆಗಿ ಮೈಯೆಲ್ಲ ಬೆಳ್ಳರ್ಸಿ ಹೋತು ಮತ್ತೆ ರುಸಿ ಹಙ್ಙ ಸಮಿಯಲಿ ಅದರ್ನೂ ಬುಟ್ಟ∴ತ್. ಅದ್ ಓಡಿ ಬಂದ್ ಅಂತಃಪುರದ ಕೋಣೆಗೆ ಹೋಗಿ ಬಾಗ್‌ಲ್ ಹಾಕಂಡ∴ತ್.

ಸತ್ಯವತಿ ಅಂಬಿಕೆನ ಕರ್ದ್, ರುಸಿನಕ್ಕಲೆ ಹೋಗಿ ಇನ್ನೊಂದು ವರ ಪಡ್ಕ∴ಂಡ್ ಬಾಂತ ಹೇಳ್ತ್. ಅದ್ ಏನೂ ಉತ್ತರ ಹೇಳ್ತ್‌ಲೆ. ಅದರ ಕೆಲ್ಸದ ಗೂಡೆಗೆ ಪೊರ್ಲು ಅಲಂಕಾರ ಮಾಡಿ, ಅದರ ರುಸಿನಕ್ಕಲೆ ಕ∴ಳ್ಸಿತ್. ಅದ್ ಯಾವ ಅಂಜಿಕೆನೂ ಇಲ್ಲದೆ ರುಸಿ ಮಾಡ್ದದ್ದೈಕೆಲ್ಲ ಸ∴ರಿಯಾದ ಪ್ರತಿಸ್ಪಂದನ ಕೊಟ್ಟ∴ತ್, ರುಸಿ ಬಂದಂವ ಸತ್ಯವತಿಗೆ ಹೇಳ್ತ್: 'ವರದಾನ ಸಂದರ್ಭಲಿ ಸುರುಗೆ ಬಂದ ಗೂಡೆ ಹೆದರಿಕ∴ಂಡ್ ಸ∴ರಿಯಾದ ಸ್ಪಂದನೆ ಕೊಡದೆ ಕ∴ಣ್ಣ್ ಮುಚ್ಚಿಕಂಡದರ್‌ಂದ ಅದಿಕೆ ದೃಢಾಂಗನಾದರೂ ಧೃತರಾಷ್ಟ್ರಂತೇಳುವ ಕುರುಡ ಕೂಸು ಹುಟ್ಟುದು. ಎರ್ಡನೇದು ಹೆದ್‌ರಿ ಮೈಲಿದ್ದ ರಕ್ತ ಎಲ್ಲ ಇಳ್ದ್ ಹೋಗಿ ಮೈ ಬೆಳ್ಳ∴ರ್ಸಿ ಹೋದರ್‌ಂದ ಅದಿಕೆ ಸುಂದರಾಂಗನಾದರೂ ಪಾಂಡುರೋಗ ಸಂಯುಕ್ತನಾದ ಕೂಸು ಪಾಂಡುಂತ ಹೆಸ್‌ರ್‌ಲಿ ಹುಟ್ಟುದು. ಮೂರ್ನೇ ಗೂಡೆ ತುಂಬ ಲವಲವಿಕೆಂದ ನನ್ನ ಕಾರ್ಯ∴ಲಿ ಭಾಗವಹಿಸಿ ಪ್ರತಿಸ್ಪಂದನ ಕೊಟ್ಟರ್‌ಂದ ಅದಿಕೆ ಸುಂದರಾಂಗನೂ, ಬುದ್ಧಿವಂತನೂ ಆದ ವಿದುರಂತೇಳ್ವ ಕೂಸು ಹುಟ್ಟುದು. ಇನ್ನ್ ನಾ ಹೋನೆಂತೇಳಿ ರುಸಿ ಅದೃಶ್ಯ ಆತ್.

ಪುತ್ರ ಸಂತತಿನ ಸಮಸ್ಯೆನ ಪರಿಹರಿಸಿಕಂಡರೂ ಅಲ್ಲಿಯೂ ಒಂದು ಕೂಸುಗೆ ಕುರುಡತನ, ಮತ್ತೊಬ್ಬಂಗೆ ಪಾಂಡುರೋಗಂತೇಳುವ ಕೊರತೆನೇ ಎದುರುಸುವಂತಾಗಿ ಮಕ್ಕಳ ಪಡ್ದ ಸಂಪೂರ್ಣ ಸಂತೋಸು ಅವರ ಪಾಲಿಗೆ ಇಲ್ಲದಾತ್. ಅದರೂ ಭೀಷ್ಮ ಎದೆಗುಂದದೆ ಅವನ ಪಾಲ್‌ನ ಕರ್ತವ್ಯನ ನಿರ್ವಹಿಸಿತ್. ಅವ್ಕೆ ಚೌಲ, ಜಾತ ಕರ್ಮಾದಿ ಕ್ರಿಯೆಗಳ ಮಾಡ್ಸಿತ್. ಮುಂದೆ ತಕ್ಕ ಸಮಯಲಿ ವಿದ್ಯಾಭ್ಯಾಸಗಳ ಮಾಡ್ಸಿ ಅವರ ಬೆಳ್ಸಿತ್. ಅವು ಪ್ರಬುದ್ಧರಾಕನ, ಹಿರಿಯಂವ ಧೃತರಾಷ್ಟ್ರ, ಅಂಗಹೀನ ಆದ್ದರ್‌ಂದ ರಾಜ್ಯಭಾರಕೆ ಯೋಗ್ಯನಲ್ಲಂತ ಅವನ ತಮ್ಮ ಪಾಂಡುಗೆ ರಾಜಪಟ್ಟ ಕ∴ಟ್ಟಿ ರಾಜ್ಯಭಾರ ಮಾಡ್ಸಿತ್. ಒಳ್ಳೆ ಪರಾಕ್ರಮಿಯಾದ ಪಾಂಡು ದಿಗ್ವಿಜಯ ಮಾಡಿ, ಅನೇಕ ರಾಜರೊಟ್ಟಿಗೆ ಯುದ್ಧ ಮಾಡಿ, ಹೇರಳವಾದ ಕಪ್ಪ ಕಾಣಿಕೆಗಳ ತಂದ್ ಹಸ್ತಿನಾವತಿನ ರಾಜ ಭಂಡಾರನ ತುಂಬುಸಿತ್. ಅಣ್ಣ ಧೃತರಾಷ್ಟ್ರಂಗೆ ಏನೂ ಬೇಸರ ಆಕೆ ಆಗದಾಂಗೆ ತನ್ನ

ಪ್ರತಿಯೊಂದು ಕಾರ್ಯನ್ನೂ ಅವನೊಟ್ಟಿಗೆ ಹೇಳಿಯೇ ಅವನ ಸಮ್ಮತಿ ಪಡ್ದೇ ಮಾಡ್ತಿತ್ತ್. ಹಾಂಗಾಗಿ ಧೃತರಾಷ್ಟ್ರಂಗೆ ತನಿಗೆ ರಾಜಪದವಿ ಇಲ್ಲೆಂತೇಳುವ ಬೇಜಾರ ಇಲ್ಲದೆ ಇರ್ತ್ತಿತ್ತ್. ಭೀಷ್ಮ ಧೃತರಾಷ್ಟ್ರಂಗೆ ಗಾಂಧಾರ ದೇಶದ ಸುಬಲ ರಾಜನ ಮಗ ಗಾಂಧಾರಿಂತೇಳ್ದರ ಮೊದುವೆ ಮಾಡ್ಸಿತ್. ಗಾಂಧಾರಿಗೆ ತನ್ನ ಗಂಡ ಹುಟ್ಟು ಕುರುಡಂತ ಹಳ್ಳಾ ಬೇಸರ ಆದರೂ, ತನ್ನ ಗಂಡಂಗೆ ಎಂತದನ್ನೂ ನೋಡಿಕೆ ಸಾಧ್ಯ ಇಲ್ಲೆ, ಅವ್ಕಿಲ್ಲದ ಸೌಭಾಗ್ಯ ನಂಗೂ ಬೇಡಂತೇಳಿ ಅದರ ಕ∴ಣ್ಣಿಗೆ ಯಾಗೋಳೂ ಬಟ್ಟೆ ಕ∴ಟ್ಟಿಕ∴ಂಡೇ ಇರಿಕೆ ಸುರು ಮಾಡ್ತ್. ಅದರ ಪತಿವ್ರತಾಗುಣನ ಮೆಚ್ಚೊಕು. ಹೀಂಗೆ ಕ∴ಣ್ಣಿದ್ದೂ ಕುರುಡಿಯಾಗಿರುವ ಅದಿಕೆ ಒತ್ತಾಸೆಯಾಗಿರಿಕೆ ಅದರ ತಮ್ಮ ಶಕುನಿನೂ ಹಸ್ತಿನಾವತಿಲಿ ಖಾಯಂ ನಿಲ್ಲಿಕೇಂತ ಒಟ್ಟಿಗೆ ಬಾತ್. ಅಂವ ಹಸ್ತಿನಾವತಿಗೆ ಪ್ರವೇಶ ಆದ್ದ್. ಒಂದು ಮನೆಗೆ ಉಡು ಹುಕ್ಕಾಂಗೆ ಆತ್. ಕುಟುಂಬ ಕಲಹ, ಸಹೋದರರ ನೋಡುಲಿ ಮಾತ್ಸರ್ಯ ಬೆಳ್ಸುದರ್ಲಿ ಅಂವನೆ ಪ್ರಧಾನ ಪಾತ್ರ ವಹಿಸಿ, ಕಡೆಗೆ ಕುಲನಾಶವಾಗುವಾಂಗೆ ಆತ್.

ಪಾಂಡು ಒಳ್ಳ ರೀತಿಂದ ರಾಜ್ಯಭಾರ ಮಾಡುದು ಭೀಷ್ಮಂಗೆ ತುಂಬ ಸಂತೃಪ್ತಿ ಉಂಟು ಮಾಡ್ತ್. ಅವಂಗೂ ಮೊದುವೆ ಮಾಡ್ತ್ ಯಾದವ ಕುಲದ ವಸುದೇವನ ತಂಗೆ, ಅದರ ಹೆಸರು ಕೃಷ್ಣೆಂತ. ಇವರ ಸೋದರ ಮಾಂವ ಕುಂತೀಭೋಜ. ಅವಂಗೆ ಹೆಣ್ಣ್ ಮಕ್ಕ ಇತ್ತ್‌ಲೆ, ಹಾಂಗೆ ಅಂವ ತನ್ನ ಸೋದರ ಸೊಸೆನ ಸಣ್ಣಿತರ್ಲೇ ಕರ್ಕಂಡ್ ಹೋಗಿ ಸಾಂಕಿಕ∴ಡ್ ಇತ್ತ್. ಅದಿಕೆ ಕುಂತೀಂತೇ ಹೆಸ್‌ರೂ ಆತ್. ಆ ಮನೆಲೇ ಬೆಳ್ದ್ ಪೊರ್ಲುನ ಕನ್ಯೆ ಆತ್. ಆಗ ದೂರ್ವಾಸಂತೇಳ್ವ ರುಸಿ ಆ ಅರಮನೆಗೆ ಬಂದ್ ಹಳ್ಳಾ ದಿನ ಏನೋ ವ್ರತಮಾಡೊಕುಂತೇಳಿ ನಿತ್ತ್∴ತ್. ದೂರ್ವಾಸನ ಕೋಪ ಬಾರಿ ಪ್ರಸಿದ್ಧವಾಗಿತ್ತ್. ಉಪಚಾರ ಮಾಡುದರ್ಲಿ ಏನಾರ್ ಹೆಚ್ಚುಕ∴ಮ್ಮಿ ಆದರೆ ಸಾಪನೇ ಕೊಟ್ಟು ಬುಡುದು. ಕುಂತೀ ಭೋಜ ಆ ರುಸಿಗೆ ಉಪಚಾರ ಮಾಡಿಕೆ ಸೊಸೆನೇ ನೇಮಿಸಿತ್. ಕುಂತಿ ರುಸಿಗೆ ಬೇಕಾದ ಉಪಚಾರನ ನಿತ್ಯ ತೊಪ್ಪದೆ ಮಾಡಿಕ∴ಂಡ್ ಇತ್ತ್. ಈ ಗೂಡೆನ ನಡೆ ನುಡಿ, ಕೆಲ್ಸದ ಅಚ್ಚುಕ∴ಟ್ಟ್‌ತನ ಎಲ್ಲ ರುಸಿಗೆ ತುಂಬ ಮೆಚ್ಚಿಕೆ ಆತ್. ಹಾಂಗೆ ಒಂದು ದಿನ ಬೊಳ್ಪಿಗೆ "ಇತ್ತ ಒಮ್ಮೆ ಬಾ ಮಗಳೇಂತ ಕರ್ತ್. ಅದ್ ಬಾತ್, ರುಸಿ ಹೇಳ್ತ್ "ನಾ ಇಂದ್ ಐದ್ ಮಂತ್ರಗಳ ಉಪದೇಸ ಮಾಡ್ನೆ. ನೀ ದೊಡ್ಡ∴ವಳಾದ ಮೇಲೆ, ನಿನ್ನ ಮನ್ಸಿಗೆ ಒಪ್ಪಿದ ದೇವತೆನ ನೆನ್ಸಿ ಈ ಒಂದು ಮಂತ್ರನ ಹೇಳಿರೆ ಆ ದೇವತೆ ಬಂದ್ ಅಂವನಾಂಗಿರುವ ಒಂದು ಕೂಸುನ ನಿಂಗೆ ಕೊಟ್ಟು ಹೋದು. ಹಾಂಗೆ ನಿಂಗೆ ಈ ಮಂತ್ರಗಳ್ಂದಾಗಿ ಒಳ್ಳ ಬಲಶಾಲಿಗ∴ಳೂ, ರೂಪವಂತ∴ರೂ ಆದ್ ಐದ್ ಜನ ಮಕ್ಕ ಆವೊಂತೇಳಿ, ಅದರ ಕೆಬೀಲಿ ಐದ್ ಮಂತ್ರಗಳ ಹೇಳ್ತ್. ಕುಂತಿಗೆ ಹಳ್ಳಾ ನಾಚಿಕೆ ಆತ್. ಅದ್ ಇನ್ನೂ ಬಾಲ್ಯ ದಾಟದ, 'ಕೂಸುತನ' ಇನ್ನೂ ದಾಟದ ಗೂಡೆಯೇ ಆಗಿತ್ತ್. ಮತ್ತೆ ಹಳ್ಳಾ ದಿನ ಕ∴ಳ್ದ್ ದೂರ್ವಾಸ

ಹೊರ್ಟ್ ಹೋತು. ಏನೊಂದೂ ತೊಂದರೆ ಆಗದೆ ರುಸಿನ ನೋಡಿಕಂಡದ್ದೈಕೆ ಮಾಂವ ಸೊಸೆನ ತುಂಬ ಹೊಗಳ್ತ್."

ರುಸಿ ಮಂತ್ರೋಪದೇಸ ಕೊಟ್ಟ ಗ.:.ಳಿಗೆಂದಳೆ ಕುಂತಿನ ಮನ್ಸಿಲ್ ಒಂದು ವಿಸಯ ಕೊರ್ಕಂಡೇ ಇತ್ತ್. ಅದ್ ಮಂತ್ರೋಚ್ಚಾರಕೆ ಆ ದೇವತೆ ಹೇಂಗೆ ಬಾದು? ಹೇಂಗೆ ಕೂಸುನ ಕೊಡುದು? ಆ ಕೂಸು ಹೇಂಗಿರ್ದು? ಒಂದು ಕೂಸು ಇದ್ದರೆ ನಾವ್ಗೆ ಆಡಿಕೆ ಒಳ್ಳೆದಲ್ಲಾ? ಒಮ್ಮೆ ಅದರ ಪರೀಕ್ಷೆ ಮಾಡಿಯೇ ಬುಡೋನೊಂತ ನಿಶ್ಚಯ ಮಾಡ್ತ್. ಹಾಂಗೆ ಒಂದು ದಿನ ಒಬ್ಬನೇ ಗಂಗಾನದಿಗೆ ಬಾತ್. ಮೀಯ್ದ್ ದಡಕ್ಕೆ ಬಾತ್. ಸೂರ್ಯನ ನೋಡಿ ಕ.:.ಣ್ಣ್ ಮುಚ್ಚಿ ರುಸಿ ಹೇಳಿಕೊಟ್ಟ ಮಂತ್ರನ ಹೇಳ್ತ್. ಅದ್ ಮುಚ್ಚಿದ ಕ.:.ಣ್ಣ್ ಬುಡಿಕೆ ಮುಂದೆ ಸೂರ್ಯ ಅದರ ಎದ್‌ರಿಗಿತ್ತ್. ಏಕೆ ಕರ್ಸಿದ್‌ಂತ ಕೇಳ್ತ್. ರುಸಿ ಕೊಟ್ಟ ಮಂತ್ರನ ಪರೀಕ್ಷೆ ಮಾಡಿಕೆ ನೋಡ್ದೆ, ಇನ್ನ್ ನೀವು ಹೊರ್ಡಿಂತೇಳ್ತ್. ಅದಾಕಿಲೆನ ಗೂಡೆ. ರುಸಿನ ಮಂತ್ರನ ಪೂರೈಸದಿದ್ದರೆ ನಮ್ಮ ಉಟ್ಟು ಇಲ್ಲೆಂತ ಮಾಡ್ದು. ನಿಂಗೆ ನನ್ನಂತವನೇ ಒಂದು ಕೂಸಾಗ.:.ಲೀಂತ ಹೇಳಿ ಬಾನಕೆ ಏರ್ತ್. ಕುಂತಿ ತಿರ್ಗಿ ನೋಡ್‌ಕನ ಮಿಂಚಿನ ಮೈ ಬಣ್ಣಂದ ಕೂಡ್ದ ಒಂದು ಕೂಸು ಬೆರ್ಲ್ ಉಜ್‌ಂಬಿಕ.:.ಂಡ್ ಬಾನನ ನೋಡಿಕ.:.ಂಡ್ ನೆಗಾಡಿಕ.:.ಂಡಿರ್ದರ ಕಂಡ.:.ತ್. ಕೂಸುನ ನೋಡಿ ಕುಸಿ ಆದರೂ ಕೊಡದ ಗೂಡೆಗೆ ಕೂಸಾತ್‌ಂತ ಹೇಳಿರೆ ಲೋಕದ ಜೆನ ಏನ್ ಹೇಳುವೊ? ತನ್ನ ಅಪ್ಪನ, ಮಾಂವನ ಮರ್ಯಾದೆ ಏನಾದುಂತ ಹೆದ್‌ರಿಕೆನೂ ಆತ್. ಮರದ ಮರ್ಗಿಲ್‌ನಾಂಗಿದ್ದ ಪಾತ್ರ.:.ಲಿ ಕೂಸುನ ಮಲ್ಗ್‌ಸಿ, ಜಲದೇವತೆಗ.:.ಳೇ ಇದರ ಕಾಪಾಡ.:.ಲಿಂತೇಳಿ ನೀರ್‌ಲಿ ತೇಲ್ಸಿ ಬುಟ್ಟ.:.ತ್. ತೇಲಿಕ.:.ಂಡೇ ಹೋದ ಕೂಸು ಬೆಸ್ತನೊಬ್ಬಂಗೆ ಕಾಂಬಕೆ ಸಿಕ್ಕಿ ಅಂವ ಅದರ ಪ್ರೀತಿಲಿ ಎತ್ತಿಕ.:.ಂಡ್ ಹೋಗಿ ಅಂವನ ಹೆಣ್ಣ್‌ನ ಕೈಗೆ ಕೊಟ್ಟ.:.ತ್. ಮಕ್ಕ ಇಲ್ಲದ ಆ ದಂಪತಿಗ ಕೂಸುನ ಪೊರ್ಲು ಸಾಂಕಿದೊ. ಏನೋ ಆಕಾದಂವ ಸೂತ ಪುತ್ರಂತ ಹೆಸ್‌ರ್ ಪಡ್ತ್. ಎಷ್ಟ್ ಸಾಮರ್ಥ್ಯವಂತನಾದರೂ ಹೀನ ಕುಲದವಂತ ಅಪಮಾನಕ್ಕೆ ಗುರಿಯಾತ್.

ಇತ್ತ ಕುಂತಿ ಪ್ರೌಢೆಯಾತ್. ಅದಿಕೆ ಮೊದುವೆ ಮಾಡೊಕುಂತೇಳಿ ಕುಂತೀಭೋಜ ಸ್ವಯಂವರದ ಏರ್ಪಾಡ್ ಮಾಡ್ತ್. ಅದ್ಕೆ ಪಾಂಡುರಾಜ ಹೋಗಿತ್ತ್. ಅವನ ಮೆಚ್ಚಿ ಕುಂತಿ ಅವಂಗೆ ಮಾಲೆ ಹಾಕಿತ್. ಭೀಷ್ಮ ಇದರೊಟ್ಟಿಗೆ ಮದ್ರ ದೇಶದ ರಾಜ ಶಲ್ಯಂಗೆ ಕನ್ಯಾ ಶುಲ್ಕ ಕೊಟ್ಟ್ ಅವನ ತಂಗೆನ ತಂದ್ ಕುಂತಿನೊಟ್ಟಿಗೆ, ಇಬ್ಬರ್ನೂ ಪಾಂಡುಗೆ ವೈಭವಂದ ಮೊದುವೆ ಮಾಡ್ತ್.

ಹಜ್ಞಾ ಸಮಯಂದ ಅವರೆಲ್ಲ ಜೀವನಲಿ ಸಂತೋಸು ತುಂಬಿತ್ತ್. ವಿಧಿ ಸಂಕಲ್ಪಂದ ಹಜ್ಞಾ ಸಮಯ.:.ಲಿ ಒಂದು ಆತಂಕ ಎದ್‌ರಾತ್. ಬೇಟೆಗೆ ಹೋದುಂತೇಳುದು ರಾಜೆರಿಗೆ ಒಂದು ವ್ಯಸನ ಆಗಿರ್ದು. ಪಾಂಡುಗೂ ಇದ್

ಅಂಟಿತ್ತ್. ಅಂವ ಬೇಟೆಗೆ ಹೋದ ಕಾಡ್‌ಲಿ ಕೆಲೊವು ತಪಸ್ವಿಗ ತಮ್ಮ ಸೊಂಸಾರದೊಟ್ಟಿಗೆ ಇದ್ದೊ. ರುಸಿಗ, ತಪಸ್ಸು ಹೋಮ ಹವನ ಮಾಡಿಕ∴ಂಡ್ ಒಳ್ಳ ನಿಷ್ಠೆಲಿ ಇರುವೊ. ಸನಿ ಸ∴ನಿಂತ ಒಂದು ದಿನ ಈ ರುಸಿ ದಂಪತಿಗಳಿಗೆ ಹೋವಕಾಲದ ಆಸೆ ಒಂದು ಬಾತ್. ಮೃಗಗಳ ಗ∴ಂಡ್ ಹೆಣ್ಣ್‌ನ ಮಿಲನ ಕ್ರಿಯೆ ಏಕಾಂತ∴ಲಿ ನಡಿದುಲೆ. ತೆರ್ದ ಜಾಗೆಲಿ ನಡ್ದದೆ. ನಾವು ಮೃಗರೂಪ ತಾಳಿ ಹಾಂಗೆ ಮಾಡಿಕೆ ಮಾತಾಡಿಕ∴ಂಡ್ ಆ ರುಸಿ ತನ್ನ ಹೆಣ್ಣ್‌ನ ಸಾರೆಜನ ಮಾಡಿ, ತಾನ್ ಗ∴ಂಡ್ ಸಾರೆಜ ಆಗಿ ಆ ಕ್ರಿಯೆಯ∴ಲಿ ಮಗ್ನವಾದೊ. ದುರದೃಷ್ಟಂದ ಪಾಂಡು ಬೇಟೆಗೆ ಬಂದವಂಗೆ ಎರ್ಡ್ ಮುರ್ಗಂಗ ಒಟ್ಟಿಗೆ ಇರುದರ ನೋಡಿ ಕುಶಿ ಆಗಿ ಬಾಣನ ಎಳ್ದ್ ಬುಟ್ಟ∴ತ್.

"ನಾ ನನ್ನ ಹೆಣ್ಣ್‌ನೊಟ್ಟಿಗೆ ಸೇರಿ ಸುಖಪಡಿಯೊಕುಂತೇಳ್‌ಕನ ಬಾಣ ಪ್ರಯೋಗ ಮಾಡಿ ನನ್ನ ಕೊಂದ ನೀನೂ ಹಾಂಗೆನೇ ನಿನ್ನ ಹೆಣ್ಣ್‌ನೊಟ್ಟಿಗೆ ಸೇರ್‌ಕನ ಸಾಯುವಂತೇಳಿ" ಸಾಪ ಕೊಟ್ಟ್ ಮೊನ್‌ಷ್ಯ ರೂಪುಲಿ ಸತ್ತ್ ಬೀತ್.

ಪಾಂಡು ಅಪ್ರತಿಭ ಆತ್. ರುಸಿಯಾಗಿದ್ದಂವ ಈ ಅನಾಚಾರಕ್ಕಿಳ್ದ್ ಈಗ ಸಾಪನೂ ಕೊಟ್ಟ. ನಿಜವಾದ ನಿನ್ನ ಅನಾಚಾರಕ್ಕೆ ಶಿಕ್ಷೆಯಾಕದ್ದ್ ನ್ಯಾಯ. ನೀ ನಂಗೆ ಸಾಪ ಕೊಟ್ಟ್ ಅನ್ಯಾಯ ಮಾಡ್ದ. ನಂಗೆ ರೂಪವತಿಯರಾದ ಎರ್ಡ್ ಹೆಣ್ಮಕ ಇದ್ದವರ ಬಾಳಿಗೂ ಕತ್ತಲೆ ಕವಿವಾಂಗೆ ಆತ್. ಈ ಲತಾಲಲಿತಾಂಗಿಯರ ಸಂಸರ್ಗ ಇಲ್ಲದ ಜೀವನ ನಿಸ್ಸಾರ ಆತ್‌ಂತ ದುಗುಡ ತುಂಬಿಕ∴ಂಡ್ ಹಸ್ತಿನಾವತಿಗೆ ಬಾತ್. ಭೀಷ್ಮಂಗೆ, ದೃತರಾಷ್ಟ್ರಂಗೆ, ಅಯ್ಯೆಕ∴ಳಿಗೆ, ಅಜ್ಜಿ ಸತ್ಯವತಿಗೆ ಮತ್ತೆ ತನ್ನ ಹೆಣ್ಮಕಳಿಗೆ ನಡ್ದ ಸಂಗತಿನ ಹೇಳ್ತ್. ಮತ್ತೆ ಜೀವನ∴ಲಿ ವೈರಾಗ್ಯ ಹೊಂದಿ, ನಂಗೆ ರಾಜ ಭೋಗ, ಸಂಪತ್ತ್, ಸಾಮ್ರಾಜ್ಯ ಯಾದೂ ಬೇಡ, ನಾ ಕಾಡಿಗೆ ಹೋನೆ. ನನ್ನ ಯಾರೂ ತಡಿಬೇಡಿಂತೇಳಿ, ತನ್ನ ಸಂಪೊತ್ತ್‌ನೆಲ್ಲ ಬಡವರಿಗೆ ದಾನ ಮಾಡಿ ಕಾಡಿಗೆ ಹೋತು. ಕುಂತಿ ಮಾದ್ರಿಯ∴ರೂ ಅವನ ಅನುಸರ್ಸಿ ಅವನ ಹಿಂದೆಕ∴ಂಡ್ ಹೋದೊ. ಹಾಂಗೆ ಹೋದ ಅವೆಲ್ಲ ಶತಶೃಂಗ ಪರ್ವತ∴ಲಿದ್ದ ರುಸಿಗಳ ಆಶ್ರಮಕ್ಕೆ ತಲ್ಪಿದೊ. ಪಾಂಡುರಾಜ ಅವರ ಆಶ್ರಮಕೆ ಬಂದ್∴ದ್ ರುಸಿಗ∴ಳಿಗೆ ತುಂಬ ಸಂತೋಸು ಆತ್. ಇವರೆಲ್ಲ ಆದರಂದ ಬರಮಾಡಿಕ∴ಂಡೊ.

ಪಾಂಡುರಾಜನೂ ಒಬ್ಬ ಆಶ್ರಮವಾಸಿನಾಂಗೇ ಇತ್ತ್. ಬೊಳ್ಪಿಗೆ ಎದ್ದ್, ಬೆಟ್ಟಂದ ಹರ್ದ್ ಬಾವ ತೊರೆಲಿ ಮಿಯ್ದ್, ಮನೆಗೆ ಬಂದ್, ಧ್ಯಾನ ಯೋಗ ಪ್ರಾಣಾಯಾಮಾದಿಗಲ್ಲಿ ಸುಮಾರು ಒಂದು ಗಂಟೆ ಕಳೀದು, ಮತ್ತೆ ಕಾಡ್‌ಂದ ಎಳ್ಪಿ ತಂದ ಗೆಂಡೆ ಗೆಣ್ಸ್‌ಗಳ್‌ಂದ ಮಾಡ್ದ ಉಪಾಹಾರ ಮಾಡಿ, ಮತ್ತೆ ಏನಾರ್ ಹಳೆಯ ಓಲೆಗರಿಗಳ ಗ್ರಂಥಗಳ ಮೊಗ್‌ಚಿಕ∴ಂಡ್ ಅಧ್ಯಯನ ಮಾಡ್ದು. ಮತ್ತೆ ಹಳ್ಳಿ ಹೊತ್ತು ರುಸಿಗ∴ಳೆಲ್ಲ ಸೇರಿಕ∴ಂಡ್ ಮಾಡುವ ಶಾಸ್ತ್ರಾಧ್ಯಯನ ಚರ್ಚೆಗಳ

ಆಲ್ಸಿಕೆ ಹೋಗಿ ಮಧ್ಯಾಹ್ನ ಮುಟ್ಟ ಅಲ್ಲಿರುದು. ಹೀಂಗೆ ಇಂವ ಒಳ್ಳೆ ಸಾತ್ವಿಕ ಆಚರಣೆಲಿ ಇರ್‌ತ್ತಿತ್ತ್. ಅವನ ಹೆಣ್ಮಕಳು ಅವಂಗೆ ಅನುಸಾರವಾಗಿಯೇ ಇದ್ದೊ.

ಇತ್ತ ಹಸ್ತಿನಾವತಿಲಿ ಭೀಷ್ಮಂಗೆ ನೆಮ್ಮದಿ ಆಗಾಗ ಕೆಡುವಂಥ ಪ್ರಸಂಗಗ.:.ಳೇ ಬಾತಿದ್ದೊ. ತಾನ್ ಬ್ರಹ್ಮಚರ್ಯೆ ವ್ರತಲಿದ್ದರೂ ಹಸ್ತಿನಾವತಿನ ಸಿಂಹಾಸನನ ಸ್ಥಿರ ಪಡ್ಸೊಕುಂತ ಪೇಚಾಡಿರೂ ಧೃತರಾಷ್ಟ್ರ ಮತ್ತು ಪಾಂಡು ರೋಗಗ್ರಸ್ತರಾಗಿ ಹುಟ್ಟಿದೊ. ಅಂಗ ಹೀನಂದ ರಾಜ್ಯಭಾರ ಮಾಡಿಕೆ ಆಕಿಲ್ಲೆಂತೇಳಿ ಪಾಂಡುನ ರಾಜನಾಗಿ ಮಾಡ್ತ್. ಪರಾಕ್ರಮಿಯಾದ ಅವನ ರಾಜ್ಯಭಾರ ಲಾಯ್ಕ್ ನಡ್ದದೆಂತ ಕುಸೀಲಿರ್‌ಕನ ಅಂವ ಶಾಪಗ್ರಸ್ತ ಆಗಿ ರಾಜ್ಯ ತೊರ್ದ್ ಕಾಡಿಗೆ ಹೋತ್. ಬೇರೆ ಉಪಾಯ ಕಾಣದೆ ಧೃತರಾಷ್ಟ್ರಂಗೆ ಪಟ್ಟ ಕ.:.ಟ್ಟಿತ್. ದೃತರಾಷ್ಟ್ರನ ಮನ್ಸ್‌ನೊಳಗೆನ ಆಸೆನ ವಿಧಿಯೇ ಪೂರೈಸಿದಾಂಗೆ ಆತ್. ಒಂದೇ ವಂಶದ ಒಂದ್ ಭಾಗ ಕಾಡ್‌ಲಿ, ಇನ್ನೊಂದು ನಾಡ್‌ಲಿ ಬೆಳ್ಕಂಡ್ ಒಳೊಂತೇಳ್ದು ಒಂದು ತರದ ತೃಪ್ತಿಗೆ ಕಾರಣ ಆತ್.

ಕೆಲೊವು ವೊರ್ಸಂಗ ಹೀಂಗೇ ಕ.:.ಳ್ದೊ. ಈ ಸಮಯಲೊಮ್ಮೆ ವೇದವ್ಯಾಸ ಹಸ್ತಿನಾವತಿಗೆ ಬಂದಂವ ಗಾಂಧಾರಿಗೆ ನೂರು ಮಕ್ಕ ಹುಟ್ಟ.:.ಲಿಂತ ವರ ಕೊಟ್ಟ್ ಹೋತು ಗಡ. ಈ ಸುದ್ದಿ ಕುಂತೀದೇವಿಗೆ ಗೊತ್ತಾತ್. ಕುರು ಸಾಮ್ರಾಜ್ಯಕ್ಕೆ ಸುರುಗೆ ರಾಜನಾಗಿದ್ದಂವ ಪಾಂಡು. ಹಾಂಗೆ ಮುಂದೆನ ರಾಜ್ಯಭಾರ ಸಿಕ್ಕಕಾದ್ ಪಾಂಡುನ ಮಕ್ಕಳಿಗೆ. ಆದರೆ ಶಾಪಗ್ರಸ್ತನಾದ ಅಂವ ರಾಜ್ಯನ ತೊರ್ದ್ ವೈರಾಗ್ಯಲಿ ಕಾಡಿಗೆ ಬಾತ್. ಅವಂಗೆ ಮಕ್ಕಳಾವಂಗೆ ಇಲ್ಲೆ. ಹೀಂಗೆ ಕುಂತಿಗೆ ತುಂಬ ಚಿಂತೆ ಆತ್. ಪಾಂಡು, ಇದ್ಕೆ ಮಕ್ಕಳ ಚಿಂತೆ ಆದ್ದೆ ಕಂಡದೆ, ತನ್ನಂದ ಮಕ್ಕ ಆಕೆ ದಾರಿ ಇಲ್ಲೆ. ಹಾಂಗೆ ಅದರ ಕರ್ದ್, ಮಕ್ಕ ಆತ್‌ಲೆಂತ ಬೇಜಾರ ಆದರೆ, ಯೋಗ್ಯ ಬ್ರಾಹ್ಮಣರ ಆದರ್ಸಿ ಬೇಕಾದ ಮಕ್ಕಳ ಪಡ್ಕ. ಅದ್ ಧರ್ಮಕ್ಕೆ ವಿರುದ್ಧ ಆದುಲೆಂತ ಹೇಳ್ತ್. ಆಗ ಕುಂತಿ ಅದ್ಕೆ ದೂರ್ವಾಸ ಕೊಟ್ಟ ಐದ್ ವರಗಳ ವಿವರ ಹೇಳ್ತ್. ಪಾಂಡುಗೆ ಸಂತೋಸು ಆತ್. ಒಳ್ಳೆದಾತ್. ಅದರ ಪ್ರಯೋಗಿಸಿ ಮಕ್ಕಳ ಪಡ್ಕಂತ ಅದರ ಪ್ರೋತ್ಸಾಹಿಸಿತ್.

ಕುಂತಿನೂ ತಡುಮಾಡ್ತ್‌ಲೆ. ಎಲ್ಲ ಆಚಾರಗಳ ಮಾಡಿ ಯಮಧರ್ಮರಾಯನ ನೆನ್ಸಿ ಬರ್ಸಿ, ನಿನ್ನಂಗಾಗಿರುವ ಸಮದರ್ಶಿಯಾದ ಒಬ್ಬ ಮಜ್ಜನ ನಂಗೆ ಕೊಡುಂತ ಕೇಳ್ತ್. ಹಾಂಗೇ ಆಗ.:.ಲಿಂತ ಹೇಳಿ ಅಂವ ಹೋತು. ಅದಿಕೆ ತಕ್ಕ ಕಾಲ.:.ಲಿ, ಸೌಮ್ಯ ಸ್ವರೂಪದ ಒಬ್ಬ ಮಜ್ಜ ಹುಟ್ಟಿತ್. ಈ ಸುದ್ದಿ ಗಾಂಧಾರಿಗೆ ಮುಟ್ಟಿತ್. ವಂಶಕ್ಕೆ ಹಿರಿಯ ಮಕ್ಕಳ ನಾನೇ ಪಡಿವೆಂತಿರ್ಕನ ನನ್ನಂದ ಮುಂದೇ ಕುಂತಿನೇ ಪಡ್ತ್‌ಂತ ಮತ್ಸರ.:.ಲಿ ಇನ್ನ್ ಈ ಬೊಸ್‌ರ್‌ಂದೇನ್ ಪ್ರಯೋಜನಂತ ಹೇಳಿ ಅದರ ಹೊಟ್ಟೆನ ಕೋಪ.:.ಲಿ ಪುಜೆಕಿತ್. ಆಗ ಆ ನೂರು ಗರ್ಭ ಪಿಂಡಗ.:.ಳೂ ಜರ್‌ಂತ ನೆಲಕೆ ಬಿದ್ದೊ. ಆಗ ಅದ್ ಕೆಲ್ಸದ ಗೂಡೆಗಳ ಕರ್ದ್ ಇದರೆಲ್ಲ ದೂರ

ತಕ.:.ಂಡ್ ಹೋಗಿ ಇಟ್ಟ್ ಬನ್ನಿಂತ ಕೋಪಲಿ ಹೇಳಿ, ಆ ರುಸಿ ನಂಗೆ ಮೋಸ ಮಾಡ್ತ್‌ಂತ ಬುಸ್‌ಗುಟ್ಟಿಕ.:.ಂಡೇ ಇತ್ತ್. ಆಗ ಅಲ್ಲಿ ರುಸಿ ಪ್ರತ್ಯಕ್ಷ ಆತ್. ಬುದ್ಧಿಗೆಟ್ಟ ಹಣ್ಣೇ ನಾನಿಂಗೆ ಒಳ್ಳೆ ನೂರು ಮಕ್ಕ ಹುಟ್ಟಿ.:.ಲಿಂತ ವರಕೊಟ್ಟರೆ ನೀ ಅದರ ಹಾಳ್ ಮಾಡಿಕಂಡಂತ ಜೋರು ಮಾಡಿ ನೂರು ಭರಣಿಗಳಲ್ಲಿ ಹೊಸ ತುಪ್ಪನ ತುಂಬ್‌ಸಿ ಅದರ್ಲಿ ಒಂದೊಂದು ಪಿಂಡನೂ ಇಸಿ ಬಾಯಿಕ.:.ಟ್ಟಿ ಒಂದು ಕರೆಲಿ ಇಸಿ, 'ಪಿಸಿಪಿಸಿ'ಂತ ನಾಲ್ಕ್ ಮಂತ್ರ ಹೇಳಿ, ಅಂವ ಹೋತು. ಒಂದೇ ಕೂಸಾದರೆ ಗರ್ಭ ಒಂಬೊತ್ತ್ ತಿಂಗಳ್ಲಿ ಬೆಳ್ದ್ ಕೂಸ್ ಹುಟ್ಟಿರ್ದು ಹಾಂಗೆ ಕುಂತಿಗೆ ಬೇಗ ಕೂಸು ಹುಟ್ಟಿತ್. ನೂರು ಪಿಂಡಗ ಬೆಳಿಯಕೆ ತುಂಬ ಸಮಯ ಬೇಕಾದೆ. ಹಾಂಗೆ ಈ ಸ್ಪರ್ಧೆಲಿ ಗಾಂಧಾರಿಗೆ ಸೋಲಾತ್, ಆಗ ಕಾಲ್‌ಂದ ತಲೆವರೆಗೆ ಏರ್ದ ಮತ್ಸರ ಅವರ ಕುಲವೇ ನಾಶವಾಗುವವರೆಗೆ ನಡ್ತ್.

ಕುಂತಿಗೆ ಇನ್ನೊಂದು ಬಲಶಾಲಿಯಾದ ಮಙ್ಣ ಬೇಕುಂತಾತ್, ವಾಯುನ ಮಂತ್ರಿಸಿ ಭೀಮನ ಪಡ್ತ್. ಮಹಾಪರಾಕ್ರಮಿಯಾದ ಇನ್ನೊಂದು ಕೂಸು ಬೇಕುಂತ ಇಂದ್ರನ ಪ್ರಾರ್ಥಿಸಿ ಅರ್ಜುನನ ಪಡ್ತ್. ಇಷ್ಟರ್ಲಿ ಮಾದ್ರಿ ಬೇಜಾರಲಿರುವಾಂಗೆ ಕಂಡ.:.ತ್. ಅದಿಕೆ ಮಕ್ಕಳ ಬಯಕೆ ಆಗಿರ್ದುಂತ ಪಾಂಡುನೊಟ್ಟಿಗೆ ಹೇಳಿ ಒಂದು ಮಂತ್ರನ ಅದಿಕೆ ಉಪದೇಶ ಮಾಡ್ತ್. ಅದ್ ಉಪಾಯಗಾರ್ತಿ ಅಶ್ವಿನೀ ದೇವತೆಗಳ ಬರ್ಸಿ ಅವರ್‌ಂದ ನಕುಲ ಸಹದೇವಂತ ಅವುಳಿ ಮಕ್ಕಳ ಪಡ್ತ್. ನಿಜವಾಗಿ ಇಲ್ಲಿ ನಾಲ್ಕೇ ಮಂತ್ರಗ ಕರ್ಚಾದ್ದ್. ಇನ್ನೊಂದು ಏನಾತ್‌ಂತ ಪಾಂಡು ವಿಚಾರ್ಸಿಕೆ ಹೋತ್‌ಲೆ. ಕುಂತಿ ಗುಟ್ಟುನ ಬುಟ್ಟ.:.ತ್‌ಲೆ. ಹೇಂಗೂ ಐದ್ ಮಕ್ಕ ಇರುದರ್‌ಂದ ಪಾಂಡುಗೆ ಸಂದೇಹ ಬಾತ್‌ಲೆ.

ಕೌರವರ ಜನನ

ಭೀಮ ಹುಟ್ಟಿದ ಸಮಯಕ್ಕೆ ಸಮ ಆಗಿ, ತುಪ್ಪದ ಕೊಡ್‌ಪಾಣ.:.ಲಿಸಿದ ಸುರುನ ಪಿಂಡ ಆ ಘಟನ ಒಡ್ದ್ ಹೊರೆಗೆ ಬಾತ್, ಅಷ್ಟಾಕನ ಅಪಶಕುನಗ ಉಂಟಾದು ಕಂಡ್ ಬಾತ್. ಪೂಜಾ ಮಂದಿರ್‌ಗಳ ಕಳಶಗ ಮುರ್ದ್ ಬಿದ್ದೊ. ಕಕ್ಕೆಗ ಕ್ರಾ ಕ್ರಾಂದ್ ಕಂಡಕಡೆಗೆ ಹಾರಿಕೆ ಸುರು ಮಾಡ್ದೊ. ಕುದ್ಕಂಗ ಸುತ್ತು ಮುತ್ತು ಸೇರಿಕ.:.ಂಡ್ ಕುಯ್ಯೋ ಮುಯ್ಯೋಂತ ಮೊರ್ಡಿಕೆ ಸುರು ಮಾಡ್ದೊ. ಭೀಷ್ಮ, ದ್ರೋಣ.:.ರ್ ವಿದುರ ಎಲ್ಲ ಈ ಶಕುನಗಳೆಲ್ಲ ಈ ಕೂಸು ಹುಟ್ಟಿದ ಪರಿಣಾಮ ಇಂವ ಕುಲನಾಶಕ ಆದುಂತ ಈ ಅಪಶಕುನಗ ಸೂಚಿಸುವೆ. ಇವನ ಇಸಿಕಂಬಕೆ ಆಗ.:.ದ್, ಅವನ ನಾಶ ಮಾಡೊಕುಂತ ಹೇಳ್ದೊ, ಒಂದು ಕುಲನ ಒಳ್ಸಿಕೆ ಒಬ್ಬನ, ಒಂದು ಗ್ರಾಮನ ಒಳ್ಸಿಕೆ ಒಂದು ಕುಲನ, ಒಂದು ದೇಸನ ಒಳ್ಸಿಕೆ ಒಂದು ಗ್ರಾಮನ ಬೊಲಿಕೊಡ.:.ಕ್‌ಂತ ಶಾಸ್ತ್ರ ವಚನ ಉಟ್ಟುಂತ ಧೃತರಾಷ್ಟ್ರಂಗೆ ಹೇಳ್ದೊ. ಆದರೆ ಅವರೆಲ್ಲರ ಮಾತ್‌ನ ಅಂವ ತಿರಸ್ಕರಿಸಿತ್. ಇಂತ ಪೊರ್ಲುನ

ಕೂಸುನ ನಾಶಪಡ್ನೊಕುಂತ ಹೇಳ್ದರ್ಲಿ ಅರ್ತ ಉಟ್ಟೊ? ಅಂತ ಶಾಸ್ತ್ರವಚನ ಉಟ್ಟುಂತಾದರೆ ಆ ದೋಷ ನಿವಾರಣೆ ಮಾಡ.ಃಕ್‌ಂತೇಳುವ ಪ್ರತಿಶಾಸ್ತ್ರ ವಚನವೂ ಉಟ್ಟು. ಹಾಂಗಾಗಿ ನಾವೂ ಹೋಮ ಹವನಗಳ ಮಾಡ್ನೊನೊಂತ ಅವರ ಬಾಯೆ ಮುಚ್ಚಿಸಿತ್. ಭೀಷ್ಮಂಗೆ ಸುರೂಗೆ ರಾಜಾಜ್ಞೆನ ಮೀರಿಕೆ ಬೊತ್ತದ ಸ್ಥಿತಿ. ತಿಂಬ ವಸ್ತು ದೊಂಡೆಲಿ ಸಿಕ್ಕಿಕಂಡ ಹಾಂಗೆ ಆತ್. ಇನ್ನ್ ಹಳ್ಳಿ ಸಮಿಯ ಕ.ಃಳಿಯಕನ, ಹಾವುನ ಮೊಟ್ಟೆಯೊಡ್ಡ್ ಪುತು ಪುತುಂತ ಹೊರೆಗೆ ಬಾವಾಂಗೆ ಒಳ್ದ ಕೌರವ.ಃರ್ ಈ ಪ್ರಪಂಚಕೆ ಕ.ಃಣ್ಣ್ ತೆರ್ದೊ. ನಿಜವಾಗಿ ವೇದವ್ಯಾಸ ಯಾವ ಉದ್ದೇಶಂದ ಗಾಂಧಾರಿಗೆ ನೂರು ಮಕ್ಕ ಹುಟ್ಟ.ಃಲಿಂತ ವರ ಕೊಟ್ಟ.ಃತ್‌ಂತ್ ಗೊತ್ತಾದುಲೆ. ಹಳ್ಳಿ ಹಿಂದೆ ಮುಂದೆ ಆದರೂ ಅದಿಕೆ ಅದರ ಗಂಡಂದಳೇ ಮಕ್ಕ ಹುಟ್ಟುವ ಸಂಭವ ಇತ್ತ್. ಪಾಂಡು ಶಾಪ್‌ಗ್ರಸ್ತ ಆದ್ದರ್‌ಂದ ಅವನ ಹೆಣ್ಮಕಳಿಗೆ ಆ ಸಂದರ್ಭ ನಿಜಮಾರ್ಗ.ಃಲಿ ಅಸಂಭವ. ಅದರ್‌ಂದ, ಇದರ ಬದ್‌ಲಿಗೆ ಅದ್ಕೆ ವರಕೊಟ್ಟಿದ್ದರೆ ಅದ್ ನ್ಯಾಯವಾಗಿತ್ತ್. ಅಥವಾ ಇತ್ತಂಡಕ್ಕೂ ಕೊಟ್ಟಿದ್ದರೆ ಸ.ಃರಿಂತೇಳಕಯ್ತ್. ಇಂವ ಹೀಂಗೆ ಮಾಡ್ದರ್‌ಂದ ಕುಟುಂಬದವರೊಳಗೆ ಮತ್ಸರ ದ್ವೇಷ ಬೆಳಿಯಕೆ ಕಾರಣ ಆತ್.

ಶತಶೃಂಗ ಪರ್ವತ.ಃಲಿ ಪಾಂಡವ ಸೊಂಸಾರ

ಕುಂತಿಗೆ ಮೂರು, ಮಾದ್ರಿಗೆ ಎರ್‌ಡ್ ಗ.ಃಂಡ್ ಮಕ್ಕ ಆಗಿ ಪಾಂಡು ಮತ್ತು ಅವನ ಹೆಣ್ಮಕಳ ಜೀವನಕೆ ಸಂತೋಸು ತುಂಬಿತ್ತ್. ಮಕ್ಕ ತಮ್ಮ ಬಾಲಲೀಲೆಗಳ್‌ಂದ ಅಯ್ಯೆಪ್ಪನ ಮನ್ಸ್‌ನ ತುಂಬುತ್ತಿದ್ದೊ. ಹಿರಿಯ ಯುಧಿಷ್ಟಿರ ಸೌಮ್ಯ ಪ್ರಕೃತಿನಂವ, ಎರಡನೆಯಂವ ಭೀಮ ತುಂಟತನ ತೋರ್ಸ್‌ತಿತ್ತ್. ಅಂವ ಸಣ್ಣ ಕೂಸು ಆಗಿರ್ಕನ ಒಮ್ಮೆ ಕುಂತಿ ಕೂಸುಗೆ ಮೊಲೆ ಕೊಟ್ಟ್‌ಕ.ಃಂಡ್ ಅಂಗಳದ ತಿಂಟೆಲಿ ಕುದ್ದ್‌ಕ.ಃಂಡ್ ಇರ್‌ಕನ ಕೂಸು ಏಕೋ ಅತ್ತ ಇತ್ತ್ ತಿರ್ಗಿತ್. ಅಂವ ತೋರವಾಗಿ ತುಂಬ ದಿನ್ನವಾಗಿತ್ತ್. ಅವನ ಆಧರಿಸಿ ಹಿಡ್ಕಣಿಕಾಗದೆ, ಕೂಸು ಕೆಳಗೆ ಬೀತ್. ಕೆಳಗೆ ಒಂದು ದೊಡ್ಡ ಪಾದೆಕ.ಃಲ್ಲ್ ಇತ್ತ್. ಅಷ್ಟೆತ್ತರ್‌ಂದ ಮೇಲೆ ಬಿದ್ದರೆ ದೊಡ್ಡ.ಃವೇ ಒಳಿಯಕಿಲ್ಲೆ, ಹಾಂಗಿರ್ಕನ ಕೂಸುನ ಗ.ಃತಿ ಏನಾಕುಂತ ಗಾಬ್ರಿಲಿ ಕುಂತಿ "ಅಯ್ಯೋ ಕೂಸು!"ಂತ ಬೊಬ್ಬೆ ಹಾಕ.ಃಂಡ್ ಕೆಳಗೆ ಓಡ್ತ್. ಪಕ್ಕದೊವೂ ಓಡಿ ಬಂದೊ. ನೋಡ್‌ಕನ ಬಂಡೆಕ.ಃಲ್ಲ್ ಪೊಡಿ ಪೊಡಿ ಆಗಿತ್ತ್. ಕೂಸು ಮಿಡಿ ಹಲ್ಲ್ ಬುಟ್ಟ್‌ಕ.ಃಂಡ್ ನೆಗಾಡಿಕ.ಃಂಡ್ ಇತ್ತ್. ಇದರ ನೋಡ್ದ ಪಕ್ಕದ ಮನೆವು ಇಂವ ಭೀಮನೆಂತ ಹೇಳಿಕ.ಃಂಡ್ ನೆಗಾಡ್ದೊ ಗಡ.

ಆಶ್ರಮದ.ಃಲಿದ್ದ ಸಿಂಹದ ಮೊರಿಗ ಅವರ ಅವ್ವನ ಹಾಲ್ ಕುಡ್ಕಂಡ್, ಅಯ್ಯೆಕಳ ಮೊಲೆನ ಚೀಂಪಿಕ.ಃಂಡ್ ಇರ್‌ಕನ ಇಂವ ಹೋಗಿ ಅವುಗಳ ಎಳ್ದ್ ತಂದ್ ಬಾಯೆ ಬುಡ್ಸಿ, ನೋಡೊ ಹಲ್ಲ್ ತೋರ್ಸುಂತ ಹಲ್ಲ್‌ಗಳ ಲೆಕ್ಕ

ಮಾಡುದು; ಎರ್ಡ್ ಹಕ್ಕಲೆಕ್ಕಲೆ ಕುದುರೆಗ ಮೇದ್‌ಕಂಡ್ ಇರ್‌ಕನ ಅವುಗಳ ಬೀಲದ ಕೂದೊಲುಗಳ ಒಂದರ್‌ದ್ ಇನ್ನೊಂದಕ್ಕೆ ಗಂಟ್ ಹಾಕಿ ಮತ್ತೆ ಬೊಬ್ಬೆ ಹೊಡ್ದ್ ಅವರ ಓಡ್ಸಿ ಅವು ಬಂಗ ಬಾದೊರ ನೋಡಿ ಚಪ್ಪಾಳೆ ಕುಟ್ಟಿಕ಼ಂಡ್ ನೆಗಾಡ್ದು. ಇನ್ನೊಮ್ಮೆ, ಅಜ್ಜ ಸಿಂಹಗ ಮಲ್ಕ್ಯಂಡಿದ್ದರೆ ಹೋಗಿ ಅದರ ಗಡ್ಡಕೆ ಕೈ ಹಾಕಿ "ಏನಜ್ಜ ಯಾರೊಬ್ಬನೂ ನಿನ್ನ ಗಡ್ಡ ಬೋಳ್ಸಿಕೆ ಬಾತ್‌ಲೆ, ನಾ ನಿನ್ನ ಗಡ್ಡ ಬೋಳ್ಸಿನೆ ಬಾಂತ ನೋಡಿ ಹಿಡ್ಕಂಡ್ ಎಳಿದು. ಇವನ ತುಂಟತನದ ಹಿಂಸೆ ತಡಿಯಕಾಗದೆ ಆ ಮುರ್ಗಂಗ ಎಲ್ಲೊವು ಆಶ್ರಮನ ಬುಟ್ಟ್ ದೂರ ಹೋದೊ. ಅರ್ಜುನ ತುಂಟತನ ತೋರ್ಸುವ ಪ್ರಾಯಕೆ ಬಾಕನ ಆಶ್ರಮಲಿ ಮುರ್ಗಂಗಳೇ ಇತ್ತ್‌ಲೆ. ಅಂವಂಗೆ ಈ ತರದ ತುಂಟತನ ಮಾಡಿಕೆ ಎಡೆ ಇತ್ತ್‌ಲೆ. ಅಂವ ಆಗ಼ಳೇ ಸಣ್ಣ ಬಿಲ್ಲ್ ಬಾಣಗಳ ಮಾಡಿಕ಼ಂಡ್ ಅದರ್ಲಿ ಆಟ ಆಡ್‌ತ್ತಿತ್ತ್. ಯಾದ್ ತನಿಗೆ ಸಿಕ್ಕಿಕಿಲ್ಲೇ ಆದ್ ಬೇಕುಂತ ಹಟ ಹಿಡಿಯತ್ತಿತ್ತ್. ಮತ್ತೆ ಒಳ್ದ ನಕುಲ ಸಹದೇವರ್ ಸೌಮ್ಯಗುಣ಼ಲಿ ಇದ್ದೊ.

ಒಟ್ಟುಲಿ ಪಾಂಡುನ ಮಡದಿ ಮಕ್ಕಳ್‌ಂದ ಕೂಡ್ದ ಸಂಸಾರ ಸುಖಕರವಾಗಿಯೇ ಸಾಗ್‌ತ್ತಿತ್ತ್. ಹೀಂಗೇ ಇರ್ಕನ ಕಾಲಮಾನ಼ಲಿ ವಸಂತಕಾಲದ ಆಗಮನವಾತ್. ಪ್ರಕೃತಿಯೆಲ್ಲವೂ ಚೈತನ್ಯಂದ ಕೂಡಿತ್ತ್. ಗಿಡಮರಗ ಫಲಪುಷ್ಪಗಳಿಂದ ತುಂಬಿ ಸೊಗಸಾಗಿದ್ದೊ, ಗಾಳಿ ಪರಿಮಳಂದ ಕೂಡಿ ಜೀವಕೋಟಿಗಳಿಗೆ ಉನ್ಮಾದವನ್ನುಂಟು ಮಾಡುವಂತಾಗಿತ್ತ್. ಮಾನವ ಸಮೂಹ ಕೂಡ ಉಲ್ಲಾಸ, ಹೊಸ ಚೈತನ್ಯಂದ ಕೂಡಿತ್ತ್.

ಅಂತ ಒಂದು ಸುಂದರ ದಿನ ಮಾದ್ರಿ ಮನೆ ಕೆಲ್ಸನೆಲ್ಲ ಮುಗ್‌ಸಿ, ಅವರ ಬಿಡಾರದ ಹಕ್ಕಲೇ ಇದ್ದ ಕಾಡಿಗೆ ಹೋಗಿ ತಿರ್ಗ್ಯಂಡ್ ಬಾವೊನೊಂತ ಹೋತು. ನಾನಾ ತರದ ಹೂಗ ಅರ್ಲಿ ಸುತ್ತೊಳೂ, ಪರಿಮಳ ಗಮಗಮಿಸುತ್ತಿದ್ದೊ. ಮಾದ್ರಿ ತುಂಬ ಕುಸಿಂದ ಬೇಕಷ್ಟ್ ಹೂಗಳ ಕೊಯ್ಕಂಡ್ ಬಾತ್. ಕೈಗೆ ಬಳೆ, ಕುತ್ತಿಗೆಗೆ ಸರ, ತೋಳಿಗೆ ತೋಳಬಂದಿ, ಕಾಲಿಗೆ ಕಡಗಂತೇಳಿ ಮಾಡಿಕಂಡ಼ತ್. ಅಲ್ಲಿದ್ದ ಚುವೊಳಿ ಬುಡಂದ ಒಂದು ಒಲಿನ ಕಿತ್ತ್, ಒಂದು ಹರಿಯಾಗಿದ್ದ ಕಲ್ಲ್‌ಂದ ಅದರ ಈಂಚಿ ನೂಲು ತೆಗೆದ್ ಅದರ್‌ಂದ ಬೇಕಾದ ಹಾಂಗೆ ತನ್ನ ಅಲಂಕಾರಕ್ಕೆ ಬೇಕಾದ ಆಭರಣಗಳ ಮಾಡಿಕ಼ಂಡ್ ಹಾಕಣ್ತ್. ಈ ಹೂನ ಅಲಂಕಾರ಼ಲಿ ತಾನ್ ಹೇಂಗೆ ಕಂಡನೆಂತ ನೋಡಿಕ಼ಂಬಕ್ಕೆ ಅದಿಕೆ ಆಸೆ ಆತ್. ತಮ್ಮ ಸೌಂದರ್ಯನ ನೋಡಿ, ಬೇರೆವು ಅಂದರೆ ಹೆಣ್ಮಕಳಿಗೆ ಅವರ ಗಂಡಂದ಼ರ್ ನೋಡಿ ಮೆಚ್ಚುದು ಕುಸಿಕೊಡುದು. ಅದರ್‌ಂದೊಳು ತನ್ನ ಪ್ರತಿರೂಪನ ತಾನೇ ನೋಡ್‌ಕನ ಇನ್ನಷ್ಟ್ ಕುಸಿ ಹೆಚ್ಚುದು. ಕಾರಣ ಬೇರೆವು ಮೆಚ್ಚುದು ಬೆರಿ ತೋರಿಕೆದ್ ಆಗಿರಿಕೆ ಸಾಕ್. ಆದರೆ ಅದರ ರೂಪುನ ನೋಡಿಕಂಬಕೆ ಕನ್ನಡಿ ಇಲ್ಲೆ. ಹಕ್ಕಲೇ ಒಂದು ಚೋಡಿ ಹರಿಯತ್ತಿತ್ತ್. ಅಲ್ಲಿ ಹೋಗಿ ಅದರ ನೀರ್ಲಿ ಬೊಗ್ಗಿ ಅದರ ಪ್ರತಿರೂಪುನ ನೋಡ್ತ್.

ಕುಸೀಲಿ ಹಞ್ಞ ನೆಗಾಡಿಕಂಡ.:.ತ್.

ಇದೇ ಸಮಿಯಕೆ ವನವಿಹಾರ ಮಾಡಿಕೆಂತ ಬಂದ ಪಾಂಡು ರಾಜನೂ ಮಾದ್ರಿನ ರೂಪುನ ನೋಡಿ ಅವನೂ ಕುಸಿಪಟ್ಟ್‌ಕ.:.ಂಡ್, ಇಷ್ಟರವರೆಗೆ ಅಂವ ಪಾಲ್ಸ್‌ತಿದ್ದ ಸಂಯಮ ವ್ರತನೆಲ್ಲ ಮರ್ತವನೇ ಮಾದ್ರಿನ ಕಡೆಗೇ ಮನ್ಸ್‌ನೂ, ದೃಷ್ಟಿನೂ ಕೇಂದ್ರೀಕರಿಸಿದವನಾಗಿ ಅದಿದ್ದ ಕಡೆಗೆ ಓಟವಲ್ಲ ನಡಿಗೆ ಅಲ್ಲದಾಂಗೆ ಧಾವಿಸಿಕೆ ಸುರು ಮಾಡ್ತ್. ಹಾಂಗೆ ಪ್ರೇಮ ಭರ.:.ಲಿ ಮಾದ್ರಿ ಬೇಡ ಬೇಡ'ಂತ ಹೇಳಿಕ.:.ಂಡ್ ಇದ್ದಾಂಗೆ. ಹುಲಿ ಹಾರ್ದಾಂಗೆ ಅದರ ಮೇಲೆ ಹಾರಿ ತೊಬ್ಬಿಕಂಬಕೆ ನೋಡ್ತ್.

ಪಾಂಡುನ ಮರಣ, ಮಾದ್ರಿನ ಸಹಗಮನ

ತೊಬ್ಬಿಕಂಬಕೆ ನೀಂಡ್ದ ಕೈಗ ಜೋತು ಬಿದ್ದೊ. ಮುತ್ತು ಕೊಡಿಕೆ ತಕ.:.ಂಡ್ ಹೋದ ಮೋರೆ ಜೋತ್ ಬೀತ್. ಕ.:.ಣ್ಣ್ ಬೇಳೆ ಮೇಲೆ ತಿರ್ಗಿ ನಿತ್ತ.:.ತ್. ತೊಬ್ಬಿಕಾಕನ ಬೆಚ್ಚಗಿದ್ದ ಮೈ, ಹಿಮಗಡ್ಡೆನಾಂಗೆ ತಣ್ಣಂಗಾತ್. ಏನೋ ಅನಾಹುತ ಆತ್‌ಂತ ಮಾದ್ರಿ ಅವನ ಮೂಕುನ ಹೊಳ್ಳೆಗೆ ಬೆರ್ಲ್ ಇಸಿ ಗಾಳಿ ಓಡ್ದೆನೊಂತ ನೋಡ್ತ್. ಇಲ್ಲೆ. ಗಂಡ ಜೀವ.:.ಲಿಲ್ಲೆಂತ ಖಾತ್ರಿ ಆತ್. ಬೊಬ್ಬೆ ಹೊಡ್ದ್ ಅತ್ತ.:.ತ್. "ಬೇಡ ಬೇಡಂತೇಳ್ದಾಂಗೆ ಈ ವಿಸಕನ್ನೆನ ಏಕೆ ಮುಟ್ಟಿದ, ಅಯ್ಯೋ ನನ್ನ ದೇವ್ರೇ? ಇನ್ನ್ ನಿನ್ನ ಹೆಣ್ಮಕಳಿಗೂ ಈ ಸಣ್ಣ ಕೂಸುಗ.:.ಳಿಗೂ ಯಾರ್‌ಗೆತಿ? ರಾಜ ಸಿಂಹದಾಂಗೆ ಇದ್ದ ನಿಂಗೆ ಹೀಂಗೆ ಕಾಡ್‌ಲಿ ಬಿದ್ದ್ ಹೋವ ಅವಸ್ಥೆನ ಹೀನ ವಿಧಿ ತಾತೋ? ಅವನ ಶಿಕ್ಷಿಸೋವು ಯಾರೂ ಇಲ್ಲದಾತೋ? ನಿನ್ನ ಆಸೆನ ಇಲ್ಲಿ ಪೂರೈಸಿಕೆ ನನ್ನಂದ ಆತ್‌ಲೆಂತಾದರೂ, ನಿನ್ನೊಟ್ಟಿಗೇ ನಾ ಪರಲೋಕಕ್ಕೆ ಬಂದ್ ಪೂರೈಸುವೆ ನನ್ನ ರಾಜ" ಹೀಂಗೆ ಹೇಳಿಕ.:.ಂಡ್ ಒಳ್ಳ ಅತ್ತ.:.ತ್.

ಈ ಅಳ್ಗೆಲ್ ಕುಂತಿಗೆ ಕೇಳಿ ಗಾಬ್ರಿ ಆತ್. ಮನೆಲಿ ಪಾಂಡು ರಾಜನೂ ಕಾಂಬೊದುಲೆ. ಏನೋ ಅನರ್ಥ ಆತ್. "ಅಯ್ಯೋ ದೇವ್ರೆ!"ಂತ್ ಹೇಳಿಕೆಂಡ್ ಕಾಡ್‌ನ ಕಡೆಗೆ ತಲೆ ಹರ್‌ಂಡಿಕ.:.ಂಡ್ ಓಡ್ತ್. ಹಿಂದೆಂದ ಮಕ್ಕ.:.ಳೂ ಎನ್‌ಂತ ಗೊತ್ತಾಗದೆ ಅತ್ತ್‌ಕ.:.ಂಡ್ ಓಡ್‌ದೊ.

ಕುಂತಿ ಹೋಗಿ ನೋಡ್‌ಕನ ಮಾದ್ರಿ ಗಂಡನ ಸ.:.ರ್‍ರನ ತನ್ನ ತೊಡೆಮೇಲೆ ಮಲ್ಗಿಸ್‌ಕ.:.ಂಡ್ ಸಹಗಮನ ಮಾಡ್‌ದರ ನಿಶ್ಚೈಸಿದಾಂಗೆ ಹೆಲ್ಲ್ ಉದ್ದಿಕ.:.ಂಡ್ ಇತ್ತ್. ಕುಂತಿ ಮಾದ್ರಿಗೆ ಹೇಳ್ತ್, "ಗಂಡನ ನಂಗೆ ಒಪ್ಪುಸ್. ನೀ ಮಕ್ಕಳ ನೋಡಿಕ. ನಾ ಸಹಗಮನ ಮಾಡ್ನೆ." ಅದ್ಕೆ ಮಾದ್ರಿ " ಅಕ್ಕ! ನೀನೇ ಮಕ್ಕಳ ನೋಡಿಕ.:.ಂಡಿರ್, ನನ್ನ ಮಕ್ಕಳ ನಿನ್ನ ಮಕ್ಕಳ ಹಾಂಗೆ ನೋಡಿಕಂಬಂತ ನಂಬಿಕೆ ಉಟ್ಟು. ಯುಧಿಷ್ಠಿರ! ಭೀಮಾರ್ಜುನರ ನೋಡಿಕಂಡ ಹಾಂಗೆ ಈ ತಮ್ಮಂದರ್‍ರೂ ನೋಡಿಕ ಮಜ್ಜ ಬಲ. ನಾ ಇಲ್ಲದ ಬೇಜಾರ ಅವ್ಕೆ ಆಗ.:.ದ್‌ಂತ ಮತ್ತೆ ಕುಂತಿಗೆ:

“ಅಕ್ಕ ಗಂಡ ಇಂದ್‌ನ ಅಪೂರ್ವ ಸಂದರ್ಭನ ನಂಗೆ ಕೊಟ್ಟ∴ತ್. ಅದರ ನಿಂಗೆ ಹೇಂಗೆ ಬುಟ್ಟು ಕೊಡುದು? ಅವನ ಆಸೆನ ಇಲ್ಲಿ ಪೂರೈಸಿಕೆ ಆತ್‌ಲೆ. ಅದಿಕೆ ಅವನೊಟ್ಟಿಗೇ ಹೋಗಿ ಪರಲೋಕ∴ಲಿ ಅವನ ಬಯಕೆನ ಪೂರ್ತಿ ಮಾಡಿನೆ. ಇದಿಕೆ ಅಡ್ಡಿ ಮಾಡಿಕೆ ಆಗ∴ದ್‌ಂತ ಕೇಳಿಕಣೆ”∴ಂತ ಹೇಳ್ತ್.

ಇದರ ಅಲ್ಲಿನ ರುಸಿಮುನಿಗ ಅನುಮೋದಿಸಿ ಪಾಂಡುನ ಸ∴ರ್ರರಕ್ಕೆ ನಡಿವ ಅಪರ ಸಂಸ್ಕಾರ ಮಾಡಿ ಶ್ರೀಗಂಧದ ಮರಗಳ ಕಾಟನೊಟ್ಟಿ ಅವನ ಸರ್ರದ ದಹನಕ್ರಿಯೆಗೆ ಏರ್ಪಾಟ್ ಮಾಡ್ದೊ. ಮಾದ್ರಿ ಗಂಡನೊಟ್ಟಿಗೆ ಸಹಗಮನ ಮಾಡಿಕೆ ಬೇಕಾದ ವಿಧಿ ವಿಧಾನಗಳ ಮಾಡಿ ಮುಗ್ಸಿದೊ. ಮಾದ್ರಿ ಕಾಟ∴ಲಿ ಗಂಡನ ತಲೆನ ತೊಡೆ ಮೇಲೆ ಇಸಿಕ∴ಂಡ್ ಕುದ್ದ∴ತ್. ಕಾಟಕೆ ಕಿಚ್ಚಿ ಕೊಟ್ಟೊ. ಪಾಂಡುನ ಸರ್ರದೊಟ್ಟಿಗೆ ಅದೂ ಸುಟ್ಟ್ ಬೂದಿಯಾಗಿ ಹೋತು. ಲೋಕದ ಜೆನ ಅದರ ಕೊಂಡಾಡ್‌ದೊ.

ಕುಂತಿ ಒಬ್ಬೆನೆ ಮಕ್ಕಳೊಟ್ಟಿಗೆ ಇರ್‌ಕನ ಪಾಂಡೂ ಮಾದ್ರಿನೂ ಇಲ್ಲದೆ ಅವರ ನೆನ್ಸಿಕ∴ಂಡ್ ಎಡೆ ಬುಡದೆ ಕ∴ಣ್ಣೀರ್ ಹಾಕ∴ಂಡ್ ಅತ್ತ್‌ಕ∴ಂಡೇ ಇರ್‌ತಿತ್ತ್. ಅದರ ನೋಡಿಕ∴ಂಡ್ ಮಕ್ಕ∴ಳೂ ಅಳ್‌ತಿದ್ದೊ. ರುಸಿಗ ಆಗಾಗ ಬಂದ್ ಕುಂತಿಗೆ ಬೇಕಷ್ಟ್ ಸಮಾಧಾನ ಹೇಳ್‌ತಿದ್ದೊ. ಮತ್ತೆ ಇವರೆಲ್ಲ ಹಸ್ತಿನಾವತಿಗೆ ಕರ್ಕ∴ಂಡ್ ಹೋಗಿ ಅವರ ಬಂಧುಗಳಲ್ಲಿ ಬುಡುದು ಒಳ್ಳೆ∴ದ್‌ಂತೇಳಿ, ಅಯ್ಯೆ ಮಕ್ಕಳ ಕರ್ಕ∴ಂಡ್ ಭೀಷ್ಮನಕ್ಕಲೆ ಒಪ್ಪುಸಿ ಪಾಂಡು ರಾಜ ಸತ್ತ∴ದ್ ಮಾದ್ರಿ ಸಹಗಮನ ಮಾಡ್ದ ಸುದ್ದಿನ ತಿಳ್ಸಿ ಅವು ಹಿಂದೆ ಹೋದೊ.

ಹಸ್ತಿನಾವತಿನ ಅರಮನೆ ರೋದನ ದ∴ನಿಂದ ತುಂಬಿತ್. ಭೀಷ್ಮಂಗೆ ಏಕೆ ಹೀಂಗೆ ಮತ್ತೆ ಮತ್ತೆ ದುಃಖ ರಾಸಿಗ ತನಿಗೆ ಒದ್‌ಗಿ ಬಂದವೆಂತ ಚಿಂತೆ ಹತ್ತಿತ್. ಆದರೇನ್ ಮಾಡುದು? ಬಂದದರ ಅನುಭವಿಸೊಕು. ವಿಧಿ ಏನ್ ನೆನ್ಸಿಟೊ– ಅದ್ ನಡಿಯ∴ಲಿಂತ ಈ ತಬ್ಬುರಿ ಮಕ್ಕಳ ಸ∴ರಿಯಾಗಿ ಸಾಂಕೊಕುಂತ ಗ∴ಟ್ಟಿ ಮನ್‌ಸ್ ಮಾಡ್ತ್. ಕೌರವರ ನೂರು ಜೆನ ಮಕ್ಕಳ ಕ∴ರ್ಸಿ ಅವ್ಕೆ ಈ ಐದ್ ಜೆನ ಮಕ್ಕಳ ಪರಿಚಯ ಮಾಡಿಕೊಟ್ಟ∴ತ್. ಕೌರವರ ಉದ್ದೇಶಿಸಿ ಭೀಷ್ಮ ಹೇಳ್ತ್: “ನೋಡಿ ಮಕ್ಕಳೇ, ನೀವ್ಗೆ ಒಬ್ಬ ಪಾಂಡುಂತೇಳ್ವ ಚಿಕ್ಕಪ್ಪ ಇದ್ದೋಂತ ನೀವು ಕೇಳಿರುವರಿ ಅಲ್ಲಾ? ಅವು ನಿಮ್ಮ ಅಪ್ಪ ಧೃತರಾಷ್ಟ್ರಂಗೆ ತಮ್ಮ ಆಕು. ಅವ್ಕಿಬ್ಬೊರಿಗೆ ತುಂಬ ಪ್ರೀತಿ ಇತ್ತ್. ನಿಮ್ಮ ಅಪ್ಪಂಗೆ ಕ∴ಣ್ಣ್ ಕಾಣದರ್‌ಂದ ಅವರ್‌ಂದ ರಾಜ್ಯಭಾರ ಮಾಡಿಕೆ ಅಕಿಲೇಂತೇಳುವ ಕಾರಣಂದ ಪಾಂಡುವೇ ಕುರು ಸಾಮ್ರಾಜ್ಯಕ್ಕೆ ರಾಜ ಆಗಿ ರಾಜ್ಯಭಾರ ಮಾಡ್ದೊ. ಒಳ್ಳೆ ಪರಾಕ್ರಮಿ. ದಿಗ್ವಿಜಯ ಮಾಡಿ ಸುಮಾರ್ ರಾಜರ ಸೋಲ್ಸಿ ತುಂಬ ಕಪ್ಪ ಕಾಣಿಕೆ ತಂದ್ ನಮ್ಮ ಬೊಕ್ಕಸನ ತುಂಬುಸಿದೊ. ಅವು ಒಂದು ದಿನ ಕಾಡಿಗೆ ಬೇಟೆಗೆ ಹೋದೊ. ಮೃಗದ ರೂಪುಲಿದ್ದ ರುಸಿಗೆ ಬಾಣ ಹೊಡ್ದೊ. ರುಸಿ ನಂಗೆ ಬಂದ ಸಾವುನಾಂಗೇ ನಿಂಗೂ

ಬರ್ಲಿಂತ ಸಾಪಕೊಟ್ಟ್ ಸತ್ತ್ ಬೀತ್. ಅರಮನೆಗೆ ಬಂದ ಪಾಂಡು ಹಿರಿಯೊವ್ಕೆ ಎಲ್ಲ ವಿಸಯ ತಿಳಿಸಿ, ವೈರಾಗ್ಯ ತಾಳಿ, ತನ್ನ ವಸ್ತುಗಳ ಎಲ್ಲ ಬಡಬಗ್ಗ∴ರಿಗೆ ದಾನ ಮಾಡಿ ಕಾಡಿಗೆ ಹೋದೊ. ಅವರ ಹಿಂದೆಕ∴ಂಡ್ ಅವರ ಇಬ್ಬೊರು ಹೆಣ್ಮಕಳೂ ಹೋದೊ. ಕೆಲೊವು ಸಮಿಯ ಸಾತ್ವಿಕ ಜೀವನ ನಡ್ಸಿಕ∴ಂಡ್ ಸುಖ∴ಲಿ ಇದ್ದೊ. ಕಾಲಾನುಕ್ರಮ∴ಲಿ ಅವ್ಕೆ ಮಕ್ಕ ಹುಟ್ಟಿದೊ. ಅವೇ ಈ ಐದ್ ಜೆನ. ನೋಡಿ ಇಂವ ಯುಧಿಷ್ಟಿರ. ನೀವ್ಗೆಲ್ಲೊವುಕೆ ಹಿರಿಯ ಅಂದರೆ ಮಕ್ಕಳ ಸಂತತಿಲೇ ನಿಮ್ಮೆಲ್ಲವರ್ಂದ ಮುಂದೆ ಹುಟ್ಟಿದಂವ. ಮತ್ತೆ ಅಂವಂದ ಮತ್ತೆ ನಿಮ್ಮೆಲ್ಲವರ್ಂದ ಮುಂದೆ ಹುಟ್ಟಿದಂವ. ಅಂವಂದ ಮತ್ತೆ ಹುಟ್ಟಿದಂವ ಅಂವನ ತಮ್ಮ ಭೀಮ. ಇಂವನೂ ಈ ಸುಯೋಧನ, ಇಬ್ಬೊರು ಸಮ ಸಮ ಪ್ರಾಯದೊವು. ಭೀಮಂದ ಮತ್ತೆ ಹುಟ್ಟಿದಂವ ಅಂವನ ತಮ್ಮ ಅರ್ಜುನ. ಇವು ಮೂರು ಜೆನ ಕುಂತಿ ಚಿಕ್ಕಮ್ಮನ ಮಕ್ಕ. ಮತ್ತೆ ಇವಿಬ್ಬೊರು ಅವುಳಿ ಮಕ್ಕ. ಮಾದ್ರಿ ಚಿಕ್ಕವ್ವನ ಮಕ್ಕ. ಇವ್ಕೆ ನಕುಲ, ಸಹದೇವ ಅಂತ ಹೆಸ್ರ್. ಇವ್ಕೆಲ್ಲ ಪಾಂಡು ಅಪ್ಪ ಆದರ್ಂದ ಇವರೆಲ್ಲ ಒಟ್ಟಾಗಿ ಪಾಂಡವರ್ಂದೂ ಹೇಳುವೆ. ನಮ್ಮ ವಂಶಕ್ಕೇ ಸೇರ್ದ ಇವು ನೀವ್ಗೆ ಅಣ್ಣ ತಮ್ಮಂದ∴ರೇ ಆಕು. ಪಾಂಡು ರಾಜ ವನವಾಸಲಿದ್ದದರ್ಂದ ಇವು ಇಷ್ಟರವರೆಗೆ ಅಲ್ಲಿಯೇ ಇದ್ದೊ. ಈಗ ಪಾಂಡು ರಾಜ ಆಕಸ್ಮಿಕವಾಗಿ ತೀರಿ ಹೋದೊ. ಮಾದ್ರಿ ಸಹಗಮನ ಮಾಡ್ತ್. ಹಾಂಗೆ ಇವು ಈಗ ತಮ್ಮ ಕುಟುಂಬದವರೊಟ್ಟಿಗೆ ಇರೊನೊಂತ ಬಂದೊಳೊ. ಇನ್ನ್ ನೀವು ಮುಂದೆಗೆ ಒಟ್ಟಾಗಿ ಸಂತೋಸುಲಿ ಆಟ ಪಾಟ ಮಾಡಿಕ∴ಂಡ್ ಇರೊಕು. ಇದರ್ಂದ ನಮ್ಮ ಸಂತೋಸು ಹೆಚ್ಚುದು. ನೋಡೋ, ಈಗ ಅವರ ಕರ್ಕ∴ಂಡ್ ನಿಮ್ಮ ನಿಮ್ಮ ಹೆಸ್ರ್‌ಗಳ ಅವ್ಕೆ ಹೇಳಿ, ನಿಮ್ಮ ಆಟದ ಜಾಗೆಗಳ ಎಲ್ಲ ತೋರ್ಸಿ ಅವರೊಟ್ಟಿಗೆ ಆಡಿಕ∴ಂಡ್ ಇದ್ದ್ ಮತ್ತೆ ನಿಮ್ಮ ಅಪ್ಪಂಗೆ ಮತ್ತೆ ಅವ್ವಂಗೆ ತೋರ್ಸಿ ಮಾತಾಡಿ ಬನ್ನಿ, ನೋಡೋನೂ”ಂತ ಇವರ ಅವರೊಟ್ಟಿಗೆ ಒಂದು ಮಾಡಿ ಕ∴ಳ್ಸಿದೊ.

ಐದೇ ಜೆನ ಇದ್ದ ಪಾಂಡವ∴ರಿಗೆ ಈ ನೂರು ಜೆನರ ದೊಡ್ಡ ದ∴ಂಡ್‌ನ ನೋಡ್‌ಕನ ಏನೋ ಒಂದು ತರದ ಸಂಕೋಚ ಉಂಟಾತ್. ಕೌರವ∴ರಿಗೂ ಈ ಕಾಡ್‌ನ ಮಕ್ಕ ನಮ್ಮ ಪಂಗಡಕ್ಕೆ ಸೇರ್ದವೊಂದ್ ಏಕಾಕಿ ಸ್ವೀಕಾರ ಮಾಡಿಕೆ ಸಂಕೋಚ ಉಂಟಾತ್. ಈಗ∴ಳೂ ಸಾ ಹಳ್ಳಿ ಮಕ್ಕ ಪೇಟೆಶಾಲೆಗೆ ಸೇರ್‌ಕನೂ ಇದೇ ಭಾವನೆಗಳ ಕಾಣ∴ಕ್. ಒಂದಾಗಿರುವ ಭಾವನೆ ಉಂಟಾಕೆ ಹಜ್ಞಾ ಸಮಯ ಹಿಡ್ದದೆ. ಹೀಂಗೆ ಇಲ್ಲಿಯೂ ಒಂದೊಂದಾಗಿ ವಿರಳ ಮಾತ್‌ಕತೆಗ ಆರಂಭವಾಗಿ ನಿಸ್ಸಂಕೋಚದ ಮಾತ್‌ಕತೆಗ ಆರಂಭ ಆಕೆ ಹಜ್ಞಾ ಕಾಲ ಬೇಕಾತ್. ಅದರೊಟ್ಟಿಗೇ ಆಟಲಿ ಮಗ್ನ ಆಕೆ ಸುರಾತ್.

ಮಕ್ಕ ನಾನಾ ತರದ ಆಟ ಆಡ್‌ತಿದ್ದೊ. ಚೆಂಡಾಟಲಿ ನಾನಾ ತೆರದ

ಆಟಗಿದ್ದೊ. ಅಂಬಾಲ್ ಚೆಂಡ್, ಹೆಗ್ಗೆ ಚೆಂಡ್, ಮೊಟ್ಟೆ ಚೆಂಡ್ ಹೀಂಗೆಲ್ಲ, ಮತ್ತೆ ಅಡ್‌ಂಗಿ ಹಿಡಿವ ಆಟ, ಉಂಗಿಲಾಟ, ಮರಕೋತಿ ಆಟ, ಕಪ್ಪೆ ಹಾರುವ ಆಟ, ಹುಲಿಕ.ಃರ್ ಆಟ – ಇತ್ಯಾದಿ. ಕೆಲೊವು ಆಟಗಳ ಸಣ್ಣ ಸಣ್ಣ ಗುಂಪಾಗಿ ಆಡ್‌ತಿದ್ದೊ. ಎಲ್ಲೊವು ಸೇರಿ ಆಡುವ ಆಟಗ ಕೆಲೊವು ಇದ್ದೊ. ಇದರ್ಲಿ ಭೀಮಂಗೆ ಅಂಬಾಲ್ ಚೆಂಡ್ ತುಂಬ ಪ್ರಿಯವಾದ ಆಟ ಆಗಿತ್ತ್. ಇದರ್ಲಿ ಚೆಂಡ್‌ನ ಬೀಸಿ ಸುರುಗೆ "ಅಂಬಾಲ್, ಅಂಬಾಲ್‌ಂತ ಹೇಳಿಕ.ಃಂಡ್ ಮೂರು ಸ.ಃರ್ತಿ ಬಾನಕೆ ಇಡೋಕು. ಮೂರ್ನೆ ಸ.ಃರ್ತಿನ ಚೆಂಡ್ ನೆಲಕೆ ಬೀಳ್‌ಕನ ಅದ್ ಕೈಗೆ ಸಿಕ್ಕಿದಂವ ಅದರ ಬೀಸಿ ಅವಂಗೆ ಹಕ್ಕಲೆ ಸಿಕ್ಕಿದವಂಗೆ ಹೊಡಿದು. ಅಂವ ಮತ್ತೊಬ್ಬಂಗೆ ಹೀಂಗೇ ಚೆಂಡ್‌ಲಿ ಒಬ್ಬಂದೊಬ್ಬಂಗೆ ಹೊಡ್ಕ.ಃಂಡ್ ತುಂಬ ಹೊತ್ತು ಆಗಿ ಎಲ್ಲೊವುಕೆ ಬೊಚ್ಚಿಕಾಕನ ಹಞ್ಞ ಹೊತ್ತು ನಿತ್ತ್ ಬೊಚ್ಚೆಲ್ ತೆಗ್ದ್ ಮತ್ತೆ ಹಿಂದಕೆ ಮುಂದೆನಾಂಗೆ ಸುರು ಮಾಡುವೊ.

ಇದರ್ಲಿ ಭೀಮ ನಿಸ್ಸೀಮ. ಅಂವ ವಾಯು ಪುತ್ರಲ್ಲೊ? ಹಾಂಗೆ ವೇಗ.ಃಲಿ ಎಲ್ಲವರ್‌ಂದ ಮೇಲಾಗಿತ್ತ್. ಇದರ ಬಗ್ಗೆ ರನ್ನ ಕವಿ ಒಂದು ಸ್ವಾರಸ್ಯ ಘಟನೆನ ಹೇಳ್ದ್. ಅದ್ ಹೀಂಗುಟ್ಟು. ಅಂವ ದ್ರೋಣರ ಹಕ್ಕಲೆ ಬಿಲ್ಲ್ ವಿದ್ಯೆ ಕ.ಃಲಿಯುವ ಕಾಲ.ಃಲ್ಲಿ ಒಮ್ಮೆ ಗುರಿಗೆ ಬಾಣ ಹೊಡಿವ ಕಾಲ.ಃಲಿ ಭೀಮ ಬುಟ್ಟ ಬಾಣದ ಗುರಿ ತೊಪ್ಪಿತ್‌ಂತ ಗುರು ಹೇಳ್ದೊಗಡ. ಕೂಡ್ಲೆ ಓಡಿ ಹೋಗಿ ಆ ಬಾಣ ಗುರಿ ಮುಟ್ಟಿಕೆ ಮುಂದೆ ಆ ಬಾಣನ ಹಿಡ್ಕಂಡ್ ಬಂದ್ ಗುರಿನ ಸ.ಃರಿ ಇಸಿ ಬಾಣ ಬುಟ್ಟ.ಃತ್ ಗಡ. ಈ ಆಟ.ಃಲಿ ಬೇರೆವು ಚೆಂಡ್‌ನ ಹೆರ್ಕಿಕೆ ಮುಂದೆ ಓಡಿ ಹೋಗಿ ಚೆಂಡ್‌ನ ಹೆರ್ಕಿ ಹಕ್ಕಲೆ ಇದ್ದಂವನ ಬೆನ್ನ್ ನೆಟ್ಟಂಗಾಗುವಾಂಗೆ ಬೀಸಿ ಹೊಡಿದು, ಯಾಗೋಳು ಪೆಟ್ಟಿಗೆ ಸಿಕ್ಕ್‌ತಿದ್ದ.ಃದ್ ಕೌರವರ ಪೈಕಿ ಹೊರ್ತು ಅಂವನ ಸೊಂತ ಅಣ್ಣ ತಮ್ಮಂದ.ಃರ ಪೈಕಿ ಯಾರೊಬ್ಬನೂ ಅಲ್ಲ. ಯಾಗಾರ್ ಒಮ್ಮೆ ಹೀಂಗೆ ಆದರೆ ಅದ್ ಆಕಸ್ಮಿಕ. ಉದ್ದೇಸ ಪೂರ್ವಕ ಅಲ್ಲಂತ ತಿಳಿಯ.ಃಕ್. ಆದರೆ ಯಾಗೋಳು ಪುನರಾವರ್ತನೆ ಆದರೆ ಇದ್ ಬೇಕುಂತೇಳೇ ಮಾಡ್ದ ಕೆಲ್ಸಂತ ಎಂತ ಹೆಡ್ಡಂಗೂ ಗೊತ್ತಾದು. ಮತ್ತೆ ಅಂವನ ಮೇಲೆ ಪೆಟ್ಟ್ ತಿಂದೊವ್ಕೆ ಹುರುಡು, ಮತ್ಸರ ಕೋಪ ಉಂಟಾದು. ತಮ್ಮಂದ ಪ್ರತೀಕಾರ ಮಾಡಿಕೆ ಬೊತ್ತಾಕನ ದೊಡ್ಡವರ ಹಕ್ಕಲೆ ದೂರು ತಕ.ಃಂಡ್ ಹೋವೊ. ದೊಡ್ಡೊವು ಇದೆಲ್ಲ ಮಕ್ಕಳಾಟೋ ಅಲ್ಲ?ಂತ ಸಸಾರ ಮಾಡುವೊ. ಅದರ್‌ಂದ ಇದ್ ಇನ್ನಷ್ಟ್ ಹೆಚ್ಚುದು. ಭೀಮನ ಮೇಲೆ ಕೌರವರಿಗೆ ಹಗೆತನ ಬೆಳಿಯಕೆ ಇದೇ ಮೂಲ ಕಾರಣ ಆತ್. ನಾವು ಬೇರೆ, ಅವು ಬೇರೇಂತೇಳುವ ಗುಂಪುಗಾರಿಕೆ ಸುರಾತ್. ಕೌರವರ್ ಪಾಂಡವ ಕೂಟದೊಟ್ಟಿಗೆ ಮಾತ್ ಕ.ಃಮ್ಮಿ ಮಾಡ್ದೊ. ಅವು ಕಾಡ್‌ಲಿ ಹುಟ್ಟಿದ.ಃವುಂತ ಪಾಂಡವರ ಹೀನೈಸಿಕೆ ಸುರು ಮಾಡ್ದೊ. ಇದರ್‌ಂದ ಪಾಂಡವರಿಗೆ ಮುಖ್ಯವಾಗಿ ಭೀಮಂಗೆ ಕೋಪ ಕೆರ್‌ಳ್ತಿತ್ತ್. ಇವು ಕುರುಡರ

ಮಕ್ಕಂತ ಭೀಮ ಹೇಳುದು. ಯುಧಿಷ್ಟರ " ಹಾಂಗೆ ನೀ ಹೇಳಿಕೆ ಆಗ.:.ದ್ಂತ" ಎಷ್ಟ್ ಹೇಳಿರೂ ಕೇಳ್‌ತಿತ್ಲೆ. ಹೀಂಗೆ ಅಸಹನೆ ಪರಸ್ಪರರಿಗೆ ಬೆಳಿಯಕೆ ಸುರಾತ್. ಹೀಂಗಿರ್ಕನ ಬೊಯ್ಲ್ ಜಾಗೆಲಿ ಬೆಳ್ದಿದ್ದ ಒಂದು ಆಲದ ಮರದ ಬುಡ.:.ಲಿ ಒಂದು ದಿನ ಎಲ್ಲ ಮಕ್ಕ.:.ಳೂ ಸೇರ್‍ದೊ. ಮರಕೋತಿ ಆಟ ಆಡೊನೊಂತ ನಿಶ್ಚಯ ಮಾಡ್ದೊ. ಭೀಮನ ಕ.:.ಣ್ಣಿಗೆ ಬಟ್ಟೆ ಕ.:.ಟ್ಟಿ ಮರೆ ಮಾಡಿ ಒಳ್ದೊವು ಎಲ್ಲ ಮರಕ್ಕೆ ಹತ್ತಿದೊ. ಹತ್ತ್‌ಕನೇ ಕ.:.ಲ್ಲ್, ಕೊದ.:.ಂಟಿಗಳ ಭೀಮಂಗೆ ಹೊಡಿಯಕೆಂತ ಹಿಡ್ಕಂಡೇ ಹತ್ತಿದೊ. ಮತ್ತೆ ಭೀಮಂಗೆ ಕ.:.ಲ್ಲ್ ಕೊದೆಂಟಿಗಳ ಹೊಡಿಯಕೆ ಸುರು ಮಾಡ್ದೊ. ಅಂವ ಎಷ್ಟ್ ಪೇಚಾಡಿರೂ ಅವು ಸಿಗ್ತ್‌ಲೆ. ಅವಂಗೆ ಕೋಪ ಬಂದ್ ಆ ಮರನ ಹಿಡ್ದ್ ಅಲ್ಗ್‌ಸಿತ್. ಗಾಳಿ ಬೀಸ್‌ಕನ ಮರಂದ ಮಾಯ್ನ ಹಣ್ಣ್‌ಗ ಬುಡು ಬುಡುಂತ ನೆಲಕೆ ಬಿದ್ದಾಂಗೆ ಬಿದ್ದೊ. ಕೆಲೊವ್ಕೆ ಮೈ ಕೈ ತರೆಹೋಗಿ ನೆತ್ತ್‌ರ್ ಅರಿಯತ್ತಿತ್ತ್. ಕೆಲವರ ಕೈ ಮುರ್ದ್ ನೇಲಿಕ.:.ಂಡ್ ಇತ್ತ್. ಅವೆಲ್ಲ ಅತ್ತ್‌ಕ.:.ಂಡ್ ಭೀಮನ ನೋಡಿಕ.:.ಂಡ್, ನಿಲ್ಲ್ ನಿಂಗೆ ಅಜ್ಜನೊಟ್ಟಿಗೆ ಹೇಳಿ ನಿನ್ನ ಬೆನ್ನ್‌ನ ಹೊಡಿತೆಗ್ಸದೆ ಬುಡಿಕಿಲೆ – ನೋಡುಂತ ಹೇಳ್ದೊ. ಅಂವ ಅವ್ಕೆ 'ವೇ ವೇ'ಂತ ಒಂಗ್ರಿಸಿ ಅವರ್‌ಂದ ಮುಂದೆ ಭೀಷ್ಮಜ್ಜನಕ್ಕಲೆ ಓಡ್ತ್. ಹೋಕನ ಮೊಣ್ಣ್‌ಲಿ ಹೊಣ್ಕಿ ಮೊಣ್ಣ್ ಮೆತ್ತಿಕ.:.ಂಡ್, ಮುಳ್ಳುಗಳ್‌ಂದ ಗೀರಿ ನೆತ್ತ್‌ರ್ ಬರ್‍ಸಿಕಂಡತ್. ಅಜ್ಜಂಗೆ ತೋರ್‍ಸಿ, ಅಳು ಮೋರೆ ಮಾಡಿಕ.:.ಂಡ್, 'ಅಜ್ಜಪ! ಕೌರವರ್ ನನ್ನ ಮೊಣ್ಣ್‌ಲಿ ಹೊಣ್ಕ್‌ಸಿದೊ. ಮುಳ್ಳ್ ಬಲ್ಲೆಗೆ ನೂಕಿ ಹಾಕಿ ಇಷ್ಟೆಲ್ಲ ಬೇನೆ ಮಾಡ್ದೊಂತ ದೂರ್‌ತ್. ಅಷ್ಟರ್‍ಲಿ ಕೌರವರ ದ.:.ಂಡ್ ಬಾತ್. ಕೈಕಾಲ್ ಮುರ್‍ದದರ ಕೈಲಿ ಹಿಡ್ಕಂಡ್, ತುಟಿ ಒಡ್ದ್ ನೆತ್ತ್‌ರ್ ಅರ್‍ಸಿಕ.:.ಂಡಿರೊವು, ಹಲ್ಲ್ ಮುರ್ದ್ ಹೋದೊವು ಎಲ್ಲ ಬಂದ್ ಎಲ್ಲೊವು ಒಮ್ಮೆ ದೂರಿಕೆ, ಅಳಿಕೆ ಎಲ್ಲ ಸುರು ಮಾಡ್ದೊ. ಭೀಮ ನೆಗಾಡಿಕೆ ಸುರುಮಾಡ್ತ್. ಭೀಷ್ಮಜ್ಜ ಭೀಮನ ನೋಡಿ, ತುಂಟ ನೀನೆ ಎಲ್ಲ ಮಾಡಿ ದೂರು ತಂದಿಯ? ನಾ ಇವರ ಸಮಾಧಾನ ಪಡ್ಸ್‌ಕನ ಮುಟ್ಟ ನೀ ಒಂಟಿ ಕಾಲ್‌ಲಿ ನಿಲ್ಲೊಕುಂತ ಹೇಳಿ ಕೌರವರ ವಿಚಾರ್‍ಸಿಕೆ ಹೊರ್‍ಟೊ. ಎಲ್ಲೊವು ದೂರು ಹೇಳೊವೆ. ಇನ್ನ್ ಮುಂದೆ ಭೀಮನ ನಿಮ್ಮೊಟ್ಟಿಗೆ ಸೇರ್‍ಸಿಕಣ್ಡೆಡಿ. ಈಗ ಹೋಗಿ, ಗಾಯಕೆ ಮೊದ್ದ್ ಹಾಕ್ಸಿ ಕಣಿಂತ ಹೇಳಿ ಕ.:.ಳ್ಸಿದೊ.

ಭೀಷ್ಮಂಗೆ ಭೀಮನ ನೋಡಿ ತುಂಬ ಕೊಂಡಾಟ ಆತ್. ಇತ್ತ ಬಾ ಮಜ್ಜಂತ ಕರ್ದ್ ತೊಡೆ ಮೇಲೆ ಕುದ್ದುರ್‍ಸಿಕ.:.ಂಡ್ ಅವನ ಬೆನ್ನ್ ಮೇಲೆ ಕೈಯಾಡ್ಸಿಕ.:.ಂಡ್ ಹೇಳ್ದೊ! "ನೋಡು ಮಜ್ಜ! ನೀ ಹೀಂಗೆ ತುಂಟತನ ಮಾಡಿಕೆ ಆಗ.:.ದ್. ಇನ್ನೊಬ್ಬಂಗೆ ಬೇನೆ ಮಾಡಿಕೆ ಆಗ.:.ದ್, ನಾವ್ಗೆ ಬೇನೆ ಆದರೆ ಹೇಂಗೆ ಆದೆನೋ ಹಾಂಗೆ ಅವ್ಕೂ, ಯಾರಿಗೂ ಹಿಂಸೆ ಮಾಡಿಕೆ ಆಗ.:.ದ್. ನೀ ಜಾಣ ಆಗಿರೊಕು, ಎಲ್ಲರೊಟ್ಟಿಗೆ ಪ್ರೀತಿಂದ.:.ಳೇ ಇರೊಕು. ಗೊತ್ತಾತೋ"ಂತ ಕೇಳ್ದೊ. ಆತ್‌ಂತ ಒಪ್ಪಿ ಕ.:.ಂಡ.:.ತ್.

ಹಳ್ಳಾ ದಿನ ಯಾರೂ ಅಂವನ ಆಟಕ್ಕೆ ಸೇರ್ಸಿಕಂಡ.:.ತ್ಲೆ. ಇವಂಗೆ ಅವಮಾನ ಆದರೂ ತಡ್ಕಂಡ.:.ತ್. ಸುರುಸುರುಗೆ ಇಂವನೇ ಮಾತಾಟ್ಕ.:.ಂಡ್ ಹೋದರೂ ಅವು ಮಾತಾಡ್ತಿತ್ತ್ಲೆ. ಮತ್ತೆ ಮಾತಿಗೂ ಸುರಾತ್. ಹಳ್ಳಾ ದಿನ.:.ಲಿ ಒಟ್ಟಿಗೆ ಆಡಿಕೂ ಸುರಾತ್. ಭೀಷ್ಮಜ್ಜನ ಬುದ್ಧಿಮಾತ್‌ಗ ಒಂದು ಕರೆಲಿ ಒಳ್ದೊ. ಸಹಜವಾದ ತುಂಟತನಗಳ ಒತ್ತಡ ಅಂವನ ಕೈಮೀರಿ ಮೇಲೆದ್ದ್ ಬಾತಿತ್ತ್.

ಇದರ ಪರಿಣಾಮವಾಗಿ ದುರ್ಯೋಧನಂಗೆ ಭೀಮನ ಮೇಲೆನ ಕೋಪ ಮಿತಿಮೇರೆ ಇಲ್ಲದೆ ಹೆಚ್ಚಿತ್. ಅಂವನ ಕೊಲ್ಲೊಕುಂತೇಳ್ವ ಭಾವನೆ ಮಾತ್ರ ಬಂದ.:.ದಲ್ಲ. ಅವಂಗೆ ವಿಸದ ಲಾಡ್ ತಿನ್ಸಿದ್, ಹಾವುಗಳ್ಂದ ಕ.:.ಚ್ಚ್‌ಸಿದ್ ಮತ್ತೆ ನಿದ್ದೆ ಮಾಡ್‌ದವನ ಗಂಟ್ಲಿಗೆ, ಕ.:.ಲ್ಲ್ ಕ.:.ಟ್ಟಿ ಗಂಗಾ ನದಿನ ಹೊಂಡಕೆ ನೂಕಿ ಹಾಕುದು ಮುಂತಾದ ಕೆಟ್ಟ ಕೆಲ್ಸಕ್ಕಿಳ್ದ್, ಅವನ ಉದ್ದೇಸ ಸಫಲವಾಗದೆ ತೀವ್ರ ನಿರಾಸೆ ಹೊಂದಿತ್. ಪಾಂಡವ.:.ರ್ ಕಾಡ್‌ಲಿ ಹುಟ್ಟಿದೊವು. ಅವು ಇಲ್ಲಿ ನಮ್ಮೊಟ್ಟಿಗೆ ಈ ರಾಜಭೋಗನ ಅನುಭವಿಸುದರ ಸಹಿಸಿಕೆ ಆದ್‌ಲೆ. ಅವರ ಅಪ್ಪ ರಾಜನಾಗಿದ್ದ ಕಾರಣ, ಇಲ್ಲಿಯೂ ಅವರ್‌ಂದ ನೀವ್ಗೆ ಅನ್ಯಾಯ ಆಗುಟು. ಅದರ ನೀವು ಗಮನಿಸ್‌ತಿಲ್ಲೆ. ಹಾಂಗೆಲ್ಲ ಭೇದ ಮಾಡ್ದ್ ಈ ಭೀಷ್ಮಜ್ಜ. ಅವು ಮಾಡ್ದೇ ಕಾನೂನು, ನೀತಿ. ಅಂದ್ ನೀವು ರಾಜ ಆಕೆ ಸಾಧ್ಯ ಆಗದ್ದ್ ಇಂದ್ ಹೇಂಗೆ ಸಾಧ್ಯ ಆತ್? ಈಗ ನೀವುಗೆ ಕ.:.ಣ್ಣ್ ಬಾತೋ? ಇದಕ್ಕೆ ಭೀಷ್ಮಜ್ಜ ಏನ್ ಉತ್ತರ ಹೇಳುವೊ? ಯಾರ್ ಕೇಳುದು? ನೀವು ಕೇಳಿಕೆ ಹೊರ್ಟರೆ ಪದವಿಂದ ಇಳ್ಸಿ ಬುಟ್ಟರೆ! ಎಂತ ನೀವ್ಗೂ ಹೆದ್‌ರಿಕೆ! ಯುಧಿಷ್ಠರಂಗೆ ಯುವರಾಜ ಪಟ್ಟ ಕ.:.ಟ್ಟಿಕೆ ಹೊರ್ಟೊಳೊ. ಕಾರಣ ಅಂವ ರಾಜನಾಗಿದ್ದ ಪಾಂಡುನ ಹಿರಿಮಜ್ಜ ಗಡ! ಕುಲ ಮೊರ್ಯಾದೆನ ಮುಚ್ಚಿಕಂಬ ಕಾರಣಂದ ನಿಜ ವಿಸಯನ ಬಿಚ್ಚುದ್‌ಲೆ.

ನಿಜವಾದರೆ ನೋಡಿರೆ ಅವು ಐದು ಜನ ಮಕ್ಕ ಪಾಂಡವರೇ ಅಲ್ಲ. ಬೇಕರೆ ಗುರ್ತಿಸಿಕೆ ಅಯ್ಯೆಕಳ ಹೆಸ್‌ರ್‌ನ ಮೂಲಕ ಮೂರು ಜೆನ ದೊಡ್ಡೊವುಕೆ ಕೌಂತೇಯ.:.ರ್, ಮತ್ತೆನ ಇಬ್ಬೊರಿಗೆ ಮಾದ್ರೇಯ.:.ರ್‌ಂತ ಹೇಳ.:.ಕ್. ಪಾಂಡು ಚಿಕಪಂಗೆ ರುಸಿನ ಸಾಪಂದಾಗಿ ತನ್ನ ಹೆಣ್ಮಕಳೊಡನೆ ದೈಹಿಕ ಸಂಪರ್ಕ ಬೆಳ್ಸಿಕೆ ಸಾಧ್ಯ ಇಲ್ಲೆಂತ ಜಗಜ್ಜಾಹಿರಗೊಳ್ಸಿ ಕಾಡಿಗೆ ಹೋತು. ಹಾಂಗಾಗಿ ಅವಂಗೆ ಮಕ್ಕ ಆಕಿಲ್ಲೇಂತ ಲೋಕಕ್ಕೆ ಗೊತ್ತಾತ್. ಆದರೆ ಅವನ ಹೆಣ್ಮಕ ಮಕ್ಕಳ ಹೆತ್ತೊ. ಅದ್ ದೂರ್ವಾಸ ರುಸಿನ ಮಂತ್ರದ ಪ್ರಭಾವಂದ ಒಬ್ಬೊಬ್ಬ ದೇವತೆ ಬಂದ್, ಆ ಹೆಣ್ಮಕ ಕೇಳ್ದ ಮಕ್ಕಳ ಕೊಟ್ಟ್ ಹೋದೊಂತ ಕತೆ. ಅಂವ ಏನ್ ಮಕ್ಕಳ ಮಾಯನ ಮರದಡಿಂದ ಹೆರ್ಯಂಡ್ ತಂದ್ ಕೊಟ್ಟದಲ್ಲ. ಲಜ್ಜೆ ಬುಟ್ಟು ಹೇಳೊಕಂದರೆ ಅವು ನಮ್ಮ ಈ ಪವಿತ್ರ ಕುರುವಂಶಕ್ಕೆ ಸೇರ್ದವೊಲ್ಲ, ಅವು ಹಾದರಕೆ ಹುಟ್ಟಿದೊವು. ನ್ಯಾಯವಾಗಿ ಹಸ್ತಿನಾವತಿನ ಸಾಮ್ರಾಜ್ಯ.:.ಲಿ ಅವ್ಕೆ

ಪಾಲಿಲ್ಲೆ. ಭೀಷ್ಮಜ್ಜ ಮಾತ್ರ ಪಾಂಡು ಆಳ್ತಿದ್ದ ನೆಲನ ಅವುಕೆ ಕೊಟ್ಟ್ ಅದಿಕೆ ಯುಧಿಷ್ಟರನ ಯುವರಾಜಂತ ಮಾಡಿಬುಡೊಕುಂತ ಹೊರ್ಟೊಳೊ. ಅದ್ ಸ.ೞರಿಯಲ್ಲಂತ ಹೇಳಿರೆ 'ನೀ ಯಾರ್ ಕೇಳಿಕೆ"?ಂತ ದಬಾಯ್ಸುವೆ. "ಇಡೀ ಸಾಮ್ರಾಜ್ಯ ನನ್ನ ಹಕ್ಕಿಗೊಳಪಟ್ಟ.ೞದ್. ನಂಗೆ ಬೇಕಾದಾಂಗೆ ಮಾಡುವೆ. ನನ್ನ ತಡಿಯಕೆ ಬಂದವನ ನೋಡಿಕಣೆ"ಂತ ಹೆದ್ರ್‌ಸಿದೊ. ನಾನು ಸುಮ್ಮಂಗಾದೆ. ಹೀಂಗೆಲ್ಲ ಮಾಡಿರು, ಅಪ್ಪಾ! ಅವು ಇಲ್ಲಿ ನಮ್ಮೊಟ್ಟಿಗೆ ಇರಿಕೆ ಬೊತ್ತ್. ಹೇಂಗಾರ್ ಉಪಾಯದ ಮಾತಾಡಿ ನೀವು ಅವರ ದೂರ ಕ.ೞಳ್ಸೊಕು"ಂತ ಧೃತರಾಷ್ಟ್ರಂಗೆ ತಿಳ್ಸಿಕೊಟ್ಟ.ೞತ್.

ಭೀಷ್ಮಜ್ಜ.ೞರ್ ನಿರ್ಧಾರ ಮಾಡ್ದಂಗೆ ಯುವರಾಜಂತ ಯುಧಿಷ್ಟರಂಗೆ ಪಟ್ಟ ಆತ್. ಅದಾಗಿ ಹಣ್ಣಾ ದಿನ ಕ.ೞಳ್ದ್ ಧೃತರಾಷ್ಟ್ರ ಯುಧಿಷ್ಠಿರನ ಬಾಕೆಮಾಡಿ, "ವಾರಣಾವತ.ೞಲಿ ಕೈಲಾಸೇಶ್ವರನ ಉತ್ಸವ ಹಣ್ಣಾ ದಿನ ನಡ್ದದೆ ಗಡ. ನೀವು ಅಯ್ಯೆ ಮಕ್ಕ ಅಲ್ಲಿಗೆ ಹೋಗಿ ಸುಖ.ೞಲಿದ್ದ್ ಬನ್ನಿ. ಇಲ್ಲಿ ನನ್ನ ಉರಿಕೊಳ್ಳಿ ಮಕ್ಕಳ್‌ಂದ ಏನಾರ್ ಕಿಸ್‌ರ್ ಕೆಡ್‌ಕ್ ನೀವ್ಗೆ ತೊಪ್ಪುದುಲೆ. ಹಾಂಗೆ ಹೋಗಿ ಹಣ್ಣದಿನಾರ್ ನೆಮ್ಮದಿಲಿದ್ದ್ ಬನ್ನಿ"ಂತ ಹೇಳ್ತ್. ಇದಿಕೆ ಮುಂದೆ ದುರ್ಯೋಧನ ಪುರೋಚನಂತ ಹೇಳುವ ಒಬ್ಬ ಸೇವಕಂಗೆ ಬೇಕಷ್ಟ್ ದುಡ್ಡ್ ಕೊಟ್ಟ್ ಗುಟ್ಟ್‌ಲಿ ವಾರಣಾವತಕ್ಕೆ ಹೋಗಿ ಅಲ್ಲಿ ಪಾಂಡವರಿಗೆ ನಿಲ್ಲಿಕೆ ಒಂದು ಸೋಕುನ ಅರಮನೆನೊಂದರ ಅರ್ಕ್‌ಲಿ ಕ.ೞಟ್ಟಿಕೆ ಅಪ್ಪಣೆ ಕೊಟ್ಟಿತ್ತ್. ಪಾಂಡವ.ೞರ್ ಅದರ್ಲಿರ್ಕನ ತಕ್ಕ ಸಮಯ ನೋಡಿ ಅದಿಕೆ ಕಿಚ್ಚಿಕೊಟ್ಟ್ ಅದರೊಟ್ಟಿಗೆ ಅವೂ ಬೂದಿಯಾಗುವಂತೆ ಮಾಡೂಕುಂತ ಹೇಳಿ ಕ.ೞಳ್ಸಿತ್ತ್. ಆಕಸ್ಮಿಕವಾಗಿ ಕಾಂಬ ಹಾಂಗೆ ಇದರ ಮಾಡಿ ಮುಗ್ಸಿರೆ ಮುಂದೆ ಅವಂಗೆ ದೊಡ್ಡ ಬಹುಮಾನ ಕಾದ್‌ಕ.ೞಂಡ್ ಉಟ್ಟುಂತ ಅಂವಂಗೆ ಆಸೆ ತೋರಿಸಿತ್ತ್. ಅಂವ ಅಲ್ಲಿಗೆ ಮುಂದೇ ಹೋಗಿತ್ತ್. ಈ ಗುಟ್ಟು ದುರ್ಯೋಧನಂಗೆ ಹೊರ್ತು ಬೇರೆ ಯಾರಿಗೂ ಗೊತಿತ್ತ್‌ಲೆ. ಆದರೆ ವಿದುರಂಗೆ ಆ ಸೂಕ್ಷ್ಮ ಎಲ್ಲ ತಿಳಿಯುತ್ತಿತ್ತ್. ಈಗಳೂ ಹಾಂಗೇ ಆತ್. ಪಾಂಡವರ್ ವಾರಣಾವತಕೆ ಹೊರ್ಟಂದ್ ಅವರ ದಾರಿಕ.ೞಳ್ಸಿಕೆ ಹಿರಿಯೊವು ಹಣ್ಣದೂರ ಒಟ್ಟಿಗೇ ಹೋಕನ ವಿದುರ ಯುಧಿಷ್ಟಿರನೊಟ್ಟಿಗೆ ಬೇರೆವ್ಕೆ ಗೊತ್ತಾಗದ ಬಾಸೆಲಿ ಕಿಚ್ಚಿಂದ ನೀರ್‌ಂದ ಎಚ್ಚರ ಇರೊಕುಂತ ಎಚ್ಚರಿಕೆ ಕೊಟ್ಟ.ೞತ್. ಯುಧಿಷ್ಟಿರನೂ ಗೊತ್ತಾತ್‌ಂತ್ ಉತ್ತರ ಕೊಟ್ಟ.ೞತ್.

ಪಾಂಡವರ್ ವಾರಣಾವತಕೆ ತಲ್ಪಿಕೆ ಮುಂದೇ ಪುರೋಚನ ಅರಕ್ ಸೆಣಬು ಬೆಲ್ಲ, ರಾಳ ಮುಂತಾದರ ಸೇರ್ಸಿ ಭವ್ಯವಾದ ಅರಮನೆಯೊಂದರ ತಯಾರ್ ಮಾಡಿತ್ತ್. ಪಾಂಡವರ್ ಬಂದೆತ್ತಿಕಾಕನ ಭವ್ಯವಾದ ಸ್ವಾಗತ ಕೊಟ್ಟ್, ಅವರ ಅರಮನೆಗೆ ಒಕ್ಕಲ್ ಮಾಡ್ತ್. ಈ ಕೃತ್ರಿಮನ ಯುಧಿಷ್ಟರ ಸುಲಭ.ೞಲಿ ಗುರ್ತಿಸಿ ಅವು ಇಲ್ಲಿಂದ ತೊಪ್ಪಿಸಿಕ.ೞಂಡ್ ಹೋಕೆ ಅದ್‌ಕೆ ಸಮಿಯ ಕಾದ್‌ಕ.ೞಂಡ್

ಇದ್ದೊ. ವಿದುರ ಕ.∴ಳ್ಸಿದ ಆಳ್ ಅರಮನೆಂದ ಗಂಗಾನದಿವರೆಗೆ ಒಂದು ಸುರಂಗನ ಗುಟ್ಟ್‌ಲಿ ಕೊರ್ದ್‌ಕೊಟ್ಟ್ ಇವರ ದೋಣಿಲಿ ಆಚೆಕರೆಗೆ ದಾಡ್ಸಿಕ ಒಬ್ಬನ ನೇಮಿಸಿಕೊಟ್ಟ.∴ತ್.

ಒಂದು ಅಮಾಸೆದಿನ ಇಂದ್ ಹಾರ್‍ರಿಗೆ ಊಟ ಕೊಡಿಕೆ ಉಟ್ಟುಂತೇಳಿ ಅವರ ಆಳ್ ಪೊರಿವಾರನೆಲ್ಲ ನೀವು ಇಂದ್ ಒಂದು ರಾತ್ರೆಮಟ್ಟಿಗೆ ಯಾದಾರ್ ಛತ್ರಗಳ್ಳಿ ನಿತ್ತ್‌ಕಣಿಂತ ಕ.∴ಳ್ಸಿದೊ. ಹಿಂಬೊತ್ ಒಂದು ಬೇಡೆತಿ ಅದರ ಐದ್ ಮಕ್ಕಳೊಟ್ಟಿಗೆ ಬಂದ್ ನಾವ್ಗೆ ಏನಾರ್ ಊಟ ಕೊಡಿಂತ ಕೇಳ್ತ್. ಅದ್ಕೆ ಕುಂತಿ ಒಳ್ದ ಅಡಿಗೆನೆಲ್ಲ ಇಕ್ಕಿತ್. ಅವು ಹೊಟ್ಟೆ ಬಿರಿಯ ತಿಂದ್, ಉಂಡ ಮತ್ತ್‌ಲಿ ಅಲ್ಲೆ ಮಲ್ಗಿ ಗೂರು ಬುಟ್ಟ್‌ಕ.∴ಂಡ್ ನಿದ್ದೆ ಮಾಡ್ದೊ. ನೊಡೀರ್ಲ್ ಆಕನ ಭೀಮ ಅವ್ವನ, ಅಣ್ಣ ತಮ್ಮಂದರ ಸುರಂಗಕ್ಕಿಳ್ಸಿ ನೀವು ಮುಂದೆ ನಡ್ಕಂಡ್ ಹೋಕ.∴ಂಡ್ ಇರಿ, ನಾ ಬಂದ್ ಸೇರಿಕಣೆಂತ ಕ.∴ಳ್ಸಿತ್. ಅಂವ ಒಂದು ದೊಂದಿನ ಹೊತ್ತಿಸಿಕಂಡ್ ಹೋಗಿ ಪುರೋಚನ ಮಲ್ಗಿದ್ದ ಕೋಣೆ ಬಾಗ್‌ಲಿಗೆ ಕಿಚ್ಚಿ ಇಸಿ, ಹಿಂದೆ ಓಡಿಬಂದ್ ಸುರಂಗಕ್ಕಿಳ್ತ್. ಅಮಾಸೆನ ಕ.∴ರಿಕೂಟಿ ಕತ್ತಲೆಲಿ ಅವ್ಕೆ ಎಡ್ಗ್ಯಂಡ್, ಮುಗ್ಗ.∴ರ್ಲಿಕ.∴ಂಡ್ ಮುಂದೆ ಹೋಕೆ ತುಂಬ ಬಂಗ ಆತ್. ಆಗ ಭೀಮ ಅವ್ವನ್ನೂ ಅಣ್ಣನ್ನೂ ಹೆಗಲ್‌ಲಿ ಕುದ್ದ್‌ರ್ಲಿಕ.∴ಂಡ್, ಅರ್ಜುನ, ನಕುಲ ಮತ್ತೆ ಸಹದೇವರ ಎರ್ಡ್ ಪಕ್ಕ ತೆತ್ತಿಕ.∴ಂಡ್ ದಾಪುಗಾಲ್ ಇಸಿಕ.∴ಂಡ್ ಹೋಗಿ, ಗಂಗಾನದಿನ ದಡಕ್ಕೆ ಎತ್ತಿತ್. ದೋಣಿಯಂವ ಅಲ್ಲಿ ಕಾದ್‌ಕ.∴ಂಡ್ ಇತ್ತ್. ಅಂವ ಇವರ ಆಚೆ ಕರೆಗೆ ದಾಡ್ಸಿತ್. ಹಿಂದೆನಾಂಗೆ ಭೀಮ ಅವರೆಲ್ಲ ಹೊತ್ತ್‌ಕಂಡ್ ಕಾಡೊಳಗೆ ಹೋಗಿ, ತುಂಬ ನಿದ್ದೆಲಿದ್ದವರ ಒಂದು ಆಲದ ಮರದ ಕೆಳಗೆ ದಟ್ಟವಾಗಿ ಬೆಳ್ದ ಹುಲ್ಲುನ ಮೇಲೆ ಮೆತ್ತಂಗೆ ಮಲ್ಲಿಸಿತ್. ಎಲ್ಲೊವು ಗಾಢ ನಿದ್ದೆಲಿ ಇದ್ದೊ. ಇಂವ ಅವ್ಕೆ ಕಾವಲ್ ಕುದ್ದ.∴ತ್. ಅವಂಗೆ ತುಂಬ ಆಯಾಸ ಆಗಿತ್ತ್. ದರದರಂದ ಬೆಗ್‌ರ್ ಇಳಿಯುತ್ತಿತ್ತ್. ಹೊದ್ದ ಬಟ್ಟೆಂದ ಅದರ ಉದ್ದಿ, ಅದರ್‌ಂದಳೆ ಗಾಳಿ ಬೀಸಿಕ.∴ಂಡ.∴ತ್. ಅವನ ಅಪ್ಪನೆ ವಾಯು ಅದರ್‌ಂದ ತುಂಬ ಗಾಳಿ ಬಂದ್ ಅವಂಗೆ ತೊಂಪಾತ್. ಕುಡಿಯಕೆ ನೀರು ಬೇಕುಂತಾತ್. ಅದ್ ಬೇಕುಂತಾದರೆ ದೂರದ ಗಂಗೆಗೆ ಹೋಕು. ಇವರ ಬುಟ್ಟು ಹೋದು ಅಪಾಯಂತ ಅದರ ತಡ್ಕಣ್ತ್. ಲೋಕೋತ್ತರ ವ್ಯಕ್ತಿಗ ಅನಾಥರಾಂಗೆ ಮಲ್ಗಿದ.∴ರ ನೋಡಿ ಅಳು ದುಕ್ಕುಡ್ಲಿಕ.∴ಂಡ್ ಬಾಕೆ ಸುರಾತ್. ಹಾಂಗಾಗಿ ಒತ್ತರ್ಲಿಕ.∴ಂಡ್ ಬಾತಿದ್ದ ನಿದ್ದೆ ದೂರಹೋತು.

ಅವು ಪ್ರವೇಶ ಮಾಡ್ದ್, ಹಿಡಿಂಬ ಮತ್ತು ಹಿಡಿಂಬೆಂತ ಹೇಳುವ ಅಣ್ಣತಂಗೆಯಾದ ನರಭಕ್ಷಕ ರಾಕ್ಷಸರ್ ಇದ್ದ ಕಾಡ್. ಹಿಡಿಂಬ ಅವನ ತಂಗೆನೊಟ್ಟಿಗೆ ಆಲದ ಮರದಡಿಲಿ ಮಲ್ಗಿರುವವರ ಹಿಡ್ಕಂಡ್ ಬಾ. ನಾವಿಂದ್ ಹಬ್ಬದೂಟ ಮಾಡೊನೊಂತ ಹೇಳ್ತ್. ಹಾಂಗೆ ಹಿಡಿಂಬೆ ಹೋತು. ಭೀಮನ

ನೋಡಿ ಅದಿಕೆ ಮೋಹ ಉಂಟಾತ್. ನನ್ನ ನೀ ಮೊದುವೆ ಆಕುಂತ ಅವನ ಒತ್ತಾಯ ಮಾಡ್ತ್. ಭೀಮ ಒಪ್ಪಿತ್‌ಲೆ. ಆಗ ಅಲ್ಲಿಗೆ ಕೋಪಲಿ ಬಂದ ಹಿಡಿಂಬನೊಟ್ಟಿಗೆ ಆದ ಯುದ್ಧಲಿ ಭೀಮ ಅವನ ಕೊಂದ∴ತ್. ಮತ್ತೆ ಕುಂತಿ ಮತ್ತೆ ಯುಧಿಷ್ಠಿರರ ಒತ್ತಾಯಂದ ಭೀಮ ಹಿಡಿಂಬೆನ ಮೊದುವೆ ಆತ್. ಹಿಡಿಂಬೆ ಅವರ, ತನ್ನ ಅರಮನೆಗೆ ಕರ್ಕ∴ಂಡ್ ಹೋಗಿ ಸಮ್ಮಾನ ಮಾಡಿ ನಿಲ್ಸಿಕ∴ಂಡ∴ತ್. ಭೀಮಂಗೂ ಹಿಡಿಂಬೆಗೂ ಒಂದು ಗ∴ಂಡ್ ಕೂಸು ಹುಟ್ಟಿತ್. ಅದಿಕೆ ಘಟೋತ್ಕಚಂತ ಹೆಸ್‌ರಿಸಿದೊ.

ಇತ್ತ ವಾರಣಾವತ∴ಲಿ ಅರಕ್‌ನ ಅರಮನೆ ಹೊತ್ತಿ ಹೋದ ದಿನ ತುಂಬ ಗೊಂದಲ ಉಂಟಾತ್. ಕಿಚ್ಚಿನ ನಾಲಿಕೆಗ ಬಾನೆತ್ತರ ಏರಿಕೊಣಿದರ ನೋಡಿ ನಗರದ ಜೆನ ಗಾಬ್ರಿಂದ ಬೊಬ್ಬೆ ಹೊಡ್ಕಂಡ್ ಓಡಿ ಬಂದೊ. ಆಗ∴ಳೆ ಹೆಚ್ಚಿನಂಶ ಅರಮನೆ ಬೂದಿ ಆಗಿತ್ತ್. ಯಾರ್‌ಂದ ಏನೂ ಮಾಡಿಕೆ ಆಗದ ಸ್ಥಿತಿ. ಜೆನ ಹಾಂಗೇ ಸುತ್ತಿ ಸುತ್ತಿ ನೋಡ್‌ಕನ ಒಂದು ಕಡೆ ಜಗ್‌ಲಿಲಿ ಒಂದು ಅಯ್ಯೆ ಮತ್ತೆ ಐದ್ ಜೆನ ಗ∴ಂಡ್ ಮಕ್ಕಳ ಸರ್‍ರಗ ಮಲ್ಕ್ಯಂಡ್ ಇದ್ದಾಂಗೆ ಸುಟ್ಟ್ ಕ∴ರಿಂಚಿ ಗುರ್ತು ಹಿಡಿಯದಾಂಗಿದ್ದ∴ದ್ ಕಂಡ∴ತ್. ಪ್ರಜೆಗ∴ಳಿಗೆ ಇವು ಕುಂತಿ ಮತ್ತೆ ಅದರ ಮಕ್ಕಳೇಂತ ಖಾತ್ರಿ ಆತ್. ಅವು ಎದೆಗೆ ಹೊಡ್ಕ∴ಂಡ್ ಬೊಬ್ಬೆ ಹೊಡ್ದ್ ಅಯ್ಯಯ್ಯೋಂತ ಅತ್ತೊ. ಅವ್ಕೆ ದುರ್ಯೋಧನನ ಸಂಚ್‌ಂದ ಹೀಂಗಾತ್‌ಂತ ಗೊತ್ತಾತ್‌ಲೆ. ಏನಿದ್ದರೂ ಹಸ್ತಿನಾವತಿಗೆ ಇದರ ತಿಳ್ಸೊಕುಂತ ಕೆಲೊವು ಪ್ರಮುಖ∴ರ್ ಸೇರಿ ನಿಯೋಗ ಹೋಗಿ ಭೀಷ್ಮಾದ್ಯರಿಗೆ ವಿಷಯ ತಿಳ್ಸಿ ಗೋಳೋಂತ ಅತ್ತೊ. ಇಡೀ ಅರಮನೆ, ನಗರದ ಬೀದಿಗಳ ಮೂಲೆ ಮೂಲೆಗ ಎಲ್ಲ ಶೋಕಸಾಗರಲಿ ಕ∴ಂತಿಹೋದೊ. ಸಹಜ ದು:ಖ ಅನುಭವಿಸಿದೊವು ಭೀಷ್ಮ, ದ್ರೋಣ, ಕೃಪ ಮತ್ತು ಹಸ್ತಿನಾವತಿನ ಪ್ರಜೆಗ. ಕೃತಕಶೋಕ ತೋರ್‍ಸೊವು ಸಹಜ ಶೋಕ ತೋರ್‍ಸೊವರ್‌ಂದ ಒಂದು ಬೆರ್‍ಲ್ ಹೆಚ್ಚೇ ಆದು. ವಿದುರನೂ ಈ ಎರ್‍ಡನೆಯ ಪಂಗಡಕ್ಕೆ ಸೇರಿತ್ತ್. ಧೃತರಾಷ್ಟ್ರ ವಿದುರನ ಕರ್‍ದ್, ಸತ್ತ್ ಹೋದ ಕುಂತಿಗೂ ಅದರ ಮಕ್ಕ∴ಳಿಗೂ ಅಪರಕ್ರಿಯೆಗಳ ಮಾಡಿಬಾವಾಂಗೆ ಹೇಳ್ತ್. ಹಾಂಗೆ ವಿದುರ ವಾರಣಾವತಕ್ಕೆ ಹೋಗಿ ಬೇಡೆತಿ ಮತ್ತೆ ಅದರ ಮಕ್ಕ ಸತ್ತಲ್ಲಿಂದ ಅವರ ಬೂದಿನ ಸಂಗ್ರಹಿಸಿ, ಅದರ ಗಂಗೆಲಿ ಬುಟ್ಟ್ ಅವರ ಸದ್ಗತಿಗೆ ಪೂಜೆ ಮಾಡಿ ಹಿಂದೆ ಬಾತ್.

ಇದೆಲ್ಲ ಆದ ಮೇಲೆ ತುಂಬ ಸಮಯದವರೆಗೆ ಭೀಷ್ಮರಿಗೆ ಪಾಂಡವರ್ದೇ ನೆಂಪು. ಆ ಸಾಧುಗಳಿಗೆ ಈ ಅನ್ಯಾಯ ಆಗಿ ಹೋತು? ಅವರ ಮೇಲೆ ಎಷ್ಟ್ ಆಸೆ ಇಸಿಕ∴ಂಡಿದ್ದೆ; ಆದರ್ಶ ರಾಜ್ಯಭಾರ ಮಾಡಿ ಪ್ರಜೆಗಳಿಗೆ ಸುಖ ಶಾಂತಿ ಸಿಕ್ಕೊಕುಂತ. ಅದಿಕೆ ತಯಾರಾಗುವಾಂಗೆ ಸ∴ರಿಯಾಗಿ ಬೆಳ್ಸೊಕುಂತ ಯೋಚಿಸಿದ್ದೆ. ಆ ಅರಮನೆನ ಯಾವ ವಸ್ತುಗಳ್‌ಂದ ಕ∴ಟ್ಟಿದೊವು ಯಾರ್?

ಆಕಸ್ಮಿಕವಾಗಿ ಕಿಚ್ಚಿ ಹಿಡ್ದ್ ಅಷ್ಟ್ ಬೇಗ ಸುಟ್ಟ್ ಹೋಕೊರೆ ಅದರ ಹಿಂದೆ ಮೊಂಯಿಸನ ಕೈವಾಡ ಇದ್ದೇ ತೀರೊಕು. ರಾಜ ಇದರ ತನಿಕೆ ಮಾಡ್‌ಸಿ ನಿಜ ಸಂಗತಿನ ಕಂಡ್ ಹಿಡ್ದ್ ಅವ್ಕೆ ತಕ್ಕ ಶಿಕ್ಷೆ ಕೊಡೊಕು. ರಾಜಂಗೆ ಇದರ ಬಗ್ಗೆ ಸೂಚಿಸ್‌ಕಾಕನ "ಏನ್ ಮಾಡಿರೂ ಸತ್ತವರ ಹಿಂದೆ ತಾಕೆ ಆದೋಂತ" ಉದಾಸೀನ ತೋರ್‌ಸಿತ್.

ರಾಜನೇ ಉದಾಸೀನಂದ ಇರ್‌ಕನ ಒಳ್ದವೊಕೆ ಏನ್ ಮಾಡಿಕೆ ತೀರ್ದು. ಭೀಷ್ಮಜ್ಜ ಪಾಂಡವರ ಸಾವುನ ನೆನ್ಸಿಕ಼ಂಡ್ ಮನ್ಸ್‌ನೊಳಗೇ ಕೊರ್ಗಿಕ಼ಂಡ್ ಇದ್ದೊ. ಅವರ ಪಾಲ್‌ನ ದು:ಖದ ದಿನಗ ಹೀಂಗೇ ನಿದಾನವಾಗಿ ಸಾಗುತ್ತಿದ್ದೊ.

ಇತ್ತ ಹಿಡೆಂಬೆನ ಮನೆಂದ ಹೊರ್ಟ ಪಾಂಡವರ್ ನಡ್ಕ಼ಂಡ್ ಹೋದೊ. ಎಲ್ಲಿಗೆ ಹೋದುಂತ ನಿಶ್ಚಿತ ಗುರಿ ಇತ್ತ್‌ಲೆ. ದಾರಿಕರೆಲಿ ಒಬ್ಬ ಗಂಧರ್ವನೊಟ್ಟಿಗೆ ಘರ್ಷಣೆ ಆತ್, ಮತ್ತೆ ರಾಜಿ ಆತ್. ಅಂವ ಅವರ ಅಂವನ ಮನೆಗೆ ಕರ್ಕಂಡ್ ಹೋಗಿ ಸತ್ಕಾರ ಮಾಡ್ತ್. ಒಂದು ರಾತ್ರಿ ಅಲ್ಲಿದ್ದ್ ಮಾರ್ಣೆದಿನ ಅಲ್ಲಿಂದ ಹೊರ್ಟ್ರೊ.

ಹೀಂಗೆ ಸ್ಪಷ್ಟ ಗುರಿಯಿಲ್ಲದೆ, ಕಾಲ್ ಎಳ್ಕಂಡ್ ಹೋಕನ ವೇದವ್ಯಾಸ ರುಸಿಗ ದಾರಿಲಿ ಕಾಂಬಕೆ ಸಿಕ್ಕಿದೊ. ಅವು ಇನ್ನೂ ಹಜ್ಞ್ ದಿನ ನೀವು ಯಾರ್‌ಂತ ಯಾರಿಗೂ ಗೊತ್ತಾಕೆ ಆಗ಼ದ್. ಮುಂದೆ ಏಕಚಕ್ರ ನಗರ ಸಿಕ್ಕಿದೆ. ಅಲ್ಲಿ ನೀವು ಬ್ರಾಹ್ಮಣ ವೇಸ ಹಾಕಿಕ಼ಂಡ್ ಯಾರಾರ್ ಬ್ರಾಹ್ಮಣರ ಕೊಟೆಗೆಲಿ ಇದ್ದ್‌ಕ಼ಂಡ್ ಭಿಕ್ಷೆ ಬೇಡಿಕ಼ಂಡ್ ಬೊದ್ಕ್ಯಂಡ್ ಇರಿ. ಮತ್ತೆ ಎಲ್ಲ ಒಳ್ಳ಼ದಾದೆಂತ ಹೇಳಿ ಹೋದೊ.

ಅವು ಹೇಳ್ದಾಂಗೆ ಇವು ಏಕಚಕ್ರ ನಗರಕ್ಕೆ ಎತ್ತಿ ಅಲ್ಲಿ ಒಬ್ಬ ಹಾರ್ರ ಮನೆ ಕೊಟೆಗೆಲಿ ನಿಲ್ಲಿಕೆ ಜಾಗೆ ಕೇಳಿ ಹಾರ್ರ ವೇಸಲೆ ಇದ್ದ್, ಭಿಕ್ಷೆ ಎತ್ತಿಕ಼ಂಡ್ ಕಾಲಕಳ್ಕಂಡ್ ಇದ್ದೊ. ಆ ನಗರಕ್ಕೆ ಪಕ್ಕಲಿರುವ ಕಾಡ್‌ಲಿದ್ದ ಬಕಂತೇಳ್ವ ರೆಕ್ಕಸ ತುಂಬ ತೊಂದರೆ ಕೊಡ್‌ತ್ತಿತ್ತ್. ಅವನ ಭೀಮ ಒಂದು ದಿನ ಕೊಂದ್ ಹಾಕಿತ್. ಹೀಂಗೆ ಆ ಊರುನೊವು ಭಿಕ್ಷೆ ರೂಪುಲಿ ಕೊಡುತಿದ್ದ ಹುಗ್ಗನ ರುಣಸಂದಾಯ ಅದಾಂಗೆ ಆತ್.

ಹಜ್ಞ್ ದಿನ ಕ಼ಳಿಯಕನ ಒಬ್ಬ ದಾರಿಹೋಕ ಬಡ ಹಾರಂವ ಪಾಂಡವರ ಬಿಡಾರಕ್ಕೆ ಬಂದ್ ಅಂದ್‌ನ ರಾತ್ರಿನ ಕ಼ಳಿಯಕೆ ಮಲ್ಗಿಕೆ ಜಾಗೆ ಕೇಳ್ತ್. ಅವಂಗೆ ಮಲ್ಗಿಕೆ ಒಂದು ಸಾರೆಜನ ಚೆರ್ಮನ ಕೊಟ್ಟೋ. ಯುಧಿಷ್ಟರ ಅವನೊಟ್ಟಿಗೆ ಲೋಕಾಭಿರಾಮ ಮಾತಾಡ್‌ಕನ, ಪಾಂಚಾಲ ನಗರ಼ಲಿ ದ್ರುಪದ ರಾಜನ ಮಗ ದ್ರೌಪದಿಗೆ ಸ್ವಯಂವರ ನಡ್ದದೆಂತನೂ ಬೇರೆ ಬೇರೆ ರಾಜ್ಯಗಳ್‌ಂದ ಎಷ್ಟೋ ರಾಜಕುಮಾರರ್ ಬಂದೊಳಂತ ಆ ಹಾರಂವ ಹೇಳ್ತ್. ಅದರ ಕೇಳಿ ಪಾಂಡವ಼ರ್ ಸ್ವಯಂವರ ನಡಿವಲ್ಲಿಗೆ ನಾವೂ ಹೋಗಿ ಶತ್ರು ಮಿತ್ರರೆದ್‌ರಿಗೆ ನಮ್ಮ ಶೌರ್ಯ ಧೈರ್ಯನ ಪ್ರದರ್ಶಿಸಿಕೆ ಇದೊಂದು ಅವಕಾಶ. ನಾವು ಅಲ್ಲಿಗೆ

ಪೋಯಿಂತ ಹೊರ್ಟೊ. ದಾರಿಯುದ್ದಕ್ಕು ಅವ್ಕೆ ಶುಭಶಕುನಗಳೇ ಕಂಡ್ ಬಂದ್, ಉತ್ಸಾಹ ತುಂಬಿತ್. ಹಾಂಗೆ ನಡ್ಕ್ಂಡ್ ಬಂದ್ ದ್ರುಪದನ ರಾಜಧಾನಿ ಛತ್ರವತಿ ಪಟ್ಟಣಕೆ ಬಂದ್ ಮುಟ್ಟಿದೊ. ನಗರನ ತುಂಬ ಶೃಂಗಾರ ಮಾಡಿದ್ದೊ. ಜೆನ ತುಂಬಿ ಹೋಗಿದ್ದೊ. ಇವ್ಕೆ ನಿಲ್ಲಿಕೆ ಜಾಗೆ ಸಿಕ್ಕದೆ ಕಡೆಗೆ ಒಂದು ಕರೆಲಿದ್ದ ಕುಂಬಾರನ ಮನೆನ ಕೊಟೆಗೆಲಿ ಜಾಗೆ ಸಿಕ್ಕಿ ಅಲ್ಲಿ ನಿತ್ತೊ. ಸ್ವಯಂವರ ಯಾವ ದಿನ ನಡ್ದದೆಂತ ದ್ರುಪದ ಡಂಗುರ ಹೊಡ್ಸಿತ್. ಅಂದ್ ಕನ್ಯಾರ್ಥಿಗಾಗಿ ಬಂದಿದ್ದ ರಾಜಕುಮಾರ್ರ್ ಪೊರ್ಲುಲ್ ಅಲಂಕಾರ ಮಾಡಿಕ್ಂಡ್ ಬಂದ್ ಸ್ವಯಂವರ ಮಂಟಪಲ್ಲಿ ಕುದ್ದೊ. ಪ್ರತಿಯೊಬ್ಬನ ಮನ್ಸಲಿಯೂ ದ್ರೌಪದಿ ತನ್ನನೇ ವರಿಸುದುಂತ ನೆನ್ಸಿಕ್ಂಡಿದ್ದೊ. ಅದಿಕ್ಕೆ ಸರಿಯಾದ ಹಾವ ಭಾವಗಳ ಪ್ರದರ್ಶಿಸುತ್ತಿದ್ದೊ. ಅವರ ವಂದಿ ಮಾಗಧರ್‌ಂದ ಅವರ ಬಿರುದಾವಳಿಗಳ ಉಗ್ಗಡಿಸಿಕ್ಂಡ್ ಬೀಗ್‌ತ್ತಿದ್ದೊ. ದ್ರೌಪದಿ ಅದರ ಸಖಿಯರೊಟ್ಟಿಗೆ ಮಂಟಪನ ಪ್ರವೇಶ ಮಾಡ್ತ್. ಅವ್ಕೆಲ್ಲ ಸಿಡ್ಲ್ ಹೊಡ್ದಂಗಾತ್. ದ್ರೌಪದಿ ಒಂದು ಮಾಲೆನ ಹಿಡ್ಕಂಡ್ ಅದರ ಸಖಿನ ಹಿಂಬಾಲ್ಸಿಕ್ಂಡ್ ಬಾತಿತ್ತ್. ಸಖಿ ರಾಜಕುಮಾರರ ಪರಿಚಯ ಹೇಳಿಕ್ಂಡ್ ಬಾತಿತ್ತ್. ದ್ರೌಪದಿ ಯಾರಿಗೂ ಮಾಲೆ ಹಾಕಿತ್ಲೆ. ಆಸೆ ಮಾಡ್ದವೆಲ್ಲ ಗುಡ್ಸಿದ ಮಾಯ್ಬುನ ಮೂಲೆಲಿ ಇಸಿದಾಂಗಾದೊ.

ಹತಾಶರಾಗಿ ಚಪ್ಪೆ ಆಗಿ ಕುದ್ದವರ ನೋಡಿ ದ್ರುಪದ ಹೇಳ್ತ್. ಇದ್ಕೆ ಇಷ್ಟ್ ಯೋಚನೆ ಬೇಡ. ನನ್ನ ಅರಮನೆನ ಅಂಗಳಲಿ ಒಂದು ಕಂಬದ ಎತ್ತರದ ಕೊಡಿಲಿ ಒಂದು ಯಂತ್ರದ ಲೋಹದ ಮೀನ್ ತಿರ್ಗ್ಯಂಡ್ ಉಟ್ಟು. ಕಂಬದ ಅಡಿಲಿ ಕಡಾಯಲಿ ನೀರ್ ತುಂಬಿಸಿ ಉಟ್ಟು. ಆ ಯಂತ್ರದ ಪ್ರತಿಬಿಂಬನ ಆ ನೀರ್ಲಿ ನೋಡಿಕ್ಂಡ್ ಅಲ್ಲಿ ಇಸಿದ ಬಾಣಗಳ ಅಲ್ಲಿರುವ ಬಿಲ್ಲಿಗೆ ಜೋಡ್ಸಿ ಆ ಮೇಲೆ ತಿರ್ಗುವ ಮೀನಿಗೆ ಬಾಣ ಹೊಡ್ದ್ ತಾಂಗ್ಸವಂಗೆ ನನ್ನ ಮಗಳ ಕೊಟ್ಟ್ ಮೊದುವೆ ಮಾಡಿನೆಂತ ಹೇಳ್ತ್. ಬಾಡ್ದವರ ಮೋರೆಗ ಅರ್ಳಿದೊ. ನಾ ಮುಂದೆ ತಾ ಮುಂದೆಂತ ಆತುರಲ್ಲಿ ಬಾಣ ಬುಡಿಕೆ ಬಂದ್ ಬಿಲ್ಲ್‌ನ ನೇಚಿಕೆ ನೋಡಿ ಕೈಲಿ ಸಾಗದೆ ಮೋರೆ ಅಡಿಗೆ ಹಾಕ್ಂಡ್ ಹೋದೊ. ದುರ್ಯೋಧನ ಮತ್ತೆ ಕರ್ಣನೂ ಸ್ವಯಂವರಕೆ ಬಂದಿದ್ದೊ. ದುಯೋಧನ ಗರ್ವಂದ ಬಾಣ ಹೊಡ್ದನೆಂತ ಬಂದ್ ಎಡ್ದ ಕೈಹಾಕಿ ಬಿಲ್ಲ್‌ನ ನೇಚಿಕೆ ನೋಡ್ತ್. ಎರ್ಡ್ ಕಡೆಲಿ ಬೊಗ್ಯಂಡಿದ್ದ ಬಿಲ್ಲ್ ಒಮ್ಮೆನೆ ಸೆಡ್ತ್‌ಕಂಡಾಕನ ಅವನ ಹಿಡ್ದ್ ಒದ್ದಾಂಗೆ ಆಗಿ ಅಷ್ಟ್ ದೂರಕೆ ರಟ್ಟಿ ಬೀತ್. ಮೊಣ್‌ಕೈಗೆ ಆದ ಮೊಣ್ಣ್‌ನ ಉದ್ದಿಕ್ಂಡ್ ನಾಚಿಕೆಲಿ ಹಲ್ಲ್ ಬುಟ್ಟ್‌ಕ್ಂಡ್ ಹಿಂದೆ ಬಾತ್. ಇದರ ನೋಡಿಕ್ಂಡ್ ಇದ್ದ ದ್ರೌಪದಿ ಮತ್ತೆ ಅದರ ಸಖಿಯರ್ ತಪ್ಪಾಳೆ ಕುಟ್ಟಿಕ್ಂಡ್ ನೆಗಾಡ್ದೊ. ಅವಂಗೆ ಇನ್ನಷ್ಟ್ ನಾಚಿಕೆ ಆತ್.

ದುರ್ಯೋಧನಂಗಾದ ಅವಮಾನನ ನೋಡಿ ಕರ್ಣಂಗೆ ಕೋಪ ಬಾತ್.

ನಾ ಬಾಣ ಹೊಡ್ದ್ ಪಂತನ ಗೆದ್ದ್ ಆ ಹೆಣ್ಣ್‌ನ ಇವಂಗೆ ಮೊದುವೆ ಮಾಡ್ಸಿನೆಂತ ನೆನ್ಸಿ ಆ ಕಾರ್ಯಕೆ ಹೊರ್ಟ.ಃತ್. ಬಿಲ್ಲ್ ಇದ್ದಲ್ಲಿಗೆ ಬಂದ್ ಅದಿಕೆ ನಮಸ್ಕಾರ ಮಾಡಿ ಅದರ ಎಡ್ದ ಕೈಲಿ ಹಿಡ್ದ್ ನೇಚಿ, ಒಂದು ಕೊಡಿನ ನೆಲಕ್ಕೂರಿ, ಮೇಲೆನ ಕೊಡಿಗೆ ಬೊಳ್ಳಿನ ಸೆಕ್ಕ್‌ಸಿ, ಬಾಣನ ತಕಂಬಕೆ ಕೈಹಾಕುವ ರೀತಿನ ನೋಡೊವ್ಕೆ ಇಂವ ಪಂತನ ಗೆದ್ದ್ ಬುಟ್ಟದೆನೋಂತ ಭಾವನೆ ಬಾತ್. ಆಗ ಇದರ್ನೆ ನೋಡಿಕ.ಃಂಡ್ ಇದ್ದ ದ್ರೌಪದಿ, "ನಾ ಕುಲಹೀನನ ಮೊದುವೆ ಆಕಿಲ್ಲೆ"ಂತ ಗ.ಃಟ್ಟಿಯಾಗಿ ಹೇಳ್ತ್. ಯಾರಾರ್ ತನ್ನ ಕುಲನ ಹೀನ್ಯೆಸಿರೆ ಕೇಳ್ದ ಕೂಡ್ಲೆ ಕರ್ಣನ ಉತ್ಸಾಹ ಜರ್ರನೆ ಇಳ್ದ್ ಹೋದು. ಇಲ್ಲಿಯೂ ಅವಂಗೆ ಹಾಂಗೆ ಮೈ ಕೈಯೆಲ್ಲ ಬೆಗ್‌ರಿಕೆ ಸುರಾತ್. ಅಂವ ಬಿಲ್ಲ್ ಬಾಣಗಳ ಪಟ್ಕಂತ ಹಾಕಿ, ಹಿಂದೆ ಬಂದ್ ಸುಮ್ಮನೆ ಕುದ್ದ.ಃತ್.

ಬೇರೆ ಯಾರೂ ಪಂತನ ಸ್ವೀಕಾರ ಮಾಡೊವು ಇಲ್ಲೆಂತಾಕನ ದ್ರುಪದ ಬ್ರಾಹ್ಮಣ ಸಭೆನ ನೋಡಿ ನಿಮ್ಮ ಕೂಟ.ಃಲಿ ಈ ಪಂತಲಿ ಪಯತ್ನಪಡುವ ಇಚ್ಚೆಯಿದ್ದರೆ ಅಂತ.ಃವು ಬರ.ಃಕ್‌ಂತ ಹೇಳ್ತ್. ಪಾಂಡವರ್ ಬ್ರಾಹ್ಮಣವೇಶಲಿ ಹಾರ್‌ರ ಸಭೆಲಿ ಕುದ್ದಿದ್ದೊ. ಬಲರಾಮ ಮತ್ತೆ ಶ್ರೀಕೃಷ್ಣ, ಸ್ವಯಂವರನ ನೋಡುವ ಉದ್ದೇಸಂದ ಬಂದವ್ಕೆ ಕೃಷ್ಣಂಗೆ ಗುರ್ತಸಿಕ್ಕಿ ಬಲರಾಮಂಗೆ ಪಿಸಿಮಾತ್‌ಲಿ ಹೇಳ್ತ್. ಅರ್ಜುನ ಮೋಡದೊಳಗೆಂದ ಸೂರ್ಯ ಹೊರ್ಟ್ ಬಾವಂಗೆ– ಬಾದರ ನೋಡಿ ಹಾರ್ರ್ ತಲೆಗೊಬ್ಬರಾಂಗೆ ಅವನ ಗೇಲಿ ಮಾಡ್ದೊ. ಅಂವ ಅವರ ಗಣ್ಯಮಾಡದೆ ಪಂತದ ಶರ್ತ ಪ್ರಕಾರ ಬಾಣನ ತಿರ್‍ಗ್ಯಂಡ್ ಇದ್ದ ಮೀನ್‌ನ ಕ.ಃಣ್ಣಿಗೆ ತಾಂಗ್‌ಸಿತ್. ಜೆನ ಎಲ್ಲ ಆಶ್ಚರ್ಯದ ಉದ್ಗಾರ ತೆಗ್ದೊ. ದ್ರೌಪದಿ ಸಂತೋಸುಲಿ ಮಾಲೆ ಹಾಕಿತ್. ಸೈನಿಕ.ಃರ್ ಅವರ ಸುತ್ತಿ ರಕ್ಷಣೆ ಕೊಟ್ಟೊ.

ಇಷ್ಟಾಕನ ಕ್ಷತ್ರಿಯರಾದ ರಾಜರಿಗೆ, ಮತ್ಸರ, ಕೋಪ ಎಲ್ಲ ಉಂಟಾಗಿ ದ್ರುಪದ ಹಾರಂವಂಗೆ ಹೆಣ್ಣ್‌ಕೊಟ್ಟ್ ನಾವ್ಗೆಲ್ಲ ಅವಮಾನ ಮಾಡ್ತ್‌ಂತ ಅವನ ಮೇಲೆ ಯುದ್ಧಕ್ಕೆ ಎದ್ದೊ. ಕರ್ಣ, ಶಲ್ಯನಂತೊವು ಯುದ್ಧದ ಮುಂಚೂಣಿಲಿದ್ದೊ. ಅವರ ಹಾರ್ರ ವೇಸಲಿದ್ದ ಅರ್ಜುನನೂ ಭೀಮನೂ ಸೋಲ್ಸಿದೊ. ಇದರ ನೋಡ್ದ ಬೇರೆ ರಾಜೆರ್‍ಗಳೆಲ್ಲ ಸುದ್ದಿ ಇಲ್ಲದೆ ಹಿಂದೆ ಹೋದೊ. ಪಾಂಡವರ್ ಅರ್ಕ್‌ನ ಮನೆಲಿ ಸುಟ್ಟ್ ಹೋದೊಂತ ಕೇಳ್ದ ಮೇಲೆ ಭೀಷ್ಮಜ್ಜಂಗೆ ನೆಗಾಡುಂತೇಳ್ದು ಮರ್ತೇ ಹೋಗಿತ್ತ್. ನಿತ್ತರೆ ಕುದ್ದರೆ ಆ ಅಯ್ದ್ ಜೆನ ಮಕ್ಕಳ ಮೋರೆಗಳೇ ಎದ್‌ರ್ ನಿತ್ತಾಂಗೆ ಆಗಿ ಕಣ್ಣ್‌ಲಿ ನೀರ್ ತುಂಬಿಕ.ಃಂಡ್ ಗಂಟ್ಲ್ ಕ.ಃಟ್ಟಿದಾಂಗೆ ಆದು. ಅಂತ.ಃವ್ಕೆ, ಪಾಂಡವರ್ ಜೀವೊಲಿ ಒಳೊ, ಮುಂದೆಂದ ವೈಭವಲಿ ಪಾಂಚಾಲ ನಗರ.ಃಲಿ ಒಳೊಂತ ಕೇಳ್ದ ಮೇಲೆ ಅವರ ಈಗ ನೋಡುವೆನೊ, ಮತ್ತೆ ನೊಡುವೆನೋಂತ ಹೇಳುವ ಆತುರ ತುಂಬಿತ್. ಇವೂ ಹಿರಿತಲೆಗಳಾದ ದ್ರೋಣ, ಕೃಪಾಚಾರ್ಯರ್ ಸಮಾಲೋಚನೆ ಮಾಡಿ, ಪಾಂಡವರ ಹಿಂದೆ ಕರ್ಸಿ,

ಸಾಮ್ರಾಜ್ಯನ ಎರ್ಡ್‌ಪಾಲ್ ಮಾಡಿ ಒಂದು ಭಾಗಕ್ಕೆ ಯುಧಿಷ್ಟರನ ರಾಜನಾಗಿ ಮಾಡಿ ಮತ್ತೊಂದು ಭಾಗನ ಕೌರವರಿಗೆ ಬುಡುದಂತ ನಿಶ್ಚೈಸಿ ಧೃತರಾಷ್ಟ್ರಂಗೆ ಹೇಳ್ದೊ. ಅಂವನೂ ನೀವ್ಗೆ ಸ.∴ರಿ ಕಂಡಾಂಗೆ ಮಾಡುದರ್ಲಿ ನನ್ನ ಅಡ್ಡಿಯೇನೂ ಇಲ್ಲೆಂದ್ ಸಮ್ಮತಿ ಸೂಚಿಸಿತ್. ಮತ್ತೆ ವಿದುರನ ಪಾಂಚಾಲ ನಗರಕ್ಕೆ ಹೋಗಿ ಪಾಂಡವರ ಒಪ್ಪುಸಿ ಕರ್ಕ∴ಂಡ್ ಬಾಂತ ಹೇಳಿ ಕ.∴ಳ್ಸಿದೊ.

ಪಾಂಡವರಿಗೆ ಸಂತೋಸು ಆತ್. ದ್ರುಪದಂಗೆ ಹೇಳಿ ಅಂವ ಬಳುವಳಿಯಾಗಿ ಕೊಟ್ಟ ಆನೆ, ಕುದುರೆ, ರಥ ಮತ್ತೆ ರತ್ನಾಭರಣಗಳ ತಕಂಡ್, ದ್ರೌಪದಿನೂ ಕೂಡಿಕ.∴ಂಡ್ ಯುಧಿಷ್ಟಿರ ಪರಿವಾರ ಸಮೇತ ಹೊರ್ಟತ್. ಹಾಂಗೆ ಪ್ರಯಾಣಮಾಡಿ ಎರ್ಡ್ ದಿನಗಳ್ಲಿ ಹಸ್ತಿನಾವತಿನ ಹೊರವಲಯಕ್ಕೆ ಬಂದೆತ್ತಿದೊ. ಅದರ ಕೇಳಿ ಧೃತರಾಷ್ಟ್ರ ತನ್ನ ಪರಿವಾರನ ಕರ್ಕಂಡ್ ಅವರ ಸ್ವಾಗತ ಮಾಡಿಕೆ ಹೋತು. ಸತ್ತೇ ಹೋಗಿದ್ದೊಂತ ನೆನ್ಸಿದೊವು ಈಗ ಪ್ರತ್ಯಕ್ಷವಾಕನ ಭೀಷ್ಮ ದ್ರೋಣಾದ್ಯರಿಗೆ ಆದ ಸಂತೋಸುನ ಎಷ್ಟಂದ್ ಹೇಗೆ ಹೇಳುದು? ತಮ್ಮ ಕಾಲಿಗೆ ನಮಸ್ಕಾರ ಮಾಡ್‌ದ ಯುಧಿಷ್ಟಿರಾದಿಗಳ ನೇಚಿಗ.∴ಟ್ಟಿ ತೊಬ್ಬಿಕ.∴ಂಡ್ ಗಳಗಳ ಕ.∴ಣ್ಣೀರ್ ಹರ್ಸಿದೊ. ಮತ್ತೆ ಎಲ್ಲ ಒಟ್ಟಾಗಿ ವೈಭವದ ಮೆರವಣಿಗೆ ಪಟ್ಟಣ ಪ್ರವೇಶಮಾಡಿ ಅರಮನೆಗೆ ಸೇರ್ದೊ. ಪಾಂಡವರಿಗೆ ಪ್ರತಿಯೊಬ್ಬಂಗೆ ಪ್ರತ್ಯ ಪ್ರತ್ಯೇಕ ಬಿಡಾರಗಳ ಏರ್ಪಾಡ್ ಮಾಡ್ದೊ.

ಎರ್ಡಾಗಿದ್ದ ಕುಟುಂಬ ಒಟ್ಟು ಸೇರ್ವ ಅಪೂರ್ವ ಸನ್ನಿವೇಶ. ಇತ್ತಂಡದೊವು ಹಿಂದೆ ನಡ್ದ ಕಂಯಿ ಸಂದರ್ಭಗಳ ಆದಷ್ಟ್ ಮರಿಯಕೆ ಪ್ರಯತ್ನ ಪಟ್ಕ.∴ಂಡ್ ಒಡನಾಡ್ದೊ. ಈಗ ಭೀಷ್ಮಜ್ಜ ಮತ್ತೆ ಬೇರೆ ಹಿರಿತಲೆಗ ಸೇರಿ, ರಾಜ್ಯನ ಎರ್ಡ್ ಪಾಲ್ ಮಾಡ್ದುಂತ ನಿಶ್ಚಯ ಮಾಡ್ದೊ. ಗಂಗಾನದಿಂದ ಪೂರ್ವದಕ್ಷಿಣವಾಗಿ ಸೇತುಬಂಧದವರೆಗೆ ಯುಧಿಷ್ಟಿರನ ಆಳ್ವಿಕೆಗೆ, ಗಂಗಾನದಿಂದ ಉತ್ತರ ಪಶ್ಚಿಮದ ಭಾಗ ದುರ್ಯೋಧನನ ಆಳ್ವಿಕೆಗೆಂತ ವಿಭಾಗ ಮಾಡಿಕೊಟ್ಟೊ. ಪಾಂಡವ.∴ರ್ ಹಸ್ತಿನಾವತಿಲೇ ಇದ್ದರೆ ಏನಾದರು ಕ್ಷುಲ್ಲಕ ಕಾರಣಂದ ಕಿಸ್‌ರ್ ಕೋಪಕ್ಕೆ ಎಡೆಯಾದು. ಅದಿಕ್ಕಾಗಿ ಅವು ಇಂದ್ರಪ್ರಸ್ತಕ್ಕೆ ಹೋಗಿ ಅಲ್ಲಿಂದ ರಾಜ್ಯಭಾರ ಮಾಡ.∴ಲಿಂತ ಧೃತರಾಷ್ಟ್ರ ಹೇಳ್ತ್. ವಿದುರ ಅದರ ವಿರೋಧಿಸಿರೂ ಯುಧಿಷ್ಟಿರ ಒಪ್ಪಿಕಣ್ತ್.

ಈ ಪಾಲ್‌ಪಂಚಾಯ್ತಿಕೆ ನಡಿವ ಕಾಲ.∴ಲಿ ಶ್ರೀಕೃಷ್ಣ ಪಾಂಡವರ ಒಟ್ಟಿಗೇ ಇತ್ತ್. ಅವು ಇಂದ್ರಪ್ರಸ್ತಕ್ಕೆ ಹೋಕನ ಯುಧಿಷ್ಟಿರ ಅಂವನೂ ಅವರೊಟ್ಟಿಗೆ ಬರೊಕುಂತ ಕೇಳಿಕಂಡೊದಕೆ ಅಂವನೂ ಒಪ್ಪಿಕಂಡತ್. ಇಂದ್ರಪ್ರಸ್ತನ ನೋಡ್‌ಕನ ಅದ್ ಬರೀ ಬರಡ್ ಪ್ರದೇಶಂತ ಕಂಡ.∴ತ್. ವಿದುರ ವಿರೋಧಿಸಿದ್ ಸ.∴ರಿಯಾಗಿಯೇ ಇತ್ತ್‌ಂತ ಅವನ ಮನ್ಸಿಗಾತ್. ಮತ್ತೆ ಅಂವನ ಮಹಿಮೆನ ಉಪಯೋಗ್ಸಿ, ದೇವ ಶಿಲ್ಪಿನ ಕರ್ಸಿ ಪಾಂಡವರಿಗೊಂದು ಪೊರ್ಲುನ ಅರಮನೆ

ಕ.:.ಟ್ಟಿ ಕೊಡೋಕುಂತ ಅಪ್ಪಣೆ ಕೊಟ್ಟ.:.ತ್. ಕೆಲವೇ ದಿನ.:.ಲಿ ಒಂದು ಸುಂದರ ಅರಮನೆ ತಯಾರಾತ್. ಅದರೊಟ್ಟಿಗೆ ಮಯ ನಿರ್ಮಿಸಿಕೊಟ್ಟ ಅದ್ಭುತವಾದ ಸಭಾಭವನವೂ ಸೇರಿಕನ ಪಾಂಡವರ ವೈಭವಕ್ಕೆ ಎಣೆಯಿಲ್ಲದಾತ್.

ಒಂದು ದಿನ ದೇವರುಷಿ ನಾರದ ಪಾಂಡವರಲ್ಲಿಗೆ ಬಾತ್. ಅಂವಂಗೆ ಗೌರವೋಪಚಾರಗ ನಡ್ದ ಮೇಲೆ ನಾರದ ಮಾತಿಗೆ ಸುರುವಾಡ್ತ್. ದೇವಲೋಕ.:.ಲಿ ಪಾಂಡವರ ಅಪ್ಪ ಪಾಂಡುಗೆ ತಕ್ಕ ಗೌರವ ಸಿಕ್ಕುದುಲೆ. ಅದರ್‌ಂದ ಅಂವ ತುಂಬ ನೊಂದುಕ.:.ಡ್ ಉಟ್ಟು. ಪರಾಕ್ರಮ ಶಾಲಿಗಾದ ನೀವು ಐದು ಜನ ಇದ್ದ್, ರಾಜಸೂಯ ಯಾಗ ಮಾಡಿರೆ ಅಂವಂಗೆ ದೇವಲೋಕ.:.ಲಿ ಪೂಜ್ಯಸ್ಥಾನ ಗೌರವ ಸಿಕ್ಕುದು. ಅದರ್‌ಂದ ನೀವು ಕಾರ್ಯನ ಆದಷ್ಟ್ ಬೇಗ ಮಾಡುದು ಒಳ್ಳೆ.:.ದುಂತ ಹೇಳ್ತ್.

ಯುಧಿಷ್ಠಿರ ಯೋಚನೆಲಿ ಕುದ್ದ.:.ತ್. ನಾಲ್ಕ್ ತಮ್ಮಂದ.:.ರ್ ಭಾರಿ ಉತ್ಸಾಹಪಟ್ಟ್‌ಕಂಡ್ ಇದ್ದೊ. ಇದರ ನೊಡಿ ನಾರದ ಯುಧಿಷ್ಠಿರನೊಟ್ಟಿಗೆ ಏನ್ ನಿಂಗೆ ಮನ್ಸಿಲ್ಲೆನೋಂತ ಕೇಳ್ತ್. ನಂಗೆ ತುಂಬ ಮನ್ಸುಟ್ಟು. ಆದರೆ ಸಾಮಾನ್ಯ ಅಲ್ಲದ ಈ ಕಾರ್ಯನ ಹೇಂಗೆ ಪೂರೈಸುದುಂತ ದಾರಿ ಕಾಂಬೊದುಲೆ. ಹಾಂಗೆ ಯೋಚನೆಂತ ಯುಧಿಷ್ಠಿರ ಹೇಳ್ತ್. ಅದ್ಕೆ ನಾರದ ದಿಗ್ಗಜಗಳ ದಾಡೆಗಳ ಕೀಳುವಂತ ಬಲಶಾಲಿಗಾದ ನಾಲ್ಕ್‌ಜೆನ ತಮ್ಮಂದ.:.ರ್ ಇರ್‌ಕನ ನೀ ಯಾಕೆ ಹೆದುರೊಕು. ಅವರ ಲೋಕದ ನಾಲ್ಕ್ ದಿಕ್ಕ್‌ಗ.:.ಳಿಗೆ ಕ.:.ಳ್ಸಿರೆ, ಅವು, ರಾಜರ್ಗ್ಗಳ, ಒಲ್ಸಿಕ.:.ಂಡ್ ಅಲ್ಲರೆ ಯುದ್ದ.:.ಲಿ ಸೋಲ್ಸಿಕ.:.ಂಡ್, ಕಪ್ಪ ಕಾಣಿಕೆಗಳ ತಂದ್ ನಿನ್ನ ಭಂಡಾರನ ತುಂಬುಸುವೊ, ಲಕ್ಷ್ಮೀಪತಿಯಾದ ಪರಮಾತ್ಮನೇ ಕೃಷ್ಣ ಎಂಬ ಹೆಸರ್‌ಂದ ನಿನ್ನ ಸೋದರ ಬಾವ ಆಗಿರ್‌ಕನ ನಿಂಗೆ ಯಾವ ಕೊರತೆ ಉಟ್ಟು? ಯಾದಿಕು ಅವನೊಟ್ಟಿಗೆ ಒಮ್ಮೆ ವಿಚಾರ್ಸುದು ಒಳ್ಳೆ.:.ದ್. ಹೀಂಗೆ ಹೇಳಿ ನಾರದ "ನಾರಾಯಣ, ನಾರಾಯಣ'ಂತೇಳಿ ತಾಳ ಹೊಡ್ದ್ ಮಾಯ ಆಗಿ ಹೋತು.

ಯುಧಿಷ್ಠಿರನ ತಮ್ಮಂದ.:.ರೆಲ್ಲೊವು ಭಾರಿ ಉತ್ಸಾಹಂದ ರಾಜಸೂಯ ಯಾಗನ ಮಾಡಿಯೇ ತೀಡೊಕುಂತ ಹೇಳಿಕೆ ಸುರುಮಾಡ್ದೊ. ಆಗ ಯುಧಿಷ್ಠಿರ, ಮುಂದೆ ಕೃಷ್ಣನೊಟ್ಟಿಗೆ ಒಂದು ಮಾತ್‌ನ ಕೇಳಿಕಣೊಕು. ಮತ್ತೆ ಅಂವ ಹೇಳ್ದಾಂಗೆ ಮಾಡೊನೊಂತೇಳಿ ದ್ವಾರಕೆಗೆ ಒಬ್ಬ ಚಾರಕನ ರಾಜಸೂಯ ಯಾಗದ ಪ್ರಸ್ತಾಪನ ಮಾಡಿ, ಅಂವ ಬಂದ್ ನಾವ್ಗೆ ದಾರಿ ತೋರ್ಸೊಕುಂತ ಹೇಳಿ ಕ.:.ಳ್ಸಿತ್.

ಕೃಷ್ಣ ಒಂದು ಸಂಧಿಗ್ಧ ಸ್ಥಿತಿಲಿ ಇತ್ತ್. ಜರಾಸಂಧಂತೇಳ್ವ ಬಲಶಾಲಿಯಾದ ರಾಜ, ತುಂಬ ರಾಜೆರ್ಗ್ಗಳೆಲ್ಲ ಸೆರೆ ಹಿಡ್ದಿಸಿತ್ತ್. ಅವರ ಸಂಖ್ಯೆ ಎರ್ಡ್ ಸಾವಿರ ಮುಟ್ಟಿಕೆ ಇನ್ನೂ ಹದಿನಾಲ್ಕ್ ಸಂಖ್ಯೆ ಬಾಕಿ ಇತ್ತ್. ಅದ್ ಪೂರ್ತಿಯಾಗಿ ಎರ್ಡ್ ಸಾವಿರ ಆದ ಕೂಡ್ಲೆ ಅವರೆಲ್ಲ ಶಿವಂಗೆ ಬೊಲಿಕೂಡುದುಂತ ಅಂವ ಸಂಕಲ್ಪ ಮಾಡಿತ್ತ್. ಸೆರೆಯಾಗಿದ್ದ ರಾಜೆರ್ಗೆಲ್ಲ ಶ್ರೀಕೃಷ್ಣನ.:.ಲ್ಲಿಗೆ ಗುಟ್ಟುಲಿ ಒಬ್ಬ ದೂತನ

ಕ಼ಳ್ಸಿ ನೀನೇ ನಮ್ಮ ಕಾಪಾಡೂಕುಂತ ಹೇಳಿ ಕ಼ಳ್ಸಿದ್ದೊ. ಹೇಂಗೆ ಇವರ ರಕ್ಷಿಸುದೆಯ್ಕೆಂತ ದಾರಿ ಕಾಣದೆ ಯೋಚನೆ ಮಾಡಿಕ಼ಂಡ್ ಇರ್‌ಕನ ಪಾಂಡವರ ದೂತ ಯಜ್ಞದ ಪ್ರಸ್ತಾಪ ತಾತ್. ಜರಾಸಂಧ ಬೊದ್ಕಿದ್ದರೆ ರಾಜಸೂಯ ಯಾಗ ನಡಿಯಕೆ ಬುಡಿಕಿಲೆ. ಹಾಂಗೆ ಮುಂದೆ ಅವನ ಭೀಮನ ಮೂಲಕ ಮುಗ್ಸ಼ಕುಂತ ನಿಶ್ಚಯ ಮಾಡಿ ಆ ರಾಜೆರ್ಗಳಿಗೆ ಅಭಯ ಸಂದೇಶ ಕ಼ಳ್ಸಿ, ಕೃಷ್ಣ ಇಂದ್ರಪ್ರಸ್ತಕೆ ಹೊರ್ಟ಼ತ್.

ಪಾಂಡವರ ಪ್ರಸ್ತಾಪನ ನಡ್ಸಿಕೆ ಆಕಿಲೆಂತ ವಿರೋಧಿಸಿರೆ ಯುಧಿಷ್ಠಿರ ಹೊರತಾದ ಬೇರೆ ತಮ್ಮಂದ಼ರೆಲ್ಲ ಅದರ ಮಾಡಿಯೇ ತೀರೊಕುಂತ ಹಟಹಿಡಿವೊ. ತನಿಗೆ ಬೆಕಾದ್ದ್ ಅದೇ಼ಂತೇಳ್ದು ಕೃಷ್ಣನ ನಿರ್ಣಯ. ಇದ್ ಕೃಷ್ಣನ ಉಪಾಯ. ಹಾಂಗೆ ಮಾತ್‌ಕತೆ ಆಗಿ ರಾಜಸೂಯ ಯಾಗ ಮಾಡ್ದುಂತೇಳ್ದೇ ನಿಶ್ಚಯ ಆತ್. ಭೀಮ, ಅರ್ಜುನ ಮತ್ತು ತಾನು ಹೀಗೆ ಹೋಗಿ ಜರಾಸಂಧನ ಮುಗ್ಸೊಕು. ಅಂವ ಜೀವಲಿದ್ದರೆ ರಾಜಸೂಯ ಯಾಗನ ಆಕೆ ಬುಡಿಕಿಲೆಂತ ಹಂಚಿಕೆ ಹಾಕಿದೊ.

ಜರಾಸಂಧ ಅವನ ಅರಮನೆಗೆ ಹಕ್ಕಲಿದ್ದ ಬೆಟ್ಟದ ಮೇಲೆ ದೊಡ್ಡದೊಂದು ಭೇರಿ ಮಾಡಿ ಇಸಿತ್ತ್. ಯಾರಾರ್ ಸಾಮರ್ಥ್ಯ ಇದ್ದೊವು ಅಂವನೊಟ್ಟಿಗೆ ಯುದ್ಧ ಮಾಡುವ ಇಚ್ಚೆ ಇದ್ದರೆ ಆ ಭೇರಿನ ಬಾರ್ಸೊಕುಂತ ಡಂಗುರ ಹೊಡ್ಸಿತ್. ಅಂತೊವು ಯಾರೂ ಇತ್ತ್‌ಲೆಂತ ಕಾರಣಂದ ತಾನೇ ಬಲವಂತತಂತ ಬೀಗ್ತ್ತಿತ್ತ್. ಹಾರ್ರವೇಸ ಹಾಕ಼ಂಡ್ ಹೋದ ಕೃಷ್ಣ, ಭೀಮ, ಅರ್ಜುನ ಮುಂದೆ ಆ ಬೆಟ್ಟಕ್ಕೆ ಹೋಗಿ ಆ ಭೇರಿನ ಹೊಡ್ದ್ ಅದರ ಒಡ್ದ್ ಹಾಕಿ, ಮಧ್ಯ ರಾತ್ರೆಲಿ ಅರಮನೆನ ಹಿಂದೆಂದ ಪ್ರವೇಶಮಾಡಿ ನಾವು ಯುದ್ಧಾರ್ಥಿಗಳಾಗಿ ಬಂದೊಳೆಂತ ಜರಾಸಂಧಂಗೆ ಕೃಷ್ಣ ಹೇಳ್ತ್. ಇವು ವೇಷ ಮರ್ಸಿಕ಼ಂಡ್ ಬಂದ ಗುಟ್ಟು ಅವಂಗೆ ಗೊತ್ತಾತ್. ಆಗ಼ಲಿಂತ ಅಂವ ಒಪ್ಪಿಕಂಡ಼ತ್. ಬೊಳ್ಪಾದ ಮೇಲೆ ಯುದ್ಧಂತ ತೀರ್ಮಾನ ಆತ್. ಭೀಮನೇ ಅವನೊಟ್ಟಿಗೆ ಯುದ್ಧ ಮಾಡ್ದುಂತ ನಿಶ್ಚಯ ಆತ್. ಏಕೆಂದರೆ ಅವಿಬ್ಬೊರೂ ಸಮಬಲರ್.

ಯುದ್ಧ ಸುರಾತ್. ಸೋಲು ಗೆಲುವು ಇಲ್ಲದೆ ಇಬ್ಬೊರೂ ಇನ್ನೊಬ್ಬನ ಸೋಲ್ಸೊಕುಂತ ಪೇಚಾಡಿಕ಼ಂಡ್ ಹೋರಾಡ್ದೊ. ಏಳ್ ದಿನ ಹಗ್‌ಲ್ ಇರ್ಲ್ ಕ಼ಳ್ತ್. ಭೀಮಂಗೆ ಸುಸ್ತಾಕ಼ಂಡ್ ಬಾಕೆ ಸುರಾತ್. ಆಕೇರಿಗೆ ಅಡಿಗೆ ಬಿದ್ದ ಜರಾಸಂಧನ ಕಾಲ್‌ನ ಮೆಟ್ಟಿ ನೆಲಕ್ಕೆ ಒತ್ತಿ ಇನ್ನೊಂದು ಕಾಲ್‌ನ ಕೈಲಿ ಹಿಡ್ದ್ ಮೇಲೆಗೆ ಸರಕ್ಕಂತ ಬೆದ್‌ರ್ ತಟ್ಟೆನ ಸೀಳುವಾಂಗೆ ಮೇಲೆ ಎಳಿಯಕನ ಜರಾಸಂಧನ ಸ಼ರ್ರ ಸ಼ರಿಯಾಗಿ ಎರ್ಡ್ ಹೋಳಾತ್. ಭೀಮ ಜಿಗುಪ್ಸೆಲಿ ಅವನ ಕೈಲಿದ್ದ ಹೋಳುನ ಬೀಸಿ ನೆಲಕ್ಕೆ ಇಟ್ಟ಼ತ್. ಎರ್ಡ್ ಹೋಳುಗಳೂ ತಲೆಭಾಗಗ಼ಳೂ, ಕಾಲುಗ಼ಳೂ ಆಯಾ ಕಡೆಗೆ ಇರುವಾಂಗೇ ಬಿದ್ದೊ.

ಆಗ ಎರ್ಡ್ ಭಾಗಗಳೂ ಹಕ್ಕಲೆ ಬಂದ್ ಕೂಡಿಕ∴ಂಡ್, ಜರಾಸಂಧಂಗೆ ಜೀವ ಬಂದ್, ಹಿಂದಕೆ ಭೀಮನೊಟ್ಟಿಗೆ ಕಾಳಗ ಕೊಟ್ಟ∴ತ್. ಇದೇ ರೀತಿ, ಅನೇಕ ಸ∴ರ್ತಿ ಪುನರಾವರ್ತನೆ ಆತ್. ಭೀಮ ಉಪಾಯ ಕಾಣದೆ ಸೋತದೆಂತದೆಂತ ಹೇಳುವಾಂಗೆ ಆತ್.

ಆಗ ಕೃಷ್ಣ ಒಂದು ಕೋಲುನ ಎರ್ಡಾಗಿ ಸೀಳಿ ಆ ತುಂಡುಗಳ ಹಿಂದೆ ಮುಂದಾಗಿ ಅಂದರೆ ತಲೆ ಇರುವ ಕಡೆ ಕಾಲ್, ಕಾಲ್ ಇರುವ ಕಡೆ ತಲೆ ಇರುವಾಂಗೆ ಮಾಡಿ ಭೀಮಂಗೆ ಕಾಂಬ ಹಾಂಗೆ ಎತ್ತಿ ಹಿಡ್ದ್ ತೋರ್ಸಿ ಹೆರ್ಕಿ ಇಟ್ಟ∴ತ್. ಭೀಮಂಗೆ ಉಪಾಯ ಗೊತ್ತಾಗಿ ಜರಾಸಂಧನ ದೇಹಭಾಗಗ ವಿಲೋಮ ರೀತಿಲಿ ಇರುವಾಂಗೆ ಮಾಡಿ ಹೆರ್ಕಿ ಇಟ್ಟ∴ತ್. ಅಲ್ಲಿಗೆ ಜರಾಸಂಧನ ಕತೆ ಮುಗ್ತ್.

ಜರಾಸಂಧನ ಮಜ್ಜ ಸಹದೇವಂತ ಅವನ ಹೆಸ್ರ್. ಅಂವ ಯುವರಾಜ ಆಗಿ ಆಳ್ತಿತ್ತ್. ಜರಾಸಂಧನ ವಧೆ ಆದದ್ದರ ಕೇಳಿ ಅಂವಂಗೆ ತನ್ನನೂ ಕೊಂದು ಬುಟ್ಟವೆನೋಂತ ಹೆದ್ರಿಕೆ ಹಿಡ್ತ್. ಕೃಷ್ಣ ಅಂವಂಗೆ ನಂಬಿಕೆ ಕೊಟ್ಟ∴ತ್. ನೀನೇ ರಾಜ ಆಗಿ ಆಳಿಕ∴ಂಡಿರ್. ನಿನ್ನ ರಾಜ್ಯಕೋಶ ಒಂದೂ ನಾವ್ಗೆ ಬೇಡಂತೇಳಿ ಅವಂಗೆ ರಾಜ್ಯಾಭಿಷೇಕ ಮಾಡಿ ಪಟ್ಟ ಕ∴ಟ್ಟಿ, ಮುಂದೆ ಸೆರೆ ಮನೆಗೆ ಹಾಕಿದ ರಾಜೆರ್ಗಳೆಲ್ಲ ಅದರ್ಂದ ಬುಡ್ಸ್. ಅಲ್ಲದೆ ಮುಂದೆ ಯುಧಿಷ್ಟಿರ ನಡ್ಸುವ ರಾಜಸೂಯ ಯಾಗಕ್ಕೆ ನೀ ಬಂದ್ ಭಾಗವಹ್ಸೊಕು, ಸಹಾಯ ಮಾಡೊಕು. ಅಷ್ಟ್ ನೀ ಮಾಡುವನೋಂತ ಕೇಳ್ತ್. ಸಹದೇವ ಸಂತೋಸುಂದ ಒಪ್ಪಿಕಂಡ∴ತ್.

ಹಾಂಗೇ ಸೆರೆಮನೆಂದ ಮುಕ್ತರಾದ ರಾಜೆರ್ಗ∴ಳಿಗೆ ನೀವು ನಿಮ್ಮ ರಾಜ್ಯಗ∴ಳಿಗೆ ಹೋಗಿ ಅಲ್ಲಿ ಪೊರ್ಲುಲಿ ರಾಜ್ಯಭಾರ ಮಾಡಿಕ∴ಂಡ್ ಸುಖ∴ಲಿರಿ. ಇನ್ನ್ ಕೆಲವೇ ಸಮಿಯ∴ಲಿ, ಇಂದ್ರಪ್ರಸ್ತ∴ಲಿ ಯುಧಿಷ್ಟಿರ ನಡ್ಸುವ ರಾಜಸೂಯ ಯಾಗ∴ಲಿ ನೀವೆಲ್ಲ ಬಂದ್ ಭಾಗ ವಹಿಸೊಕು, ಅಲ್ಲದೆ ನಿಮ್ಮಂದ ಸಾಧ್ಯವಾದ ಸಹಾಯ ಮಾಡೊಕುಂತ ಹೇಳ್ಕನ ಅವೆಲ್ಲ ಸಂತೋಸುಂದ ಒಪ್ಪಿಕ∴ಂಡ್ ಜಯಕಾರ ಮಾಡ್ದೊ.

ಮತ್ತೆ ಕೃಷ್ಣ ಭೀಮಾರ್ಜುನರೊಟ್ಟಿಗೆ ಇಂದ್ರಪ್ರಸ್ತಕ್ಕೆ ಬಂದ್ ಸೇರ್ತ್. ರಾಜಸೂಯ ಯಾಗಕ್ಕೆ ಅಡ್ಡಿಯಾಗಿ ದೊಡ್ಡ ಬಂಡೆಕ∴ಲ್ಲ್‌ನಾಂಗಿದ್ದ ಜರಾಸಂಧನ ಕೃಷ್ಣ ಉಪಾಯಂದ ನೆರವೇರ್ಸಿದ ಸುದ್ದಿ ಎಲ್ಲೊವಕೆ ಸಂತೋಸು ತಂದಿತ್ತ್. ಅವ್ಕೆಲ್ಲ ಕೃಷ್ಣನ ಮೇಲಿದ್ದ ಗೌರವಾದರಗ ಇನ್ನೂ ಹೆಚ್ಚಾದೊ. ಹಾಂಗೆ ರಾಜಧಾನಿಗೆ ಹಿಂದೆ ಬಂದ ಕೃಷ್ಣ, ಭೀಮಾರ್ಜುನರಿಗೆ ಭವ್ಯವಾದ ಸ್ವಾಗತ ಕೊಟ್ಟೊ. ರಾಜಸೂಯ ಯಾಗ ನಡೀದ್ಯೆಕೆ, ದೊಡ್ಡ ಬಂಡೆಕ∴ಲ್ಲ್‌ನಾಂಗಿದ್ದದರ ಭೀಮ ಸುಲಭಲಿ ಜಾರ್ಸಿತ್. ಇನ್ನ್ ಅದರ ಕಾರ್ಯ∴ಲಿ ನೀ ಮುಂದುವರಿಯಕೆ ಯಾವ ಅಡ್ಡಿನೂ ಇಲ್ಲೆ. ಹಾಂಗೆ ಇನ್ನ್ ಮುಂದೆ ಮುಖ್ಯಪಟ್ಟ ರುಸಿಗಳ ಬಾಕೆ ಮಾಡಿ

ಒಂದೊಂದಾಗಿ ಕಾರ್ಯಗಳ ನೆರವೇರ್ಸಿಕೆ ಸುರು ಮಾಡ್. ಬಂಧು ಬಾಂಧವರಿಗೆ, ಇಷ್ಟ ಮಿತ್ರರಿಗೆಲ್ಲ ಆಮಂತ್ರಣ ಕ.:.ಳ್ಸ್. ಹಾಂಗೆ ಬಾವ ಅತಿಥಿಗ.:.ಳಿಗೆ ನಿಲ್ಲಿಕೆ ಯೋಗ್ಯ ಬಿಡಾರಗಳ ನಿರ್ಮಾಣ ಮಾಡಿಕೆ ಮುಂದೆ ಸುರುಮಾಡ್. ಮತ್ತೆ ಯಜ್ಞನ ನೋಡಿಕೆ ಎಷ್ಟೋ ಜನ ಬಾವೊ. ಅವರ ಉಟೋಪಚಾರಕ್ಕೆ ಬೇಕಾದ ಸಾಮಗ್ರಿಗಳ ಸಂಗ್ರಹ ಆಕುಂತೆಲ್ಲ ಕೃಷ್ಣ ಯುಧಿಷ್ಟಿರಂಗೆ ಸಲಹೆ ಕೊಟ್ಟ.:.ತ್.

ಆಮಂತ್ರಣ ಕ.:.ಳ್ಸುದರ್ಲಿ ಸಂದೇಹ ಇರುದರ ಕೃಷ್ಣಂಗೆ, ಹಸ್ತಿನಾವತಿಗೆ ಆಮಂತ್ರಣ ಕ.:.ಳ್ಸಿರೆ ಭೀಷ್ಮಜ್ಜ, ಗುರುದ್ರೋಣರ್, ಕೃಪಾಚಾರ್ಯರ್ ಇವೆಲ್ಲ ಸಂತೋಸುಂದ ಬಾವೊ. ಆದರೆ ದೊಡ್ಡಪ್ಪ ಮತ್ತೆ ಕೌರವಾದ್ಯ.:.ರ್ ಬಾರದಿದ್ದರೆ ಏನ್ ಮಾಡ್ದುಂತ ಸಂಶಯ ಆದ್ದೆಂತ ಹೇಳ್ತ್.

ಅದ್ಕೆ ಕೃಷ್ಣ ಹೇಳ್ತ್, "ಎಲ್ಲೊವ್ಕು ಆಮಂತ್ರಣ ಮುಂದೆ ಕ.:.ಳ್ಸ್. ಇದ್ ನಮ್ಮದೇ ಕುಟುಂಬದ ಕಾರ್‌ಬಾರ್‌ಂತ ಅವು ಬಾರದಿರಿಕಿಲೆ. ಹಾಂಗೆ ಬಂದೊವ್ಕೆ ಮುಖ್ಯಪಟ್ಟ ಕೆಲ್ಸಗಳ ವಯ್ಸಿಕೊಡುಕು".

ಕೃಷ್ಣ ಹೇಳ್ದ ಪ್ರಕಾರ ರುಸಿಗಳ ಕ.:.ರ್ಸುದು, ಅತಿಥಿಗಳಿಗೆ ತಂಗುವ ಒಳ್ಳೆ ಬಿಡಾರಗಳ ನಿರ್ಮಾಣ ಮಾಡ್ಸಿ, ಆಹ್ವಾನ ಪತ್ರಿಕೆಗಳ ಕ.:.ಳ್ಸುದು ಮುಂತಾದ ಕಾರ್ಯಗಳ ಒಂದೊಂದಾಗಿ ಮುಗ್ಸಿತ್. ನಾಲ್ಕ್ ಕಡೆಗೆ ನಾಲ್ಕ್ ಜನ ತಮ್ಮಂದರ ದಿಗ್ವಿಜಯಕ್ಕೆ ಧರ್ಮರಾಯ ಕ.:.ಳ್ಸಿತ್. ಕೆಲವೇ ಸಮಿಯಲಿ, ತಮ್ಮ ಕಾರ್ಯಗಳ ಯಶಸ್ವಿಯಾಗಿ ಮುಗ್ಸಿ ಹೇರಳ ಧನಕನಕ ವಸ್ತು ವಾಹನಗಳ ಹೇರಾಳವಾಗಿ ಬಂಡಾರನ ತುಂಬ್‌ಸಿದೊ. ರುಸಿಗಳ ಗುಂಪು ಬಂದ್ ಸೇರ್ದೊವು. ಯಾಗಕ್ಕೆ ಯೋಗ್ಯ ಮುಹೂರ್ತನ ನಿರ್ಣಯ ಮಾಡ್ದೊ. ಪ್ರಶಸ್ತವಾದ ಲಗ್ನದ ಸುಮುಹೂರ್ತಲಿ, ಯಜ್ಞದ ಯಜ್‌ಮಾನ ಆದ ಯುದಿಷ್ಟಿರ ಒಂದು ಜೋಡೆತ್ತ್‌ಗಳ ಕ.:.ಟ್ಟಿ, ಯಾಗದ ಪವಿತ್ರ ಜಾಗೆನ ನೇಗಿಲ್‌ನ ಮೂಲಕ ಐದ್ ನೇಗಿಲ್ ಬರೆ ಬೀಳುವಾಂಗೆ ಹೂಡ್ತ್. ಎತ್ತ್‌ಗ ನೇಗ್‌ಲನ ಎಳ್ಕಂಡ್ ಬೇಕಾದ ಕಡೆ ತಿರ್ಗುವಾಂಗೆ ಅನುಕೂಲವಾಗುವಾಂಗೆ ತಿರ್ಗ್‌ಸಿಕೆ ನಕುಲ ಮತ್ತೆ ಸಹದೇವ.:.ರ್ ಎರ್ಡ್ ಕಡೆಲಿ ನಿತ್ತ್‌ಕ.:.ಂಡ್ ಎತ್ತ್‌ಗ ತಿರ್ಗುವಾಂಗೆ ಮಾಡಿಕಂಡಿದ್ದೊ.

ಇದ್ ನಮ್ಮ ಕಡೆ ಬೇಸಾಯದ ಪ್ರಾರಂಭ ಮುಹೂರ್ತನ ಬಿಸು ಸಂಕ್ರಾಂತಿಲಿ ಗದ್ದೆಲಿ ಎತ್ತ್‌ಕ.:.ಟ್ಟಿ, ಐದ್‌ಹೊಳಿ ಆವಾಂಗೆ ಸಾಂಕೇತಿಕವಾಗಿ ಹೂಡಿ ಬುಡುವಾಂಗೆ ಕಾಂಬತಿತ್ತ್. ಬೇಸಾಯ ಕಾರ್ಯನೂ ಯಜ್ಞದಾಂಗೇ ಪುಣ್ಯಕಾರ್ಯಂತ ಇದರ್‌ಂದ ನಮ್ಮ ಮನ್ಸಿಗಾದೆ,

ಯಾಗ ಭಾರಿ ಸಂಭ್ರಮಂದ ನಡ್ತ್. ಎಷ್ಟೋ ಲಕ್ಷ ಸೇರಿದ್ದೊ. ದಿನೋಳು ಲಕ್ಷಕ್ಕಿಂತ ಮೇಲೆ ಹೊರೆಗಿನ ರಾಜ್ಯಂದ ಹೆಣ್ಮಕ, ಮಕ್ಕಂತ ಯಾಗನ ನೋಡಿಕೆ ಜೆನ ಬಾತಿದ್ದೊ. ಬಹಳ ಸಂಖ್ಯೆಲಿ ಬೇರೆ ರಾಜ್ಯದ ರಾಜೆರ್ಗ, ಅಪೂರ್ವದ ಉಡುಗಿರೆಗಳ ಹಿಡ್ಕಂಡ್ ಬಾತಿದ್ದೊ. ಭಂಡಾರದ ಕೆಲ್ಸನ ದುರ್ಯೋಧನ ನೋಡಿಕಂಡ.:.ತ್.

ಅಡಿಗೆ ಕೆಲ್ಸನ ಮೇಲ್ವಿಚಾರನ ದುಶ್ಯಾಸನ ವಹಿಸಿಕ.ಂಡ.ತ್. ಬಂದ ಅತಿಥಿಗ ಹೋಕನ ಅವ್ಕೆ ಉಡುಗಿರೆ ಕೊಡುವ ಕೆಲ್ಸನ ಕರ್ಣ ವಹಿಸಿಕಂಡತ್. ಎಲ್ಲೊವು ಭಾರಿ ಸಂಭ್ರಮ ಸಂತೋಸುಂದ ಅವರ ಕೆಲ್ಸಗಳ ನಿರ್ವಹಿಸಿದೊ. ಕೃಷ್ಣ, ಯಾಗಕೆ ಬಂದ ಬ್ರಾಹ್ಮಣರ ಕಾಲ್ ತೊಳಿಯುವ ಕೆಲ್ಸ ಮಾಡ್‌ತಿತ್ತ್‌ಗಡ.

ಯಾಗ ಕಾರ್ಯ ಮೂವತ್ತಾರ್ ದಿನ ನಡ್ತ್. ಊಟೋಪಚಾರಂದ ಬಂದ ಜನ ತೃಪ್ತಿ, ಸಂತೋಷಗಳ ಪಡ್ದೊ. ಎಷ್ಟೋ ಉತ್ತಮ ವಸ್ತುಗಳ ಯಜ್ಞ.ಲಿ ಹೋಮ ಮಾಡ್ದರ್‌ಂದ ದೇವತೆಗಳೂ ತೃಪ್ತಿ ಪಟ್ಟೊ. ಯಾಗ ಸಮಾಪ್ತಿಗೆ ಮುಂದೆ ಸೇರ್ದವರ ಪೈಕಿ ಮುಖ್ಯ ವ್ಯಕ್ತಿಗೆ ಅಗ್ರಪೂಜೆ ಸಲ್ಲಿಸಿ ಯಾಗನ ಸಮಾಪ್ತಿ ಮಾಡುದು ಕ್ರಮ.

ದುರ್ಯೋಧನಂಗೆ ಬಂದ ಕಾಣಿಕೆಗಳ ತಕ.ಂಡ್ ತಕ.ಂಡ್ ಕೈಬೇನೆ ಆಕೆ ಸುರಾತ್ ಗಡ. ಕರ್ಣಂಗೆ ಹೋವುಕೆ ಉಡುಗರೆ ಕೊಟ್ಟೊ ಕೊಟ್ಟೊ ಕೈ ಬೇನೆ ಎದ್ದ.ತ್ ಗಡ. ದುಶ್ಯಾಸನದೂ ಅದೇ ಗ.ತಿ ಅಂತೂ ಅವೆಲ್ಲವೂ ಎಷ್ಟೇ ಆದರೂ ನಮ್ಮ.ದೇ ಮನೆ ಜಂಬರಂತ ಮನ.ಪೂರ್ತಿ ದುಡಿಯತಿದ್ದೊ ಗಡ. ದುರ್ಯೋಧನಂಗೆ ಒಂದು ವಿಷಯ ಆಶ್ಚರ್ಯದ್ದಾಗಿ ಕಾಂಬತಿದ್ದ.ದಂತೇಳಿರೆ ತುಂಬಿದ್ದ ಯುಧಿಷ್ಠಿರನ ಭಂಡಾರ. ನಿತ್ಯವೂ ಬಂದ್ ಹೋವ ಅತಿಥಿಗ.ಳಿಗೆ ಅವು ತಂದಷ್ಟೇ ಕಾಣಿಕೆನ ತೆಗ್‌ದು ಕೊಟ್ಟರೂ ಅಷ್ಟೇ ತುಂಬಿದ್ದ್ ಮತ್ತೆ ಬಂದ.ದರ ಅಲ್ಲಿ ಇಸಿಕೆ ಜಾಗೆ ಇಲ್ಲೆಂತಿದ್ದ.ದ್. ಆಶ್ಚರ್ಯಕ್ಕೆ ಎಡೆಯಾದ್ದ್, ಎಣೆಯಿಲ್ಲದ ಮತ್ಸರಕ್ಕೆ ಹೆದ್ದಾರಿಯಾಗಿ ಮಹಾಭಾರತ ಯುದ್ಧಕ್ಕೆ ನಾಂದಿ ಹಾಡುವಾಂಗಾತ್.

ಯುಧಿಷ್ಠಿರ ಈ ಸಭೆಲಿ ಅಗ್ರಪೂಜೆಗೆ ಅರ್ಹರಾದೊವು ಯಾರ್‌ಂತ ಹಿರಿಯೊವು ಸೂಚಿಸೊಕುಂತ ಕೇಳಿಕ.ಂಡ.ತ್. ಅದಿಕೆ ಉತ್ತರ ಕೊಡಿಕೆ ಭೀಷ್ಮ ಎದ್ದ್ ನಿತ್ತ.ತ್.

ಭೀಷ್ಮ ಸಭೆನುದ್ದೇಶಿಸಿ ಹೇಳ್ತ್ "ಪಾತಾಳಕೆ ಭೂಮಿನ ತಕ.ಂಡ್ ಹೋದ ರಕ್ಕಸನ ಕೊಂದ್ ಭೂಮಿನ ಮೇಲೆ ತಂದಂವ, ಸಮುದ್ರಮಥನ ನಡಿಯಕನ ಮಂದರ ಪರ್ವತನ ಕೂರ್ಮಾವತಾರ ತಾಳಿ ಪರ್ವತನ ಕ.ಂತದಾಂಗೆ ಎತ್ತಿ ಹಿಡ್ದ ಮಹಿಮ, ಭೂಮ್ಯಾಕಾಶಗಳ ಎರ್ಡೇ ಹಜ್ಜೆಲಿ ಅಳ್ದ್, ಮೂರ್ನೆ ಹಜ್ಜೆನ ಬಲಿನ ತಲೆಮೇಲೆ ಇಸಿ ಮೆಟ್ಟಿ ಪಾತಾಳಕ್ಕಿಳ್ಸಿದಂಥ ಧೀರ ನಾರಾಯಣ ಸ್ವರೂಪನಾದ ಶ್ರೀಕೃಷ್ಣ, ಲೋಕ ಕಂಟ.ಕರಾದ ಅನೇಕ ರಾಕ್ಷಸರ ಕೊಂದ ವೀರನಾದ ಶ್ರೀಕೃಷ್ಣ, ಸರ್ವ ಜನಸಮೂಹ.ಲಿ ಮೇಲಾವ ಮಹಾಪುರುಷನೇ ಅಗ್ರಪೂಜೆಗೆ ಸ.ರಿಯಾದ ಯೋಗ್ಯವ್ಯಕ್ತಿ, ಅಂವ ಲೀಲಾಮಾನುಷನೇ ಸರಿ" ಹೀಂಗೆ ಹೇಳಿಕನ ಸಭಿಕರ ದೊಡ್ಡ ಕರತಾಡನ ಆತ್. ಯುದಿಷ್ಠಿರಂಗೆ ಸಂತೋಸಾತ್. ಅಂವ ನಕುಲ ಸಹದೇವರ ಕರ್ದ್ ಇದ್‌ಕೆ ತಯಾರ್‌ಮಾಡಿಕೆ ಹೇಳ್ತ್.

ಅವಿಬ್ಬೊರೂ ಹೋಗಿ ಶ್ರೀಕೃಷ್ಣನ ಕೈಹಿಡ್ಕಂಡ್ ಯಾಗ ಸಾಲೆಲಿ ಎತ್ತರದ ಪೀಠದಕ್ಕಲೆ ಹೋಗಿ ಅವನ ಪಾದಗಳ ತೊಳಿಯಕೆ ಚಿನ್ನದ ಗಿಂಡಿಲಿ ನೀರ್ ಹಿಡ್ಕ∴ಂಡ್ ತಯಾರಾದೊ. ಆಗ ಸಭೆಲಿ ಗುಡ್ಗಿದಾಂಗೆ ಸದ್ದಾತ್. ಶಿಶುಪಾಲ ಎದ್ದ್ ನಿತ್ತ್‌ಕ∴ಂಡ್, “ಯುಧಿಷ್ಟಿರ! ಈ ಗೋಪಾಲಂಗೆ ಅಗ್ರಪೂಜೆನ ನಿಶ್ಚಯ ಮಾಡಿ ಅವಂಗೆ ಎತ್ತಿ ಹಿಡ್ದ ಗಿಂಡಿನ ನೀರ್‌ನ ಕೊಳಚೆಗುಂಡಿಗೆ ಸೂಸು. ಮೃಷ್ಟಾನ್ನ ಭೋಜನ ಮಾಡಿ, ಗೋಮೂತ್ರಂದ ಬಾಯೆ ಮುಕ್ಕುಳ್ಸಿದಾಂಗೆ ಆತ್. ಈ ನಿನ್ನ ಕಾರ್ಯ. ಏನಾರ್ ಒಳ್ಳಮಾತ್‌ನ ಹೇಳುದುಂತ ಈ ಮುದಿಯನ, ಕೇಳಿರೆ ಬುದ್ಧಿಮಂಕಾದ ಅಂವ ಈ ಕ್ಷತ್ರಿಯ ಪುಂಗವರ ಈ ದೊಡ್ಡ ಸಭೆಲಿ ಈ ಗೋವಳನ ಹೊಗ್ಳ್ತ್. ಅದರ ಕೇಳಿಕ∴ಂಡ್ ನೀನೂ ಅದ್ಕೆ ತಯಾರಾದ. ನಿಂಗೆ ಅಂವ ನಂಟ ಆಗಿರ್ದು. ಹಾಂಗೆ ನಿಂಗೆ ಅವಂಗೆ ಮನ್ನಣೆ ಮಾಡೊಕುಂತಿದ್ದರೆ ಮನೆಲಿ ಮಾಡ್. ಅದ್ ಬಿಟ್ಟ್ ಈ ದನಮೇಪತಂಗೆ, ಗೋಪೀ ಜಾರಂಗೆ, ಬೆಣ್ಣೆಕ∴ದ್ದ್ ತಿಂದವಂಗೆ, ಈ ಕ್ಷತ್ರಿಯೋತ್ತಮರ್ ಸೇರ್ದ ಈ ದೊಡ್ಡ ಸಭೆಲಿ, ಇವಂಗೆ ಅಗ್ರಪೂಜೆ ಕೊಡುದು ಸ∴ರಿಯಲ್ಲ. ಅವಿವೇಕಿಯಾದ ಈ ಮುದಿಯ ಮುದಿಭ್ರಾಂತ್‌ಂದ ಹೇಳ್ದ ಮಾತಿಗೆ ಕಾಸ್‌ನ ಬೆಲೆಯಿಲ್ಲೆ.

ಪರಮ ಪೂಜ್ಯ ಆಗಿದ್ದ ಹಿರಿಯ ಮೊಂಯಿಸ ಭೀಷ್ಮನ ತೆಗ್ಳಿ ಶಿಶುಪಾಲ ಮಾತಾಡುದರ ಕೇಳಿ ಯುಧಿಷ್ಟಿರಂಗೆ ತುಂಬ ಬೇಜಾರಾತ್. ಹಾಂಗೆ ಶಿಶುಪಾಲನ ಸಮಾಧಾನ ಮಾಡಿಕೆ ಮಾತಾಡ್ತ್. ಆದರೆ ಶಿಶುಪಾಲ ಕೊದಿವ ಎಣ್ಣೆಗೆ ನೀರ್ ಸಿಡ್ಕಿದಾಂಗೆ ಉರ್ದೆದ್ದ∴ತ್. ಭೀಷ್ಮ ಯುದಿಷ್ಟಿರಂಗೆ ನೀ ಸುಮ್ಮಂಗಿರ್, ಅವಂಗೆ ಮೊದ್ದ್ ಅರಿಯಕೆ ಕೃಷ್ಣಂಗೆ ಗೊತ್ತುಟ್ಟು. ತಕ್ಕ ಸಮಯ ಬಾಕನ ಮುಟ್ಟ ಕಾಯುದು ಅವನ ಕ್ರಮಂತ ಹೇಳ್ತ್.

ಈಗ ಕೃಷ್ಣ ಮಾತಿಗೆ ಸುರುಮಾಡ್ತ್. “ಶಿಶುಪಾಲ, ನೀ ಸಣ್ಣ ಕೂಸು ಆಗಿರ್ಕನ ನಿನ್ನ ರೂಪ ವಿಕಾರ ಆಗಿತ್ತ್. ನಿಂಗೆ ನಾಲ್ಕ್ ಕೈಗ∴ಳೂ, ಹಣೆಲಿ ಒಂದು ಕ∴ಣ್ಣೂ ಇತ್ತ್. ನಿನ್ನ ಅವ್ವಂಗೆ ನನ್ನ ಕೂಸುಗೆ ವಿಕಾರ ರೂಪಾತಲೇಂತ ತುಂಬ ಬೇಜಾರ ಆಗಿತ್ತ್. “ಈ ಕೂಸುನ ತೊಡೆ ಮೇಲೆ ಮಲ್ಗಿಸಿಕನ ಈ ಕೂಸುನ ವಿಕಾರರೂಪ ಮಾಯವಾದೆನೋ ಅವಂದಲೇ ಇವಂಗೆ ಮೃತ್ಯು”ಂತ ಆಕಾಶವಾಣಿ ಆತ್. ಅದರ ಕೇಳಿ ನಿನ್ನ ಅವ್ವ ಸಿಕ್ಕಿದವರ ತೊಡೆಮೇಲೆ ಕೂಸುನ ತಕಂಡ್ ಹೋಗಿ ಮಲ್ಗುಸುದು. ಹೇಂಗಾರೊಮ್ಮೆ ಕೂಸು ಎಲ್ಲ ಮಕ್ಕಳಾಂಗೆ ಪೊರ್ಲಾಗ∴ಲಿಂತ ಅದಿಕೆ ಆಸೆ. ಆಗ ನಾ ಎಳೆ ಯುವಕ ಆಗಿದ್ದೆ. ಅದ್ ನಮ್ಮ ಕುಲಕ್ಕೇ ಸೇರ್ದ ಮಹಿಳೆ. ನಂಗೆ ಅತ್ತೆ ಆಕು. ಹೀಂಗೆ ಒಂದು ದಿನ ನಿನ್ನ ತಂದ್, ನನ್ನ ತೊಡೆ ಮೇಲೆ ಮಲ್ಗಿಸಿತ್. ಆ ಕೂಡ್ಲೆ ನಿನ್ನ ಹೆಚ್ಚಿನ ಕ∴ಣ್ಣೂ, ಕೈಗ∴ಳೂ ಮಾಯವಾಗಿ ನೀ ಪೊರ್ಲುನ ಕೂಸಾದ. ನಿನ್ನ ಅವ್ವಂಗೆ ಸಂತೋಸು ಬೇಜಾರಗ ಒಟ್ಟಿಗೇ ಆದೋ. ನಿನ್ನ ಮೃತ್ಯು ನನ್ನ ಕೈಲಿ ಆದೆಂತೇಳುದು ಬೇಜಾರಕ್ಕೆ ಕಾರಣ.

ಹಾಂಗೆ ನಿನ್ನ ವಿಷಯಲಿ ನೂರು ತೊಪ್ಪು ಮಾಡುವವರೆಗೆ ನೀ ನನ್ನ ಮಜ್ಜನ ಕ್ಷಮಿಸೊಕೂಂತ, ವರ ಕೇಳ್ದಂಗೆ ಕೇಳ್ತ್. ನಾ ಒಪ್ಪಿದೆ. ನೂರ್‌ಂದ ಮೇಲೆ ಒಂದು ತಪ್ಪಾದರೆ ನಾ ತಾಳಿಕಿಲ್ಲೆಂತ ನಾ ಮಾತು ಕೊಟ್ಟೊಳೆ".

ಎಲಾ ಕೃಷ್ಣ! ನೀ ಹಂದಿಯಾಗಿ, ಏಮೆಯಾಗಿ, ನಾನಾ ರೀತಿನ ಡೊಂಬರಾಟ ಮಾಡಿ ಹೆಸ್‌ರ್ ಪಡ್‌ಕಂಡ. ಅಂದ್ ನಾ ಇದ್ದಿದ್ದರೆ ನಿನ್ನಂದ ಏನೂ ಬೇಯಕ್ಕಿತ್ತ್‌ಲೆ. ಅಗ್ರಪೂಜೆ ಪಡಿಯಕೆ ಹೊರ್ಟ ನೀ ಅಪ್ಪಟ ದನಮೇಪತ. ಗೊಲ್ಲರ ಮನೆ ಮನೆ ಹುಕ್ಕ್ ಹಾಲ್ ಬೆಣ್ಣೆಗಳ ಕದ್ದ್ ತಿಂಬೊಂವ, ಗೋಪೀ ಜಾರ, ಬಕವಧೆ, ಜಟಾಸುರ ವಧೆಂತ ನಿನ್ನ ಕೆಲ್ಸ ಇಲ್ಲದ ಕವಿಗಳೆಲ್ಲ ನಿನ್ನ ಹೊಗ್‌ಳಿ ಬರ್ದ್ ಜನಗಳಿಗೆ ತೊಪ್ಪು ತಿಳುವಳಿಕೆ ಕೊಟ್ಟೊಳೊ. ನನ್ನ ಅವ್ವ ಕೇಳ್ದ್ ನಿನ್ನ ನೂರು ತೊಪ್ಪುಗಳ ಮಾತ್ರ. ತೊಪ್ಪುಗ ನಿನ್ನ.:.ದ್ ನೂರಲ್ಲ. ಅದೆಲ್ಲ ಜೆನಗಳಲಿ ಪ್ರಚಾರ ಆಗಿ ತನ್ನ ಅಳಿಯನ ಮರ್ಯಾದೆ ಹೋಕೆ ಆಗ.:.ದ್‌ಂತೇಳುದ್ಯೆಕೆ ನನ್ನ ಅವ್ವ ನಿನ್ನ ನೂರು ತೊಪ್ಪುನ ಕೇಳ್ತ್. ನೂರಲ್ಲ, ನಿನ್ನ ಸಾವಿರಾರ್ ತೊಪ್ಪುಗ ನಂಗೆ ಗೊತ್ತುಟು. ನಾ ಅದರೆಲ್ಲ ಹೇಳಿರೆ ಅವಮಾನ.:.ಲಿ ನೀನೇ ಆತ್ಮಹತ್ಯೆ ಮಾಡಿಕಂಬ. ನಿಂಗೆ ಬೊದ್ಕಿಕೆ ಒಂದು ಅವಕಾಶ ಕೊಟ್ಟನೆ. ಅಗ್ರಪೂಜೆ ಪಡಿಯಕೆ ತಯಾರಾದ್ ನನ್ನ ತೊಪ್ಪಾತ್. ನೀ ಕ್ಷಮಿಸ್‌ಂತ ಹೇಳಿ ನನ್ನ ಕಾಲಿಗೆ ಬೀಳ್. ನಿನ್ನ ಬುಟ್ಟನೆಂತ ಶಿಶುಪಾಲ ಹೇಳಿ ಬಾಯೆ ಮುಚ್ಚಿಕೆ ಮುಂದೆ ಕೃಷ್ಣನ ಚೆಕ್ರ ಅವನ ತಲೆನ ತುಂಡುಮಾಡ್ತ್. ಅವನ ಕಡೆವು ಕೃಷ್ಣನೊಟ್ಟಿಗೆ ಯುದ್ಧಕ್ಕೆ ನಿತ್ತ್ ಸತ್ತೊ.

ಯುಧಿಷ್ಠಿರ ಮಾಡ್ದ ರಾಜಸೂಯ ಯಾಗವೇ ಮುಂದೆನ ಮಹಾಭಾರತ ಯುದ್ಧಕ್ಕೆ ನಾಂದಿ ಹಾಡ್ತ್‌ಂತ ಹೇಳ.:.ಕ್. ಈ ಯಾಗಕ್ಕೆ ಕೌರವರ ಕೂಟದವೆಲ್ಲ ಬಂದ್ ಅದರ ಕಾರ್ಯಕ್ರಮಗಲ್ಲಿ ಒಂದೇ ಮನೆಗೆ ಸೇರ್ದವರಾಂಗೆ ಕೆಲಸ ಕಾರ್ಯಗಲ್ಲಿ ಭಾಗಿಗಳಾದೊ. ದುರ್ಯೋಧನ ಭಂಡಾರದ ಮೇಲ್ವಿಚಾರಕ ಆಗಿ ಕೆಲ್ಸ ವಹಿಸಿಕಂಡ.:.ತ್. ಬೇರೆ ರಾಜೆರ್ಗ ಪಾಂಡವರ ಮೇಲೆನ ಗೌರವಂದ ತಾವ ಕಾಣಿಕೆಗಳ ತಕ.:.ಂಡ್ ಭಂಡಾರಕೆ ಜಮೆ ಮಾಡುದು ಅವನ ಕೆಲ್ಸ ಆಗಿತ್ತ್. ಅಂಥ ರಾಜೆರ್ಗ ಹಿಂದೆ ಹೋಕನ ಅವ್ರೂ ಕಾಣಿಕೆ ಕೊಟ್ಟ್ ಗೌರವಂದ ಕ.:.ಳ್ಸುದು ಸಂಪ್ರದಾಯ. ಇದರ ಕೆಲ್ಸ ವಹಿಸಿಕ.:.ಂಡ.:.ದ್ ಕರ್ಣ. ತಕಂಬೊದು, ಕೊಡುದು ಈ ಕೆಲ್ಸಗಳ ಮಾಡಿ ಇವ್ಕೆ ಕೈಬೇನೆ ಎದ್ದ.:.ತ್ ಗಡ. ಬಂದವರ ಮತ್ತು ಯಜ್ಞಕ್ಕೆ ಸೇರ್ದವ್ಕೆಲ್ಲ ಊಟದ ವ್ಯವಸ್ಥೆ ಮಾಡುದು ದುಶ್ಶಾಸನನ ಕಾರ್ಯಭಾರ.

ಈ ಮೂರು ಜೆನ.:.ಗಳಿಗೂ ಬಿಡುವಿಲ್ಲದ ಕೆಲ್ಸಗಳ್‌ಂದಾಗಿ, ಕ.:.ಯಿಗಲ್ಲಿ ಬೇನೆ ಸುರಾತ್ ಗಡ. ಆದರೆ ಮೂರು ಜೆನಂಗಳೂ ಇದ್ ತಮ್ಮ.:.ದೇ ಮನೆ ಕೆಲ್ಸಂತೇಳುವ ಶ್ರದ್ಧೆಂದ ತಮ್ಮ ಕರ್ತವ್ಯನ ಪೂರೈಸಿದೊ. ಪಾಂಡವರೊಟ್ಟಿಗೆ ಹಿಂದೆ ಎಷ್ಟೋ ಕಿನಿಸ್ ಕಿಸ್‌ರ್‌ಗ್ ನಡ್ದ್ ಹೋಗಿದ್ದರೂ ಈ ಸಂದರ್ಭ.:.ಲಿ, ಬಾಂಧವ್ಯದ ಬಿಗಿಕ.:.ಟ್ಟೇ ಕಾಂಬತ್ತಿತ್ತ್. ಅದ್ ಮುಂದೆ ಹಾಂಗೇ ಮುಂದುವರಿದಿದ್ದರೆ

ಮಹಾಭಾರತಯುದ್ಧ ನಡಿಯಕಿತ್ತಲೆ. ವಿಧಿ ಸಂಕಲ್ಪದೆದ್ರ್ ನಿಲ್ಲಿಕೆ ಮೊಂಯಿಸ಼ರ್ ಎಷ್ಟೇ ಪ್ರಾಜ್ಞರಾಗಿದ್ದರೂ ಯಾರ್‌ಂದ಼ಲೋ ಆಕಿಲೆ. ಕುರುವಂಶವೇ ಸಂಪೂರ್ಣ ನಾಶವಾಗಿ ಹೋಕೆ ಎರ್‌ಡ್ ವ್ಯಕ್ತಿಗ಼ಳೇ ಕಾರಣಕರ್ತರಾದವೆ. ಒಬ್ಬ ಶ್ರೀಕೃಷ್ಣ, ಇನ್ನೊಬ್ಬ ಶಕುನಿ. ಶ್ರೀಕೃಷ್ಣ ಆದರೆ 'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ' ಆಗಿ ಅವತಾರ ಎತ್ತಿದಂವ. ಅಂವ ಎಲ್ಲದಿಕೂ ಪಾಂಡವ ಪಕ್ಷದ ಕಡೆಗೆ, ನಿತ್ತದರ್‌ಲ್ಲಿ ಅವನ ಉದ್ದೇಶ ಏನ್‌ಂತ ಲೋಕಕ್ಕೇ ಗೊತ್ತಾದೆ. ಹುಟ್ಟಿದರ್‌ಂದಳೇ ಅಂವ ನಾನಾ ಸಂಕಟಗಳ ಎದ್‌ರ್ಸಕಾತ್. ಎಲ್ಲ ಕಂಟಕನ ದಾಟಿ, ಗ಼ಟ್ಟಿಯಾದ ವ್ಯಕ್ತಿತ್ವ ಪಡ್ದ್ ಮಹಾಭಾರತ ಯುದ್ದ಼ಲಿ ಆಯುಧ ಎತ್ತದೇ, ಪಾಂಡವರ ವಿಜಯಕ್ಕೆ ಕಾರಣನಾದೆ. ಕೌರವರೆಲ್ಲ ನಾಶ ಆದವೆ. ಪಾಂಡವ಼ರ್ ಐದ್ ಜನ ಮಾತ್ರ ಒಳ್ದವೆ. ಅಭಿಮನ್ಯು ಸಮೇತ ಪಾಂಡವರ ಎಲ್ಲ ಮಕ್ಕಳೂ ಸತ್ತವೆ. ಉತ್ತರೆನ ಗರ್ಭವೂ ನಾಶವಾಗುವಾಂಗೆ ಅಶ್ವತ್ಥಾಮನ ಮಹಾಸ್ತ್ರ ಮಾಡಿರೂ ಕೃಷ್ಣನ ಮಹಿಮೆಂದ ಅದ್ ಜೀವ಼ಲಿ ಒಳ್ದದೆ. ನೂರು ಮಕ್ಕಳ ಕಳ್ಕಂಡ ಗಾಂಧಾರಿನ ಪುತ್ರ ಶೋಕಕ್ಕೆ ಸ಼ರಿ ಸಮಾನ ದು:ಖ ದ್ರೌಪದಿದೂ ಆದೆ. ಶ್ರೀಕೃಷ್ಣನ ಪಾಂಡವ ಪಕ್ಷಪಾತ ಎಲ್ಲೊವ್ಕೆ ಗೊತ್ತಾಗುವಾಂಗೇ ಇತ್. ಆದರೆ ಮಹಾ ತಂತ್ರಗಾರ ಶಕುನಿ ಕೌರವ ಕಡೆ ಇದ್ದ್‌ಕಂಡೇ ಕೌರವ ಕುಲನಾಶಕ್ಕೆ ಮಾಡ್ದ ತಂತ್ರಗಾರಿಕೆ ಯಾರಿಗೂ ಗೊತ್ತಾಗದಾಂಗೆ ಇತ್.

ಯಾದೋ ಕಾರಣಂದ ಗಾಂಧಾರದ ರಾಜಪರಿವಾರನೆಲ್ಲ ಕೌರವರ್ ಸೆರೆ ಮನೆಗೆ ಹಾಕಿದ್ದೊ. ದಿನಕ್ಕೊಮ್ಮೆ ಒಂದು ಬಟ್ಟ್‌ಲಿಲಿ ಹುಗ್ಗಿನ ತಕ಼ಂಡ್ ಹೋಗಿ ಎತ್ತರ಼ಲಿ ನಿತ್ತ್ ಇವಿದ್ದ ಕಡೆಗೆ ಹರ್‌ಂಡುವೊ. ಆ ರಾಜ ಪರಿವಾರದೊವು ನೆಲಕ್ಕೆ ಬಿದ್ದ ಒಂದೊಂದು ಅಗ್‌ಳುನ ಹೆರ್ಕಿ ತಿಂದೇ ಬೊದ್ಕೊಕು. ದಿನಕ್ಕೆ ಒಂದು ಅಗುಳುನಾಂಗೆ ಒಬ್ಬ ಎಷ್ಟ್ ದಿನ ಬೊದ್ಕುದು? ಅದ್ಕೆ ಸಬಲರಾಜ ಅವನ ಮಕ್ಕಳ ಮತ್ತೆ ಪರವಾರದವರ ಕರ್ದ್ ಹೇಳ್ತ್. "ನಾವು ಒಂದೊಂದು ಅಗುಳ್ ತಿಂದ್ ಹೆಚ್ಚಿ ದಿನ ಬೊದ್ಕಿಕೆ ಆಕಿಲ್ಲೆ. ಹಾಂಗೆ ನಾವು ಅಗುಳನೆಲ್ಲ ಹೆರ್ಕಿ ಸಂಗ್ರಹಿಸಿ ನಮ್ಮ ಕಡೇ ಮಜ್ಜ ಶಕುನಿಗೆ ಕೊಡೊನೊ ಅಂತ. ಅಂವ ಅದರ ತಿಂದ್ ಬೊದ್ಕ್ಯಣ಼ಲಿ. ಮುಂದೆ ಕೌರವರ ಎಲ್ಲ ಸರ್ವನಾಶ ಮಾಡುವೆಂತ ನಂಗೆ ಬಾಸೆ ಕೊಡೊಕು." ಹಾಂಗೆ ಎಲ್ಲವು ಒಪ್ಪಿ ಶಕುನಿ ಬೊದ್ಕಿ ಒಳಿವಾಂಗೆ ಮಾಡ್ದೊ. ಶಕುನಿ ಹಾಂಗೆ ಶಪಥ ಮಾಡ್ತ್. ಮತ್ತೆ ಅವನ ಅಪ್ಪನೊಟ್ಟಿಗೆ "ಅಪ್ಪ! ನಿಮ್ಮ ಎಲುಂದಳೇ ನಾ ಪಗಡೆ ದಾಳ ಮಾಡಿಕಣೆ. ಪಗಡೆ ಆಟ಼ಲಿ ನಾ ಹೇಳ್ದ ಗರ ಬೀಳೊಕುಂತ ನೀವು ವರ ಕೊಡುಕು"ಂತ ಕೇಳ್ತ್. ಅವಂಗೆ ಹಾಂಗೆನೆ ವರ ಕೊಟ್ಟ಼ತ್. ಮತ್ತೆ ಅಂವನೂ ಬೇರೆವೂ ಸತ್ತ್ ಹೋದೊ.

ಶಕುನಿ ಗಾಂಧಾರಿನ ಧೃತರಾಷ್ಟ್ರಂಗೆ ಮೊದುವೆ ಆದ ಮೇಲೆ ಅದಿಕೆ ಆಧಾರವಾಗಿರುವ ನೆವನಂದ ಹಸ್ತಿನಾವತಿಲೇ ನಿತ್ತ಼ತ್. ಎದ್‌ರಿಗೆ ಅವ್ಕೆ

ಸಹಾಯ ಮಾಡುವಾಂಗೆ ತೋರ್ಸಿಕಂಡರೂ ಅವನ ತಂತ್ರಗಾರಿಕೆ ಕಡೆವರೆಗೆ ಯಾರಿಗೂ ಗೊತ್ತಾತ್‌ಲೆ. ದುರ್ಯೋಧನ ಅವನ ಕೈಲಿ ಸಿಕ್ಕಿದ ದಾಳದಾಂಗಾತ್. ಅಂವ ಧೃತರಾಷ್ಟ್ರಂಗೆ, ಭೀಷ್ಮ ದ್ರೋಣ ಮುಂತಾಗಿ ಹಿರಿಯರ ವಿರೋಧಿಸಿ ಸರ್ವಾಧಿಕಾರಿನಾಂಗೆ ವರ್ತಿಸಿಕೆ ಶಕುನಿಯೇ ಕಾರಣ. ಕೌರವ.:.ರ್ ಪಾಂಡವರಿಗೆ ಅತಿ ಹೇಯ ಕಾರ್ಯಗಳ ಮಾಡಿ ಅವಮಾನ ಮಾಡ್‌ಕನ ಈ ಹಿರಿಯ.:.ವು ಅದರ ತಡಿಯಕೆ ಬೊತ್ತದೆ ಮೌನವಾಗಿ ನೋಡಿಕ.:.ಂಡಿರುವಾಂಗೆ ಮಾಡ್ದ್ ದುರ್ಯೋಧನ; ಮಾಡ್ಸಿದಂವ ಶಕುನಿ.

ದುರ್ಯೋಧನನ ಮತ್ಸರಕ್ಕೆ ಕಾರಣವಾದ್ದ್, ಪಾಂಡವರ ವೈಭವ ಮತ್ತೆ ಅವರ ಸಂಪೊತ್ತ್. ಯಾಗ ಮುಗ್ದ್ ಎಲ್ಲೊವು ಊರಿಗೆ ಸಂತೋಸುಂದ ಹೊರ್ಟೊ. ಭೀಷ್ಮ, ದ್ರೋಣರ್ "ಯುಧಿಷ್ಟಿರ, ಚಕ್ರವರ್ತಿಯಾತ್. ಅಪಾರ ಸಂಪೊತ್ತಿಗೆ ಒಡೆಯನಾತ್. ನಮ್ಮ ಕುಲದ ಕೀರ್ತಿನ ಹೆಚ್ಚಿಸಿತ್"ಂತ ಹರ್ಷಂದ ಹೇಳಿಕ.:.ಂಡ್ ಹಿಂದೆ ಬಂದೊ. ದುರ್ಯೋಧನ ಅವರೊಟ್ಟಿಗೆ ಹೊರ್ಡದೆ ಹಿಂದೆ ನಿತ್ತ.:.ತ್. ಯಜ್ಞ ನಡಿಯುವ ಕಾಲ.:.ಲಿ ಯಾಗೋಳು ಕೆಲ್ಸಲೆ ಇದ್ದದರ್‌ಂದ ಯಾದನ್ರೂ ಪೊರ್ಲು ನೋಡಿಕೆ ತೀತ.:.ಲೆ. ಹಾಂಗೆ ಎಲ್ಲ ನೋಡಿ ಬನ್ನೆಂತ ಅಂವ ಇಂದ್ರಪ್ರಸ್ತಲೇ ನಿತ್ತ.:.ತ್. ಪಾಂಡವ.:.ರಿಗೆ ಮಯ ಮಾಡಿಕೊಟ್ಟ ಸಭಾಂಗಣದ ಖ್ಯಾತಿನ ಕೇಳಿತ್ತ್. ಅದರ ನೋಡೊಕುಂತ ಕುತೂಹಲ ಅವಂಗೆ ತುಂಬ ಇತ್ತ್. "ಬಾ. ಒಮ್ಮೆ ನೋಡಿ ಬಾವೊನೊ"ಂತ ಶಕುನಿನ ಕರ್ದರೆ ಅಂವ ಹೊರ್ಟತ್‌ಲೆ. ಹಾಂಗೆ ದುರ್ಯೋಧನ ಒಬ್ಬನೇ ಹೋತು. ಜೊತೆಗೊಬ್ಬ ಇದ್ದಿದ್ದರೆ ಅವಂಗಾದ ಅಷ್ಟು ತೊಂದರೆಗ.:.ಳೂ, ಅವಮಾನಗ.:.ಳೂ ಆಕೆ ಎಡೆ ಇತ್ತ್‌ಲೆ.

ಆದರೆ ಜೊತೆಗೆ ಬಾರದೆ ದುರ್ಯೋಧನ ಒಬ್ಬನೇ ಹೋತು. ಮಯ ಸಭಾಭವನದ ಸುರುನ ಕೋಣೆಗೆ ಪ್ರವೇಶಿಸಿಕನ ಅಲ್ಲಿ ಪೊರ್ಲು ಪೊರ್ಲುನ ಹೆಣ್ಮಕಗಳ ಪ್ರತಿಮೆಗ ನೃತ್ಯಭಂಗಿಲಿ ಇದ್ದೊವು, ಆ ಕೋಣೆನ ಹಕ್ಕಲೆ ಇಂವ ಹೋಕನ ಅವು ನೃತ್ಯ ಮಾಡಿಕೆ ಸುರುಮಾಡ್ದೊ. ಇಂವ ಮುಂದೆ ಹೋಕನ ಅವು ಸ್ತಬ್ದವಾದೊ. ಮುಂದೆನ ಕೋಣೆಲಿ, ವೀಣೆ, ಮೃದಂಗ, ತಾಳ, ಕೊಳ.:.ಲ್ ಮುಂತಾದ ವಾದ್ಯಗ ಇದ್ದೊ. ಇಂವ ಅವರ ಹಕ್ಕಲೆ ಹೋದ ಕೂಡ್ಲೆ ಅವು ಸಂಗೀತ ಬಾರ್ಸಿಕೆ ಸುರುವಾದೊ. ಇಂವ ದಾಟಿ ಹೋದ ಕೂಡ್ಲೆ ಸ್ತಬ್ದವಾದೊ. ಅವಂಗೆ ಇದೇನ್ ದೆವ್ವ, ಪಿಶಾಚಿಗಳ ಕಾರ್‌ಬಾರನೋಂತ ಆಶ್ಚರ್ಯ ಆತ್. ಮುಂದೆನ ಕೋಣೆಗೆ ಹೋಕನ ಅದ್ ನೀರ್ ತುಂಬಿದ ಕೊಳದಾಂಗೆ ಕಾಂಬತಿತ್ತ್. ಮೇಲೆನ ಮಾಡ್‌ನ ಪ್ರತಿಫಲನವೂ ಪಕ್ಕದ ಗೋಡೆಗಳ ಪ್ರತಿಫಲನವೂ ಕಾಂಬತಿತ್ತ್. ಅಂವನ ಕಾಲ್‌ನ ನೇಚ್‌ಕನ ಪ್ರತಿಫಲನವೂ ಕಾಂಬತಿತ್ತ್. ಇದ್ ನೀರೇ ಖಾತ್ರಿಂತ ಅಂವ ಬಟ್ಟೆನ ನೇಚಿ ಹಿಡ್ಕಂಡ್ ಜಾಗ್ರತೆಂದ ಕಾಲೂರ್‌ಕನ ಅದ್ ಗ.:.ಟ್ಟಿ ನೆಲ. ಅಂವಂಗೆ ನೆಗೆ ಬಾತ್. ಶಿಲ್ಪಿನ ಚಾತುರ್ಯನ ತುಂಬ ಮೆಚ್ಚಿಕಂಡ.:.ತ್.

ಮತ್ತೊಂದು ಕೋಣೆಗೆ ಹೋಕನ ಗ∴ಟ್ಟಿ ನೆಲದಾಂಗೆ ಕಂಡ∴ತ್. ಇಂವ ಧೈರ್ಯಂದ ಕಾಲೂರ್‌ಕನ ನೀರ್‌ನ ಕೊಳ. ಇಂವ ತೊಳ್ಂಕಂದ್ ನೀರಿಗೆ ಬಿದ್ದ್ ಒದ್ದೆಮುದ್ದೆ ಆತ್. ಗಾಬ್ರಿಂದ ಮೇಲೆ ಎದ್ದ್‌ರಿಕನ ಅಲ್ಲಿಗೆ ಭೀಮ, ನಕುಲ, ಸಹದೇವ ಸಮೇತ ದ್ರೌಪದಿನೂ ಬಂದೊವು ಅವಂಗೆ ಕೈ ತೋರಿಸಿಕ∴ಂಡ್ ಗೇಲಿಮಾಡ್ದೊ. ದುರ್ಯೋಧನಂಗೆ, ಕೋಪ, ನಾಚಿಕೆ ಎರ್ಡೂ ಉಂಟಾತ್. ತನ್ನ ಗೇಲಿ ಮಾಡೊವ್ಕೆ ತಕ್ಕ ಪ್ರತೀಕಾರ ಮಾಡಿಯೇ ತೀರೋಕುಂತೇಳ್ವ ಹಟ ಮನ್‌ಸ್‌ಲಿ ಬಲವಾಗಿ ನೆಲೆಯೂರ್ತ್.

ಈ ಭೀಮಾದಿಗ ಹಿಞ್ಞಿ ಸೌಜನ್ಯಂದ ನಡ್ಕಂಡಿದ್ದರೆ ಅಂವ ಅಷ್ಟ್ ವ್ಯಗ್ರ ಸ್ಥಿತಿಗೆ ಬಾಕಿತ್ಲೆ. ಆದರೆ ಮುಂದೆಂದಳೇ ಬಂದ ಪರಸ್ಪರ ನಡವಳಿಕೆಗಳ ಕಾರಣ ಇದ್ ಅವರ ಸಹಜ ಪ್ರತಿಕ್ರಿಯೆ ಆಗಿ ಹಾಂಗೆ ನಡ್ಕಂಡೊ. ಹಾಂಕಾರದ ಮುದ್ದೆಯಾಗಿದ್ದ ದುರ್ಯೋಧನಂಗೆ ಅದರ ತಡ್ಕಂಬಕೆ ಆತ್‌ಲೆ.

ಈ ಕಡು ಕ∴ಯಿ ಭಾವನೆಗಳ ತುಂಬಿಕ∴ಂಡ್ ಹಸ್ತಿನಾವತಿಗೆ ಬಾತ್. ಅಲ್ಲಿಗೆ ಬಂದರೂ ಅವಂಗೆ ಯಾಗೋಳು ದೆವ್ವದಾಂಗೆ ಕಾಂಬೊದು ಪಾಂಡವರ ಇಂದ್ರಪ್ರಸ್ತ ನಗರ; ಅದರ ಅರಮನೆನ ವೈಭವ. ಅದರ ಯಾಗೋಳು ತುಂಬಿಯೇ ಇರುವ ಭಂಡಾರ.

ಕ∴ಣ್ಣ್ ಬುಟ್ಟುಕ∴ಂಡಿದ್ದರೂ, ಮುಚ್ಚಿಕ∴ಂಡಿದ್ದರೂ ಅವಂಗೆ ಎದ್‌ರ್ ನಿತ್ತಂಗಾದು ಪಾಂಡವರ ತುಂಬಿದ ಬಂಡಾರ. ಅವಂಗೆ ಆಶ್ಚರ್ಯ ಆದುಂತೇಳಿರೆ ಆ ಬಂಡಾರಕ್ಕೆ ಬೇರೆ ರಾಜೆರ್ಗ ತಂದ ಕಾಣಿಕೆಗಳ ತುಂಬ್‌ಸಿದಷ್ಟೇ ಅವು ಹಿಂದೆ ಹೋಕನ ಅವ್ಕೆ ಕಾಣಿಕೆಕೊಟ್ಟ್ ಕ∴ಳ್ಸಿರೂ ಆ ಬಂಡಾರ ಹಾಂಗೇ ತುಂಬಿಕ∴ಂಡೇ ಇದ್ದದೆಂತೇಳ್ದು. ಅದರೊಟ್ಟಿಗೆ ನಮ್ಮ ಹಸ್ತಿನಾವತಿನ ಬಂಡಾರ ಹಾಂಗಿಲ್ಲೆಂತ ಅವಂಗೆ ಅವರಾಂಗೆ ನಾವ್ಗಿಲ್ಲೆಂತ ಮತ್ಸರ ಆಕೆ ಸುರಾತ್. ಮತ್ಸರಂದಳೂ ಹೆಚ್ಚಾಗಿ, ಅದ್ ತನ್ನ∴ದಾಕುಂತೇಳ್ವ ಲೋಭ ಹೆಚ್ಚಾತ್. ಅದಿಕೆ ಗಾಳಿ ಹಾಕುವ ಶಕುನಿನ ಕುತಂತ್ರ ಹೆಚ್ಚಾತ್. ಕ∴ತ್ತಿ ಇಲ್ಲದೆ, ನೆತ್ತ್‌ರ್ ಹರ್ಸದೆ ಆ ಸಂಪೊತ್ತ್‌ನೆಲ್ಲ ನಿನ್ನ ವಶಮಾಡಿ ಕೊಡುವ ಉಪಾಯ ನಂಗೆಗೊತ್ತುಟುಂತೇಳಿ ಅವನ ದುರಾಸೆನ ಕಿಚ್ಚಿನ ಕೆರ್‌ಳ್‌ಸ್‌ತಿತ್ತ್– ಶಕುನಿ. ದುರ್ಯೋಧನ, ದುಶ್ಯಾನ, ಕರ್ಣ ಮತ್ತು ಶಕುನಿ ಈ ನಾಲ್ಕ ಜೆನಗಳ ಕೂಟ ಬೇರೆನೆ ಇದ್ದ್ ಯಾಗೋಳು ಮಂತ್ರಾಲೋಚನೆಗಳ ಮಾಡಿಕ∴ಂಡೇ ಇರ್‌ತಿದ್ದೊ.

ಇದೇ ಸಮಿಯ ಅವಂಗೆ ಹೊತ್ತು ಸಿಗ್‌ತ್ಂತಾದರೆ ಅಂವ ಧೃತರಾಷ್ಟ್ರನಕ್ಕಲೆ ಬಾತಿತ್ತ್. ಮಾತೆತ್ತಿರೆ ಯಾಗೋಳು, "ನಂಗೆ ಇಂದ್ರಪ್ರಸ್ತ∴ಲಿ ಭಾರಿ ಅವಮಾನ ಆತಪ್ಪ. ಮಯ ಭವನದ ಚಮತ್ಕಾರನ ನೋಡೊಕುಂತ ಹೋದಂವ ಮೋಸ ಹೋಗಿರುದರ ನೋಡಿ, ಭೀಮನೂ ಅಂವನ ತಮ್ಮಂದ∴ರೂ, ಎಲ್ಲಬುಟ್ಟ್ ದ್ರೌಪದಿ ಕೂಡ ಕೈ ತೋರ್ಸಿಕ∴ಂಡ್ ಗೇಲಿ ಮಾಡ್‌ಕನ ನಂಗೆ ಸತ್ತಂಗಾತ ಅಪ್ಪ.

ನಾಚಿಕೆಲಿ ತಲೆ ತ.:.ಗ್ಗಿಸಿದಂವ ಹೇಂಗೊ ಹಸ್ತಿನಾವತಿಗೆ ಬಂದ್ ಸೇರ್ದೆ. ನಿಮ್ಮ ನೋಡುವ ಪುಣ್ಯ ಉಟ್ಟು."

ಈ ಮಾತ್‌ನ ಕೇಳ್‌ಕನ ಧೃತರಾಷ್ಟ್ರಂಗೆ ಅಯ್ಯೋ ಎನ್ಸುದು. ಮಜ್ಜನ ಮನ್ಸ್‌ಗೆ ಇಷ್ಟ್ ಬೇನೆ ಆತಲೇಂತ ಅಂವ ಯೋಚಿಸುದು. ಕಬ್ಬಿಣ ಒಳ್ಳಕಾದರೆ ಮೆತ್ತಂಗಾದು. ಅದ್ ಸ.:.ರಿಯಾಗಿ ಮೆತ್ತಂಗಾಕನ ಅದಿಕೆ ಬೇಕಾದ ಹಾಂಗೆ ಪೆಟ್ಟ್ ಹಾಕಿ ಅದರ ಬೇಕಾದ ಆಕಾರಕ್ಕೆ ತಿರ್ಗ್‌ಸ.:.ಕ್. ಹಾಂಗೆ ದುರ್ಯೋಧನಂಗೆ ಧೃತರಾಷ್ಟ್ರನ ಮನ್ಸ್‌ನ ತನಿಗೆ ಬೇಕಾದ ಹಾಂಗೆ ಸುಲಭಲಿ ತಿರ್ಗ್‌ಸಿಕೆ ತೀರ್‌ತಿತ್.

ಪ್ರತಿಮಾತಿಗೆ ಸುರುಮಾಡ್ದು "ಯುಧಿಷ್ಟರನ ಭಂಡಾರ ಯಾಗೋಳು ತುಂಬಿಕ.:.ಂಡೇ ಉಟ್ಟಪ್ಪ! ಎಷ್ಟು ತೆಗ್‌ದರೂ ಅದು ಕ.:.ಮ್ಮಿಯಾದುಂತಿಲ್ಲೆ. ನಮ್ಮಲ್ಲಿರುದು ಅದರೆದ್‌ರ್ ಲೆಕ್ಕಕ್ಕೆ ಇಲ್ಲೆಪ್ಪ. ಅದರೆಲ್ಲ ಯುದ್ಧ ಇಲ್ಲದೆ ರಕ್ತ ಹರ್ಸದೆ ನನ್ನ ವಶಮಾಡುವ ಕೆಣಿ ನಂಗೆ ಗೊತ್ತುಟುಂತ ಶಕುನಿ ಮಾಂವ ಹೇಳುವೆ. ನೀ ಪಾಂಡವರ ಇಲ್ಲಿಗೆ ಬಾಕೆಮಾಡ್. ಅದರೆಲ್ಲ ಸಲಭಲಿ ನಿಂಗೆ ಗೆದ್ದ್ ಕೊಟ್ಟನೆಂತ ಮಾಂವ ಹೇಳುವೆ ಅಪ್ಪ. ನೀವು ಪಾಂಡವರ ಇಲ್ಲಿಗೆ ಬಾಕೆಮಾಡೊಕು ಅಪ್ಪ" ದುರ್ಯೋಧನ ಒತ್ತಾಯ ಮಾಡ್ತ್‌ತ್.

ದುರ್ಯೋದನನ ಒತ್ತಾಯ ನಿತ್ಯ ಆತಿತ್. ಒಮ್ಮೊಮ್ಮೆ ಅಂವ ಒಬ್ಬನೇ ಮತ್ತೆ ಒಮ್ಮೆ ಅವನು ಮೂರು ಜೆನ ಕೂಟಾಳಿಗಳ ಸೇರ್ಸಿಕ.:.ಂಡ್, ನಾಲ್ಕ್ ಜೆನ ಸೇರಿ ಒತ್ತಡ ಕೊಡ್‌ತಿದ್ದೊ. ಧೃತರಾಷ್ಟ್ರಂಗೆ ಗಂಟ್ಲ್‌ಲಿ ಸಿಕ್ಕಿದಾಂಗೆ ಆತಿತ್. ಒಟ್ಟಿಗೇ ತನ್ನ ಮಕ್ಕ.:.ಳಿಗೆ ಅಷ್ಟ್ ಶ್ರೀಮಂತಿಗೆ ಸಿಕ್ಕಿದೆಂತಾದರೆ ಅದ್ ಲಾಭವೇ ಅಲ್ಲೋಂತ ಸಂತೋಸುನೂ ಆತಿತ್. ಅವನ ಮನ್ಸ್ ಅತ್ತಿತ್ತ ಉಯ್ಯಾಲೆ ಆಡಿಕ.:.ಂಡೇ ಇತ್.

ಇನ್ನ್ ಇವರ ಒತ್ತಾಯನ ತಡಿಯಕೆ ಬೊತ್ತ್‌ಂತ ಆಕನ ಅಂವ ವಿದುರನ ಕರ್ಸಿತ್. ವಿದುರನೊಟ್ಟಿಗೆ ಮಾತ್ ಸುರುಮಾಡ್ತ್. "ವಿದುರ ನಾವೆಲ್ಲ ಇಂದ್ರಪ್ರಸ್ತಕ್ಕೆ ಹೋಗಿ ಪಾಂಡವರ ವೈಭವನೆಲ್ಲ ಸಂತೋಸುಂದ ನೋಡಿಬಂದೊ. ಅವರ ಮಯಭವನದಷ್ಟ್ ವೈಭವ ಇಲ್ಲದಿದ್ದರೂ ನಾವು ತಕ್ಕಮಟ್ಟ್‌ನ ಸಭಾಭವನವೊಂದರ ಕ.:.ಟ್ಟಿಸಿಯೊಳೊ. ಅವರ್ದರ ನೋಡಿ ನಾವು ಸಂತೋಸು ಪಟ್ಟಾಂಗೆ ಅವು ನಮ್ಮದರ್ನೂ ನೋಡಿ ಆನಂದ ಪಡ.:.ಕ್. ಅದೂ ಅಲ್ಲದೆ ಯುಧಿಷ್ಟಿರ ಸಾರ್ವಭೌಮ ಆಗಿ ನಮ್ಮ ಮನೆತನಕೆ ಹೆಸ್‌ರ್ ತಾತ್. ಅಂವ ತನ್ನ ಹಿರಿಯರ ಬಂದ್ ಗೌರವಿಸುದೂ ಅಗತ್ಯ ಉಟ್ಟು. ಈ ಕಾರಣಗಳ ಹೇಳಿ, ಯುಧಿಷ್ಟಿರ ರಾಜ ಪರಿವಾರ ಸಮೇತ ಹಸ್ತಿನಾಪುರಕ್ಕೆ ಭೇಟಿ ಕೊಡುಕುಂತ ನಾ ಹೇಳ್ದೆಂತ ಅವನೊಟ್ಟಿಗೆ ಹೇಳಿ ಕರ್ಕಂಡ್ ಬಾವನೋ?ಂತ ಕೇಳ್ತ್. ವಿದುರ ಹಳ್ಳ ಹೊತ್ತು ಮಾತಾಡದೆ ಕುದ್ದ.:.ತ್. ಧೃತರಾಷ್ಟ್ರ ಕೇಳ್ತ್. "ಏನ್ ವಿದುರ ಮಾತಾಡ್‌ದ್‌ಲೆ"ಂತ ವಿದುರ ಹೇಳ್ತ್. "ಏನಿಲ್ಲೆ. ದೊಡ್ಡಪ್ಪಂಗೆ ತಮ್ಮನ

ಮಕ್ಕಳ ಮೇಲೆ ಎಷ್ಟ್ ಪ್ರೀತಿಂತ ನೆನ್ಸಿಕ.ಂಡ್ ಇದ್ದೆ. ನಾ ಅವರಲ್ಲಿಗೆ ಹೋಗಿ ಮಹರಾಜರ್ ಹೀಂಗೆ ಹೇಳಿಯೊಳೆಂತ ತಿಳ್ಸಿನೆಂತ ಹೇಳಿ ಎದ್ದ್ ಬಾತ್.

ವಿದುರನ ಮನ್‌ಸ್ ಸಂಸಯಂದ ತುಂಬಿ. ದುರ್ಯೋಧನ ಅವಂಗೆ ಇಂದ್ರಪ್ರಸ್ಥ.ಲಿ ಆದ ಅವಮಾನದ ಬಗ್ಗೆ ಬುಸುಗುಟ್ಟುತ್ತಿದ್ದ.ದ್, ಮತ್ತೆ ನಾಲ್ಕ್ ಜನ ಕೂಟಾಳಿಗ ಯಾಗಳೂ ಮಂತ್ರಾಲೋಚನೆಲೆ ಮಗ್ನರಾಗಿದ್ದ.ದ್ ಎಲ್ಲ ಗೊತ್ತಿತ್ತ್. ಆದರೆ ಸೊಂಸಯನ ಪರಿಹರ್ಸಿಕೆ ಯಾವ ಉಪಾಯನೂ ಇತ್ತ್‌ಲೆ. ರಾಜಸೇವಕನಾದ ಅಂವ ಅದರ ಪಾಲ್ಸುದು ಅವನ ಕರ್ತವ್ಯ ಆಗಿದ್ದದರ್‌ಂದ ಬೇರೆ ಉಪಾಯವಿಲ್ಲದೆ ಇಂದ್ರಪ್ರಸ್ಥಕ್ಕೆ ಹೊರ್ಟ.ತ್. ಪಾಂಡವ.ರಿಗೆ ವಿಮರನ ನೋಡಿ ತುಂಬ ಸಂತೋಸಾತ್. ನ್ಯಾಯ ಪಕ್ಷಪಾತಿಯಾದ ವಿದುರ ಚಿಕಪ್ಪ ಅವ್ಕೆ ತುಂಬ ಪ್ರಿಯನಾಗಿತ್ತ್. ಹಾಂಗೆ ಅವು ಅಂವನ ಸುತ್ತಕುದ್ದ್‌ಕ.ಂಡ್ ಮಾತಾಡ್‌ಕ್ಕಾಕನ ಅವಂಗೆ ತುಂಬ ಕುಸಿಯಾತಿತ್ತ್. ಈ ಸನ್ನಿವೇಶ.ಲಿ ಅಂವ ಹೊತ್ತ್ ತಂದ ಸುದ್ದಿನ ಅವರೆದ್‌ರ್ ಬಿಚ್ಚಿತ್. ಯುಧಿಷ್ಟಿರ ಅವನ ಮುಗ್ಧ ಗುಣಂದ ಹಸ್ತಿನಾವತಿನ ಆಮಂತ್ರಣನ ಮೆಚ್ಚಿಕ.ಂಡ.ತ್. ಮತ್ತೆ ಎರ್ಡ್ ದಿನ ಕ.ಳ್ದ್ ತಮ್ಮಂದ.ರೂ, ದ್ರೌಪದಿ ಸಮೇತ ರಾಜಪರಿವಾರ ಹಸ್ತಿನಾವತಿಗೆ ಪ್ರಯಾಣ ಬೆಳ್ಸಿತ್. ಹೊರ್ಡ್‌ಕನ ಆದ ಅಪಶಕುನಗಳ ಗಣ್ಯಕೇ ತಕ.ಂಡ.ತ್‌ಲೆ.

ಹಸ್ತಿನಾಪುರದ ಹೊರವಲಯಕ್ಕೆ ಪಾಂಡವರ ರಾಜಪರಿವಾರ ಬಂದೆತ್ತಿತ್‌ಂತ ಗೊತ್ತಾದ ಕೂಡಲೇ ಕೌರವರೆಲ್ಲ ಅವರ ಸ್ವಾಗತಿಸಿಕೆ ಇವರ ಪರಿವಾರನ ಕೂಡಿಕ.ಂಡ್ ಸಂಭ್ರಮಂದ ಹೊರ್ಟೊ. ಕೊಂಬು ವಾಲಗದೊಟ್ಟಿಗೆ ಪೂರ್ಣ ಕಲಶಗಳ ಹೊತ್ತ ಹೊಂತಕಾರಿ ಗೂಡೆಗಳ ದ.ಂಡ್, ಅರಮನೆನ ಸುವಾಸಿನಿಯರ ತಂಡ ಸಮೇತ ಹೋದೊ. ಎದ್‌ರಾಕನ ಪಾಂಡವರ್ ಅವರ ವಾಹನಗಳ್‌ಂದ ಇಳ್ದ್, ಹಿರಿಯವಾದ ಭೀಷ್ಮ ದ್ರೋಣಾದಿಗಳ ಪಾದಕೆ ಭಕ್ತಿಂದ ನಮಸ್ಕಾರ ಮಾಡ್ದೊ. ಇವು ಅವರ ನೇಚಿ, ತೊಬ್ಬಿಕಂಡೊ. ದ್ರೌಪದಿ ಅವರ ಪಾದಗಳಿಗೆ ನಮಸ್ಕಾರ ಮಾಡ್‌ಕನ ಅದಿಕೆ ತುಂಬ ಪ್ರೀತಿಂದ ಆಶೀರ್ವಾದ ಮಾಡ್ದೊ. ಗಾಂಧಾರಿಗೆ ದ್ರೌಪದಿನ ಸೌಂದರ್ಯನ ನೋಡಿಕೆ ಆಗದೆ ಅದರ ಮನ್ಸ್‌ಗೆ ಆತಂಕ ಆತ್. ಅದ್ ಅದರ ತೊಬ್ಬಿ ಹಿಡ್ಕಂಡ್, ಅದರ ಮೈಮೇಲೆಲ್ಲ ಕೈಯಾಡ್ಸಿಕ.ಂಡ್ ಸಂತೋಸುಪಟ್ಟ.ತ್. ದುರ್ಯೋಧನ ಯುಧಿಷ್ಟಿರನ ಕಾಲ್‌ಮುಟ್ಟಿ ನಮಸ್ಕಾರ ಮಾಡ್ತ್. ತನ್ನ ತಮ್ಮಂದರ ಕರ್ದ್ ನಮಸ್ಕಾರ ಮಾಡ್ಸಿತ್. ಮತ್ತೆ ಎಲ್ಲೊವು ಸೇರಿ ಪಟ್ಟಣ ಪ್ರವೇಶ ಮಾಡ್ದೊ. ಪಾಂಡವರಿಗೆ ಒಬ್ಬೊಬ್ಬಂಗ ಪ್ರತ್ಯೇಕ ವಸತಿ ಗೃಹಗಳ ಏರ್ಪಾಡಾತ್. ಎರ್‌ಡ್ ಕುಟುಂಬಗಳೊಳೆಗೆ ಒಂದು ಅಪೂರ್ವ ಸೌಹಾರ್ದ ಕಂಡ್ ಬಂದ.ದ್ ಎಲ್ಲೊವುಕೂ ಸಂತೋಸು ಉಂಟು ಮಾಡ್ತ್.

ದಿನಕ್ಕೊಂದೊಂದು ಔತಣನ ಏರ್ಪಡಿಸಿದೊ. ವಿವಿಧ ಆಟ, ವಿನೋದ ವಿಹಾರಂತ ಹೊತ್ತು ಹೋದೇ ಗೊತ್ತಾಗದದಾಂಗೆ ಆತ್. ದಿನಗೆಲ್ಲ ಭಾರಿ

ಉತ್ಸಾಹ.ಿಲಿ ಕ.ಿಳ್ದ್ ಹೋದ್ಯೊ. ಅವರ ಸಭಾಭವನನ ನೋಡಿಕೆ ಹೋದ್ಯೊ. ಅದರ್ಲ್ಲಿ ಒಂದು ಕಡೆಗೆ ರಾಜಪುರುಷರ್ ಪಗಡೆ ಆಡುವ ವೇದಿಕೆ ಇತ್ತ್. ಅಲ್ಲಿಗೆ ಬಂದಾಕನ ನಾವು ಒಂದು ಆಟನ ಆಡಿರೆ ಏನ್ಂತ ದುರ್ಯೋಧನ ಮಾತೆತ್ತಿತ್. ಯುಧಿಷ್ಠಿರನೂ ಅದರ ಅನುಮೋದಿಸಿತ್. ಹಾಂಗೆ ಅವಿಬ್ಬೊರು ಆಟಕ್ಕೆ ಕುದ್ದೊ. ದುರ್ಯೋಧನ ಗೊತ್ತಿಲ್ಲದವರಾಂಗೆ ಆಡಿ ಸುರುಗೆ ಸೋತ.ಿತ್. ನಾಚಿಕಂಡವರ ಹಾಂಗೆ, ಈ ಆಟಕ್ಕೆ ಕಳೆ ಬರೊಕರೆ ಪಣ ಏನಾರ್ ಇಸಿ ಆಡೊಕು. ಅದಿತ್ತ್‌ಲರೆ ಆಟ ಚಪ್ಪೆ ಆದೆ ಅಲ್ಲೋ ಅಣ್ಣ ಯುಧಿಷ್ಠರ?ಂತ ಕೇಳ್ತ್. ಯುಧಿಷ್ಠಿರನೂ ಹೌದುಂತೇಳಿ ಒಪ್ಪಿತ್. ದುರ್ಯೋಧನ ಸಾವಿರ ಚಿನ್ನದ ನಾಣ್ಯಗಳ ಪಣಕ್ಕೆ ಇಸಿನೇಂತ ಹೇಳ್ತ್. ಯುಧಿಷ್ಠಿರನೂ ನಾನೂ ಅಷ್ಟರ ಇಸಿನೆಂತ ಹೇಳ್ತ್. ಇದಂದರೆ ರಾಜ ಆಟ. ಆಡಿಂತ್ ಶಕುನಿ ಉತ್ಸಾಹಂದ ಹೇಳ್ತ್. ಈ ಆಟ.ಿಲಿಯೂ ಬೇಕುಂತೇಳಿಯೆ ದುರ್ಯೋಧನ ಸೋತ.ಿತ್. ಆಗ ಶಕುನಿ ಸುಳ್ಳ್ ಕೋಪನ ನಟ್ಟಿಸಿಕ.ಿಂಡ್ ದುರ್ಯೋಧನಂಗೆ, ನೀ ಎಂತ ದಡ್ಡ? ಯುಧಿಷ್ಠಿರ ಅಣ್ಣಂಗೆ ನೀ ಸರಿಯಾದ ಎದ್‌ರಾಳಿ ಅಲ್ಲ. ಇಂವನ ಬದ್‌ಲಿಗೆ ನಾ ಬೇಕರೆ ಆಡಿನೆ. ಏನ್ ಹೇಳಿರೆಂತ ಸುತ್ತ್‌ಮುತ್ತ ಕುದ್ದವರ ಕೇಳ್ತ್. ಕಪಟ ತಿಳಿಯದ ಅವೆಲ್ಲ ಸ.ಿರಿ, ಸ.ಿರಿಂತೇಳ್ದೊ.

ಯುಧಿಷ್ಠರನ ಪಗಡೆನ ಬಲೆನೊಳಗೆ ಸಿಕ್ಕ್‌ಸಿ ಹಾಕಿಕೆ ದುರ್ಯೋಧನ ಆಟಗೊತ್ತಿಲ್ಲದವರ ಹಾಂಗೆ ಎರ್ಡ್ ಸ.ಿರ್ತಿ ಸೋತ.ಿದ್, ಪಣ ಇಸಿ ಆಡ್ವಾಗ.ಿಳೂ ಸೋತ.ಿದ್, ಆಗ ಶಕುನಿ ಅವನ ಗದ್‌ರ್ಲಿ ತಾನೇ ಆಡಿಕೆ ಮುಂದಾದು ಎಲ್ಲ ನೋಡೊವ್ಕೆ ಗೊತ್ತೇ ಆಗದ ಹಾಂಗೆ ಆಡ್ದ ನಾಟಕ. ಮುಂದೆ ಶಕುನಿಯೇ ದುರ್ಯೋಧನನ ಪರವಾಗಿ ಎಲ್ಲ ಆಟಗಳ್ನೂ ಆಡಿ ಎಲ್ಲ ಆಟಗಳ್ಲಿಯೂ ಯುಧಿಷ್ಠರ ಸಾಮ್ರಾಟನಾಗಿದ್ದಂವ ಕೌರವರ ಆಳಾಗಿ ಹೋತು. ಅವನ ಅಖಂಡ ಸಾಮ್ರಾಜ್ಯನ್ನೂ, ರಾಜಭಂಡಾರನ್ನೂ ಸೋತ್, ಬರಿಗೈಯಾಗಿರ್ಕನ, ಶಕುನಿನ ಹಂಗ್‌ಸುವ ಮಾತ್‌ಗಳ ತಾಳಿಕೆ ಬೊತ್ತದೆ ತನ್ನ ನಾಲ್ಕ್ ಜೆನ ತಮ್ಮಂದರ್ನೂ ಒತ್ತೆ ಇಸಿ ಸೋತ.ಿದಲ್ಲದೆ ತನ್ನನೂ ಒತ್ತೆ ಇಸಿ ಸೋತ.ಿತ್.

ಶಕುನಿನ ಹಂಗ್‌ಸುವ ಮಾತ್ ಕ.ಿಮ್ಮಿ ಆತ್‌ಲೆ. ಇನ್ನೂ ಆಡಿಯನೋ? ಒತ್ತೆ ಇಸಿಕೆ ನಿನ್ನ ಹಕ್ಕಲೆ ಏನೂ ಒಳ್ತ್‌ಲೆನೊ? ನಿನ್ನ ಹೆಣ್ಣ್ ದ್ರೌಪದಿನ ಒತ್ತೆ ಇಸಿ ಆಡಿ ಗೆದ್ದರೆ ಇಷ್ಟರವರೆಗೆ ನೀ ಸೋತದರ ಎಲ್ಲದರ ಹಿಂದೆ ಪಡಿಯ.ಿಕ್. ಏನ್ ಮಾಡಿಯ?ಂತ ಶಕುನಿನವರಾತ ಹೆಚ್ಚಿಕಂಡೇ ಇತ್ತ್.

ಯುಧಿಷ್ಠರಂಗೆ ತಡಿಯಕೆ ಆತ್‌ಲೆ. ಹಾಂಗೆ ದ್ರೌಪದಿನ ಒತ್ತೆ ಇಸಿತ್. ಅದನ್ನೂ ಸೋತ.ಿತ್. ವಸ್ತು ಒಡವೆಗಳ ಒತ್ತೆ ಇಸುದು ಲೋಕ.ಿದ ಪದ್ಧತಿ. ಮೊಯಿಂಸರ್ನೆ ಒತ್ತೆ ಇಸುದು ಒಂದು ವಿಚಿತ್ರ ಸಂಗತಿ. ತನ್ನವರ ಮಾರಾಟ

ಮಾಡುದು ಮತ್ತೆ ತನ್ನನೇ ಮಾರಿಕಂಬೊದು ಹರಿಶ್ಚಂದ್ರನ ನಡವಳಿಕೆಲಿ ಕಂಡದೆ. ಮತ್ತೆ ಈ ಯುಧಿಷ್ಠಿರನ ವರ್ತನೆಲಿಯೂ ಕಂಡದೆ. ಪಗಡೆಲಿ ಸೋತ ಕೂಡಲೆ ಈ ರಾಜಪುರುಷರ್ ಗುಲಾಮ.ಃ.ರ್‌ಂತಾದೊ. ತಮ್ಮ ತಮ್ಮ ಕಿರೀಟಗಳ ತೆಗ್ದ್ ನೆಲಲಿ ಇಸಿ, ತಮ್ಮ ಪೀಠಗಳ ಬುಟ್ಟ್ ನೆಲಲಿ ಕುದ್ದ್‌ಕ.ಃ.ಂಡೊ. ದ್ರೌಪದಿನ ಸೋತಂತಾಕನ ಕೌರವರ ಅಟ್ಟಹಾಸಕೆ ಮಿತಿ ಇಲ್ಲದಾತ್.

ಮಹಾರಾಣಿಯಾಗಿದ್ದದ ಈಗ 'ದಾಸಿ', 'ದಾಸಿ'ಂತ ಕರ್ದ್ ಅವಮಾನ ಮಾಡುವಷ್ಟರ್ಲೆ ನಿತ್ತ.ಃ.ತ್‌ಲೆ ಕೌರವರ ಅಟ್ಟಹಾಸ. ಈ ಅಪಚಾರನ ನಿಲ್ಲೊಕುಂತ ರಾಜನಾಗಿದ್ದ ಧೃತರಾಷ್ಟ್ರನ ಭೀಷ್ಮಾದಿ ಹಿರಿಯ.ಃ.ರ್ ಕೇಳಿಕಂಬಕನ ಅಂವ, ದಾಸಿನ ಸ್ಥಾನ ಹೊಂದಿದ ಅದ್ ಒಳ್ದದಾಸಿಯ.ಃ.ರ್ ಹೇಂಗೆ ಅವರ ಯಜಮಾನರ ಅಪ್ಪಣೆಗನುಸರ್ಸಿ ನಡ್ಕಂಡವೆನೋ ಹಾಂಗೇ ನಡ್ಕಂಬೊದು ಅಗತ್ಯ. ಇದಿಕೆ ರಿಯಾಯತಿ ಕೊಟ್ಟರೆ ಬೇರೆ ದಾಸಿಯರಿಗೂ ಅವರ ಯಜ್‌ಮಾನರ ಅಪ್ಪಣೆನ ಧಿಕ್ಕರ್ಸಿಕೆ ಪ್ರಚೋದನೆ ಕೊಟ್ಟಂಗಾದು. ಆದ್ದರ್‌ಂದ ಅದ್ ದಾಸಿನ ಕರ್ತವ್ಯಗಳ ಮಾಡಿಯೇ ತೀರೊಕುಂತ ಅಪ್ಪಣೆ ಕೊಟ್ಟ.ಃ.ತ್. ಈಗ ದ್ರೌಪದಿ ಇಡೀ ಸಭೆಗೆ ಒಂದು ಪ್ರಶ್ನೆ ಕೇಳ್ತ್. "ಯುಧಿಷ್ಠರ ತನ್ನ ಮುಂದೇ ಸೋತ್‌ಕಂಡಂವಂಗೆ ಇನ್ನೊಂದು ಸ್ವತಂತ್ರ ವ್ಯಕ್ತಿಯಾದ ನನ್ನ ಒತ್ತೆ ಇಸಿಕೆ ಹಕ್ಕುಟ್ಟೋಂತ ಹಿರಿಯೊವು ಹೇಳಿ"ಂತ ಕೇಳ್ತ್. ದ್ರೌಪದಿನ ಮಾತಿಗೆ ಅನುಮೋದನೆ ಕೊಟ್ಟೊವು ಇಬ್ಬೊರೇ. ವಿದುರ ಮತ್ತೆ ವಿಕರ್ಣ. ಒಳ್ದ ಕೌರವರ ಅಟ್ಟಹಾಸಲಿ ಇವರ ಕ್ಷೀಣದ.ಃ.ನಿ ಅಡ್‌ಂಗಿ ಹೋತು. ತಡೆಯಿಲ್ಲದ ಅವರ ಅಟ್ಟಹಾಸ ನಡ್ತ್. ದ್ರೌಪದಿನ ಕೂದೊಲು ಹಿಡ್ದ್ ಸಭೆಗೆ ಎಳ್ದ್ ತಂದ್ ನಾನಾತರದ ಅಸಭ್ಯ ಮಾತ್‌ಗಳ ಅದಿಕೆ ಹೇಳ್ದೊ. ದುರ್ಯೋಧನ ಅದರ ಸೀರೆ ಬಿಚ್ಚ್‌ಂತ ದುಶ್ಯಾಸನಂಗೆ. ಸಾಮ್ರಾಜ್ಞಿಯಾಗಿದ್ದದಿಕೆ ಈ ತರದ ಅವಮಾನ ಮಾಡಿಕೆ ಹೊರ್ಟ.ಃ.ದ್ ಅದೂ ಅದರ ಗಂಡಂದರ ಎದ್‌ರೇ, ಮತ್ತೆ ದುರ್ಯೋಧನ ಅವನ ತೊಡೆ ತೋರ್ಸುದು, ಬಾ ಇದರ್ಲಿ ಕುದ್ದುರುಂತ ಕರಿದು ಮುಂತಾಗಿ ಅನಾಗರಿಕ ನಡತೆನ ಪ್ರದರ್ಶಿಸುದು, ಇಂಥ ಘಟನೆನ ನೋಡುಕನ ನಾವು ವೇದನೆ ಪಡುವಾಂಗಾದೆ.

ಪುನರವಲೋಕನ

ನಾ ದೇವವ್ರತನಾಗಿರುವವರೆಗಿನ ನನ್ನ ಜೀವನ ಸುಖಮಯವಾಗಿತ್ತ್. ನನ್ನಂದ ಹಿಂದೆನ ಏಳ್‌ಮಕ್ಕಳ ಹಾಂಗೆ ಹುಟ್ಟಿದ ಕೂಡ್ಲೆ ನೀರ್‌ಲಿ ಕ.ಃ.ಂತ್ಸಿ ಸತ್ತಿದ್ದರೆ ವಸಿಷ್ಠನ ಸಾಪಂದ ಮುಕ್ತನಾಗಿ, ನನ್ನ ಅಣ್ಣಂದರೊಟ್ಟಿಗೆ ಎಂಟನೆಯ ವಸುವಾಗಿ ಇದ್ದಿರುವೆ. ಆಗ ಮನುಷ್ಯ ಜೀವನಲ್ಲಿ ಅನುಭವಿಸಿದ ಸಂಸಾರ ನಿರ್ವಹಣೆಯ ಜವಬ್ದಾರಿಯೇನೂ ಇರುತ್ತಿತ್ತ್‌ಲೆ. ಸಣ್ಣ ಕೂಸಾಗಿರ್ಕನ ಅಪ್ಪಂದ ದೂರಾಗಿದ್ದೆ. ಅವ್ವನೇ ಎಲ್ಲದರ ನಿರ್ವಹಿಸಿತ್. ಎಣೆಯಿಲ್ಲದ ಪ್ರೀತಿಲಿ ಅದರ

ಎದೆಮೇಲೆ ಇಸಿಕ∴ಂಡೇ ಬೆಳ್ಸಿತ್. ನಂಗೆ ಮಲ್ಗಿಕೆ ಚಿನ್ನದ ತೊಟಿಗಿಲ್. ಅದಿಕೆ ಬೆಳ್ಳಿನ ಸಂಕೋಲೆ. ಅದರ ಕೋಸಿಕೆ ದಂತದ ಕೊಕ್ಕೆ. ನಂಗ ಏಳ್ ವೊರ್ಸ ಆಕನ ಮುಟ್ಟ ಅವ್ವನೊಟ್ಟಿಗಿದ್ದೆ. ಮತ್ತೆ ಅವ್ವ ಪರುಶುರಾಮರ ಗುರುಕುಲಕ್ಕೆ ಕರ್ಕ∴ಂಡ್ ಹೋಗಿ ಅವರ ಗುರುಕುಲಲಿ ವಿದ್ಯೆ ಕ∴ಲಿಯಕೆ ಬುಟ್ಟ∴ತ್ ನಾ ಬೆಳ್ದ್ ದೊಡ್ಡಂವಾದ ಮೇಲೆ ನಮ್ಮ ಗುರುಗ ಹಿಂದೆ ಇಪ್ಪತ್ತೊಂದು ಸ∴ರ್ತಿ ಭೂ ಪ್ರದಕ್ಷಿಣೆ ಮಾಡಿ, ಕ್ಷತ್ರಿಯರ ನಾಶಮಾಡ್ದ ಬಲಶಾಲಿ ಹಾಂಗೂ ನಿಷ್ಕರುಣಿಂತ ಗೊತ್ತಾತ್. ಹುಟ್ಟುಂದ ನಾನೂ ಕ್ಷತ್ರಿಯನೇ. ಆದರೆ ವಿದ್ಯಾಭ್ಯಾಸ ಮಾಡ್ಸಿಕೆ ಹೇಂಗೆ ಒಪ್ಪಿಕೆ∴ಂಡೊಂಡೋಂದ್ ನಂಗೆ ಯೋಚನೆ ಆತಿತ್ತ್. ನನ್ನ ವಿಚಾರ∴ಲಿ ಏನೊಂದು ಭೇದಭಾವನೆ ಇಲ್ಲದೆ ಎಲ್ಲದನ್ರೂ ಪ್ರೀತಿಂದ ವಂಚನೆಯಿಲ್ಲದೆ ಹೇಳಿಕೊಡುತ್ತಿದ್ದೊ. ನಾನು ಬೇಗನೆ ಎಲ್ಲದರ ಕ∴ಲ್ತ್‌ಕಂಡೆ. ಅವ್ಕೆ ತುಂಬ ಕುಸಿ ಆತಿತ್ತ್. ವೇದ, ಉಪನಿಷತ್ತ್, ಪುರಾಣ, ಕಾವ್ಯ, ವ್ಯಾಕರಣ, ಛಂದಸ್ಸ್, ಅಲಂಕಾರ, ಹೀಂಗೆಲ್ಲ ಶಾಸ್ತ್ರಗಳ ಕ∴ಲ್ಸಿದೊ. ಮತ್ತೆ ಖಡ್ಗ, ಬಿಲ್ಲ್, ಗದೆ, ಈಟಿನಂತಿರುವ ವಿವಿಧ ಶಸ್ತ್ರಗಳ ಉಪಯೋಗಿಸಿ ಮಾಡುವ ಯುದ್ಧ ವಿದ್ಯೆನ ಕ∴ಲ್ಸಿದೊ. ಆನೆ, ಕುದುರೆ ತೇರ್‌ಗಳನ್ನೇರಿ ಮಾಡುವ ಯುದ್ಧ ವಿಧಾನಗಳ ಹೇಳಿಕೊಟ್ಟು ಎಲ್ಲದರ‍್ಲೂ ನಾ ಪೂರ್ಣ ಪರಿಣತನಾದವರ ನೋಡಿ ತುಂಬ ಸಂತೋಸು ಪಟ್ಟೊ.

ಒಟ್ಟು ಹತ್ತ್ ವೊರ್ಸ ಗುರುಗಳೊಟ್ಟಿಗೆ ಇದ್ದೆ. ಅಷ್ಟ್ ವೊರ್ಸನೂ ನನ್ನ ತುಂಬ ಅಕ್ಕರೆಂದ ಸ್ವಂತ ಮಕ್ಕಳ ನೋಡಿಕಂಬ ಹಾಂಗೆ ನೋಡ್ಡೊ. ಈ ಪ್ರಾಯ∴ಲಿ ಅಪ್ಪ ನನ್ನೊಟ್ಟಿಗಿರದ್ದ್ ನಂಗೊಂದು ಕೊರತೆಂತ ಕಂಡ∴ತಿತ್‌ಲೆ. ಇನ್ನ್ ಇವರ ಬುಟ್ಟ್‌ಹೋದು ತುಂಬ ಕಷ್ಟಲೇಂತ ನನ್ನ ಮನಸಿಗಾತ್. ಈಗ ಒಮ್ಮಂದೊಮ್ಮೆಗೆ ಹತ್ತ್ ವೊರ್ಸ ನೋಡದಿದ್ದ ಅವ್ವನ ನೆಂಪಾತ್. ಅದಿಕೆ ಸ∴ರಿಯಾಗಿ ಅವ್ವನೂ ಗುರುಗ∴ಳಿಗೆ ಕಾಣಿಕೆ ಕೊಡಿಕೆ ಕಾಣಿಕೆನ ಹಿಡ್ಕಂಡ್ ಬಾತ್. ಗುರುಗ ಅವ್ವನೊಟ್ಟಿಗೆ ನನ್ನ ಸಕಲ ವಿದ್ಯಾ ಪರಿಣತಿನ ಹೊಗ್‌ಳಿ ಹೇಳ್‌ತಿದ್ದೊ. ಶಸ್ತ್ರ–ಶಾಸ್ತ್ರ–ಈ ಎರ್ಡ್ ಶಾಕೆಲೂ ಇವನ ಮೀರ‍್ಲೂವೇ ಈ ಲೋಕ∴ಲಿ ಇರಿಕಿಲ್ಲೆ. ಅಂವ ಪ್ರಾಯ ಪ್ರಬುದ್ಧನೂ ಆತ್. ಇನ್ನ್ ಗೃಹಸ್ಥಾಶ್ರಮಕ್ಕೆ ಪ್ರವೇಶಿಸುವ ಸಮಯ ಹಕ್ಕಲೆ ಬಾತ್. ಇನ್ನ್ ನೀ ಅವನ ನಿನ್ನ ಮನೆಗೆ ಕರ್ಕಂಡ್ ಹೋಕ್. ಮುಂದೆ ದೇವ್ರು ಎಲ್ಲ ನೀವ್ಗೆ ಒಳ್ಳ∴ದ್ ಮಾಡ∴ಲೆಂದ್ ಆಶೀರ್ವಾದ ಮಾಡ್ಡೊ. ಗುರುಗಳ ಕಾಲಿಗೆ ನಮಸ್ಕಾರ ಮಾಡಿ, ಅಪ್ಪಣೆ ಪಡ್ದ್ ಅವ್ವನೊಟ್ಟಿಗೆ ಹೊರ್ಟೆ.

ಮುಂದೆ ಕೆಲೊವು ದಿನಗಳ ಕಾಲ ನನ್ನ ಜೀವನಲೇ ಪರಮ ಸಂತೋಷದ ಕಾಲ. ನಂಗೆ ಬೇಕ್ ಬೇಕಾದ್ದರ ಅವ್ವ ನಂಗೆ ಮಾಡಿ ಕೊಡ್‌ತಿತ್ತ್. ಉಂಬಕೆ ತಿಂಬಕೆ ಅದ್ ಬೇಕು. ಇದ್ ಬೇಕುಂತ ಕೇಳೊಕುಂತಿಲ್ಲೆ. ನೆನ್ಸಿದೆಲ್ಲ, ನೆನ್ಸದ್ದೂ ಎಲ್ಲ ನನ್ನ ಮುಂದೆ ಇರುದು. ಶೃಂಗಾರ ದೇವಿಯಾದ ಅವ್ವ ಆ ವಸ್ತುಗಳ ತೆಗ್‌ದು ಬಾಯೆಗೆ ಕೊಡುದು. 'ಹೊಟ್ಟೆ ತುಂಬಿತವ್ವ ಸಾಕ್‌ಂತ' ಹೇಳಿರೆ ಇದಿಷ್ಟೆ ಮಜ್ಜ,

ಇದರ ತಿಂದ್ ಬುಡು. ಜಾಣ ಅಲ್ಲೊಂತ ಹೆಡ್ಡ್ ಮಾಡ್ದು. ತರತರದ ಆಭರಣಗಳ ಮಾಡ್ಸಿ ಅದರ್ಂದ ನನ್ನ ಶೃಂಗರ್ಸಿ ನೋಡಿ ಕ.:.ಣ್ಣ್ ತುಂಬಿಕಂಡ್ ಆನಂದ ಪಡುದು. ಅದ್ ದೇವಪಂಕ್ತಿಗೆ ಸೇರಿದ್ದ.:.ಂದಾಗಿ, ಅಲ್ಲಿಯೂ ಎಲ್ಲರ್ಂದಳೂ ಮಾನ ಗೌರವಕ್ಕೆ ಭಾಜನಳಾಗಿದ್ದ್, ಅದು ನೆನ್ಸುದೇ ತ.:.ಟ್ಟ್–ಎಲ್ಲ ವಸ್ತುಗ.:.ಳೂ ಅದರ ಕಾಲ್ ಬುಡ.:.ಲಿ ಇರ್ತ್ತಿದ್ದೊ. ಒಮ್ಮೊಮ್ಮೆ ಅವ್ವ ರಮಣೀಯ ಪ್ರದೇಶಕ್ಕೆ ವಿಹಾರಕ್ಕೆ ಕರ್ಕಂಡ್ ಹೋತಿತ್ತ್.

ನನ್ನೊಟ್ಟಿಗೆ ಆಡಿಕೆ ಯಾರೂ ಇಲ್ಲೆ. ಅವ್ವನ ಕ.:.ಣ್ಣ್ ತೊಪ್ಪಿಸಿ ಹಳ್ಳದ ಕರೆಗೆ ಬಿಲ್ಲ್ ಬಾಣ ಹಿಡ್ಕಂಡ್ ಹೋತಿದ್ದೆ. ಹಳ್ಳದ ನೀರ್ ವೇಗ.:.ಲಿ ಹರಿಯುತ್ತಿತ್ತ್. ನಾ ಒಂದು ಬಾಣ ಹೊಡ್ದ್ ಆ ನೀರ್ ಮುಂದೆ ಹರಿಯಕೆ ತಡೆ ಮಾಡ್‌ತಿದ್ದೆ. ಆಗ್ ನೀರ್ ಅಷ್ಟೆತ್ತರ ಎರ್ಕುದು. ನಂಗೆ ಕುಸಿ ಆತ್ತಿತ್ತ್. ಮತ್ತೆ ಆ ನೀರೆಲ್ಲ ಬಸಲ್ಲಂತ ಇನ್ನಷ್ಟ್ ವೇಗ.:.ಲಿ ಒಮ್ಮೆಗೆ ಹರಿವಂತೆ ಮಾಡಿಕೆ ಇನ್ನೊಂದು ಬಾಣನ ಬುಡುತಿದ್ದೆ. ಹೀಂಗೇ ನೀರ್‌ನ ತಡೀದು ಮತ್ತೆ ಬಡುದುಂತೇಳ್ವ ನನ್ನ ಹೊಸತರನ ಆಟ ಆಡಿಕ.:.ಂಡ್ ನನ್ನಷ್ಟಕ್ಕೆ ಇರ್ಕನ ಅಲ್ಲಿಗೆ ಒಬ್ಬ ರಾಜಪುರುಷ ಇದರ ನೋಡಿಕ.:.ಂಡ್ ನೆಗಾಡಿಕ.:.ಂಡ್ ಇದ್ದಂವ ನನ್ನ ಹಕ್ಕಲೆ ಬಾತ್. ಅವಂಗೆ ನನ್ನೊಟ್ಟಿಗೆ ಮಾತಾಡುಕಂತ ಆತಿದ್ದ ಭಾವನೆ ಅವನ ಮೋರೆಲಿ ಎದ್ದ್ ಕಾಂಬತ್ತಿತ್ತ್. ಆದರೆ ಗುರ್ತ ಇಲ್ಲದರ್ಂದ ಅದಿಕೆ ಹಿಂಜರಿಕೆ ಇತ್ತ್. ಅಷ್ಟರ್ಲಿ ಅಲ್ಲಿಗೆ ಪೊರ್ಲು ಸಿಂಗರ್ಸಿಕ.:.ಂಡ ಅವ್ವ ಬಾತ್. ಅವ್ವನ ನೋಡಿ, ಆ ರಾಜಪುರುಷನ ಮೋರೆ ಅಷ್ಟಗಲ ಆತ್. ಮುಂದೇ ಪರಿಚಯ ಇದ್ದವರ ಹಾಂಗೆ ಕಾಂಬತಿದ್ದೊ. ಅವ್ವ ಅವನ ಉದ್ದೇಶಿಸಿ ಮಾತಾಡಿಕೆ ಸುರುಮಾಡ್ತ್. "ಮಹಾರಾಜ, ಸುಮಾರ್ ಇಪ್ಪೊತ್ತ್ ವರ್ಷದ ಹಿಂದೆ ಆಗ ನಾ ಹೆತ್ತ ಕೂಸುನ ನಂಗೆ ಕೊಡೊಕು. ಇದರ ಕೊಲ್ಲಿಕೆ ನಾ ಬುಡಿಕಿಲ್ಲೆಂತ ನೀ ತಡ್ದ. ನಮ್ಮ ಮೊದುವೆ ಆಕನ ಮಾಡ್ದ ನಿಬಂಧನ ಪ್ರಕಾರ ನನ್ನ ಕಾರ್ಯಕೆ ಅಡ್ಡಿ ಮಾಡ್ದ ಕೂಡ್ಲೆ ನಾ ನಿನ್ನ ಬುಟ್ಟ್ ಹೋವೆಂತ ಹೇಳ್ದಿಕೆ, 'ನಿನ್ನ ಸಂತೋಸು ಇದ್ದಾಂಗೆ ಮಾಡ್'ಂತ ಹೇಳ್ದ. ಹಾಂಗೆ ಇಷ್ಟ್ ಸಣ್ಣ ಕೂಸುನ ನೋಡಿಕಂಬಕೆ, ನಯ ನಾಜೂಕು ಇಲ್ಲದ ಗ.:.ಂಡ್‌ಸ್ಂದ ಆಕಿಲೆ. ಹಾಂಗೆ ಇದರ ಈಗ ನಾ ಕರ್ಕಂಡ್ ಹೋಗಿ, ಬೆಳ್ಸಿ ವಿದ್ಯೆ ಬುದ್ಧಿನ ಕ.:.ಲ್ಸಿ ನಿಂಗೆ ಒಪ್ಪುಸುವೆಂತ ಹೇಳಿದ್ದೆ. ಅಂದ್‌ನ ಸಣ್ಣಕೂಸೇ ಈ ಹೈದ. ಇಂವ ಎಲ್ಲ ವಿದ್ಯೆನ ಪರಶುರಾಮ ಮುನಿಂದ ಕ.:.ಲ್ತುಟು. ಶಕ್ತಿ, ಸಾಮರ್ಥ್ಯ.:.ಲಿ, ಇಂವನ ಮೀರ್ದೊವೇ ನಿಮ್ಮ ಲೋಕ.:.ಲಿ ಇರಿಕಿಲ್ಲೆ. ಇನ್ನ್ ನೀ ಇಂವನ ಕರ್ಕ.:.ಂಡ್ ಹೋಗಿ ನಿನ್ನ ರಾಜಕಾರ್ಯ.:.ಲಿ ನಿಲ್ಸಿಕ. ಹಿಂದೆ ನಾ ಹೇಳ್ದಾಂಗೆ, ಈಗ ಇಂವನ ನಿಂಗೆ ಒಪ್ಪುಸಿ ಕೊಟ್ಟನೆಂತ ಹೇಳಿ, ನನ್ನ ಕೈನ ತೆಗ್‌ದ್ ಆ ಪುರುಷನ (ನನ್ನ ಅಪ್ಪನ) ಕೈಮೇಲೆ ಇಸಿತ್.

ಆಗ ಅಪ್ಪ ಸಂತೋಸುನ ಭರ.:.ಲಿ ನನ್ನ ಗಟ್ಟಿ ಹಿಡ್ದ್ ತೊಬ್ಬಿಕ.:.ಣ್ತ್. ಒಟ್ಟಿಗೆ

ಗಂಗವ್ವನ ತೊಬ್ಬಿಕಣೊಕುಂತ ಕೈ ನೀಂಡ್‌ಕನ ಅದ್ ಮಿಂಚ್‌ನಾಂಗೆ ಮಾಯ ಆತ್. ನಾ ನನ್ನ ಅವ್ವಂದ ಎಂದಿಗೂ ಅಗಲಿ ಇರುವಾಂಗೆ ಆತಲೇಂತ್ ನಂಗೆ ತುಂಬ ಬೇಜಾರಾತ್. ಆದರೆ ಅಪ್ಪಂಗೆ ನಾ ಸಿಕ್ಕಿದ್ ಒಂದು ನಿಧಿ ಸಿಕ್ಕಿದ್ದೆಕಿಂತಲೂ ಹೆಚ್ಚಿಗಾಗಿ ಅವರ ಸಂತೋಸುಲಿ ನನ್ನ ಬೇಜಾರನ ಮುಳುಗಿಸಿದೊ.

ಅಪ್ಪ ನಂಗೆ ನಾಮಕರಣೋತ್ಸವ ಮಾಡ್ದೊ. ಆಮೇಲೆ ಯುವರಾಜ ಪಟ್ಟ ಮಹೋತ್ಸವ ನಡ್ಸಿದೊ. ಹತ್ತ್ ದಿನ ಹಸ್ತಿನಾಪುರಲಿ ಹಬ್ಬದ ಉತ್ಸವ. ಅದಾದ ಮೇಲೆ ನಾ ಮಾಡ್ದ ದಿಗ್ವಿಜಯ ಮತ್ತೆ ಅಪ್ಪ ತನಿಗೆ ಮೊದುವೆ ಆವ ಪ್ರಸ್ತಾಪ, ಅಪ್ಪನ ಆ ಪ್ರಯತ್ನಲಿ ಅವ್ಕೆ ಆದ ನಿರಾಶೆ, ಅದಿಕೆ ನಾ ಅಖಂಡ ಬ್ರಹ್ಮಚಾರಿಯಾಗಿದ್ದನೆಂತ ಪ್ರತಿಜ್ಞೆ ಮಾಡ್ದ್, ಸತ್ಯವತಿನ ನನ್ನ ಅಪ್ಪ ಶಂತನು ಮೊದುವೆ ಆದ್ದ್, ಅಪ್ಪ ನಂಗೆ ಇಚ್ಛಾಮರಣಿಯಾಗ್ಂತ ವರಕೊಟ್ಟ.:.ದ್ ಎಲ್ಲ ನೀವ್ಗೆ ಗೊತ್ತಿದ್ದ ಸಂಗ.:.ತಿಗಳೇ. ಹಾಂಗೆ ಧೃತರಾಷ್ಟ್ರ, ಪಾಂಡು, ವಿದುರ.:.ರ್ ನಿಯೋಗ ಕ್ರಮ.:.ಲಿ ಹುಟ್ಟಿದ ಮೇಲೆ ನಡ್ದದ್ ಎಲ್ಲ ನೀವ್ಗೆ ತಿಳ್ದ ಸಂಗತಿಗಳೇ.

ನಾ ಎಲ್ಲೊವ್ಕೆ ಹಿರಿಯಂವಾಗಿದ್ದ್, ಅಧಿಕಾರದ ಪರಮಾವಧಿ ನನ್ನಲ್ಲೆ ಇರೊಕುಂತೇಳುವ ವಿಚಾರನ ನಾ ಒಪ್ಪಿತ್‌ಲೆ. ಹಸ್ತಿನಾವತಿನ ಸಿಂಹಾಸನದ ನಮ್ರ ಸೇವಕ ಮಾತ್ರ ನಾನಾಗಿರುವೆಂತ ನಾ ಹೇಳ್ದರ ಸಿಂಹಾಸನಾಧಿಪತಿಗ.:.ಳೂ ಸಿಂಹಾಸನಾಕಾಂಕ್ಷಿಗ.:.ಳೂ ತಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕಂಡೊ. ದುಷ್ಟಕಾರ್ಯಕ್ಕೆ ಕೈ ಹಾಕಿಕನ ಅದ್ ತೊಪ್ಪು. ಹಾಂಗೆ ಮಾಡದಿರಿಂತ ಹೇಳಿಕನ ನನ್ನನೇ ವಿರೋಧಿಸಿದೊ. ನಿರಂಕುಶ ಪ್ರಭುತ್ವಂತ ಹೇಳ್ದೆಕೆ ಸ.:.ರಿಯಾಗಿ ನಡ್ಕಂಡೋ. ಅವ್ಕೆ ಅಗತ್ಯ ಬೀಳಕನ ಸಾಕಷ್ಟ್ ವಿನಯ ಪ್ರದರ್ಶನ ನಾಟಕ ಮಾಡಿ ನಾವು ರಾಜಸೇವಕ.:.ರ್, ಅವರ ಪಕ್ಷ.:.ಲೇ ಇರೊಕು. ನಮ್ಮ ಮೇಲೆ ಅರಮನೆನ ಉಪ್ಪುನ ಋಣ ಉಟ್ಟುಂತ ನಾವ್ಗೆ ಮೀರಿಕೆ ಬೊತ್ತದ ನಿರ್ಬಂಧನ ಹೇರ್ದೊ. ಈ ಕಾರಣಂದ, ನಾ, ದ್ರೋಣರ್ ಮುಂತಾದೊವು ಮಹಾಭಾರತ ಯುದ್ಧ.:.ಲಿ ಕೌರವರ ಪಕ್ಷ ವಹಿಸಿ ಪಾಂಡವರ ವಿರುದ್ಧ ಹೋರಾಡುವಾಂಗೆ ಆತ್. ಪಾಂಡವರ್ ನಾ ಸಾಂಕಿದ ಮಕ್ಕ, ಸಾಧುಗ, ಧರ್ಮಭೀರುಗ, ದ್ರೋಣರಿಗೂ ಅಷ್ಟೆ. ಅರ್ಜುನ ಪ್ರಿಯ ಶಿಷ್ಯ, ವಿನಯವಂತ. ಇಂತವರ ವಿರುದ್ಧ ಕ್ರೂರ ಕರ್ಮಿಗಳಾದ ಕೌರವರ ಕಡೆಂದ ಹೋರಾಟಕೆ ನಿತ್ತ ನಾವ್ಗೆ ನಾವು ಎಷ್ಟೇ ಸತ್ಯವಂತ.:.ರಾದರೂ, ಹೇಂಗೆ ಜಯ ಸಿಗುದು? ಶರಶಯ್ಯಲಿ ನಾ ಬಿದ್ದೆ. ಗುರುದ್ರೋಣರ ಶೀರಚ್ಛೇದನ ಅವರ ಶಿಷ್ಯನ ಕೈಂದ.:.ಳೇ ನಡ್ತ್. ನಾ ನೆನ್ಸಿನೇ, ಇದ್ ನಾವ್ಗೆ ಸರಿಯಾದ ಪ್ರತಿಫಲಂತ. ಪಾಂಡವರ ದೂರಿಕೆ ಸಾಧ್ಯ ಇಲ್ಲೆ. ವರಂತೇಳ್ದೇ ಶಾಪಂತ ನಂಗಾತ್. ಕ್ಷತ್ರಿಯರ ಧರ್ಮಂತ ಹೇಳಿರೆ ಯುದ್ಧ ಮಾಡುದು. ಯುದ್ಧಂತೇಳಿರೆ, ಮನುಷ್ಯರ ಮಧ್ಯೆ ಮಾತ್ರ ಅಲ್ಲ. ಏನೊಂದು ತೊಪ್ಪು ಮಾಡದ ಲಕ್ಷ ಲಕ್ಷ.:.ಲಿ ಆನೆ, ಕುದುರೆ ಮುಂತಾದ ಜೀವಿಗಳ ಹಿಂಸೆ ಮಾಡಿ ಕೊಲ್ಲಕಾದೆ. ಮನುಷ್ಯರಾದರೆ ಯುದ್ಧ.:.ಲಿ

ಜೈಸಿ, ಸುಖಸಂತೋಷ, ಅನುಭವಿಸ.:.ಕ್. ಆದರೆ ಪ್ರಾಣಿಗ.:.ಳಿಗೇನುಟ್ಟು?

ವೀರಾಧಿವೀರ ಅರ್ಜುನ ಹೃದಯಲಿ ಕರುಣಾಮಯಿ. ಅನಾವಶ್ಯಕ ಮನುಷ್ಯರ ಕೊಲ್ಲುದು ಅವಂಗೆ ಇಷ್ಟ ಇತ್ತ್‌ಲೆ. ಬರೇ ತಮ್ಮ ರಾಜ್ಯಲೋಭಕ್ಕಾಗಿ, ಬಂಧು ಬಾಂಧವರ ಕೊಲೆಮಾಡಿಕೆ ಅಂವಂಗೆ ಮನ್‌ಸ್ ಬಾತಿತ್ತ್‌ಲೆ. ಹಾಂಗೆ ಯುದ್ಧ ಮಾಡುದುಲೆ ಅಂತ ಹೇಳಿ ಬಿಲ್ಲ್ ಬಾಣಗಳ ನೆಲಕ್ಕೆ ಹಾಕಿ ಕೈಕ.:.ಟ್ಟಿ ಕುದ್ದುರ್‌ಕನ ಉಪದೇಶ ಕೊಟ್ಟ್, ನೀ ಕೊಲ್ಲಂವ ಅಲ್ಲ. ನೀ ಕೊಂದೆಂತ ಹೇಳೊವು ಸಾಯೊವು ಅಲ್ಲ. ಕೊಲ್ಲಂವ ನಾ ಹೊರ್ತು ಬೇರೆ ಯಾರೂ ಅಲ್ಲ. ಕ್ಷತ್ರಿಯನಾಗಿ ನೀ ಆ ಧರ್ಮನ ಪಾಲ್ಸದೆ ಹೋದರೆ ನಿಂಗೆ ಪಾಪ ಸುತ್ತಿಕಂಡದೆ. ನೀ ಕೇವಲ ನನ್ನ ಉಪಕರಣ ಮಾತ್ರ. ಹಾಂಗೆ ನಿನ್ನ ಕರ್ತವ್ಯ ಮಾಡ್. ಎದ್ದ್ ಹೋರಾಡ್. ಹೀಂಗೆ ಹುರಿದುಂಬಿಸಿತ್ ಕೃಷ್ಣ.

ಮಹಾಭಾರತ ಯುದ್ಧ ಕಾಲ.:.ಲಿ ದುರ್ಯೋಧನಂಗೆ ನನ್ನಂತ ಪ್ರಾಯಸ್ಥರ ನೆಂಪಾತ್. ನಾ ಮತ್ತೆ ದ್ರೋಣರ್ ಪಾಂಡವರ ಪಕ್ಷಕ್ಕೆ ಸೇರಿಬುಡುವೊನೋಂತ ಅವಂಗೆ ಹೆದ್‌ರಿಕೆ. ಹಾಂಗೆ ಒಳ್ಳ ಬಣ್ಣದ ಮಾತಾಡಿ, ನಾಟಕ ಮಾಡಿ ನಾವು ಅವನ ಕಡೆಂದ ಯುದ್ಧ ಮಾಡುವಾಂಗೆ ಮಾಡ್ತ್. ನಮ್ಮ ದೇಶ.:.ಲಿ ಪೂರ್ವಕಾಲ.:.ಲಿ, ಯುದ್ಧ ರಕ್ತ ಪಾತಂದ.:.ಳೇ ತುಂಬಿದ್ದಾಂಗೆ ಕಂಡದೆ. ಮೊಂಯಿಸರ ಕೊಲ್ಲು ದುಂತೇಳಿರೆ ಈಗನ ಕಾಲ.:.ಲಿ ಕೋಳಿ ಕುರಿಗಳ ಕೊಲ್ಲುದೈಕಿಂತ ಮಿಕ್ಕಿತ್ತ್‌ಂತ ಕಂಡದೆ. ಶ್ರೀಕೃಷ್ಣನೇ ಈ ಉಗ್ರವಾದಕ್ಕೆ ಪ್ರಾಶಸ್ತ್ಯಕೊಟ್ಟಂವ. ತನ್ನ ಅಳಿಯಂದ.:.ರೇ ಯುದ್ಧಲಿ ಹೋರಾಡಿ ಸಾಯುವಾಂಗೆ ಮಾಡಿಟು. ಈ ರಕ್ತಪಿಪಾಸುಗಳಿಗೆ ಸೇರ್ದ ನಾನಾದರೂ, ಪಾಂಡವರ ಪ್ರಯತ್ನ ಪೂರ್ವಕ, ಕೊಲ್ಲದೆ ಒಳ್ಸಿ, ಅವರ ಪಕ್ಷಂದ ಹೋರಾಡುವ ಮಕುಟಪತಿಗಳ ದಿನವೊಂದಕ್ಕೆ ಹತ್ತು ಸಾವಿರ, ಲಕ್ಷ ಲಕ್ಷ ಆನೆ, ಕುದುರೆಗಳ ಕೊಂದ್ ಹಾಕಿದೆ. ಇಂತ ಘೋರ ರಕ್ತಪಾತ ಮಾಡ್‌ಕನ ನನ್ನ ಮನ್‌ಸ್‌ನ ಒಂದು ಕರೆಲಿ ಕೂಡ ಒಂದಿಷ್ಟ್ ಕರುಣೆಂತೇಳ್ದು ಉಂಟಾತ್‌ಲೆ. ಅದೇ ಕಾರಣಂದ.:.ಳೇ ಏನೋ, ಇಚ್ಛಾ ಮರಣಿಯಾದ ಕಾರಣ, ಉತ್ತರಾಯಣ ಬಾಕನವರೆಗೆ, ನನ್ನ ಸ.:.ರ‍್ರಕ್ಕೆ ಕ\ಂತಿದ ಅಸಂಖ್ಯ ಬಾಣಗಳ ಯಮಯಾತನೆನ ಸಹಿಸಕಾತ್. ವರವೇ ಶಾಪ ಆದ್ದೈಕೆ ಇದ್ ಒಳ್ಳ ಉದಾಹರಣೆ.

ಇತಿ,

ಕೋಡಿ ಕುಶಾಲಪ್ಪ ಗೌಡ ಪ್ರಣೀತ

"ಗಂಗಾವತರಣ–ಭೀಷ್ಮೋದಯ"

ಎಂಬ ಪುರಾಣ ಗದ್ಯ ಕಥಾಪ್ರಸಂಗ ಸಂಪೂರ್ಣಂ.

"ಭದ್ರಂ ಶುಭಂ ಜಯಂ ಮಂಗಳಂ"



ಕನ್ನಡ ಬಾಸೆನ ವಿದ್ವಾಂಸರ್, ಬರಹಗಾರರ್, ದ್ರಾವಿಡಾಲೊಜಿಸ್ಟ್ ಮತ್ತೆ ಬಾಸಾತಜ್ಞರ್, ದ್ರಾವಿಡ ಬಾಸಾವಿಜ್ಞಾನ ಹಾಂಗೆ ಕನ್ನಡ ಉಪಬಾಸೆಗಳ ಅದ್ಯಯನಲಿ ಪ್ರೊ. ಕೆ. ಕುಶಾಲಪ್ಪ ಗೌಡರದ್ ದೊಡ್ಡ ಹೆಸ್ರ್. ಆದುನಿಕ ಬಾಸಾವಿಜ್ಞಾನ ಮತ್ತೆ ಪರಂಪರಾಗತ ವ್ಯಾಕರಣ ಸಾಸ್ತ್ರಲಿ ಗೇನ ಪಡ್ಕೊಂಡ ಅಂತಾರಾಷ್ಟ್ರ ಮಟ್ಟದ ವಿದ್ವಾಂಸರ್. ಮದ್ರಾಸ್ ವಿಶ್ವವಿದ್ಯಾಲಯಂದ ಬಿ.ಎ.(ಆನರ್ಸ್), ಎಂ.ಎ. ಮತ್ತೆ ಅಣ್ಣಾಮಲೈ ವಿ.ವಿಂದ ಭಾಷಾವಿಜ್ಞಾನ ಡಿಪ್ಲೊಮಾ, ಎಂ.ಲಿಟ್. ಮತ್ತೆ ಪಿಎಚ್.ಡಿ. ಅದ್ಯಯನ ಮಾಡ್ದ ಪದವೀದರರ್. 1963ರ್ಲಿ ಅಣ್ಣಾಮಲೈ ವಿಶ್ವವಿದ್ಯಾಲಯಂದ ಡಾಕ್ಟರೇಟ್ ಪದವಿ ಪಡ್ದೊಳೊ.

ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜ್‌ಲಿ ಸಹಾಯಕ ಕನ್ನಡ ಪ್ರಾದ್ಯಾಪಕರಾಗಿ ವೃತ್ತಿಜೀವನ ಆರಂಬಿಸಿದ ಇವ್ ಅಣ್ಣಾಮಲೈ ವಿಶ್ವವಿದ್ಯಾನಿಲಯಲಿ ಭಾಷಾವಿಜ್ಞಾನ ಪ್ರೌಢ ಅಧ್ಯಯನ ಕೇಂದ್ರಲಿ ನಿರ್ದೇಸಕರಾಗಿ ಸೇವೆ ಮಾಡ್ಯೊಳೊ. ಕ್ರಿ.ಶ. 1000 ರ್‌ಂದ 1400 ರವರೆಗೆ ದಕ್ಷಿಣ ಕನ್ನಡ ಮತ್ತೆ ಉತ್ತರಕನ್ನಡ, ಕೊಡಗ್ ಜಿಲ್ಲೆನ 'ಕನ್ನಡ ಶಾಸನಗಳ ಭಾಷಿಕ ಅಧ್ಯಯನ' ಮಾಡ್ಯೊಳೊ. 'ಕನ್ನಡ ಭಾಷಾವಲೋಕನ' (1984), 'ಕನ್ನಡ ಭಾಷೆ ಮತ್ತು ವ್ಯಾಕರಣಗಳು: ಒಂದು ಅಧ್ಯಯನ' (1987), 'ತಿರುಳು ಕನ್ನಡ ಮತ್ತು ಸಮಾಜ' (1991), 'ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಸಮೀಕ್ಷೆ' (2008), 'ಕನ್ನಡ ಸಂಕ್ಷಿಪ್ತ ವ್ಯಾಕರಣ' (2014), 'ವಡ್ಡಾರಾಧನೆನ ಭಾಷಿಕ ಅಧ್ಯಯನ', 'Gowda Kannada' (1970), 'A Grammar of Kannada', 'Dravidian Caste System', 'A Course in Modern Kannada'(1991) ಮುಂತಾದ ಬಾಸಾವಿಜ್ಞಾನ ಪುಸ್ತಕಗಳ ಬರ್ದೊಳೊ. ಗಂಗಾದೇವಿ ವಿರಚಿತ ಮಧುರಾ ವಿಜಯಂ, ಕಂಬನ, ಪವಿತ್ರಗಳು (ಜಯಸೆಂಧಿಲ್ನಾಥನ್ ಅವರೊಡನೆ) ಅನುವಾದ ಕೃತಿಗ; ಊರೊಸಗೆ, ಕಡಲ ತಡಿಯ ಕನವರಿಕೆ, ಕಮಲ ನಿಮೀಲನ, ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಯತ್ತುಗಳು, ಸಿಂಜಿನಿ – ಸೃಜನಶೀಲ ಕೃತಿಗಳ ಬರ್ದೊಳೊ. ಸುಳ್ಯಲಿ 1994ರ್ಲಿ ನಡ್ದ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಗುರ್ಕಾರ್ರ ಗೌರವ ಪಡ್ಕೊಂಡೊಳೊ. ಮರಗೋಡ್ಲಿ 2003ರ್ಲಿ ನಡ್ದ ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಗುರ್ಕಾರ್ಮೆನ ಪಾಲ್ ಪಡ್ದೊಳೊ. ಸಾಹಿತ್ಯ ಸಂಶೋದನೆನ ಗೈಮೆನ ಗುರ್ತಿಸಿ ಅವ್ಕೆ ಚಿದಾನಂದ ಪ್ರಶಸ್ತಿ, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನ ಗೌರವ ಪ್ರಶಸ್ತಿ, ಕೆವಿಜಿ ಪ್ರಶಸ್ತಿ, 'ಕನ್ನಡ ಭಾಷಾವಲೋಕನ' ಕೃತಿಗೆ– 'ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ' ಪ್ರಶಸ್ತಿ, 'ಆಳ್ವಾಸ್ ನುಡಿಸಿರಿ' ಪ್ರಶಸ್ತಿ, ಮುಳಿಯ ಪ್ರಶಸ್ತಿ, ಸೇಡಿಯಾಪು ಪ್ರಶಸ್ತಿ, ಸೋವಿಯತ್ ಲ್ಯಾಂಡ್ ಪ್ರಶಸ್ತಿ ಹೀಂಗೆ ಹಲವು ಪ್ರಸಸ್ತಿಗ ಬಂದುಟು.

ನಾಡು ನುಡಿ ಚಿಂತನೆ ನೆಲೆಲಿ ಕೆಲ್ಸ ಮಾಡ್ದ ಕುಶಾಲಪ್ಪ ಗೌಡರ್ ಅರೆಬಾಸೆಲಿ ಲಾಯ್ಕ್ ಗೆಯ್ಮೆ ಮಾಡ್ಯೊಳೊ. 2014ರ್ಲಿ ಪುರಾಣಕತೆನ ಅರೆಬಾಸೆಲಿ 'ಮಾನಸ ಮಹಾಭಾರತ', 2019ರ್ಲಿ ಅರೆಬಾಸೆ ಮತ್ತೆ ವ್ಯಾಕರಣ ಬಗೆಲಿ 'ಅರೆಭಾಷೆ (ಗೌಡಕನ್ನಡ) ವ್ಯಾಕರಣ'ತೇಳುವ ಪುಸ್ತಕ ಬರ್ದೊಳೊ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಮಡಿಕೇರಿ ರೂ. 100